ಶುಕ್ರವಾರ, ಏಪ್ರಿಲ್ 23, 2021 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಬಿಎಂಪಿ– ಪೊಲೀಸ್ ಅಧಿಕಾರಿಗಳ ಜಂಟಿ ಕಾರ್ಯಾಚರಣೆ

4 ಸಾವಿರ ಹಾಸಿಗೆಗಾಗಿ ಖಾಸಗಿ ಆಸ್ಪತ್ರೆಗಳ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳಿಗಾಗಿ ನಗರದ ಎಂಟು ವಲಯಗಳಲ್ಲಿರುವ ಖಾಸಗಿ ಆಸ್ಪತ್ರೆಗಳಿಂದ 4 ಸಾವಿರ ಹಾಸಿಗೆಗಳನ್ನು ಪಡೆಯಲು ಬಿಬಿಎಂಪಿ ಮತ್ತು ಪೊಲೀಸ್ ಅಧಿಕಾರಿಗಳು ಜಂಟಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

ಒಟ್ಟು 11 ಸಾವಿರ ಹಾಸಿಗೆಗಳ ಪೈಕಿ ಈಗಾಗಲೇ 7 ಸಾವಿರ ಹಾಸಿಗೆಗಳನ್ನು ಪಡೆಯಲಾಗಿದೆ. ಉಳಿದ 4 ಸಾವಿರ ಹಾಸಿಗೆ ಪಡೆಯಲು ಗುರುವಾರದಿಂದಲೇ ಅಧಿಕಾರಿಗಳು ತಪಾಸಣೆ ಮೂಲಕ ಕ್ರಮವಹಿಸಲಿದ್ದಾರೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಿಬಿಎಂಪಿ ಆಯುಕ್ತ ಗೌರವ್ ಗುಪ್ತ, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಮಲ್‌ಪಂತ್ ಹಾಗೂ ಡಿಸಿಪಿಗಳ ಜತೆ ನಡೆಸಿದ ವಿಡಿಯೊ ಸಂವಾದದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ನಗರದ ಎಂಟು ವಲಯಗಳ ಬಿಬಿಎಂಪಿ ಜಂಟಿ ಆಯುಕ್ತರು ಮತ್ತು ಎಲ್ಲ ಡಿಸಿಪಿಗಳು ಆಸ್ಪತ್ರೆಗಳಿಗೆ ಹೋಗಿ ಹಾಸಿಗೆಗಳ ಲಭ್ಯತೆ ಬಗ್ಗೆ ತಪಾಸಣೆ ನಡೆಸಿ, ಆದಷ್ಟು ವೈದ್ಯಕೀಯ ಆಮ್ಲಜನಕ ಇರುವ ಹಾಸಿಗೆಗಳನ್ನು ಪಡೆಯಲು ಕ್ರಮವಹಿಸಲಿದ್ದಾರೆ. ಆಸ್ಪತ್ರೆಗಳಲ್ಲಿ ಏನಾದರೂ ಕೊರತೆ ಇದ್ದರೆ, ಅದನ್ನು ಪರಿಹರಿಸಲೂ ಕ್ರಮ ಕೈಗೊಳ್ಳಲಿದ್ದಾರೆ. ಮೂರು ದಿನಗಳಲ್ಲಿ ಶೇ 50ರಷ್ಟು ಹಾಸಿಗೆಗಳನ್ನು ಪಡೆಯಲಾಗುವುದು ಎಂದು ಅವರು ಹೇಳಿದರು.

ನಗರದಲ್ಲಿ ಆಂಬುಲೆನ್ಸ್ ಸಂಖ್ಯೆಯನ್ನೂ 850 ರಿಂದ 1,250ಕ್ಕೆ ಹೆಚ್ಚಿಸಲಾಗಿದೆ. ಪೊಲೀಸ್ ಸಿಬ್ಬಂದಿಗೆ ಕೊರೊನಾದಿಂದ ರಕ್ಷಣೆಗಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ. ಎಲ್ಲ ಪೊಲೀಸ್ ಠಾಣೆಗಳನ್ನು ಸ್ಯಾನಿಟೈಸ್ ಮಾಡಲಾಗುತ್ತಿದೆ ಎಂದು ಬೊಮ್ಮಾಯಿ ಹೇಳಿದರು.

ಹೋಟೆಲ್‌ಗಳಲ್ಲಿ ಪಾರ್ಸೆಲ್‌ಗೆ ಮಾತ್ರ ಅವಕಾಶ ಇರುವ ಕಾರಣ ಆಹಾರ ವಿತರಣಾ ಕಂಪನಿಯ ಸಿಬ್ಬಂದಿಯೊಬ್ಬರು ಗುರುವಾರ ಆಹಾರದ ಪೊಟ್ಟಣಗಳನ್ನು ಬೈಕ್‌ನಲ್ಲಿ ಕೊಂಡೊಯ್ದರು –ಪ್ರಜಾವಾಣಿ ಚಿತ್ರ

ನೋಡಲ್ ಅಧಿಕಾರಿಗಳೇ ಹೊಣೆ'

'ಬೆಂಗಳೂರಿನಲ್ಲಿ ಕೋವಿಡ್ ನಿರ್ವಹಣೆಯ ಸಂಪೂರ್ಣ ಹೊಣೆ ಆಯಾ ವಲಯದ ನೋಡಲ್ ಅಧಿಕಾರಿಗಳದ್ದು. ಎಲ್ಲ ಸಮಸ್ಯೆಗಳಿಗೆ ಅವರು ಸ್ಪಂದಿಸಬೇಕು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಕೋವಿಡ್ ಎರಡನೇ ಅಲೆ ಬೆಂಗಳೂರಿನಲ್ಲಿ ಹೆಚ್ಚುತ್ತಿರುವುದರಿಂದ ಪರಿಸ್ಥಿತಿ ಅವಲೋಕಿಸಲು ಸಂಪುಟದ ಸಹೋದ್ಯೋಗಿಗಳು ಮತ್ತು ಹಿರಿಯ ಅಧಿಕಾರಿಗಳ ಜೊತೆ ಗುರುವಾರ ಅವರು ವರ್ಚುವಲ್ ಸಭೆ ನಡೆಸಿದರು.

'ಚಿತಾಗಾರಗಳಿಗೆ ಶವ ಸಾಗಿಸುವ ಆಂಬುಲೆನ್ಸ್‌ಗಳು ತಾಸುಗಟ್ಟಲೆ ಸರದಿಯಲ್ಲಿ ನಿಲ್ಲುವುದರಿಂದ ಶವಗಳನ್ನು ಸಾಗಿಸಲು ಆಂಬುಲೆನ್ಸ್‌ಗಳ ಕೊರತೆ ಉಂಟಾಗುತ್ತಿದೆ. ಶವಗಳನ್ನು ಇರಿಸಲು ಚಿತಾಗಾರಗಳಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಬೇಕು. ಕೋವಿಡ್ ನಿರ್ವಹಣೆಗೆ ಸ್ವಯಂ ಸೇವಕರ ನೆರವು ಪಡೆಯಬೇಕು' ಎಂದು ಸಲಹೆ ನೀಡಿದರು.

'ಹೋಮ್ ಐಸೋಲೇಷನ್‌ನಲ್ಲಿ ಇರುವವರಿಗೆ ಚಿಕಿತ್ಸೆ, ಟೆಲಿ ಕನ್ಸಲ್ಟೇಷನ್ ಒದಗಿಸಿ, ನಿಗಾ ವಹಿಸಬೇಕು. ಖಾಸಗಿ ಆಸ್ಪತ್ರೆಗಳು ಕೋವಿಡ್ ಚಿಕಿತ್ಸೆಗೆ ಬೆಡ್‌ಗಳನ್ನು ಒದಗಿಸುವುದನ್ನು ಖಾತರಿ ಪಡಿಸಬೇಕು. ಆಯಾ ವಲಯಗಳ ಡಿಸಿಪಿಗಳು ಆಸ್ಪತ್ರೆಗಳಿಗೆ ತೆರಳಿ ಪರಿಶೀಲಿಸಬೇಕು. ಆರೋಗ್ಯ ಸೇವೆಯಲ್ಲಿ ನಿರತರಾಗಿರುವ ವೈದ್ಯಕೀಯ, ಅರೆ ವೈದ್ಯಕೀಯ ಸಿಬ್ಬಂದಿಗೆ ಸ್ಥೈರ್ಯ ತುಂಬಬೇಕು' ಎಂದೂ ಅವರು ಸೂಚಿಸಿದರು.

'ಚುನಾಯಿತ ಸರ್ಕಾರವೋ, ಹುಚ್ಚರ ಸಂತೆಯೋ'

ಬೆಂಗಳೂರು: 'ಇದೇನು ಚುನಾಯಿತ ಸರ್ಕಾರವೋ? ಹುಚ್ಚರ ಸಂತೆಯೋ?' ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಟ್ವೀಟ್ ಮಾಡಿರುವ ಅವರು, 'ಕ್ಷಣ ಕ್ಷಣಕ್ಕೂ ಬದಲಾಗುವ ಸರ್ಕಾರದ ನಿರ್ಧಾರ, ಮಾರ್ಗಸೂಚಿಗಳು, ಅಘೋಷಿತ ಲಾಕ್ ಡೌನ್, ಅಮಾಯಕ ಜನತೆ ಮೇಲೆ ದೌರ್ಜನ್ಯ' ಎಂದು ಟೀಕಿಸಿದ್ದಾರೆ.

'ಆಡಳಿತ ನಡೆಸಲಾಗದಿದ್ದರೆ ಕುರ್ಚಿ ಬಿಟ್ಟು ತೊಲಗಿ, ಜನರನ್ನು ಯಾಕೆ ಗೋಳು ಹೊಯ್ಕೊಳ್ತೀರಿ' ಎಂದು ಯಡಿಯೂರಪ್ಪ ಅವರನ್ನು ಕುಟುಕಿದ್ದಾರೆ.

'ಕೊರೊನಾ ಉಲ್ಬಣಗೊಂಡಿರುವುದು ಸರ್ಕಾರದ ನಿರ್ಲಕ್ಷ್ಯ, ನಿಷ್ಕ್ರಿಯತೆ ಮತ್ತು ದುರಾಡಳಿತದಿಂದ. ತಮ್ಮ ವೈಫಲ್ಯ ಮುಚ್ಚಿಹಾಕಲು ಪೊಲೀಸರ ಕೈಗೆ ಲಾಠಿ ಕೊಟ್ಟು ಬೀದಿಗಿಳಿಸಿದರೆ ಕೊರೊನಾ ಓಡಿಹೋಗುವುದೇ? ಲಾಕ್ ಡೌನ್, ಬಂದ್, ಕರ್ಫ್ಯೂ, ಇನ್ನೇನೋ.. ಯಾವ ನಿರ್ಧಾರ ಕೈಗೊಳ್ಳುವುದಿದ್ದರೂ ಜನರಿಗೆ ಮನವರಿಕೆ ಮಾಡಿ, ವಿಶ್ವಾಸಕ್ಕೆ ತೆಗೆದುಕೊಂಡು ಪೂರ್ವ ಸಿದ್ಧತೆಯೊಂದಿಗೆ ಮಾಡಿ. ತಟ್ಟೆ ಬಡಿಯುವ, ಕ್ಯಾಂಡಲ್ ಹಚ್ಚುವ ಶೈಲಿಯ ಇಂಥ ತುಘಲಕ್ ದರ್ಬಾರ್ ಪುನರಾವರ್ತನೆ ಮಾಡಬೇಡಿ' ಎಂದೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಗತ್ಯ ಸೇವೆ ಹೊರತು ಪಡಿಸಿ ಎಲ್ಲ ವಾಣಿಜ್ಯ ಮಳಿಗೆಗಳು ಬಂದ್

ದಿಢೀರ್ ಲಾಕ್‌ಡೌನ್: ವರ್ತಕರು ಕಕ್ಕಾಬಿಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ರಸ್ತೆಗಳು ಹಾಗೂ ಮಾರುಕಟ್ಟೆ ಪ್ರದೇಶಗಳಲ್ಲಿನ ಅಂಗಡಿಗಳು ಹಾಗೂ ವಾಣಿಜ್ಯ ಮಳಿಗೆಗಳನ್ನು ಪೊಲೀಸರು ಗುರುವಾರ ಸಂಜೆ ದಿಢೀರನೇ ಮುಚ್ಚಿಸಿದ್ದರಿಂದ ವರ್ತಕರು ಕಕ್ಕಾಬಿಕ್ಕಿಯಾದರು.

ಯಾವುದೇ ಮುನ್ಸೂಚನೆ ಇಲ್ಲದೆ ಹೀಗೆ ಅಂಗಡಿ ಬಾಗಿಲುಗಳನ್ನು ಮುಚ್ಚಿಸಿದ್ದಕ್ಕೆ ವರ್ತಕರು ಅಸಮಾಧಾನ ವ್ಯಕ್ತಪಡಿಸಿದರು.

'ಪೊಲೀಸರು ದಿಢೀರನೇ ಬಂದು ಒತ್ತಾಯಪೂರ್ವಕವಾಗಿ ಬಾಗಿಲುಗಳನ್ನು ಮುಚ್ಚಿಸಿದ್ದಾರೆ. ಅಂಗಡಿಗಳಲ್ಲಿ ಹೆಚ್ಚು ಜನ ಇದ್ದಾರೆ, ಕೋವಿಡ್ ಮಾರ್ಗಸೂಚಿ ಪಾಲನೆ ಮಾಡುತ್ತಿಲ್ಲ ಎಂದು ಅಂಗಡಿಗಳನ್ನು ಮುಚ್ಚಿಸಿದರು' ಎಂದು ಕಲಾಸಿಪಾಳ್ಯದ ವರ್ತಕ ರವಿರಾಜ್ ದೂರಿದರು.

'ಶನಿವಾರ, ಭಾನುವಾರ ಮಾತ್ರ ಸಂಪೂರ್ಣ ಬಂದ್ ಎಂದು ಹೇಳಿದ್ದರು. ಅಲ್ಲದೆ, ಬುಧವಾರ ಸಂಜೆ ಪೊಲೀಸರಿಗೆ ಕರೆ ಮಾಡಿ ಲಾಕ್‌ಡೌನ್ ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಅಂಗಡಿ ತೆಗೆದಿದ್ದೆವು. ನಮ್ಮನ್ನು ವಿಶ್ವಾಸಕ್ಕೂ ತೆಗೆದುಕೊಳ್ಳದೆ ಸರ್ಕಾರ ಈ ರೀತಿ ನಡೆದುಕೊಂಡಿದೆ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಉತ್ಪನ್ನಗಳ ಅವಧಿ ಮುಕ್ತಾಯ: 'ಆಹಾರ ಪದಾರ್ಥಗಳು, ಸಿಹಿ ತಿಂಡಿ, ಚಾಕಲೇಟ್ ಅಥವಾ ಕಾಸ್ಮೆಟಿಕ್ಸ್‌ನಂತಹ ಉತ್ಪನ್ನಗಳನ್ನು ನಿಗದಿತ ಅವಧಿಯೊಳಗೆ ಬಳಸಬೇಕು. ಇಲ್ಲದಿದ್ದರೆ ಹಾಳಾಗುತ್ತವೆ. ಹೀಗೆ ಅಂಗಡಿಗಳನ್ನು ಬಂದ್ ಮಾಡಿಸುವುದಾಗಿ ಸರ್ಕಾರ ಮುಂಚಿತವಾಗಿಯೇ ಹೇಳಿದ್ದರೆ ಈ ಉತ್ಪನ್ನಗಳನ್ನು ನಾವು ತರಿಸುತ್ತಲೇ ಇರಲಿಲ್ಲ' ಎಂದು ಚಿಕ್ಕಪೇಟೆಯ ವರ್ತಕ ಕೃಷ್ಣಮೂರ್ತಿ ಹೇಳಿದರು.

'ಕಳೆದ ಬಾರಿ ಲಾಕ್‌ಡೌನ್ ಘೋಷಿಸಿದಾಗ ಬಂದ್ ಆಗಿದ್ದ ಅಂಗಡಿಗಳ ಪೈಕಿ ಶೇ 30 ಅಂಗಡಿಗಳು ಮತ್ತೆ ತೆರೆಯಲೇ ಇಲ್ಲ. ಈಗ ಈ ರೀತಿ ಇದ್ದಕ್ಕಿದ್ದಂತೆ ಅಂಗಡಿಗಳನ್ನು ಮುಚ್ಚಿಸಿದರೆ ವರ್ತಕರು ಶಾಶ್ವತವಾಗಿ ಉದ್ಯಮದಿಂದ ದೂರ ಉಳಿಯಬೇಕಾದ ಸ್ಥಿತಿ ಬರುತ್ತದೆ' ಎಂದು ಹೇಳಿದರು.

ಸಮಯದಲ್ಲಿ ರಿಯಾಯಿತಿ ನೀಡಿ

'ಕೋವಿಡ್ ಮಾರ್ಗಸೂಚಿಗಳನ್ನು ಇನ್ನೂ ಕಟ್ಟುನಿಟ್ಟಾಗಿ ನಾವು ಪಾಲಿಸುತ್ತೇವೆ. ಲಾಕ್‌ಡೌನ್ ಬದಲು ವ್ಯಾಪಾರ–ವಹಿವಾಟಿನ ಅವಧಿಯನ್ನು ಬೇಕಾದರೆ ಕಡಿತಗೊಳಿಸಲಿ. ಕರ್ಫ್ಯೂ ಘೋಷಿಸಿದ್ದ ಅವಧಿಯ ಪೈಕಿ ಒಂದೆರಡು ಗಂಟೆಗಳನ್ನು ಹೆಚ್ಚು ಮಾಡಲಿ. ಆದರೆ, ಕೆಲವು ಗಂಟೆಗಳಷ್ಟಾದರೂ ವ್ಯಾಪಾರ–ವಹಿವಾಟು ನಡೆಸಲು ಸರ್ಕಾರ ಅನುಮತಿ ನೀಡಬೇಕು' ಎಂದು ಚಿಕ್ಕಪೇಟೆಯ ಶ್ರೀಧರ್ ಕೋರಿದರು.

ಮಳೆ ನೀರು

ನಗರದಲ್ಲಿ ಗುರುವಾರ ಸುರಿದ ಮಳೆಯಿಂದಾಗಿ ಓಕಳಿಪುರ ಕೆಳಸೇತುವೆಯಲ್ಲಿ ಸಂಗ್ರಹಗೊಂಡಿದ್ದ ನೀರಿನಲ್ಲಿ ಮಹಿಳೆಯೊಬ್ಬರು ದ್ವಿಚಕ್ರ ವಾಹನವನ್ನು ತಳ್ಳಿಕೊಂಡು ಹೋಗಲು ಹರಸಾಹಸಪಟ್ಟರು. ಮಕ್ಕಳು ಅವರಿಗೆ ನೆರವಾದರು –ಪ್ರಜಾವಾಣಿ ಚಿತ್ರ

ದುಬೈಗೆ ಹೊರಟಿದ್ದ ವಿಮಾನ ತುರ್ತು ಭೂಸ್ಪರ್ಶ

ಚೆನ್ನೈ(ಪಿಟಿಐ): ಇಲ್ಲಿಂದ ದುಬೈಗೆ ಹೊರಟಿದ್ದ ಏರ್ ಇಂಡಿಯಾ ವಿಮಾನವು ತಾಂತ್ರಿಕ ಕಾರಣಗಳಿಂದಾಗಿ ಚೆನ್ನೈ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. 172 ಪ್ರಯಾಣಿಕರು ಮತ್ತು ಏಳು ಮಂದಿ ಸಿಬ್ಬಂದಿ ಇದ್ದ ವಿಮಾನವು ಗುರುವಾರ ಸಂಜೆ ಇಲ್ಲಿಂದ ಹೊರಟ ಸ್ವಲ್ಪ ಸಮಯದ ಬಳಿಕ ವಾಪಸ್ ಬಂತು.

'ತಾಂತ್ರಿಕ ಸಮಸ್ಯೆಗಳ ಬಗ್ಗೆ ಪೈಲಟ್ ಅನುಮಾನ ವ್ಯಕ್ತಪಡಿಸಿದ ಕಾರಣ ವಿಮಾನವು ತುರ್ತು ಭೂ ಸ್ಪರ್ಶ ಮಾಡಿತು. ಅಗತ್ಯ ತಪಾಸಣೆಯ ನಂತರ ಮತ್ತೆ ದುಬೈಗೆ ಹೊರಟಿತು' ಎಂದು ಏರ್ ಇಂಡಿಯಾ ವಕ್ತಾರರು ತಿಳಿಸಿದ್ದಾರೆ.

ಪ್ರಭಾವಿಗಳ, ಪರಿಚಿತರ ಶವ ಸಂಸ್ಕಾರಕ್ಕೆ ಆದ್ಯತೆ: ಆರೋಪ

ಸುಮನಹಳ್ಳಿ: ರಾತ್ರಿಯಿಡೀ ಶವಸಂಸ್ಕಾರ !

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿತಾಗಾರಗಳಲ್ಲಿ ಕೋವಿಡ್ ಶವಗಳ ಸಾಲು ದಿನೇ ದಿನೇ ಹೆಚ್ಚುತ್ತಿದ್ದು, ರಾತ್ರಿ ಇಡೀ ಸಂಸ್ಕಾರ ನಡೆಸಿದರೂ ಈ ಸಾಲು ಕರಗುತ್ತಿಲ್ಲ. ಇದರೊಂದಿಗೆ ಪ್ರಭಾವಿಗಳ ಸಂಬಂಧಿಕರು ಮತ್ತು ಪರಿಚಿತರ ಶವ ಸಂಸ್ಕಾರಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂಬ ಆರೋಪವೂ ಕೇಳಿ ಬಂದಿದೆ.

'ಗುರುವಾರ ಬೆಳಿಗ್ಗೆ 7ರಿಂದಲೇ ನಾವು ಸುಮನಹಳ್ಳಿ ಚಿತಾಗಾರದ ಬಳಿ ಕಾಯುತ್ತಿದ್ದೆವು. 8.30ರಿಂದ ಶವಸಂಸ್ಕಾರ ಪ್ರಕ್ರಿಯೆ ಪ್ರಾರಂಭಿಸಿದರು. ಆದರೆ, ರಾಜಕಾರಣಿಯೊಬ್ಬರ ಪರಿಚಿತರ ಶವವೊಂದು ಬರುತ್ತಿದ್ದಂತೆ ಆ ಆಂಬುಲೆನ್ಸ್ ಅನ್ನು ಒಳಗೆ ಬಿಟ್ಟರು. ತುಂಬಾ ಬೇಸರವಾಯಿತು' ಎಂದು ಕೋವಿಡ್‌ನಿಂದ ಸಾವಿಗೀಡಾಗಿದ್ದ ವ್ಯಕ್ತಿಯೊಬ್ಬರ ಸಂಬಂಧಿ ಹೇಳಿದರು.

'ಬುಧವಾರ ಬೆಳಿಗ್ಗೆಯಿಂದ ಗುರುವಾರ ಬೆಳಗಿನ ಜಾವ 5ರವರೆಗೆ 40 ಶವಗಳನ್ನು ದಹನ ಮಾಡಿದ್ದೇವೆ. ಇನ್ನೂ ಎಂಟು ಶವಗಳು ಬಾಕಿ ಇದ್ದವು. ಎರಡು ತಾಸು ವಿಶ್ರಾಂತಿ ತೆಗೆದುಕೊಂಡು 8.30ರಿಂದ ಮತ್ತೆ ಕೆಲಸ ಆರಂಭಿಸಿದೆವು' ಎಂದು ಸುಮನಹಳ್ಳಿ ಶವಾಗಾರದ ಸಿಬ್ಬಂದಿ ವಿನೋದ್ ಹೇಳಿದರು.

'ಸ್ವಲ್ಪ ಹೊತ್ತಿನಲ್ಲಿಯೇ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರು ಪರಿಶೀಲನೆಯ ಉದ್ದೇಶದಿಂದ ಸುಮನಹಳ್ಳಿ ಚಿತಾಗಾರಕ್ಕೆ ಬಂದರು. ಅವರ ವಾಹನ ಬರುವುದಕ್ಕಿಂತ ಮುನ್ನ ಆಂಬುಲೆನ್ಸ್ ಒಂದು ಒಳಗೆ ಬಂದಿತು. ಆಂಬುಲೆನ್ಸ್‌ನಲ್ಲಿದ್ದ ವಾಹನ ಸಿ.ಟಿ. ರವಿಯವರ ಪರಿಚಿತರದ್ದು ಎಂದು ಉಳಿದವರು ಭಾವಿಸಿದರು. ಆದರೆ, ಆ ಆಂಬುಲೆನ್ಸ್‌ನಲ್ಲಿದ್ದ ಶವಕ್ಕೂ, ರವಿಯವರಿಗೂ ಸಂಬಂಧ ಇರಲಿಲ್ಲ. ಅವರ ವಾಹನದ ಜೊತೆಗೇ ಆಂಬುಲೆನ್ಸ್ ಒಳಗೆ ಬಂದಿದ್ದರಿಂದ ತಪ್ಪು ತಿಳಿವಳಿಕೆ ಉಂಟಾಯಿತು' ಎಂದು ಅವರು ಹೇಳಿದರು.

'ಪರಿಹಾರ ಘೋಷಿಸಿ'

'ಚಿತಾಗಾರದ ಸಿಬ್ಬಂದಿ ಹಗಲು– ರಾತ್ರಿ ಕೆಲಸ ಮಾಡುತ್ತಿದ್ದಾರೆ. ದಿನವಿಡೀ ಉರಿಯುವ ಬೆಂಕಿ ಮುಂದೆ ಇರಬೇಕಾಗಿದೆ. ಅವರ ಜೀವಕ್ಕೆ ಯಾವುದೇ ಭದ್ರತೆ ಇಲ್ಲ. ಚಿತಾಗಾರದ ಸಿಬ್ಬಂದಿ ಕೋವಿಡ್‌ಗೆ ತುತ್ತಾಗಿ ಸಾವಿಗೀಡಾದರೆ ಸರ್ಕಾರ ಪರಿಹಾರ ಘೋಷಿಸಬೇಕು' ಎಂದು ಚಿತಾಗಾರ ನೌಕರರ ಸಂಘದ ಅಧ್ಯಕ್ಷ ಆ. ಸುರೇಶ್ ಒತ್ತಾಯಿಸಿದರು. 'ಚಿತಾಗಾರದ ಸಿಬ್ಬಂದಿಗೆ ಇನ್ನೂ ಗ್ಲೌಸ್ ಮತ್ತು ಮಾಸ್ಕ್ ವಿತರಿಸಿಲ್ಲ. ಪಿಪಿಇ ಕಿಟ್ ನೀಡುತ್ತಿಲ್ಲ. ಸರ್ಕಾರ ಅವರ ಸುರಕ್ಷತೆಗೆ ಒತ್ತು ನೀಡಬೇಕು' ಎಂದು ಅವರು ಆಗ್ರಹಿಸಿದರು.

ಹೈಕೋರ್ಟ್ ಸೂಚನೆ ಪಾಲನೆ • ಮುಷ್ಕರ ಕೈಬಿಟ್ಟ ಸಾರಿಗೆ ನೌಕರರು

ಕರ್ತವ್ಯಕ್ಕೆ ಹಾಜರಾಗಲು ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಸೂಚನೆಯಂತೆ ಮುಷ್ಕರ ವಾಪಸ್ ಪಡೆದ ಸಾರಿಗೆ ನೌಕರರು, ಗುರುವಾರ ನೂಕುನುಗ್ಗಲಿನಲ್ಲಿ ಕರ್ತವ್ಯಕ್ಕೆ ಹಾಜರಾದರು.

ಕೆಎಸ್ಆರ್‌ಟಿಸಿ ಮತ್ತು ಬಿಎಂಟಿಸಿ ಡಿಪೋಗಳ ಎದುರು ಗುರುವಾರ ಬೆಳಿಗ್ಗೆ ಚಾಲಕ ಮತ್ತು ನಿರ್ವಾಹಕರ ಮುಗಿಬಿದ್ದಿದ್ದರು. ಕರ್ತವಕ್ಕೆ ಹಾಜರಾಗಲು ಸಾಲುಗಟ್ಟಿ ನಿಂತಿದ್ದರು. ಆದರೆ, ಅವರಿಂದ ಮುಚ್ಚಳಿಕೆ ಬರೆಸಿಕೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ವಿಳಂಬವಾಯಿತು.

‘ಮುಷ್ಕರದ ಅವಧಿಯಲ್ಲಿ ನಾನು ಕರ್ತವ್ಯಕ್ಕೆ ಗೈರಾಗಿದ್ದು, ಇನ್ನು ಮುಂದೆ ಇಂತಹ ಯಾವುದೇ ಮುಷ್ಕರದಲ್ಲಿ ಭಾಗಿಯಾಗದೆ ನಿಷ್ಠೆಯಿಂದ ಕರ್ತವ್ಯ ನಿರ್ವಹಿಸುತ್ತೇನೆ ಎಂದು ಸ್ವಯಂ ದೃಢೀಕರಿಸುತ್ತೇನೆ’ ಎಂಬ ಮುದ್ರಿತ ಮುಚ್ಚಳಿಕೆಗೆ ನೌಕರರಿಂದ ಸಹಿ ಹಾಕಿಸಿಕೊಂಡು ಅಧಿಕಾರಿಗಳು ಕರ್ತವ್ಯಕ್ಕೆ ನಿಯೋಜಿಸಿದರು.

ಮುಷ್ಕರ ಇಲ್ಲದಿದ್ದರೆ ಬುಧವಾರ ಕೆಲಸಕ್ಕೆ ಹಾಜರಾದವರು ರಾತ್ರಿ ತಂಗುವ ಕರ್ತವ್ಯ ಮುಗಿಸಿ ಗುರುವಾರ ಬೆಳಿಗ್ಗೆ ಮನೆಗೆ ಹೋಗಬೇಕಿತ್ತು. ಆದರೆ, ಮುಷ್ಕರ ಬುಧವಾರ ಸಂಜೆ ವಾಪಸ್ ಪಡೆದ ಕಾರಣ ಎಲ್ಲ ನೌಕರರು ಗುರುವಾರ ಬೆಳಿಗ್ಗೆ ಡಿಪೋಗಳ ಮುಂದೆ ಹಾಜರಾದರು. ಎಲ್ಲರನ್ನು ಕರ್ತವ್ಯಕ್ಕೆ ಹಾಜರು ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಬಹುತೇಕರಿಗೆ ಕೆಲಸ ಮಾಡಲು ಅವಕಾಶ ಸಿಕ್ಕರೆ, ಕೆಲವರು ಮನೆಗೆ ವಾಪಸ್ ಹೋದರು.

ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಗುರುವಾರ ಬಿಎಂಟಿಸಿ ಬಸ್‌ಗಳು ಸಾರ್ವಜನಿಕ ಸೇವೆಗೆ ನಿಂತಿದ್ದವು –ಪ್ರಜಾವಾಣಿ ಚಿತ್ರ

ಈ ನಡುವೆ, ಅಮಾನತುಗೊಂಡಿದ್ದ ಸಿಬ್ಬಂದಿ ಕೂಡ ಡಿಪೋಗಳ ಮುಂದೆ ಬಂದಿದ್ದರು. ಆದರೆ, ಅವರನ್ನು ಕರ್ತವ್ಯಕ್ಕೆ ಹಾಜರು ಮಾಡಿಕೊಳ್ಳಲಿಲ್ಲ. ಅಮಾನತುಗೊಂಡಿರುವ ಸಿಬ್ಬಂದಿ ಸದ್ಯಕ್ಕೆ ಕರ್ತವ್ಯಕ್ಕೆ ಹಾಜರಾಗಲು ಆಗುವುದಿಲ್ಲ. ಅವರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆಯಾಗಲಿದ್ದು, ಎಲ್ಲರನ್ನೂ ಪ್ರತ್ಯೇಕವಾಗಿ ವಿಚಾರಣೆಗೆ ಒಳಪಡಿಸಲಾಗುತ್ತದೆ. ಈ ಪ್ರಕ್ರಿಯೆಗಳು ನಡೆಯಲು ಕನಿಷ್ಠ 6 ತಿಂಗಳ ಕಾಲಾವಕಾಶ ಬೇಕಾಗಲಿದೆ ಎಂದು ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ವಜಾಗೊಂಡಿರುವ ಕಾಯಂ ಸಿಬ್ಬಂದಿ ಮತ್ತು ತರಬೇತಿ ಅವಧಿಯ ಸಿಬ್ಬಂದಿ ಮತ್ತೆ ಕರ್ತವ್ಯಕ್ಕೆ ಮರಳಲು ಅವಕಾಶ ಇಲ್ಲ ಎಂದು ಹೇಳಿದರು.

ಬಿಎಂಟಿಸಿಯ 6 ಸಾವಿರ ಬಸ್‌ಗಳಲ್ಲಿ ಗುರುವಾರ ಸಂಜೆ ವೇಳೆಗೆ 4,900 ಬಸ್‌ಗಳು ಕಾರ್ಯಾಚರಣೆಗೆ ಇಳಿದಿದ್ದವು. ಆದರೆ, ಕೋವಿಡ್ ಉಲ್ಬಣಗೊಂಡಿರುವ ಕಾರಣದಿಂದ ಪ್ರಯಾಣಿಕರಿಲ್ಲದೆ ಬಸ್‌ಗಳು ಖಾಲಿ ಖಾಲಿಯಾಗಿಯೇ ಸಂಚರಿಸಿದವು.

‘ಶೇ 50ರಷ್ಟು ಹಾಜರಿ: ಅವೈಜ್ಞಾನಿಕ ಆದೇಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಹೆಚ್ಚುತ್ತಿರುವುದರಿಂದ ಸರ್ಕಾರ ಹೊರಡಿಸಿರುವ ಮಾರ್ಗಸೂಚಿ ಜಾರಿಗೊಳಿಸುವ ಭಾಗವಾಗಿ, ಪದವಿಪೂರ್ವ ಕಾಲೇಜುಗಳಲ್ಲಿ ಶೇ 50ರಷ್ಟು ಉಪನ್ಯಾಸಕರು ಕಡ್ಡಾಯವಾಗಿ ಹಾಜರಾಗಬೇಕು ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಆದೇಶಿಸಿದೆ.

‘ಏ. 28ರಿಂದ ಮೇ 18ರವರೆಗೆ ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷೆ ನಡೆಸಲು ಸೂಚಿಸಲಾಗಿದೆ. ಮೇ 24ರಿಂದ ತಾತ್ವಿಕ ಪರೀಕ್ಷೆಗಳು ನಡೆಯಲಿದೆ. ಪರೀಕ್ಷಾ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಶೇ 50ರಷ್ಟು ಉಪನ್ಯಾಸಕರ ಹಾಜರಿ ಅಗತ್ಯವಾಗಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆದರೆ, ಈ ಆದೇಶಕ್ಕೂ ಪದವಿಪೂರ್ವ ಉಪನ್ಯಾಸಕರು ವಿರೋಧ ವ್ಯಕ್ತಪಡಿಸಿದ್ದಾರೆ. ‘ವಿಜ್ಞಾನ ವಿದ್ಯಾರ್ಥಿಗಳಿಗೆ ಮಾತ್ರ ಪ್ರಾಯೋಗಿಕ ಪರೀಕ್ಷೆ ಇದೆ. ಶೇ 20ರಷ್ಟು ಕಾಲೇಜುಗಳಲ್ಲಿ ಮಾತ್ರ ವಿಜ್ಞಾನ ತರಗತಿಗಳು ಮತ್ತು ಪರೀಕ್ಷಾ ಕೇಂದ್ರಗಳಿರುತ್ತವೆ. ಅಂಥ ಕಾಲೇಜುಗಳಲ್ಲಿ ಶೇ 50 ಉಪನ್ಯಾಸಕರು ಹಾಜರಾದರೆ ಸಾಕಿತ್ತು. ಆದರೆ, ರಾಜ್ಯದ ಎಲ್ಲ ಕಾಲೇಜುಗಳಲ್ಲಿನ ಶೇ 50 ಉಪನ್ಯಾಸಕರು ಕಾಲೇಜಿಗೆ ಹಾಜರಾಗಬೇಕೆಂದು ಹೊರಡಿಸಿರುವ ಆದೇಶ ಅವೈಜ್ಞಾನಿಕ’ ಎಂದು ದೂರಿದ್ದಾರೆ.

‘ಮೇ 4ರವರೆಗೆ ಎಲ್ಲ ಕಾಲೇಜುಗಳನ್ನು ಸ್ಥಗಿತ ಮಾಡಲು ಸರ್ಕಾರ ಆದೇಶಿಸಿದೆ. ಪ್ರಾಯೋಗಿಕ ತರಗತಿ ನಿಗದಿತ ವೇಳಾಪಟ್ಟಿಯಂತೆ ನಡೆಸಿದರೆ ವಸತಿ ನಿಲಯಗಳಲ್ಲಿದ್ದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿ ಪ್ರಾಯೋಗಿಕ ಪರೀಕ್ಷೆಯಿಂದ ವಂಚಿತರಾಗಬಹುದು. ಆದ್ದರಿಂದ ಪ್ರಾಯೋಗಿಕ ಪರೀಕ್ಷೆಗಳನ್ನು ಮೇ 4ರ ನಂತರ ನಡೆಸಿ ಅಥವಾ ಏ. 28ರಿಂದ ನಡೆಸುವುದಾದರೆ ವಸತಿಯುತ ಕಾಲೇಜುಗಳಿಗೆ ಕೋವಿಡ್ ಮಾರ್ಗಸೂಚಿ ಪ್ರಕಾರ ಸುರಕ್ಷತೆ ತೆಗೆದುಕೊಂಡು ವಸತಿ ನಿಲಯದಲ್ಲಿದ್ದುಕೊಂಡು ಪರೀಕ್ಷೆ ಬರೆಯಲು ಅನುಮತಿ ನೀಡಬೇಕು’ ಎಂದು ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ರವಿ ಸಿ.ಬಿ. ಆಗ್ರಹಿಸಿದ್ದಾರೆ.

ಮಧು ಬಂಗಾರಪ್ಪಗೆ ಕೋವಿಡ್ ದೃಢ

ಸೊರಬ: ಮಾಜಿ ಶಾಸಕ ಮಧು ಬಂಗಾರಪ್ಪ ಅವರಿಗೆ ಕೊರೊನಾ ಸೋಂಕು ತಗುಲಿರುವುದು ಗುರುವಾರ ದೃಢಪಟ್ಟಿದ್ದು, ಬೆಂಗಳೂರಿನ ತಮ್ಮ ನಿವಾಸದಲ್ಲಿ ಐಸೊಲೇಷನ್‌ನಲ್ಲಿದ್ದಾರೆ.

ಮಧು ಬಂಗಾರಪ್ಪ

ಗುರುವಾರ ಅವರ ತಾಯಿ ಶಕುಂತಲಾ ಬಂಗಾರಪ್ಪ ಅವರ ಪುಣ್ಯಸ್ಮರಣೆ ಕಾರ್ಯಕ್ರಮ ನಿಮಿತ್ತ ಸೊರಬದ ಬಂಗಾರ ಧಾಮದಲ್ಲಿರುವ ಸಮಾಧಿಗೆ ಪೂಜೆ ಸಲ್ಲಿಸಲು ಬೆಂಗಳೂರಿನಿಂದ ಬರಬೇಕಾಗಿತ್ತು. ಜೊತೆಗೆ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಜನ ಸಂಪರ್ಕ ಸಭೆ ಏರ್ಪಡಿಸಲಾಗಿತ್ತು.

ಜ್ವರ ಕಾಣಿಸಿಕೊಂಡಿದ್ದ ಕಾರಣ ಸೊರಬಕ್ಕೆ ಹೊರಡುವ ಮುನ್ನ ಪರೀಕ್ಷೆ ಮಾಡಿಸಿದಾಗ ಕೊರೊನಾ ದೃಢಪಟ್ಟಿರುವುದು ತಿಳಿದು ಬಂದಿದೆ.

ಆಮ್ಲಜನಕ ಕೊರತೆ ಬಗ್ಗೆ ದೆಹಲಿ ಹೈಕೋರ್ಟ್ ಕಳವಳ

‘ದೇಶವನ್ನು ದೇವರೇ ಮುನ್ನಡೆಸುತ್ತಿದ್ದಾನೆ...’

ನವದೆಹಲಿ: ರಾಜಧಾನಿಯಲ್ಲಿ ಕೋವಿಡ್–19 ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ದೆಹಲಿ ಹೈಕೋರ್ಟ್ 'ಈ ದೇಶವನ್ನು ದೇವರೇ ಮುನ್ನಡೆಸುತ್ತಿದ್ದಾನೆ' ಎಂದು ಹೇಳಿದೆ.

‘ದೆಹಲಿಯಲ್ಲಿ ಪರಿಸ್ಥಿತಿ ಅನಿಶ್ಚಿತತೆಯಿಂದ ಕೂಡಿದೆ. ಹಲವು ಆಸ್ಪತ್ರೆಗಳಲ್ಲಿ ಆಮ್ಲಜನಕ ದೊರೆಯುತ್ತಿಲ್ಲ. ಯಾವುದೇ ತೊಡಕುಗಳಿಲ್ಲದೆ ಸಮರ್ಪಕವಾಗಿ ಆಮ್ಲಜನಕವನ್ನು ಪೂರೈಸಲು ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

‘ಸರ್ಕಾರ ಬಯಸಿದರೆ ಏನು ಬೇಕಾದರೂ ಮಾಡಬಹುದು. ಸ್ವರ್ಗವನ್ನೇ ಧರೆಗೆ ಇಳಿಸಬಹುದು’ ಎಂದು ನ್ಯಾಯಮೂರ್ತಿಗಳಾದ ವಿಪಿನ್ ಸಾಂಘಿ ಮತ್ತು ರೇಖಾ ಪಾಲ್ಲಿ ಅವರನ್ನೊಳಗೊಂಡ ಪೀಠವು ಹೇಳಿದೆ.

’ವೈದ್ಯಕೀಯ ಆಮ್ಲಜನಕ ಸೇರಿದಂತೆ ಸರಕು ಸಾಗಣೆಗೆ ನಿರ್ಬಂಧಗಳನ್ನು ವಿಧಿಸಬಾರದು ಎನ್ನುವ ಕೇಂದ್ರದ ನಿರ್ದೇಶನವನ್ನು ಜಾರಿಗೊಳಿಸಲು ಅಧಿಕಾರಿಗಳು ಕ್ರಮಕೈಗೊಳ್ಳಬೇಕು’ ಎಂದು ಇದೇ ಸಂದರ್ಭದಲ್ಲಿ ನ್ಯಾಯಾಲಯ ನಿರ್ದೇಶನ ನೀಡಿದೆ.

’ಆಮ್ಲಜನಕ ಸಾಗಿಸುವ ಲಾರಿಗಳಿಗೆ ಅಗತ್ಯ ಭದ್ರತೆಯನ್ನು ಒದಗಿಸಬೇಕು. ಆಸ್ಪತ್ರೆಗಳಿಗೆ ಆಮ್ಲಜನಕವು ಸಕಾಲಕ್ಕೆ ತಲುಪುವಂತೆ ಸಾಗಿಸಲು ಪ್ರತ್ಯೇಕವಾದ ಕಾರಿಡಾರ್‌ಗಳನ್ನು ರೂಪಿಸಬೇಕು’ ಎಂದು ನ್ಯಾಯಾಲಯ ಸಲಹೆ ನೀಡಿದೆ.

ಮೊಹಮ್ಮದ್ ನಲಪಾಡ್ ವಿರುದ್ಧ ಎನ್‌ಸಿಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಕಾಂಗ್ರೆಸ್ ರಾಜ್ಯ ಘಟಕದ ಉಪಾಧ್ಯಕ್ಷೆ ಭವ್ಯಾ ಅವರಿಗೆ ಜೀವ ಬೆದರಿಕೆ ಹಾಕಿರುವ ಆರೋಪದಡಿ ಶಾಸಕ ಎನ್.ಎ. ಹ್ಯಾರಿಸ್ ಮಗ ಮೊಹಮ್ಮದ್ ನಲಪಾಡ್ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಗಂಭೀರವಲ್ಲದ ಪ್ರಕರಣ (ಎನ್‌ಸಿಆರ್) ದಾಖಲಾಗಿದೆ.

‘ರೇಸ್‌ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದಲ್ಲಿ ಬುಧವಾರ ಸಂಜೆ ನಡೆದ ಘಟನೆ ಉಲ್ಲೇಖಿಸಿ ಭವ್ಯಾ ಅವರು ಮೂರು ಪುಟಗಳ ದೂರು ನೀಡಿದ್ದಾರೆ. ಅದರನ್ವಯ ಎನ್‌ಸಿಆರ್ ದಾಖಲಿಸಿಕೊಳ್ಳಲಾಗಿದೆ. ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಕ್ರಮ ಜರುಗಿಸಲಾಗುವುದು’ ಎಂದು ಪೊಲೀಸರು ಹೇಳಿದರು.

‘ಕಾಂಗ್ರೆಸ್ ಭವನದಲ್ಲಿ ಕೋವಿಡ್ ವಾರ್ ರೂಮ್ ನಿರ್ಮಾಣ ಮಾಡುತ್ತಿರುವಾಗಲೇ ಗಲಾಟೆ ಆಗಿದೆ. ಇದೇ ಸಂದರ್ಭದಲ್ಲೇ ಮೊಹಮ್ಮದ್ ನಲಪಾಡ್ ಹಾಗೂ ಇತರರು, ಭವ್ಯಾ ಅವರಿಗೆ ಜೀವ ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ. ಈ ಸಂಗತಿ ದೂರಿನಲ್ಲಿದೆ’ ಎಂದೂ ತಿಳಿಸಿದರು.

‘ಬಸವಕಲ್ಯಾಣದಲ್ಲಿ ನಡೆದ ಉಪಚುನಾವಣಾ ಪ್ರಚಾರದ ವೇಳೆಯಲ್ಲೂ ಭವ್ಯಾ ಅವರಿಗೆ ಕಿರುಕುಳ ನೀಡಲಾಗಿದೆ. ದೆಹಲಿಯಲ್ಲೂ ಅವರಿಗೆ ಬೆದರಿಕೆ ಹಾಕಲಾಗಿದೆ. ಹೀಗಾಗಿ, ಆರೋಪಿಗಳನ್ನು ಠಾಣೆಗೆ ಕರೆಸಿ ಎಚ್ಚರಿಕೆ ನೀಡುವಂತೆ ಮತ್ತು ಕಾನೂನು ಕ್ರಮ ಕೈಗೊಳ್ಳುವಂತೆ ಭವ್ಯಾ ದೂರಿನಲ್ಲಿ ಕೋರಿದ್ದಾರೆ’ ಎಂದೂ ಪೊಲೀಸರು ಹೇಳಿದರು.

ಕೊರೊನಾ ಸೋಂಕು ತಡೆಯಲು ವಿಫಲ: ಡಿಕೆಶಿ ಆರೋಪ

ಕನಕಪುರ: ‘ಕೋವಿಡ್ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದ್ದು ಜನರ ಜೀವದೊಂದಿಗೆ ಚೆಲ್ಲಾಟವಾಡುತ್ತಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು.

ಇಲ್ಲಿನ ಸಾರ್ವಜನಿಕ (ಐಪಿಪಿ) ಆಸ್ಪತ್ರೆಗೆ ಗುರುವಾರ ದಿಢೀರ್ ಭೇಟಿ ನೀಡಿದ ಅವರು, ಕೋವಿಡ್ ನಿರ್ವಹಣಾ ಕೇಂದ್ರಕ್ಕೆ ತೆರಳಿ ರೋಗಿಗಳ ಯೋಗಕ್ಷೇಮ ವಿಚಾರಿಸಿದರು.

ರಾಜ್ಯದಲ್ಲಿ ಕೋವಿಡ್ 2ನೇ ಅಲೆಯು ತೀವ್ರಗತಿಯಲ್ಲಿ ಏರುತ್ತಿದೆ. ಸರ್ಕಾರ ಮೊದಲಿಂದಲೇ ಕೋವಿಡ್ ತಡೆಗೆ ಸರಿಯಾದ ಕ್ರಮ ಅನುಸರಿಸಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಕೋವಿಡ್ ಬಾಧಿತರಿಗೆ ಆಮ್ಲಜನಕ ಮತ್ತು ಬೆಡ್‌ಗಳ ಕೊರತೆ ಉಂಟಾಗಿ ಪರದಾಡುವಂತಹ ಪರಿಸ್ಥಿತಿ ಉಂಟಾಗಿದೆ ಎಂದು ಅವರು ಆರೋಪಿಸಿದರು.

ಕಾವೇರಿ ನದಿಯಲ್ಲಿ ಹೆಚ್ಚಿದ ಅಸ್ಥಿ ವಿಸರ್ಜನೆ ಕಾರ್ಯ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ಕೋವಿಡ್‌ನಿಂದ ಬೆಂಗಳೂರಿನಲ್ಲಿ ಮೃತಪಟ್ಟವರ ಅಸ್ಥಿಯನ್ನು ಪಟ್ಟಣದ ಕಾವೇರಿ ನದಿಯಲ್ಲಿ ತಂದು ವಿಸರ್ಜನೆ ಮಾಡಲಾಗುತ್ತಿದೆ.

ಮೂರು ದಿನಗಳಿಂದ ಕಾವೇರಿ ನದಿಯಲ್ಲಿ ಅಸ್ಥಿ ವಿಸರ್ಜನೆ ಪ್ರಕ್ರಿಯೆ ಹೆಚ್ಚಾಗಿದೆ. ಪಟ್ಟಣದ ಸೋಪಾನಕಟ್ಟೆ ಮತ್ತು ಪಶ್ಚಿಮವಾಹಿನಿ ಬಳಿ, ಕಾವೇರಿ ನದಿಯಲ್ಲಿ ತಮ್ಮ ಬಂಧುಗಳ ಅಸ್ಥಿಯನ್ನು ವಿಸರ್ಜನೆ ಮಾಡುತ್ತಿದ್ದಾರೆ. ಬೆಂಗಳೂರು ಮಾತ್ರವಲ್ಲದೇ; ಮೈಸೂರಿನಿಂದಲೂ ಅಸ್ಥಿ ವಿಸರ್ಜನೆಗೆ ಜನರು ಬರುತ್ತಿದ್ದಾರೆ.

ವೈದಿಕರ ಹಿಂದೇಟು: ಬೆಂಗಳೂರಿನಿಂದ ಬಂದವರಿಂದ ಸೋಂಕು ಹರಡುವ ಭಯದಿಂದ ಅಸ್ಥಿ ವಿಸರ್ಜನೆಗೆ ಕೆಲವು ವೈದಿಕರು ಹಿಂದೇಟು ಹಾಕುತ್ತಿದ್ದಾರೆ.

ಶ್ರೀರಂಗಪಟ್ಟಣದ ಸೋಪಾನಕಟ್ಟೆ ಬಳಿ ಕಾವೇರಿ ನದಿಯಲ್ಲಿ ತಮ್ಮ ಬಂಧುಗಳ ಅಸ್ಥಿ ವಿಸರ್ಜಿಸಲು ಗುರುವಾರ ಬಂದಿದ್ದ ಜನರು

ಕೆಲವರು ವೈದಿಕರು ಕೇಳಿದಷ್ಟು ಹಣ ಕೊಟ್ಟು ಅಸ್ಥಿ ವಿಸರ್ಜನೆ ಕೈಂಕರ್ಯ ಪೂರೈಸಿ ಹೋಗುತ್ತಿದ್ದಾರೆ.

‘ಏ.20ರಂದು ಒಂದೇ ದಿನ 60ಕ್ಕೂ ಹೆಚ್ಚು ಮಂದಿ ತಮ್ಮ ಬಂಧುಗಳು ಅಸ್ಥಿ ವಿಸರ್ಜನೆ ಮಾಡಿದ್ದಾರೆ. ಏ.22ರಂದು 30ಕ್ಕೂ ಹೆಚ್ಚು ಮಂದಿ ಬೆಂಗಳೂರಿಗರು ಅಸ್ಥಿ ವಿಸರ್ಜನೆ ಮಾಡಿ ಹೋಗಿದ್ದಾರೆ’ ಎಂದು ಪಟ್ಟಣದ ವೈದಿಕರೊಬ್ಬರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಮರ ಕಡಿಯಲು ಹೈಕೋರ್ಟ್ ನಿರ್ಬಂಧ

ಬೆಂಗಳೂರು: ಸುರಂಜನ್ ದಾಸ್ ರಸ್ತೆಯಲ್ಲಿ ಅಂಡರ್‌ಪಾಸ್ ನಿರ್ಮಾಣ ಉದ್ದೇಶಕ್ಕೆ ಮರಗಳನ್ನು ಕಡಿಯದಂತೆ ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಮರ ಕಡಿಯಲು ಬಿಬಿಎಂಪಿ ಹೊರಡಿಸಿರುವ ಕಚೇರಿ ಸುತ್ತೋಲೆ ರದ್ದುಪಡಿಸುವಂತೆ ಕೋರಿ ಸ್ವಾತಿ ದಾಮೋದರ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಕಮಾಂಡೋ ಆಸ್ಪತ್ರೆಯಿಂದ ಹೋಪ್ ಫಾರ್ಮ್ ತನಕ ಸಿಗ್ನಲ್ ರಹಿತ ಕಾರಿಡಾರ್ ನಿರ್ಮಾಣಕ್ಕಾಗಿ ಅಂಡರ್ ಪಾಸ್ ನಿರ್ಮಾಣ ಮಾಡುವ ಉದ್ದೇಶ ಇದೆ. ಅದಕ್ಕಾಗಿ 25 ಮರಗಳನ್ನು ಕಡಿಯುವಂತೆ ಬಿಬಿಎಂಪಿ 2020ರ ಡಿಸೆಂಬರ್ 18ರಂದು ಸುತ್ತೋಲೆ ಹೊರಡಿಸಿತ್ತು.

ಕೊರೊನಾ ಸುಳ್ಳು ವರದಿ; ನೌಕರರ ವಿರುದ್ಧ ಎಫ್‌ಐಆರ್

ಬೆಂಗಳೂರು: ವ್ಯಕ್ತಿಯೊಬ್ಬರಿಂದ ₹ 900 ಪಡೆದು ‘ಕೊರೊನಾ ಪಾಸಿಟಿವ್’ ಎಂಬುದಾಗಿ ಸುಳ್ಳು ವರದಿ ನೀಡಿದ್ದ ಯಶವಂತಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ಇಬ್ಬರು ನೌಕರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಆರೋಗ್ಯ ಕೇಂದ್ರದ ವೈದ್ಯಕೀಯ ಅಧಿಕಾರಿ ಬಿ. ಸುನೀತಾ ದೂರು ನೀಡಿದ್ದಾರೆ. ಮಾದರಿ ಸಂಗ್ರಹಕಾರ ನರೇಶ್ ಹಾಗೂ ಕಂಪ್ಯೂಟರ್ ಆಪರೇಟರ್ ಪವನ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಇಬ್ಬರು ನೌಕರರು, ಬಿಬಿಎಂಪಿ ವತಿಯಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ವ್ಯಕ್ತಿಯೊಬ್ಬರು, ಕೊರೊನಾ ಪಾಸಿಟಿವ್ ವರದಿ ನೀಡುವಂತೆ ಕೇಳಿದ್ದರು. ಅದಕ್ಕೆ ಒಪ್ಪಿದ್ದ ಆರೋಪಿಗಳು, ಹಣ ಪಡೆದು ಸುಳ್ಳು ವರದಿ ಕೊಟ್ಟಿದ್ದರು. ಇದು ಗೊತ್ತಾಗುತ್ತಿದ್ದಂತೆ ಸುನೀತಾ ದೂರು ನೀಡಿದ್ದಾರೆ. ತನಿಖೆ ಮುಂದುವರಿದಿದೆ’ ಎಂದೂ ತಿಳಿಸಿದರು.

ವಿಧಾನಸಭೆ ಸಚಿವಾಲಯ: ಯಾರಿಗೆಲ್ಲ ವಿನಾಯ್ತಿ?

ಬೆಂಗಳೂರು: ವಿಧಾನಸಭೆ ಸಚಿವಾಲಯ ಮತ್ತು ಶಾಸಕರ ಭವನದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ ಮತ್ತು ಸಿಬ್ಬಂದಿಯಲ್ಲಿ ದೃಷ್ಟಿಹೀನ, ದೈಹಿಕ ವೈಕಲ್ಯ ಇರುವವರು ಮತ್ತು ಗರ್ಭಿಣಿಯರಿಗೆ ಮೇ 4 ರವರೆಗೆ ಕರ್ತವ್ಯಕ್ಕೆ ಹಾಜರಾಗುವುದರಿಂದ ವಿನಾಯಿತಿ ನೀಡಲಾಗಿದೆ.

ಉಳಿದ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಬೇಕು ಎಂದು ಸಚಿವಾಲಯ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ.

ಶುಕ್ರವಾರ, ಏಪ್ರಿಲ್ 23, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 113 | ಪುಟ 12 + 2
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

'ಹೊಂದಿಸಿ ಬರೆಯಿರಿ' ಚಿತ್ರದ ಚಿತ್ರೀಕರಣ ಮುಗಿಸಿರುವ ನಟ ಐಶಾನಿ ಶೆಟ್ಟಿ, 'ಧರಣಿ ಮಂಡಲ ಮಧ್ಯದೊಳಗೆ' ಪ್ರವೇಶಿಸಿದ್ದಾರೆ. ಈ ಚಿತ್ರದಲ್ಲಿನ ಪಾತ್ರ ಸವಾಲಿನಿಂದ ಕೂಡಿದೆ ಎನ್ನುತ್ತಾರೆ.

ಆಳ-ಅಗಲ: ಮಹಾಬಲೇಶ್ವರ ದೇಗುಲ ನಿರ್ವಹಣೆ ಯಾರಿಗೆ ಸಲ್ಲಬೇಕು?
ರಾಜ್ಯದ ವಿವಿಧೆಡೆ ಧಾರಾಕಾರ ಮಳೆ 6
ದೇವದತ್ತ ಶತಕ; ಆರ್‌ಸಿಬಿ ಅಜೇಯ 12

ಸೆನ್ಸೆಕ್ಸ್	ನಿಫ್ಟಿ	₹/$
48,081 ▲	14,406 ▲	74.94 ▼

ರೆಮ್‌ಡಿಸಿವಿರ್ ಚುಚ್ಚುಮದ್ದಿಗಾಗಿ ರಾಜ್ಯದಾದ್ಯಂತ ಹಾಹಾಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಸ್ಫೋಟದ ಬೆನ್ನಲ್ಲೇ ರಾಜ್ಯದಾದ್ಯಂತ ರೆಮ್‌ಡಿಸಿವಿರ್ ಚುಚ್ಚುಮದ್ದಿಗೆ (ಇಂಜೆಕ್ಷನ್) ಹಾಹಾಕಾರ ಆರಂಭವಾಗಿದೆ. ಖಾಸಗಿಯಾಗಿ ಆಸ್ಪತ್ರೆಗೆ ದಾಖಲಾಗಿರುವ ಕೋವಿಡ್ ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರು ಇದಕ್ಕಾಗಿ ಅಕ್ಷರಶಃ ಪರದಾಡುತ್ತಿದ್ದಾರೆ.

ವಿವಿಧ ಕಂಪನಿಗಳು ಉತ್ಪಾದಿಸುವ ರೆಮ್‌ಡಿಸಿವಿರ್ ಸುಮಾರು 20,000ದಿಂದ 23,000 ಡೋಸ್‌ಗಳು ಕೆಲವು ದಿನಗಳಿಂದ ಪ್ರತಿದಿನ ರಾಜ್ಯಕ್ಕೆ ಲಭಿಸುತ್ತಿವೆ. ಅರ್ಧ ಭಾಗವನ್ನು ಸರ್ಕಾರಿ ಕೋಟಾದಡಿ ದಾಖಲಾದ ರೋಗಿಗಳಿಗೆ ಕಾಯ್ದಿರಿಸುತ್ತಿದ್ದರೆ, ಇನ್ನರ್ಧ ಭಾಗವನ್ನು ವಿತರಕರ ಮೂಲಕ ಖಾಸಗಿ ಆಸ್ಪತ್ರೆಗಳಿಗೆ ಪೂರೈಸಲಾಗುತ್ತಿದೆ. ಆದರೆ, ರಾಜ್ಯದ ಬಹುಪಾಲು ಖಾಸಗಿ ಆಸ್ಪತ್ರೆಗಳಲ್ಲಿ ರೆಮ್‌ಡಿಸಿವಿರ್ ಕೊರತೆ ಸೃಷ್ಟಿಯಾಗಿದೆ.

ವೈರಾಣು ಸಂಬಂಧಿ ರೋಗಗಳ ಶಮನಕ್ಕೆ ಬಳಕೆ ಮಾಡುತ್ತಿದ್ದ ರೆಮ್‌ಡಿಸಿವಿರ್ ಔಷಧಿಯನ್ನು ತೀವ್ರವಾದ ಅನಾರೋಗ್ಯದಿಂದ ಬಳಲುತ್ತಿರುವ ಕೋವಿಡ್ ರೋಗಿಗಳ ಚಿಕಿತ್ಸೆಗೂ ಬಳಕೆ ಮಾಡಲಾಗುತ್ತಿದೆ. ಕೋವಿಡ್ ರೋಗಿಗಳಲ್ಲಿ ಶ್ವಾಸಕೋಶದ ಉರಿಯೂತ ತಡೆ ಮತ್ತು ಕೊರೊನಾ ವೈರಸ್ ದ್ವಿಗುಣಗೊಳ್ಳುವ ಪ್ರಮಾಣವನ್ನು ನಿಯಂತ್ರಿಸುವಲ್ಲಿ ಈ ಔಷಧಿ ಸಹಕಾರಿಯಾಗಲಿದೆ ಎಂಬುದು ಈವರೆಗಿನ ಬಳಕೆಯಿಂದ ಅನುಭವಕ್ಕೆ ಬಂದಿದೆ.

ತೀವ್ರ ಸ್ವರೂಪದ ಅನ್ಯ ಕಾಯಿಲೆಗಳಿಂದ ಬಳಲುತ್ತಿರುವವರು ಮತ್ತು ಕೋವಿಡ್‌ನಿಂದ ಹೆಚ್ಚು ಅಸ್ವಸ್ಥರಾದವರಿಗೆ ಆರಂಭಿಕ ಹಂತದ ಚಿಕಿತ್ಸೆಯಲ್ಲೇ ರೆಮ್‌ಡಿಸಿವಿರ್ ಚುಚ್ಚುಮದ್ದು ನೀಡಲಾಗುತ್ತಿದೆ. ಕೋವಿಡ್‌ನ ಎರಡನೇ ಅಲೆಯಲ್ಲಿ ಇಂತಹ ರೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ರೆಮ್‌ಡಿಸಿವಿರ್ ಬೇಡಿಕೆಯೂ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ.

ಹೆಚ್ಚಿದ ಪರದಾಟ: ಕೆಲವು ದಿನಗಳಿಂದ ಈಚೆಗೆ ಈ ಚುಚ್ಚುಮದ್ದು ಲಭ್ಯವಾಗದೇ ಪರದಾಡುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಕೋವಿಡ್ ರೋಗಿಗಳು ಹೆಚ್ಚಿರುವ ಬೆಂಗಳೂರಿನಲ್ಲೇ ಈ ಸಮಸ್ಯೆ ಬೃಹದಾಕಾರವಾಗಿದೆ.

6ನೇ ಪುಟ ನೋಡಿ

ರಾಜ್ಯಕ್ಕೆ 25 ಸಾವಿರ ಬಾಟಲ್ ಹೆಚ್ಚುವರಿ ಹಂಚಿಕೆ

ನವದೆಹಲಿ: ರೋಗಿಗಳ ಅಗತ್ಯಕ್ಕೆ ಅನುಗುಣವಾಗಿ ಕರ್ನಾಟಕಕ್ಕೆ ರೆಮ್‌ಡಿಸಿವಿರ್ ಜೀವರಕ್ಷಕ ಔಷಧವನ್ನು ಹೆಚ್ಚುವರಿಯಾಗಿ ನೀಡಲು ನಿರ್ಧರಿಸಲಾಗಿದೆ ಎಂದು ಕೇಂದ್ರ ರಸಗೊಬ್ಬರ ಹಾಗೂ ರಾಸಾಯನಿಕ ಖಾತೆ ಸಚಿವ ಡಿ.ವಿ ಸದಾನಂದಗೌಡ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರದ ಕೋರಿಕೆ ಮೇರೆಗೆ ರೆಮ್‌ಡಿಸಿವಿರ್ ಅಗತ್ಯವನ್ನು ಪರಿಶೀಲಿಸಲಾಗಿದೆ. ಏಪ್ರಿಲ್ 30ರವರೆಗೆ ನಿಗದಿಪಡಿಸಿದ್ದ ಪ್ರಮಾಣಕ್ಕಿಂತ 25,000 ಬಾಟಲುಗಳನ್ನು ಹೆಚ್ಚುವರಿಯಾಗಿ ಹಂಚಿಕೆ ಮಾಡಲು ನಿರ್ಧರಿಸಲಾಗಿದೆ ಎಂದು ಗುರುವಾರ ಟ್ವೀಟ್ ಮೂಲಕ ತಿಳಿಸಿದ್ದಾರೆ.

ಕೋವಿಡ್–19 ರೋಗಿಗಳ ಚಿಕಿತ್ಸೆಗಾಗಿ ತುರ್ತಾಗಿ ಬಳಸಲಾಗುವ ರೆಮ್‌ಡಿಸಿವಿರ್ ಔಷಧಿಯ ಮೇಲಿನ ಕಸ್ಟಮ್ಸ್ ಸುಂಕವನ್ನು ಕೇಂದ್ರ ಸರ್ಕಾರ ಮನ್ನಾ ಮಾಡಿದೆ. ಮುಂಬರುವ ದಿನಗಳಲ್ಲಿ ಔಷಧಿಯ ಉತ್ಪಾದನೆಯು ದ್ವಿಗುಣಗೊಳಿಸಿ ಎಲ್ಲ ರಾಜ್ಯಗಳಿಗೂ ಅಗತ್ಯಕ್ಕೆ ತಕ್ಕಂತೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದೂ ಅವರು ತಿಳಿಸಿದ್ದಾರೆ.

ಕೋವಿಡ್–19 ಚಿಕಿತ್ಸೆಗಾಗಿ ಪರ್ಯಾಯ ಔಷಧಿಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ. ರೆಮ್‌ಡಿಸಿವಿರ್‌ನ ಬೇಡಿಕೆ ಕಡಿಮೆ ಮಾಡುವ ನಿಟ್ಟಿನಲ್ಲಿ ಪರ್ಯಾಯ ಔಷಧಿಗಳನ್ನು ರೋಗಿಗಳಿಗೆ ಸೂಚಿಸುವಂತೆ ಅವರು ವೈದ್ಯರನ್ನು ಕೋರಿದ್ದಾರೆ.

ಸ್ಪಂದನೆ ಇಲ್ಲದ ವಾರ್ ರೂಮ್

ರೆಮ್‌ಡಿಸಿವಿರ್ ಔಷಧಿ ಪೂರೈಕೆಯಲ್ಲಿ ನೆರವಾಗಲು ಆರೋಗ್ಯ ಇಲಾಖೆ ವಾರ್ ರೂಮ್ ಒಂದನ್ನು ಆರಂಭಿಸಿದೆ. ವಾರ್ ರೂಮ್‌ನ ದೂರವಾಣಿ ಸಂಖ್ಯೆ 8951755722ಗೆ ಕರೆ ಮಾಡಿದರೆ ಯಾವ ಸ್ಪಂದನೆಯೂ ದೊರಕುವುದಿಲ್ಲ ಎಂದು ಔಷಧಿಗಾಗಿ ಪರದಾಡುತ್ತಿರುವ ಜನರು ದೂರಿದ್ದಾರೆ.

'ಸ್ವಂತ ಜಮೀನಿನಲ್ಲಿ ಶವ ಸಂಸ್ಕಾರಕ್ಕೆ ಅನುಮತಿ'

ಬೆಂಗಳೂರು: 'ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಸಂಸ್ಕಾರ ಮಾಡಲು ಸ್ವಂತ ತೋಟ, ಜಮೀನಿನಲ್ಲೂ ಅನುಮತಿ ನೀಡಲಾಗಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ತೋಟದಲ್ಲಿ, ಜಮೀನಿನಲ್ಲಿ ಮಾರ್ಗಸೂಚಿ ಪ್ರಕಾರ ಅಂತ್ಯಸಂಸ್ಕಾರ ಮಾಡಲು ಅವಕಾಶ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದರು.

'ತಾವರೆಕೆರೆ ಬಳಿ ತಾತ್ಕಾಲಿಕವಾಗಿ ನಾಲ್ಕು ಎಕರೆ ಜಾಗದಲ್ಲಿ ಶವ ಸುಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಗುರುವಾರ ಬೆಳಿಗ್ಗೆಯಿಂದ 50ರಿಂದ 60 ಮೃತದೇಹಗಳನ್ನು ಸಂಪ್ರದಾಯದ ಪ್ರಕಾರ ಸುಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ನೀಲಗಿರಿ ತೋಪು ಖರೀದಿ ಮಾಡಿ ಕಟ್ಟಿಗೆ ಸಂಗ್ರಹ ಕೂಡ ಮಾಡಲಾಗಿದೆ' ಎಂದು ಹೇಳಿದರು.

'ಸಮಸ್ಯೆ ಕಂಡುಬಂದಲ್ಲಿ ಅದನ್ನು ಅಲ್ಲಿಯೇ ಬಗೆಹರಿಸಲು ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗಿದೆ. ಆಂಬುಲೆನ್ಸ್ ಚಾಲಕರು ಹೆಚ್ಚಿನ ಹಣ ವಸೂಲಿ ಮಾಡಿದರೆ ಅಂಥವರನ್ನು ಬಂಧಿಸುತ್ತೇವೆ. ಈ ಬಗ್ಗೆ ಗೃಹ ಸಚಿವರ ಜೊತೆಗೂ ಮಾತನಾಡಿದ್ದೇನೆ' ಎಂದರು.

'ಬೆಂಗಳೂರು ಸುತ್ತಮುತ್ತಲಿನ 20 ಕಿಲೊ ಮೀಟರ್‌ನಿಂದ ಎಲ್ಲರೂ ಶವ ಸಂಸ್ಕಾರಕ್ಕೆ ಇಲ್ಲಿಗೇ ಬರುತ್ತಿದ್ದಾರೆ. ಸುಡಬೇಕು ಎಂಬ ಕಾರಣಕ್ಕೆ ಇಲ್ಲಿಗೇ ತರುತ್ತಿದ್ದಾರೆ. ಈ ಕಾರಣದಿಂದ ಬೆಂಗಳೂರು ನಗರ ವ್ಯಾಪ್ತಿಯ ಚಿತಾಗಾರಗಳಲ್ಲಿ ಮೃತದೇಹಗಳ ಸಂಖ್ಯೆ ದಿಢೀರ್ ಹೆಚ್ಚಳವಾಗಿದೆ' ಎಂದರು.

ಕೋವಿಡ್ ನಿರ್ವಹಣೆ: ಆಮ್ಲಜನಕ, ಔಷಧ, ಲಸಿಕೆ ಪೂರೈಕೆಗೆ ರಾಷ್ಟ್ರೀಯ ನೀತಿ ರೂಪಿಸಲು ಕೇಂದ್ರಕ್ಕೆ ಸೂಚನೆ

ಆರೋಗ್ಯ ತುರ್ತುಸ್ಥಿತಿ: 'ಸುಪ್ರೀಂ' ಕಳವಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಪಿಡುಗಿನಿಂದಾಗಿ ದೇಶದಲ್ಲಿ 'ಆಘಾತಕಾರಿ' ಸ್ಥಿತಿ ಇದೆ. 'ರಾಷ್ಟ್ರೀಯ ತುರ್ತುಸ್ಥಿತಿ'ಯಂತೆ ಕಾಣಿಸುತ್ತಿದೆ. ಆಮ್ಲಜನಕ, ಅಗತ್ಯ ಔಷಧಗಳು ಮತ್ತು ಲಸಿಕೆ ಪೂರೈಕೆಗೆ ಕೇಂದ್ರವು ರಾಷ್ಟ್ರೀಯ ಯೋಜನೆಯೊಂದನ್ನು ರೂಪಿಸಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠವು ಸ್ವಯಂ ಪ್ರೇರಣೆಯಿಂದ ಈ ಪ್ರಕರಣವನ್ನು ಕೈಗೆತ್ತಿಕೊಂಡಿದೆ. ನ್ಯಾಯಾಲಯಕ್ಕೆ ವಿಚಾರಣೆಯಲ್ಲಿ ನೆರವು ನೀಡಲು ಹಿರಿಯ ವಕೀಲ ಹರೀಶ್ ಸಾಳ್ವೆ ಅವರನ್ನು (ಅಮಿಕಸ್ ಕ್ಯೂರಿ) ನೇಮಿಸಲಾಗಿದೆ.

ಲಾಕ್‌ಡೌನ್ ಹೇರುವ ಅಧಿಕಾರವು ರಾಜ್ಯ ಸರ್ಕಾರಗಳ ಬಳಿಯಲ್ಲಿ ಇರಬೇಕು ಎಂದು ತಾನು ಬಯಸುವುದಾಗಿಯೂ ಪೀಠ ಹೇಳಿದೆ. ಉತ್ತರ ಪ್ರದೇಶದ ಐದು ನಗರಗಳ ಮೇಲೆ ಲಾಕ್‌ಡೌನ್ ರೀತಿಯ ನಿರ್ಬಂಧ ಹೇರಲು ಅಲಹಾಬಾದ್ ಹೈಕೋರ್ಟ್ ನೀಡಿದ್ದ ನಿರ್ದೇಶನವನ್ನು ಪೀಠವು ಉಲ್ಲೇಖಿಸಿದೆ. ಬೊಬಡೆ ಅವರ ಕರ್ತವ್ಯದ ಕೊನೆಯ ದಿನಕ್ಕಿಂತ ಒಂದು ದಿನ ಮೊದಲು ಈ ವಿಚಾರಣೆ ನಡೆದಿದೆ. ಅವರು ಶುಕ್ರವಾರ ನಿವೃತ್ತರಾಗಲಿದ್ದಾರೆ.

ಕೋವಿಡ್ ನಿರ್ವಹಣೆ, ಆಮ್ಲಜನಕ ಪೂರೈಕೆ ಮತ್ತು ಇತರ ಅಗತ್ಯ ವಸ್ತುಗಳ ಪೂರೈಕೆಗೆ ಸಂಬಂಧಿಸಿ ವಿವಿಧ ಹೈಕೋರ್ಟ್‌ಗಳು ವಿಚಾರಣೆ ನಡೆಸುತ್ತಿರುವುದು ಗೊಂದಲಕ್ಕೆ ಕಾರಣವಾಗಿದೆ. ದೆಹಲಿ, ಬಾಂಬೆ, ಅಲಹಾಬಾದ್, ಕಲ್ಕತ್ತ, ಮಧ್ಯಪ್ರದೇಶ ಮತ್ತು ಸಿಕ್ಕಿಂ ಹೈಕೋರ್ಟ್‌ಗಳಲ್ಲಿ ಪ್ರಕರಣಗಳ ವಿಚಾರಣೆ ನಡೆಯುತ್ತಿದೆ. ಹಾಗಾಗಿ, ಕೆಲವು ವಿಚಾರಗಳ ಬಗ್ಗೆ ಸ್ವಯಂ ಪ್ರೇರಿತವಾಗಿ ವಿಚಾರಣೆಗೆ ನಿರ್ಧರಿಸಲಾಗಿದೆ. ಹೈಕೋರ್ಟ್‌ಗಳು ಜನರ ಹಿತಾಸಕ್ತಿಯಿಂದ ತಮ್ಮ ಕೆಲಸ ನಿರ್ವಹಿಸುತ್ತಿವೆ. ಆದರೆ, ಅದು ಗೊಂದಲಕ್ಕೆ ಮತ್ತು ಸಂಪನ್ಮೂಲದ ಅನಗತ್ಯ ಬಳಕೆಗೆ ಕಾರಣವಾಗುತ್ತದೆ ಎಂದು ಪೀಠವು ಹೇಳಿದೆ.

ಸುಪ್ರೀಂ ಕೋರ್ಟ್‌ನ ಈ ನಿಲುವನ್ನು ಹಿರಿಯ ವಕೀಲರಲ್ಲಿ ಹಲವರು ಟೀಕಿಸಿದ್ದಾರೆ. 'ರಾಜ್ಯಗಳ ಆಡಳಿತ ವ್ಯವಸ್ಥೆಗಳು ಹಲವು ಕೊರತೆಗಳನ್ನು ಹೊಂದಿವೆ. ಸ್ಥಳೀಯ ಮಟ್ಟದ ಸಮಸ್ಯೆಗಳ ಬಗ್ಗೆ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿಯೇ ಹೈಕೋರ್ಟ್‌ಗಳು ವಿಚಾರಣೆ ನಡೆಸುತ್ತಿವೆ' ಎಂದು ಹಿರಿಯ ವಕೀಲ ವಿಕಾಸ್ ಸಿಂಗ್ ಹೇಳಿದ್ದಾರೆ. ಸುಪ್ರೀಂ ಕೋರ್ಟ್ ನಿಲುವಿನ ವಿರುದ್ಧ ಅವರು ಅರ್ಜಿಯನ್ನೂ ಸಲ್ಲಿಸಿದ್ದಾರೆ.

'ಒಬ್ಬ ಅಮಿಕಸ್ ಕ್ಯೂರಿ 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶದಿಂದ ಮಾಹಿತಿ ಪಡೆದು ಸುಪ್ರೀಂ ಕೋರ್ಟ್‌ಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಸಲ್ಲಿಸಲು ಹೇಗೆ ಸಾಧ್ಯ? ಇದು ಹತಾಶೆ ಹುಟ್ಟಿಸುತ್ತಿದೆ' ಎಂದು ಹಿರಿಯ ವಕೀಲ ರವೀಂದ್ರ ಶ್ರೀವಾಸ್ತವ ಹೇಳಿದ್ದಾರೆ.

'ರಾಷ್ಟ್ರ ಮಟ್ಟದಲ್ಲಿ ಕೋವಿಡ್ ತುರ್ತುಸ್ಥಿತಿ ಮತ್ತು ಆಮ್ಲಜನಕ ತುರ್ತುಸ್ಥಿತಿ ಬಗ್ಗೆ ಕೇಂದ್ರದಿಂದ ಉತ್ತರ ಪಡೆಯುವುದು ಸುಪ್ರೀಂ ಕೋರ್ಟ್‌ನ ಕೆಲಸ. ರಾಜ್ಯ ಮಟ್ಟದಲ್ಲಿ ನಿಗಾ ಇರಿಸುವ ಕೆಲಸವನ್ನು ಹೈಕೋರ್ಟ್‌ಗಳಿಗೆ ಬಿಟ್ಟುಬಿಡಬೇಕು. ರಾಜ್ಯಗಳು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಗಮನ ಹರಿಸಲು ಸುಪ್ರೀಂ ಕೋರ್ಟ್‌ಗೆ ಸಮಯವೂ ಇಲ್ಲ, ಅದರ ವಿವರಗಳೂ ಗೊತ್ತಿಲ್ಲ. ಹೈಕೋರ್ಟ್ ಆದೇಶಗಳ ಬಗ್ಗೆ ಜನರಿಗೆ ವಿಶ್ವಾಸ ಇದೆ' ಎಂದು ಹಿರಿಯ ವಕೀಲ ಮತ್ತು ಕಾಂಗ್ರೆಸ್ ಸಂಸದ ವಿವೇಕ ತಂಕಾ ಹೇಳಿದ್ದಾರೆ.

ದೆಹಲಿಯಲ್ಲಿ ಕೋವಿಡ್ ರೋಗಿಗಳ ಸಂಬಂಧಿಕರು ಆಮ್ಲಜನಕ ಸಿಲಿಂಡರ್‌ಗಳನ್ನು ತುಂಬಿಸುವ ಸಲುವಾಗಿ ಗುರುವಾರ ಖಾಲಿ ಸಿಲಿಂಡರ್‌ಗಳೊಂದಿಗೆ ಆಮ್ಲಜನಕ ಘಟಕದ ಮುಂದೆ ಸರದಿಯಲ್ಲಿ ನಿಂತಿದ್ದರು –ಪಿಟಿಐ ಚಿತ್ರ

ರಾಜ್ಯ ಕೋವಿಡ್ ಅಂಕಿ–ಅಂಶ

12,47,997 ▲	ಒಟ್ಟು ಸೋಂಕಿತರು (12,22,202 ನಿನ್ನೆಯ ವಿವರ)
1,96,236 ▲	ಸಕ್ರಿಯ ಪ್ರಕರಣಗಳು
10,37,857 ▲	ಗುಣಮುಖರಾದವರು
13,885 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	25,795	▲
ಗುಣಮುಖ	5,624	▼
ಸಾವು	123	▼

985 ಐಸಿಯುನಲ್ಲಿ ಇರುವವರು ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ಹಂಚಿಕೆಯಲ್ಲಿ ಸಮಾನತೆ ಇರಲಿ'



ವೈದ್ಯಕೀಯ ಆಮ್ಲಜನಕ, ಔಷಧಗಳು ಹಾಗೂ ಅಗತ್ಯ ಸೇವೆಗಳ ಪೂರೈಕೆಯು ವೈದ್ಯಕೀಯ ಪ್ರಾಧಿಕಾರಗಳ ಸಲಹೆಯಂತೆ ಸಮಾನತೆಯ ನೆಲೆಯಲ್ಲಿ ನಡೆಯಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ದೇಶದ ವಿವಿಧ ಭಾಗಗಳಲ್ಲಿ ವಿಷಮ ಸ್ಥಿತಿ ಇದೆ. ಕೋವಿಡ್ ಪ್ರಕರಣಗಳು ಮತ್ತು ಮರಣ ಪ್ರಮಾಣ ದಿಢೀರ್ ಏರಿಕೆಯಾಗಿದೆ. ಲಸಿಕೆಯನ್ನು ಬಿಟ್ಟರೆ ರೆಮ್‌ಡಿಸಿವಿರ್‌ನಂತಹ ಕೆಲವೇ ಔಷಧಗಳಿಂದ ಮಾತ್ರ ಚಿಕಿತ್ಸೆ ಸಾಧ್ಯ. ಆಮ್ಲಜನಕ ಪೂರೈಕೆ ಕೂಡ ಚಿಕಿತ್ಸೆಯ ಅಗತ್ಯ ಭಾಗ' ಎಂದು ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠ ಹೇಳಿದೆ.

ಆಮ್ಲಜನಕ, ಇತರ ಅಗತ್ಯ ಔಷಧಗಳು ಮತ್ತು ಲಸಿಕೆ ನೀಡಿಕೆ ವಿಚಾರದಲ್ಲಿ ಏಕರೂಪದ ಆದೇಶವನ್ನು ಏಕೆ ಹೊರಡಿಸಬಾರದು ಎಂಬ ಬಗ್ಗೆ ಶುಕ್ರವಾರದೊಳಗೆ ಪ್ರತಿಕ್ರಿಯೆ ನೀಡಲು ಕೇಂದ್ರ ಹಾಗೂ ರಾಜ್ಯಗಳಿಗೆ ಪೀಠವು ಸೂಚಿಸಿದೆ.

12 ದಿನ ಭಾಗಶಃ ಲಾಕ್‌ಡೌನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ನಿಯಂತ್ರಿಸಲು ಮುಂದಾಗಿರುವ ರಾಜ್ಯ ಸರ್ಕಾರ, ಅಗತ್ಯ ವಸ್ತುಗಳ ಮಾರಾಟದ ಅಂಗಡಿಗಳನ್ನು ಬಿಟ್ಟು ಉಳಿದೆಲ್ಲ ಚಟುವಟಿಕೆಗಳನ್ನು ಗುರುವಾರ ದಿಢೀರ್ ಬಂದ್ ಮಾಡಿದೆ. ಹೀಗಾಗಿ, ರಾಜ್ಯದಾದ್ಯಂತ ಇನ್ನು ಮುಂದಿನ 12 ದಿನ 'ಭಾಗಶಃ ಲಾಕ್‌ಡೌನ್' ಜಾರಿಯಲ್ಲಿರಲಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಸ್ಪಷ್ಟನೆ ನೀಡಿರುವ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, 'ರಾಜ್ಯದಾದ್ಯಂತ ಕಠಿಣ ಕ್ರಮಗಳನ್ನು ಜಾರಿಗೊಳಿಸಿ ಏ. 20ರಂದೇ ಸ್ಪಷ್ಟ ಮಾರ್ಗಸೂಚಿ ಹೊರಡಿಸಲಾಗಿದೆ. ಅದರ ಅನ್ವಯ, ಕಿರಾಣಿ ಅಂಗಡಿಗಳು, ನ್ಯಾಯಬೆಲೆ ಅಂಗಡಿಗಳು, ಹಣ್ಣು, ತರಕಾರಿ, ಹಾಲು, ಮೀನು–ಮಾಂಸ ಮಾರಾಟ, ಆರೋಗ್ಯ ಸೇವೆಗಳು, ಕಟ್ಟಡ ನಿರ್ಮಾಣ ಸಾಮಗ್ರಿಗಳ ಅಂಗಡಿಗಳಿಗೆ ಮಾತ್ರ ಅವಕಾಶ ನೀಡಲಾಗಿದೆ. ಉಳಿದೆಲ್ಲ ಅಂಗಡಿಗಳು ಮತ್ತು ವಾಣಿಜ್ಯ ಚಟುವಟಿಕೆ ನಡೆಸುವಂತಿಲ್ಲ' ಎಂದರು.

'ಸರ್ಕಾರದ ಮಾರ್ಗಸೂಚಿ ಉಲ್ಲಂಘಿಸಿ ಗುರುವಾರ ತೆರೆದ ವಾಣಿಜ್ಯ ಮಳಿಗೆಗಳು, ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿಸಲಾಗಿದೆ. ಕೋವಿಡ್ ನಿಯಂತ್ರಿಸಲು ಬಿಗಿಕ್ರಮ ಅಗತ್ಯ. ಜನರ ಓಡಾಟ ನಿರ್ಬಂಧಿಸಲು ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ' ಎಂದೂ ಹೇಳಿದರು.

ಆದರೆ, ಮಾರ್ಗಸೂಚಿಯಲ್ಲಿ ವಿಧಿಸಲಾದ ನಿರ್ಬಂಧಗಳು ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಎರಡು ದಿನಗಳ ಕರ್ಫ್ಯೂ ಅವಧಿಯಲ್ಲಿ ಮಾತ್ರ ಜಾರಿಯಲ್ಲಿರುತ್ತದೆ ಎಂದು ಸಾರ್ವಜನಿಕರು ಭಾವಿಸಿದ್ದರು. ಇದರಿಂದಾಗಿ ಗುರುವಾರ (ಏ. 22) ಎಲ್ಲೆಡೆ ವಾಣಿಜ್ಯ ಚಟುವಟಿಕೆ ಎಂದಿನಂತೆಯೇ ಇತ್ತು. ಮಾರ್ಗಸೂಚಿ ಕಟ್ಟುನಿಟ್ಟಾಗಿ ಪಾಲನೆ ಆಗದಿರುವ ಕಾರಣ ಸರ್ಕಾರದಿಂದ ತುರ್ತು ಆದೇಶ ಬರುತ್ತಿದ್ದಂತೆ, ಮಧ್ಯಾಹ್ನ 12 ಗಂಟೆ ಹೊತ್ತಿಗೆ ಅಂಗಡಿಗಳನ್ನು ಅಧಿಕಾರಿಗಳು, ಪೊಲೀಸರು ದಿಢೀರ್ ಬಂದ್ ಮಾಡಿಸಿದರು.

ಏಕೆ ಬಂದ್ ಮಾಡಿಸುತ್ತಿದ್ದಾರೆಂದು ತಕ್ಷಣಕ್ಕೆ ಗೊತ್ತಾಗದೆ ಅಂಗಡಿ ಮಾಲೀಕರು ದಿಕ್ಕು ತೋಚದಂತಾದರು. 'ವಾರಾಂತ್ಯ ಕರ್ಫ್ಯೂ'ಗೆ (ಶನಿವಾರ, ಭಾನುವಾರ) ಇನ್ನೂ ಒಂದು ದಿನ ಬಾಕಿ ಇರುವಾಗಲೇ ಯಾವುದೇ ಮುನ್ಸೂಚನೆ ನೀಡದೆ ಅಂಗಡಿಗಳನ್ನು ಬಂದ್ ಮಾಡಿಸಿದ್ದು ಸಾರ್ವಜನಿಕರಲ್ಲೂ ಗೊಂದಲಗಳಿಗೆ ಕಾರಣವಾಯಿತು.

4ನೇ ಪುಟ ನೋಡಿ

ಇವುಗಳಿಗೆ ಮಾತ್ರ ಅವಕಾಶ

- ನ್ಯಾಯಬೆಲೆ ಅಂಗಡಿ, ಕಿರಾಣಿ ಅಂಗಡಿ, ದಿನಸಿ, ಹಣ್ಣು, ತರಕಾರಿ, ಹಾಲು, ಮಾಂಸ, ಮೀನು, ಪಶುಆಹಾರ ಅಂಗಡಿ
- ರೆಸ್ಟೋರೆಂಟ್, ಉಪಹಾರ ಗೃಹಗಳಿಂದ ಪಾರ್ಸೆಲ್
- ಪೆಟ್ರೋಲ್ ಬಂಕ್, ಎಲ್‌ಪಿಜಿ ಪೂರೈಕೆ
- ಮದ್ಯದಂಗಡಿ, ಮದ್ಯ ಮಾರಾಟ ಮಳಿಗೆಗಳು, ಬಾರ್, ರೆಸ್ಟೋರೆಂಟ್‌ಗಳಿಂದ ಪಾರ್ಸೆಲ್ ಮಾತ್ರ
- ಬ್ಯಾಂಕು, ವಿಮೆ ಕಚೇರಿ, ಎಟಿಎಂ
- ಮುದ್ರಣ, ವಿದ್ಯುನ್ಮಾನ ಮಾಧ್ಯಮ
- ಇ- ಕಾಮರ್ಸ್ ಸೇವೆ
- ಶೈತ್ಯಾಗಾರ, ಉಗ್ರಾಣ ಸೇವೆ
- ಕೋವಿಡ್ ನಿಯಮ ಪಾಲಿಸಿದರೆ ಸಲೂನು, ಬ್ಯೂಟಿ ಪಾರ್ಲರ್‌ಗಳು ಕಾರ್ಯನಿರ್ವಹಿಸಬಹುದು

1 ಕೋಟಿ ಡೋಸ್ ಲಸಿಕೆ ಖರೀದಿಗೆ ಸಮ್ಮತಿ

ಬೆಂಗಳೂರು: ರಾಜ್ಯ ಸರ್ಕಾರ ಮೊದಲ ಹಂತದಲ್ಲಿ ₹400 ಕೋಟಿ ವೆಚ್ಚದಲ್ಲಿ 1 ಕೋಟಿ ಡೋಸ್‌ಗಳಷ್ಟು ಕೋವಿಡ್ ಲಸಿಕೆ ಖರೀದಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಒಪ್ಪಿಗೆ ನೀಡಿದ್ದಾರೆ.

18 ವರ್ಷ ಮೇಲ್ಪಟ್ಟವರಿಗೆ ಮೇ 1 ರಿಂದ ಕೋವಿಡ್ ಲಸಿಕೆ ನೀಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಆದ್ದರಿಂದ 18 ರಿಂದ 44 ವರ್ಷ ವಯಸ್ಸಿನವರಿಗೆ ಲಸಿಕೆ ಅಭಿಯಾನ ನಡೆಸಲು ದೊಡ್ಡ ಪ್ರಮಾಣದಲ್ಲಿ ಲಸಿಕೆ ಖರೀದಿಗೆ ಸರ್ಕಾರ ಮುಂದಾಗಿದೆ.

ರಾಜ್ಯಪಾಲ ವಜುಭಾಯಿ ವಾಲಾ ಅವರು ಬುಧವಾರ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ ಜತೆ ವಿಡಿಯೋ ಸಂವಾದ ನಡೆಸಿ ಎಲ್ಲ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಲಸಿಕೆ ಹಾಕಿಸಿಕೊಳ್ಳಲು ಪ್ರೇರಣೆ ನೀಡಬೇಕು ಮತ್ತು ಇದರ ಉಸ್ತುವಾರಿ ವಹಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದರು.

ರಾಜ್ಯದಲ್ಲಿ ಸುಮಾರು 6 ಲಕ್ಷಕ್ಕೂ ಹೆಚ್ಚು ಕಾಲೇಜು ವಿದ್ಯಾರ್ಥಿಗಳು ಇದ್ದಾರೆ. ಎಲ್ಲ ವಿದ್ಯಾರ್ಥಿಗಳಿಗೂ ಕೋವಿಡ್ ಲಸಿಕೆ ಹಾಕಿಸಲು ಕ್ರಮ ಕೈಗೊಳ್ಳುವುದಾಗಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದರು.

ಕೋವಿಶೀಲ್ಡ್ ಲಸಿಕೆ ಮಾತ್ರ ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಾಗುವುದರಿಂದ ಅದನ್ನೇ ಖರೀದಿಸಲಾಗುತ್ತಿದೆ. ಭಾರತ್ ಬಯೋಟೆಕ್ ಸಂಸ್ಥೆ ತಾನು ತಯಾರಿಸುತ್ತಿರುವ ಕೋವ್ಯಾಕ್ಸಿನ್ ಲಸಿಕೆಯನ್ನು ಕೇಂದ್ರ ಸರ್ಕಾರಕ್ಕೆ ಮಾತ್ರ ಪೂರೈಕೆ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

ಇನ್ನಷ್ಟು ಸುದ್ದಿಗಳು 3,6,7

'ಲಾಕ್‌ಡೌನ್ ರೀತಿಯಲ್ಲಿ ವಾರಾಂತ್ಯ ಕರ್ಫ್ಯೂ'



ಬೆಂಗಳೂರು: ವಾರಾಂತ್ಯದ ಬಂದ್ ಲಾಕ್‌ಡೌನ್ ಮಾದರಿಯಲ್ಲೇ ಕಟ್ಟುನಿಟ್ಟಾಗಿರಲಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಬಿಎಂಪಿ ಆಯುಕ್ತರು, ಪೊಲೀಸ್ ಆಯುಕ್ತರು ಮತ್ತು ಡಿಸಿಪಿಗಳ ಜತೆ ನಡೆದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಹೊರ ಜಿಲ್ಲೆಗಳ ಪ್ರವೇಶದ ರಸ್ತೆಗಳು, ಫ್ಲೈಓವರ್, ಪ್ರಮುಖ ರಸ್ತೆಗಳನ್ನು ಬಂದ್ ಮಾಡಲಾಗುವುದು ಎಂದರು.

ಮಾರ್ಗಸೂಚಿ ಉಲ್ಲಂಘನೆ ಮಾಡುವವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ವಿನಾಕಾರಣ ಓಡಾಡಲು ವಾಹನಗಳನ್ನು ಬಳಸಿದರೆ ಅದನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು, ಒಳ್ಳೆಯ ಮಾತಿನಲ್ಲಿ ಕೇಳದಿದ್ದರೆ ಕಠಿಣ ಕ್ರಮ ಜರುಗಿಸಿ ಎಂದು ಸಭೆಯಲ್ಲಿ ಬೊಮ್ಮಾಯಿ ಸಲಹೆ ನೀಡಿದರು. ವಾರಾಂತ್ಯದ ಕರ್ಫ್ಯೂ ಸಂದರ್ಭದಲ್ಲಿ ಮದುವೆಗಳು ಇದ್ದರೆ ಕಲ್ಯಾಣ ಮಂಟಪಗಳು, ಛತ್ರಗಳ ಮಾಲೀಕರ ಜತೆಗೆ ಮಾತನಾಡಿ ಕೋವಿಡ್ ನಿಯಮ ಉಲ್ಲಂಘಿಸದಂತೆ ಮುಚ್ಚಳಿಕೆ ಬರೆಸಿಕೊಳ್ಳಬೇಕು. ಒಂದು ವೇಳೆ ನಿಯಮ ಉಲ್ಲಂಘನೆ ಮಾಡಿದರೆ ಅಂತಹವುಗಳನ್ನು ಬಂದ್ ಮಾಡಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಒಳ ಪುಟಗಳು

ಲಸಿಕೆ ಕೊಂಡೊಯ್ಯಲು ಡ್ರೋನ್ ಬಳಕೆ! 10
24 ಗಂಟೆ: 25 ಸಾವಿರ ದಾಟಿದ ಕೋವಿಡ್ 6
ಆಮ್ಲಜನಕ ಸಾಗಾಟದ ಟ್ಯಾಂಕರ್ ತಡೆಯುವಂತಿಲ್ಲ 7

ಇಂದಿನ ಪಾಡ್‌ಕಾಸ್ಟ್ ವಿಶೇಷ
ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



₹23,131 ಕೋಟಿ ಅಬಕಾರಿ ತೆರಿಗೆ ಸಂಗ್ರಹ

ಬೆಂಗಳೂರು: ಕೋವಿಡ್ ಸಂಕಷ್ಟದ ಮಧ್ಯೆಯೂ 2020–21 ನೇ ಸಾಲಿನಲ್ಲಿ ₹23,131 ಕೋಟಿ ಅಬಕಾರಿ ತೆರಿಗೆ ಸಂಗ್ರಹಣೆ ಆಗಿದೆ.

ಆಯವ್ಯಯದಲ್ಲಿ ₹22,700 ಕೋಟಿ ತೆರಿಗೆ ಸಂಗ್ರಹದ ಗುರಿ ನಿಗದಿ ಮಾಡಲಾಗಿತ್ತು. ಆದರೆ, ಗುರಿಯನ್ನು ಮೀರಿ, ಅಂದರೆ ಶೇ 101.90 ರಷ್ಟು ತೆರಿಗೆ ಸಂಗ್ರಹಿಸಲಾಗಿದೆ ಎಂದು ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್.ಪ್ರಸಾದ್ ತಿಳಿಸಿದ್ದಾರೆ.

ಈ ಕುರಿತು ಅಬಕಾರಿ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಮೆಚ್ಚುಗೆ ವ್ಯಕ್ತಪಡಿಸಿ ಪ್ರಸಾದ್ ಅವರು ಪತ್ರವನ್ನು ಬರೆದಿದ್ದಾರೆ.

ಕಳೆದ ವರ್ಷ ಲಾಕ್‌ಡೌನ್‌ನಿಂದಾಗಿ ಸರ್ಕಾರಕ್ಕೆ ಎಲ್ಲ ಮೂಲಗಳಿಂದಲೂ ಆದಾಯ ನಿಂತು ಹೋಗಿತ್ತು. ಲಾಕ್‌ಡೌನ್ ತೆರವು ಬಳಿಕ ನಿಗದಿತ ಗುರಿಗಿಂತಲೂ ಹೆಚ್ಚು ಆದಾಯವನ್ನು ಇಲಾಖೆ ಸಂಗ್ರಹಿಸಿದೆ. ಮದ್ಯ ಮಾರಾಟಕ್ಕಿಂತಲೂ ಮದ್ಯದ ಮೇಲಿನ ಹೆಚ್ಚಿನ ತೆರಿಗೆಯಿಂದಾಗಿ ಆದಾಯ ಹೆಚ್ಚು ಸಂಗ್ರಹವಾಗಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ಡಿಸೆಂಬರ್ ತಿಂಗಳಲ್ಲೇ ₹2,436.34 ಕೋಟಿ ಬೊಕ್ಕಸಕ್ಕೆ ಹರಿದು ಬಂದಿತ್ತು. ಆ ಬಳಿಕ ಅಬಕಾರಿ ವಲಯದಲ್ಲಿ ಆದಾಯ ಏರಿಕೆಯಾಗುತ್ತಲೇ ಬಂದಿದೆ. ಆರ್ಥಿಕ ವರ್ಷದ ಅಂತ್ಯದ ವೇಳೆಗೆ ತೆರಿಗೆ ಸಂಗ್ರಹಕ್ಕೆ ಸರ್ಕಾರ ನಿಗದಿ ಮಾಡಿದ್ದ ಗುರಿಯನ್ನು ತಲುಪಿ, ಹೆಚ್ಚುವರಿ ಸಂಗ್ರಹವಾಯಿತು ಎಂದು ಹಣಕಾಸು ಇಲಾಖೆ ಮೂಲಗಳು ಹೇಳಿವೆ.

ಶಾಸಕ ಪರಣ್ಣ ಮುನವಳ್ಳಿ ನೇತೃತ್ವದಲ್ಲಿ ಸಂಶೋಧಕರ ತಂಡದ ಪ್ರತಿಪಾದನೆ

'ಅಂಜನಾದ್ರಿಯೇ ಆಂಜನೇಯನ ಜನ್ಮಸ್ಥಳ'

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): 'ತಾಲ್ಲೂಕಿನ ಆನೆಗೊಂದಿಯ ಕಿಷ್ಕಿಂಧಾ ಪ್ರದೇಶದ ಅಂಜನಾದ್ರಿಯೇ ಆಂಜನೇಯನ ಜನ್ಮಸ್ಥಳ' ಎಂದು ಈ ಭಾಗದ ಇತಿಹಾಸಕಾರರು, ಸಂಶೋಧಕರು ಪ್ರತಿಪಾದಿಸಿದರು.

ಶಾಸಕ ಪರಣ್ಣ ಮುನವಳ್ಳಿ ನೇತೃತ್ವದಲ್ಲಿ ಗುರುವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿ ಅವರು ದಾಖಲೆಗಳನ್ನು ಪ್ರದರ್ಶಿಸಿದರು.

'ತಿರುಪತಿ ತಿರುಮಲ ದೇವಾಲಯ ಆಡಳಿತ ಮಂಡಳಿ (ಟಿಟಿಡಿ) ನೀಡಿರುವ ದಾಖಲೆ ಯಾವುದೇ ಕಾರಣಕ್ಕೂ ಸ್ವೀಕಾರ ಅರ್ಹವಲ್ಲ. ಅವರ ದಾಖಲೆಗಳಲ್ಲಿ ಗೊಂದಲವಿದೆ. ಅದಕ್ಕೆ ಮಹತ್ವ ನೀಡಬಾರದು. ಅದು ಸುಳ್ಳು' ಎಂದು ಶಾಸಕ ಪರಣ್ಣ ಮುನವಳ್ಳಿ ಹೇಳಿದರು.

'ಹನುಮ ಹುಟ್ಟಿದ್ದು ಅಂಜನಾದ್ರಿಯಲ್ಲಿಯೇ ಎನ್ನುವ ನಂಬಿಕೆಯಿಂದ ಈಗಾಗಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ದೇವಸ್ಥಾನ ಅಭಿವೃದ್ಧಿಗೆ ಸಾಕಷ್ಟು ಅನುದಾನ ಬಿಡುಗಡೆ ಮಾಡಿವೆ. ಟಿಟಿಡಿ ಜನರ ಭಾವನೆ ಬದಲಿಸಲು ಹೊರಟಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇತಿಹಾಸಕಾರ, ಸಂಶೋಧಕ ಡಾ.ಶರಣಬಸಪ್ಪ ಕೋಲ್ಕಾರ್, 'ಕಿಷ್ಕಿಂಧಾ ತುಂಗಭದ್ರಾ ನದಿ ತಟದ ಪ್ರದೇಶ ಎಂದು ಟಿಟಿಡಿಯೇ ಒಪ್ಪಿದೆ. ಆದರೆ, ಹನುಮ ಜನಿಸಿದ್ದು, ತಿರುಪತಿ ಸಮೀಪದ ಅಂಜನಾದ್ರಿ ಎಂದು ಅವರು ಹೇಳುತ್ತಿರುವುದರಲ್ಲಿಯೇ ಗೊಂದಲವಿದೆ' ಎಂದರು.

'ವಾಲ್ಮೀಕಿ ರಾಮಾಯಣ ವರ್ಣಿಸಿದ ಕಿಷ್ಕಿಂಧೆಯ ಎಲ್ಲ ರೂಪಗಳನ್ನು ನಮ್ಮ ಅಂಜನಾದ್ರಿ ಪ್ರದೇಶ ಒಳಗೊಂಡಿದೆ. ವಾಲಿಸುಗ್ರೀವರ ನಾಡು, ವಾನರ ವೀರರ ಬೀಡು ಎಂದು ವರ್ಣಿಸಲಾಗಿದೆ. ವಾನರ ವೀರ ಹನುಮಂತ ಇಲ್ಲಿಯವನೇ ಎನ್ನುವುದು ಸಾರ್ವಕಾಲಿಕ ಸತ್ಯ. ಈಗ ಅನಗತ್ಯವಾಗಿ ವಿವಾದ ಮಾಡುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ವಾಲಿ ಕಿಲ್ಲಾ, ಶಬರಿ ಗುಡ್ಡ, ಪಂಪಾ ಸರೋವರ, ಋಷ್ಯಮುಖ ಪರ್ವತ, ಮಾತಂಗ ಪರ್ವತ, ಅಂಜನಾದ್ರಿ ಇಲ್ಲಿಯೇ ಇವೆ. ಯಾವ ಆಧಾರದ ಮೇಲೆ ಅವರು ದಾಖಲೆ ಬಿಡುಗಡೆ ಮಾಡಿದ್ದಾರೆ ಎಂಬುವುದೇ ತಿಳಿಯುತ್ತಿಲ್ಲ. ಪ್ರಸಿದ್ಧ ಇತಿಹಾಸಕಾರರ ಸಂಶೋಧನೆ ನಮ್ಮ ಪ್ರದೇಶಗಳ ಮೇಲೆಯೇ ನಡೆದಿದೆ' ಎಂದರು.

'ರಾಮನಿಗಾಗಿ ಶಬರಿ ಕಾಯುತ್ತ ಇದ್ದದ್ದು ಕೂಡ ಆನೆಗೊಂದಿಯ ಪಂಪಾ ಸರೋವರ ಎನ್ನುವಲ್ಲಿ ಎಂಬ ನಂಬಿಕೆ ಇದೆ. ರಾಮನಿಗೆ ಆಂಜನೇಯ ಪರಿಚಯವಾಗಿದ್ದು, ಆನೆಗೊಂದಿಯಲ್ಲಿಯೇ. ಅಷ್ಟೇ ಅಲ್ಲದೆ ಸ್ಥಳೀಯವಾಗಿ ಸಾಕಷ್ಟು ಪುರಾವೆಗಳು ದೊರೆಯುತ್ತವೆ. ಜನಪದರು ಹಾಡುಕಟ್ಟಿ ಹಾಡಿದ್ದಾರೆ. ಶಾಸನಗಳು, ಗ್ರಂಥಗಳು ಇವೆ' ಎಂದು ಹೇಳಿದರು.



ಅಂಜನಾದ್ರಿ ಪರ್ವತದಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದ ವಿಹಂಗಮ ನೋಟ –ಪ್ರಜಾವಾಣಿ ಚಿತ್ರ

ದಾಖಲೆಗಳು

ವಾಲ್ಮೀಕಿ ರಚಿಸಿದ ರಾಮಾಯಣದ ಸುಂದರ ಕಾಂಡದ ಕಿಷ್ಕಿಂಧೆಯ ವರ್ಣನೆ, ವಾಲೀಸುಗ್ರೀವರ ಕದನ, ರಾಮ-ಹನುಮನ ಭೇಟಿ, ಶಬರಿ ರಾಮನಿಗೆ ಕಾಯ್ದ ಸ್ಥಳ, ವಿವಿಧ ಚಿತ್ರಪಟಗಳು, ಶಾಸನದ ಪ್ರತಿಗಳು, ಸ್ಕಂದ ಸೇರಿದಂತೆ ವಿವಿಧ ಪುರಾಣಗಳ ಪ್ರತಿ, ಜಾನಪದ ಹಾಡುಗಳ ಪುಸ್ತಕ, ಸಂಶೋಧಕರ ಸಂಶೋಧನಾ ಕೃತಿಗಳು, ವಿಜಯನಗರ ಸೇರಿದಂತೆ ಹಿಂದಿನ ಪಾಳೆಯಗಾರರ ಆಡಳಿತ ಅವಧಿಯಲ್ಲಿನ ಹಸ್ತಪ್ರತಿಗಳ ದಾಖಲೆ, ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆ ಸ್ಥಳದ ಮಹಿಮೆ ಸಾರುವ ಪುಸ್ತಕಗಳನ್ನು ಪ್ರದರ್ಶನ ಮತ್ತು ಬಿಡುಗಡೆ ಮಾಡಲಾಯಿತು.

ಕೋವಿಡ್ ಪರೀಕ್ಷೆ: ವಿಮಾನ ಪ್ರಯಾಣಿಕರು ಪರಾರಿ

ಸಿಲ್ಚಾರ್, ಅಸ್ಸಾಂ (ಪಿಟಿಐ): ಕೋವಿಡ್ ತಪಾಸಣೆಗೆ ವಿರೋಧ ವ್ಯಕ್ತಪಡಿಸಿ, ಗೊಂದಲ ಮೂಡಿಸಿದ 300 ಜನ ಪ್ರಯಾಣಿಕರು ಬಳಿಕ ನಿಲ್ದಾಣದಿಂದಲೇ ಪರಾರಿಯಾಗಿರುವುದು ಇಲ್ಲಿನ ಸಿಲ್ಚಾರ್ ವಿಮಾನನಿಲ್ದಾಣದಲ್ಲಿ ಬುಧವಾರ ನಡೆದಿದೆ. ಈ ಪ್ರಯಾಣಿಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ವಿವಿಧ ನಿಲ್ದಾಣಗಳಿಂದ ಸುಮಾರು 690 ಪ್ರಯಾಣಿಕರು ಬಂದಿದ್ದರು. ಇವರು ಸಮೀಪದ ಟಿಕೋಲ್ ಮಾಡೆಲ್ ಆಸ್ಪತ್ರೆಯಲ್ಲಿ ಪರೀಕ್ಷೆಗೆ ಒಳಪಡಬೇಕಿತ್ತು. ತಪಾಸಣೆಗೆ ₹ 500 ನೀಡಬೇಕು ಎನ್ನುವ ಕಾರಣಕ್ಕೆ ತಕರಾರು ತೆಗೆದ 300 ಜನರು ಗೊಂದಲ ಮೂಡಿಸಿ, ಬಳಿಕ ಪರಾರಿಯಾದರು' ಎಂದು ಕಚಾರ್‌ನ ಹೆಚ್ಚುವರಿ ಜಿಲ್ಲಾಧಿಕಾರಿ ಸುಮಿತ್ ಸತ್ತಾವನ್ ತಿಳಿಸಿದ್ದಾರೆ.

ಹೊರಗಡೆಯಿಂದ ರಾಜ್ಯಕ್ಕೆ ಬರುವವರಿಗೆ ಕೋವಿಡ್ ಪರೀಕ್ಷೆಯನ್ನು ಅಸ್ಸಾಂ ಸರ್ಕಾರ ಕಡ್ಡಾಯಪಡಿಸಿದೆ. ಉಚಿತವಾಗಿ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಯನ್ನು ನಡೆಸಲಿದೆ. ಬಳಿಕ ₹ 500 ಶುಲ್ಕ ನೀಡಿ ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳಬೇಕಾಗಿದೆ.

ಪ್ರಯಾಣಿಕರು ನಿಯಮ ಉಲ್ಲಂಘಿಸಿದ್ದಾರೆ. ನಮ್ಮ ಬಳಿ ಪ್ರಯಾಣಿಕರಿಗೆ ಸಂಬಂಧಿಸಿದ ವಿವರಗಳಿವೆ. ಅವರನ್ನು ಗುರುತಿಸಿ ಐಪಿಸಿ ಸೆಕ್ಷನ್ 188ರ ಅನ್ವಯ (ಸೇವೆಗೆ ಅಡ್ಡಿ) ಕ್ರಿಮಿನಲ್ ಮೊಕದ್ದಮೆ ದಾಖಲಿಸುತ್ತೇವೆ. 690 ಪ್ರಯಾಣಿಕರ ಪೈಕಿ 189 ಜನರಿಗೆ ಪರೀಕ್ಷೆ ನಡೆಸಿದ್ದು, 6 ಮಂದಿಗೆ ಸೋಂಕು ಇರುವುದು ದೃಢಪಟ್ಟಿದೆ ಎಂದು ಸುಮಿತ್ ತಿಳಿಸಿದ್ದಾರೆ

₹2 ಲಕ್ಷ ಮೌಲ್ಯದ ಮೊಬೈಲ್‌ಗಳು ಜಪ್ತಿ

ಬೆಂಗಳೂರು: ಮೊಬೈಲ್ ಕಳವು ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ದೊಡ್ಡ ಬಾಣಸವಾಡಿಯ ಸಂತೋಷ್‌ಕುಮಾರ್ (28) ಹಾಗೂ ಚಿಕ್ಕ ಬಾಣಸವಾಡಿಯ ಡಿಕ್ಸನ್ ಮೋಹನ್ ದಾಸ್ (27) ಬಂಧಿತರು. ಅವರಿಂದ ₹ 2 ಲಕ್ಷ ಮೌಲ್ಯದ 15 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಜನರನ್ನು ಬೆದರಿಸಿ ಮೊಬೈಲ್ ಕಳವು ಮಾಡುತ್ತಿದ್ದರು. ರಾಮಮೂರ್ತಿ ನಗರ ಸೇರಿ, ಹಲವು ಠಾಣೆ ವ್ಯಾಪ್ತಿಯಲ್ಲಿ ಕೃತ್ಯ ಎಸಗಿದ್ದಾರೆ' ಎಂದೂ ತಿಳಿಸಿದರು.

ಶ್ರೀರಾಮನವಮಿ ಹಬ್ಬದ ಪ್ರಯುಕ್ತ ಕೆ.ಆರ್‌.ಪುರದ ಮೇಡಹಳ್ಳಿಯಲ್ಲಿ ಪಾಲಿಕೆಯ ಬಸವನಪುರ ವಾರ್ಡ್‌ನ ಮಾಜಿ ಸದಸ್ಯ ಜಯಪ್ರಕಾಶ್ ಸಾರ್ವಜನಿಕರಿಗೆ ಪಾನಕ, ಕೊಸಂಬರಿ ವಿತರಿಸಿದರು. ಮುಖಂಡ ಜಗ್ಗಿ, ಶೀಗೆಹಳ್ಳಿ ರವಿ ಇದ್ದರು.

ಸಿಡಿಲು ಸಹಿತ ಅಬ್ಬರದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ಮಧ್ಯಾಹ್ನ ಗುಡುಗು–ಸಿಡಿಲು ಸಹಿತವಾಗಿ ಜೋರು ಮಳೆ ಸುರಿಯಿತು.

ಬುಧವಾರ ತಡರಾತ್ರಿಯೂ ನಗರದ ಹಲವೆಡೆ ಜೋರು ಮಳೆಯಾಗಿತ್ತು. ಸುಮಾರು 30 ನಿಮಿಷ ಸುರಿದ ಮಳೆಯಿಂದಾಗಿ ನಗರದ ಪ್ರಮುಖ ರಸ್ತೆಗಳಲ್ಲಿ ನೀರು ಹರಿಯಿತು.

ಗುರುವಾರ ಬೆಳಿಗ್ಗೆಯಿಂದ ನಗರದಲ್ಲಿ ಬಿಸಿಲು ಹಾಗೂ ಕೆಲ ಬಾರಿ ಮೋಡ ಕವಿದ ವಾತಾವರಣ ಕಾಣಿಸಿತು. ಮಧ್ಯಾಹ್ನ 2.40ಕ್ಕೆ ಜಿಟಿ ಜಿಟಿಯಾಗಿ ಮಳೆ ಆರಂಭವಾಗಿ, ನಂತರ ಮಳೆ ಅಬ್ಬರ ಹೆಚ್ಚಾಯಿತು. ಮಳೆಯ ಜೊತೆಯಲ್ಲಿ ಗಾಳಿಯೂ ಜೋರಾಗಿ ಬೀಸಿತ್ತು.

ಜಾಲಹಳ್ಳಿ, ಯಶವಂತಪುರ, ಪೀಣ್ಯ, ದಾಸರಹಳ್ಳಿ, ಎಚ್‌ಎಂಟಿ ಲೇಔಟ್, ಲಗ್ಗೆರೆ, ರಾಜಾಜಿನಗರ, ವಿಜಯ ನಗರ, ಮಹಾಲಕ್ಷ್ಮಿಲೇಔಟ್, ಮೆಜೆಸ್ಟಿಕ್, ಗಾಂಧಿನಗರ, ಬಸವೇಶ್ವರನಗರ, ಮಲ್ಲೇಶ್ವರ, ಕಾಮಾಕ್ಷಿಪಾಳ್ಯ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಗುಡುಗು-ಸಿಡಿಲು ಸಹಿತ ಮಳೆ ಸುರಿಯಿತು.

ಟಿನ್ ಫ್ಯಾಕ್ಟರಿ ಬಳಿ ರಸ್ತೆ ಅಗೆದಿದ್ದ ಜಾಗದಲ್ಲಿ ನೀರು ನಿಂತುಕೊಂಡು ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಆಯಿತು – ಪ್ರಜಾವಾಣಿ ಚಿತ್ರ

ಕೊರೊನಾ ಸೋಂಕು ತಡೆಗೆ ಹಲವು ಕ್ರಮಗಳನ್ನು ಸರ್ಕಾರ ಕೈಗೊಂಡಿದ್ದರಿಂದ ನಗರದಲ್ಲಿ ಜನರ ಓಡಾಟ ಕಡಿಮೆ ಇತ್ತು. ಕೆಲ ಕಡೆ ಕಾಲುವೆಗಳಲ್ಲಿ ನೀರು ತುಂಬಿ ಹರಿದು, ತ್ಯಾಜ್ಯವೆಲ್ಲ ರಸ್ತೆಗೆ ಬಂದು ಬಿದ್ದಿದೆ.

ಕೆಲಸ ಹಾಗೂ ವಸ್ತುಗಳ ಖರೀದಿ ಸಲುವಾಗಿ ಹಲವು ಸಾರ್ವಜನಿಕರು ಮಾರುಕಟ್ಟೆಗಳಿಗೆ ಬಂದಿದ್ದರು. ಮಧ್ಯಾಹ್ನವೇ ಮಳೆ ಸುರಿದಿದ್ದರಿಂದ ಹಲವರು ರಸ್ತೆ ಬದಿಗಳಲ್ಲಿ ಆಶ್ರಯ ಪಡೆದುಕೊಂಡಿದ್ದು ಕಂಡುಬಂತು.

ನಗರದ ಬಹುತೇಕ ಕಡೆ ಕಾಮಗಾರಿ ಹಾಗೂ ಕೇಬಲ್ ಅಳವಡಿಕೆಗಾಗಿ ರಸ್ತೆ ಮತ್ತು ಕಾಲುವೆಗಳನ್ನು ಅಗೆಯಲಾಗಿದೆ. ಮಳೆಯಿಂದಾಗಿ ಅಂಥ ಸ್ಥಳಗಳಲ್ಲಿದ್ದ ಗುಂಡಿಗಳಲ್ಲಿ ನೀರು ನಿಂತುಕೊಂಡಿತ್ತು. ಇದರಿಂದಾಗಿ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟಾಯಿತು.

ಕೆಳಸೇತುವೆಗಳಲ್ಲಿ ತುಂಬಿ ಹರಿದ ನೀರು: ಮೆಜೆಸ್ಟಿಕ್ ರೈಲ್ವೆ ನಿಲ್ದಾಣ ಬಳಿಯ ಓಕಳಿಪುರದ ಕೆಳಸೇತುವೆ, ಶಿವಾನಂದ ವೃತ್ತದ ಕೆಳಸೇತುವೆಗಳಲ್ಲಿ ನೀರು ತುಂಬಿ ಹರಿಯಿತು.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

KARNATAKA POWER CORPORATION LTD.

CIN : U85110KA1970SGC001919

ಸಂಖ್ಯೆ: ಕೆಪಿಸಿಎಲ್/2021–22/ಎಸ್‌ಟಿ/ಹೆಚ್‌ಕೆ/01 ದಿನಾಂಕ: 21.04.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ಕವಿನಿನಿಯು **ಕೆಪಿಸಿಎಲ್‌ನ ಶಕ್ತಿಭವನ ಹಾಗೂ ಹೊಸ ಕಛೇರಿ ಸಂಕೀರ್ಣ, ಅರಮನೆ ರಸ್ತೆ, ಬೆಂಗಳೂರು,** ಈ ಕಚೇರಿಗಳಿಗೆ ಹೌಸ್‌ಕೀಪಿಂಗ್ ಸೇವೆಗಳನ್ನು ಒದಗಿಸುವ ಕಾಮಗಾರಿಗಾಗಿ ಟೆಂಡರುಗಳನ್ನು ಆಹ್ವಾನಿಸಿದೆ. ಇ.ಎಂ.ಡಿ ಮೊತ್ತ: **ಕರ್ನಾಟಕ ಸರ್ಕಾರದ ಆದೇಶದಂತೆ.** ಗುತ್ತಿಗೆ ಅವಧಿ: **ಆದೇಶ ಪತ್ರದಲ್ಲಿ ತಿಳಿಸಿದ ದಿನಾಂಕದಿಂದ ಎರಡು ವರ್ಷಗಳು.** ಟೆಂಡರ್‌ಗೆ ಸಂಬಂಧಿಸಿದ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **28.04.2021ರ 15.00 ಗಂಟೆಯವರೆಗೆ.** ಬಿಡ್‌ಪೂರ್ವ ಸಭೆಯ ದಿನಾಂಕ: **29.04.2021ರ 15.00 ಗಂಟೆಗೆ.** ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **06.05.2021ರ ಸಂಜೆ 4.00 ಗಂಟೆಯವರೆಗೆ.** ಇತರೆ ಮಾಹಿತಿಯನ್ನು ಟೆಂಡರ್ ಸೆಕ್ಷನ್‌ನ ಅಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **www.eproc.karnataka.gov.in**ನಲ್ಲಿ ಪರಿವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ, **ಅಧೀಕ್ಷಕ ಅಭಿಯಂತರರು(ಕಾ)ಆರ್‌ಓ, ಕೆಪಿಸಿಎಲ್, ನಂ.82, ಶಕ್ತಿಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001,** ದೂರವಾಣಿ ಸಂಖ್ಯೆ: **080–22257842**. ಮೊಬೈಲ್ ಸಂಖ್ಯೆ: **9449784846** ಇಲ್ಲಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

PUBLIC NOTICE

This is to bring to the notice of General Public that our Clients are jointly intend to purchase the Composite property bearing **Site No.367**, in the BDA layout formed in Sy. No. 24, situated at 2nd Stage, 3rd Block, Nagarabhavi, Bangalore, within the jurisdiction of Bruhath Bangalore Mahanagara Palike, Kottigepalya-Ward No.73, , Bangalore, (which is more fully described here in after referred to as the **Schedule Property**) from its joint owners i.e. **1).Mr. CHELUVARANGASWAMY. B,** S/o. Sri. Basavaiah, residing at No.14, 18th Cross, 8th Main Road, Bandappa Garden, Muthyalanagar, Bangalore -560054&**2) Mr.BYRAPPA**,S/o. Sri.Jogappa, residing at No.272,1st Block,Nagarabhavi 2nd Stage, Bangalore-560072.

The Owners represent that earlier each of them had acquired 0-5 guntas i.e. 5445 sq. ft., in Property No.24 in the layout formed by BDA in Nagarabhavi 3rd Block, 2nd Stage, Bangalore,as allotted and conveyedby The Bangalore City Employees Housing and Social Welfare Co-operative Society Ltd.,after acquired by it from BDA and subsequently, on the application made by the Owners for incorporation of their property in BDA 3rd Block plan, the BDA duly considered under their resolution dated 02/03/2021, had earmarked the Site No.367 by consolidating Site Nos. 360, 361, 366, 367 and part of 362 & 365 in Nagarabhavi 3rd Block to the extent/measurement allotted, followed by Rectification deed executed by the BDA in favour of the Owners herein D.29/03/2021, and issued Rectified Endorsement to Possession Certificate D. 31/03/2021 and handed over the physical vacant possession of the same to the owners in respect of the extent allotted and conveyed in retaining / allocating as Site No.367for the Composite property measuring East to West 24.95 meter and North to South 40.54 meter in all 1011.47 square meter and the BBMP had issued amalgamated Khatha in joint favour of the Owners with respect to the Schedule Property herein.

Any person/s having or claiming any right, title, estate or interest, by way of inheritance, share, sale, mortgage, guarantee, partition , attachment, transfer, assignment, lease , sub-lease, tenancy, sub-tenancy, development rights, sub-development rights, lien, license, lis-pendens, charge, trust, maintenance, gift, devise, bequest, exchange, possession, or encumbrance, succession, occupation, any memorandum of understanding, writings, family settlement/arrangement, beneficial interest, Decree or orders of any Court of Law, contracts/ arrangements or otherwise howsoever, into or upon the said Schedule Property or any part or portion thereof, or against the owner/s, or against documents, are hereby required to give notice thereof in writing, along with documentary proof, to the undersigned within **10 (Ten) days** of the issuance of this Public Notice, after the stipulated period and on non-receipt of any objections or claims, our Clients shall proceed further on the basis that there are no claims of whatsoever nature with regard to the Schedule Property or against its owners and thereafter no claims or objections will be entertained.

SCHEDULE PROPERTY

All that piece and parcelof the residential Property **Site No.367**, (composite property comprise of Site No.360, 361, 366, 367 and part of 362 & 365) in the BDA layout formed in Sy. No. 24, situated at 2nd Stage, 3rd Block, Nagarabhavi, Bangalore, within the jurisdiction of Bruhath Bangalore Mahanagara Palike, Kottigepalya-Ward No.73, Bangalore, measuring **East to West 24.95 meter and North to South 40.54 meter in all 1011.47 square meter** and bounded on;

East by : **BDA Site Nos.362 & 365,**
Westby : **BDA Site Nos. 359 &368,**
North by : **Road**
South by : **Road.**

Bangalore.
Date:23.04.2021

(N.SHIVAKUMAR)
SHIVA & SHIVA, Advocates
11(old No: 61), 'Shiva Krupa', 2 nd Floor, Above State Bank of India, 19th Main, 2nd Block, Rajajinagar, Bangalore-560010. Ph: 080-2332 3131.

ಆನೇಕಲ್ ಯೋಜನಾ ಪ್ರಾಧಿಕಾರ

'ಅಣ್ಣ', ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು – 560 099.
www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/20/2020–21 **ಪ್ರಕಟಣೆ** ದಿನಾಂಕ:22.04.2021

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ಬೆಂಗಳೂರು ದಿನಾಂಕ:03.09.2014 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರಂತೆ ಸಾರ್ವಜನಿಕ ಉದ್ದೇಶದ ಭೂ ಉಪಯೋಗಗಳು ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3)ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4)ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15(ಹದಿನೈದು) ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಕೇಶವರೆಡ್ಡಿ ಬಿನ್ ಮುನಿರೆಡ್ಡಿ	ಆನೇಕಲ್	ಸರ್ಜಾಪುರ	ನೆರಿಗಾ	173/4	1–06	ಸಾರ್ವಜನಿಕ/ ಅರೆ ಸಾರ್ವಜನಿಕ	ವಸತಿ
2.		ಆನೇಕಲ್	ಸರ್ಜಾಪುರ	ನೆರಿಗಾ	173/5	0–19	ಸಾರ್ವಜನಿಕ/ ಅರೆ ಸಾರ್ವಜನಿಕ	ವಸತಿ
					ಒಟ್ಟು	1–25		

ಸಹಿ/–
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ವಾಸಾಸಂಇ/ಬೆಂ.ನ/ಜಿಎ/239/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗದು ರಹಿತ ಚಿಕಿತ್ಸೆ: ಕ್ರಮಕ್ಕೆ ಐಆರ್‌ಡಿಎಐಗೆ ಸೂಚನೆ

ನವದೆಹಲಿ (ಪಿಟಿಐ): ವಿಮಾ ಕಂಪನಿಗಳು ನಗದುರಹಿತ ಚಿಕಿತ್ಸೆಗೆ ಕ್ಲೇಮ್‌ಗಳನ್ನು ನಿರಾಕರಿಸುತ್ತಿವೆ ಎಂಬ ದೂರುಗಳ ಬಗ್ಗೆ ತಕ್ಷಣ ಗಮನಹರಿಸುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಐಆರ್‌ಡಿಎಐ) ಅಧ್ಯಕ್ಷ ಎಸ್.ಸಿ. ಕುಂಠಿಯಾ ಅವರಿಗೆ ಸೂಚಿಸಿದ್ದಾರೆ.

'ಕೆಲವು ಆಸ್ಪತ್ರೆಗಳು ನಗದು ರಹಿತ ಚಿಕಿತ್ಸೆಗೆ ನಿರಾಕರಿಸುತ್ತಿರುವ ವರದಿಗಳು ಬರುತ್ತಿವೆ. ಅಧ್ಯಕ್ಷ ಕುಂಠಿಯಾ ಜೊತೆ ಮಾತನಾಡಿ, ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ. 2020ರ ಮಾರ್ಚ್‌ನಲ್ಲಿ ಕೋವಿಡ್ ಕಾಯಿಲೆಯನ್ನು ಸಮಗ್ರ ಆರೋಗ್ಯ ವಿಮೆಯ ಭಾಗವನ್ನಾಗಿ ಮಾಡಲಾಗಿದೆ. ನಗದು ರಹಿತ ಚಿಕಿತ್ಸೆಯು ತಾತ್ಕಾಲಿಕ ಆಸ್ಪತ್ರೆಗಳಲ್ಲಿಯೂ ಲಭ್ಯವಿದೆ' ಎಂದು ನಿರ್ಮಲಾ ಅವರು ಟ್ವೀಟ್ ಮಾಡಿದ್ದಾರೆ.

ಕೋವಿಡ್‌ಗೆ ಸಂಬಂಧಿಸಿದ ಕ್ಲೇಮ್‌ಗಳನ್ನು ಆದ್ಯತೆಯ ಮೇರೆಗೆ ವಿಲೇವಾರಿ ಮಾಡಬೇಕು ಎಂದು ಪ್ರಾಧಿಕಾರವು ವಿಮಾ ಕಂಪನಿಗಳಿಗೆ ಸೂಚಿಸಿದೆ ಎಂದೂ ಸಚಿವರು ತಿಳಿಸಿದ್ದಾರೆ. ವಿಮಾ ಕಂಪನಿಗಳು ಯಾವೆಲ್ಲ ಆಸ್ಪತ್ರೆಗಳ ಜೊತೆ ಒಪ್ಪಂದ ಮಾಡಿಕೊಂಡಿವೆಯೋ ಆ ಆಸ್ಪತ್ರೆಗಳು ಕೋವಿಡ್–19ಕ್ಕೆ ನಗದು ರಹಿತ ಚಿಕಿತ್ಸೆ ನೀಡಬೇಕು ಎಂದು ಪ್ರಾಧಿಕಾರ ಸ್ಪಷ್ಟಪಡಿಸಿದೆ.

ಪತಿಗೆ ಕೂಲಿ ಇಲ್ಲ, ಮಗುವಿಗೆ ಊಟವಿಲ್ಲ

• ಕೆ.ಓಂಕಾರ ಮೂರ್ತಿ

ಮೈಸೂರು: ಪತಿಗೆ ಕೂಲಿ ಇಲ್ಲದೇ, ಆಹಾರಕ್ಕೆ ತೊಂದರೆ ಉಂಟಾಗಿ ಮಗುವಿನೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದ ಮಹಿಳೆಗೆ ಮೈಸೂರಿನ ಒಡನಾಡಿ ಸೇವಾ ಸಂಸ್ಥೆ ಆಶ್ರಯ ನೀಡಿದೆ.

'ತಾಯಿ–ಮಗುವಿನ ತುರ್ತು ಕೇಂದ್ರ' ತೆರೆದು ವಾಸ್ತವ್ಯ ಹಾಗೂ ಊಟಕ್ಕೆ ವ್ಯವಸ್ಥೆ ಮಾಡಿದೆ. ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಬೆಳಚಲವಾಡಿ ಗ್ರಾಮದ ಮಹಿಳೆ ಹಾಗೂ ಆಕೆಯ ಮೂರೂವರೆ ವರ್ಷದ ಗಂಡು ಮಗು ಆಶ್ರಯ ಪಡೆದವರು.

'ಆತ್ಮಹತ್ಯೆಗೆ ಮುಂದಾಗಿದ್ದ ಈ ಮಹಿಳೆಯನ್ನು ಪರಿಚಯಸ್ಥರೊಬ್ಬರು ನಮ್ಮ ಸಂಸ್ಥೆಗೆ ಕರೆದುಕೊಂಡು ಬಂದರು. ಕೋವಿಡ್ ಪ್ರಕರಣ ಹೆಚ್ಚುತ್ತಿರುವ ಕಾರಣ ಪರೀಕ್ಷೆ ಮಾಡಿಸದೆ ಉಳಿದವರ ಜೊತೆಗೆ ಇರಿಸಲು ಸಾಧ್ಯವಿಲ್ಲ. ಈ ರೀತಿ ಸಮಸ್ಯೆಗೆ ಸಿಲುಕಿದವರಿಗೆ ಆಶ್ರಯ ನೀಡಲು ಪ್ರತ್ಯೇಕ ಕೇಂದ್ರ ತೆರೆದಿದ್ದೇವೆ' ಎಂದು ಒಡನಾಡಿ ಸಂಸ್ಥೆಯ ಪರಶುರಾಂ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋವಿಡ್ ಕರ್ಫ್ಯೂ, ಲಾಕ್‌ಡೌನ್ ಸಂದರ್ಭಗಳಲ್ಲಿ ಬಡವರು, ನೊಂದ ಮಹಿಳೆಯರು, ಮಕ್ಕಳು, ಬೀದಿ ಬದಿಯಲ್ಲಿ ವಾಸಿಸುವವರಿಗೆ ತುಂಬಾ ಕಷ್ಟ. ಊಟಕ್ಕೂ ಪರದಾಡಬೇಕಾಗುತ್ತದೆ. ಇಂಥವರಿಗಾಗಿ ಸರ್ಕಾರ ಏನಾದರೂ ವ್ಯವಸ್ಥೆ ಮಾಡಬೇಕು. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರೊಂದಿಗೂ ಮಾತನಾಡಿದ್ದೇನೆ. ಪ್ರತಿ ಜಿಲ್ಲಾ ಕೇಂದ್ರದಲ್ಲಿ ಆಶ್ರಯ ತಾಣ ತೆರೆಯಲು ಕೋರಿದ್ದೇನೆ' ಎಂದು ಹೇಳಿದರು.

ಪರಶುರಾಂ

ವಿಚಾರ ಗೊತ್ತಾಗಿ ಮಹಿಳೆಯ ಪತಿ ಕೂಡ ಒಡನಾಡಿಗೆ ಬಂದು ಹೋಗಿದ್ದಾರೆ. ಎಲ್ಲಾದರೂ ಕೆಲಸ ಹುಡುಕಿ ಪತ್ನಿಯನ್ನು ಕರೆದುಕೊಂಡು ಹೋಗುವುದಾಗಿ ಹೇಳಿದ್ದಾರೆ.

'ಪತಿಯು ಮನೆಗೆ ದವಸ–ಧಾನ್ಯ ತರುತ್ತಿಲ್ಲ ಎಂಬ ಬೇಸರ ಮಹಿಳೆಗಿದೆ. ಆತನಿಗೆ ಯಾವುದೇ ಕೆಟ್ಟ ಅಭ್ಯಾಸ ಇದ್ದಂತಿಲ್ಲ. ಆದರೆ, ಕೂಲಿ ಸಿಗುತ್ತಿಲ್ಲ' ಎನ್ನುತ್ತಾರೆ ಪರಶುರಾಂ.

ಕಷ್ಟದ ಬದುಕು: 'ಗ್ರಾಮದ ಸುತ್ತಮುತ್ತ ಎಲ್ಲೂ ಕೂಲಿ ಸಿಗುತ್ತಿಲ್ಲ. ಹಣವಿಲ್ಲದೇ ಪತಿ ಏನನ್ನೂ ತರುತ್ತಿಲ್ಲ. ಮಗುವಿಗೆ ಹಾಲು ಖರೀದಿಸಲೂ ಹಣವಿಲ್ಲ. ಅತ್ತೆ, ಮಾವನಿಗೆ ವಯಸ್ಸಾಗಿದೆ. ಬದುಕು ಕಷ್ಟಕರವಾಗಿದೆ' ಎಂದು ಮಹಿಳೆ ಸಮಸ್ಯೆ ಹೇಳಿಕೊಂಡರು.

ರುಂಡ ಮುಂಡ ಪ್ರಕರಣ: ಮತ್ತೆ ನಾಲ್ವರ ಬಂಧನ

ಹುಬ್ಬಳ್ಳಿ: ರುಂಡ ಮುಂಡ ಪ್ರಕರಣದಲ್ಲಿ ಕೊಲೆಯಾಗಿದ್ದ ರಾಕೇಶ ಕಾಟವೆ ಅವರ ಸಹೋದರಿ ಶನಾಯಾ ಕಾಟವೆ ಸೇರಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಎಂಟಕ್ಕೆ ಏರಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪಿ. ಕೃಷ್ಣಕಾಂತ, ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಶನಾಯಾ ಜತೆ ಮಲ್ಲಿಕ್, ಫಿರೋಜ್, ಸೈಫುದ್ದೀನ್ ಅವರನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

'ನಿಯಾಜ್ ಹಾಗೂ ಶನಾಯಾ ಪ್ರೇಮ ಪ್ರಕರಣವೇ ಕೊಲೆಗೆ ಕಾರಣ ಎಂದು ಇಲ್ಲಿವರೆಗಿನ ತನಿಖೆಯಿಂದ ತಿಳಿದುಬಂದಿದೆ. ಮಲ್ಲಿಕ್ ಹಾಗೂ ಫಿರೋಜ್ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಸೈಫುದ್ದೀನ್ ಮೇಲೆ ಕೊಲೆಗೆ ಸಲಹೆ ನೀಡಿರುವ ಆರೋಪವಿದೆ. ಇನ್ನು, ಶನಾಯಾಗೆ ಕೊಲೆ ಪ್ರಕರಣ ತಿಳಿದಿತ್ತು' ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

IMMEDIATE RECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ ELECTRONICS/ ELECTRICAL/ SOFTWARE/ HARDWARE/ ENGINEERS- 7676760299/ 7676760399

Teachers/ Professors

APS Educational Trust
N. R. Colony, Bangalore-560 019
E-mail ID: apsedutrust@gmail.com
Phone: 080-26602586

Invites applications from the interested candidates for the following posts and the candidates shall apply within 7days.
- Director for Master in Business Administration (MBA)
- Director for Integrated B.Ed. College
- Principal for APS College of Engineering, Anantha Gnana Gangothri Campus, Somanahalli, Bangalore.
- Teaching Faculty for MBA Course
- Teaching Faculty for B.Ed. College
- Teaching Faculty for APS College of Commerce with NET/SLET qualification as per UGC Norms.

For all the above posts the qualification and experience is as per the norms of AICTE / National Council of Teacher's Education with negotiable salary.

T. V. Maruthi, President | A. R. Acharya, General Secretary

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology- 9880916988

CONNECT

ಅದಿತಿ ಹಿಯರಿಂಗ್ ಸೊಲ್ಯೂಷನ್ಸ್ — aditi HEARING SOLUTIONS
SPECIAL OFFER MEGA SALE — signia
FREE HOME VISIT
6 ತಿಂಗಳು ಉಚಿತ ಬ್ಯಾಟರಿ | ವಿನಿಮಯ ಮತ್ತು ನವೀಕರಣ ಶ್ರವಣ ಸಾಧನ | ಉಚಿತ ಕಿವಿಯ ತಪಾಸಣ ಶಿಬಿರ | ಇ.ಎಂ.ಐ. ಯಾವುದೇ ವೆಚ್ಚವಿಲ್ಲದೆ ಪಡೆಯಿರಿ
For More Details Contact :- 9986607940 ಟಿ.ದಾಸರಹಳ್ಳಿ (Head Office)
Branch Office :- ವಿದ್ಯಾರಣ್ಯಪುರ 8970571782 | ಬಿಎಸ್‌ಕೆ 1ನೇ ಹಂತ (ಹನುಮಂತನಗರ) 7026594499

RENTAL PROPERTIES

Accommodation Available

Commercial

Commercial Accommodation, 3 Floors, GF+2, 1400 Square Feet Each+ Mezanine. Strong Room 300 Square Feet, 100 Square Feet Atm, Adequate Power Supply, 2 Wheeler Parking, In 5th Cross ,Malleswaram. Suitable For Banks, Offices, Showrooms Etc. For Immediate Occupation. Owner Contact: 9945282653

Flats

J.P.NAGAR FOR rent 2BHK apartment semifurnished, covered carpark, lift 24hrs cauvery, bore water and Security, behind Kalayani Magnum, near to Bannergatta Appolo hospital. Contact 9845522122.

Industrial And Factory

4 Acres of land Available on NH7 80 km from Bangalore and 40 km from Hosur Suitable Warehouse and Factories Contact 8056149444

REAL ESTATE BUYING

Flat

Banashankari

WANTED 2/ 3 BHK Apartment to Purchase 0- 5 Years old near Kathriguppe. No Brokers. Contact: 9663923897.

Farm House/ Land/ Resorts

Mysore

FOR BUYING and Selling MUDA Sites, Houses, Apartments, Commercials, Alienated lands and Agriculture lands in Mysore Contact: Vishwanath Gowda Mysore Estates 9590911111

REAL ESTATE SELLING

Sites

Hosur Road

APPROX. ONE Acre Industrial Land for Sale. Papers upto date. Ideal for Pharma as well. Brokers Excuse. Contact: 9620938350/ 9342825263.

Bannerghatta Road

APPROVED LAYOUT Anekal Town Planning at Bannerghatta Road, 30X40, 40X60 after National Park. Contact- 9886241744

Jakkur

SITE FOR SALE- TELECOM LAYOUT: 40x60 site West Facing 7,600/- p.sft. Genuine Buyers- 8197971761/ 9916006002

Vishweshwariah Layout

20X30,30X40,40X60, 50X80 BDA Site in Vishweshwaraya Layout, Any Buyers & Sellers Contact: 9980239748

HBR Layout

SALE BDA 40X60 (FIRST ALLOTTEE) NORTH Facing RESIDENTIAL SITE. HBR LAYOUT 5th Block. GOOD LOCATION. OWNER: 9880950090/ 9606148954.

Flat

Vijayanagar

FLAT FOR-SALE: 2-BHK, 'A'Khata, 843 Sqft, Price-40 lakhs PIPELINE ROAD, VIJAYANAGAR, BANGALORE-23. Cell-9110432149, 9880034233.

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ
Before / After
ಲೈಂಗಿಕ ರೋಗಗಳು | ಉದ್ರೇಕದ ಸಮಸ್ಯೆ | ಲೈಂಗಿಕ ನಿರಾಸಕ್ತಿ | ನಿದ್ರಾ ಸ್ಖಲನ | ಶೀಘ್ರ ಸ್ಖಲನ | ಲಿಂಗ ಚಿಕ್ಕದಾಗುವುದು | ನರ ದೌರ್ಬಲ್ಯ | ಅವಧಿಗೆ ಮೊದಲೇ ಸ್ಖಲನ | ಆತಂಕ, ದೌರ್ಬಲ್ಯ | ಕಡಿಮೆ ವೀರ್ಯಾಣು | ಮುಷ್ಠಿ ಮೈಥುನದ ಅಡ್ಡಪರಿಣಾಮ
NO SIDE EFFECTS 100%
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

BEAUTY & HEALTH

Beauty Parlour

UNIQUE SPA- (Kalyannagar) Provide Hygiene Body massage therapy. For relaxing/ refreshing Spa Services. Contact: 72593-69573

BUSINESS

Business to Business

Shares

WAT_R_U DOING AFTER WORK? Share Market, Deposit 2Lac earn 10% monthly Demat account Call: 8088665724

Business Offers

Finance

NRI'S INVESTMENT And Finance Available OnLow Interest Against Properties,Land& Buildings,Sites, Flats (Also)Assist For Yojana Loans Call:7411265189

PERSONAL

Change of Name

JC673298P NB/SUB Raginald E, ASC Centre & College, son name Records RIJO D RAJINOLD instead of RIJO D RAGINALD, Notary KV Mani, Bangalore.

I, CLINT FABIAN CARVALLO residing at flat No.110, Salarpuria Residency, 1st cross, Someshvarpura Layout, Ulsoor, Bangalore-08 have changed my minor Daughter's name from ANGEL KIM PUI CARVALLO to KIM ANGEL CARVALLO vide affidavit dated 20-04-2021 before notary L. Gopalakrishna, Bangalore.

I, RATNA BAI is legally wedded spouse of No.2559866F Rank Ex Spoy Name: Late Venkoba Rao Residing No.61, Balaji Layout, Kodigehalli, K.R puram Bengaluru- 560067, have changed my name to RATHNA BAI my date of birth 08-07-1957 Vide Affidavit dated 21-04-2021 before G.Rajendra, Notary

MITHLESH KUMARI, W/o JC-682149-H, NB/SUB, GOPAL SINGH SOLANKI, Vill-MAHOOIBRAHIMPUR, HINDAUN CITY, KARAULI, RAJASTHAN, changed my name from MITHLESH KUMARI to MITHLESH SOLANKI, 22/04/2021, Notary K.V. Mani, Bangalore

PHULESWARA BORAH M/o 14837107K- Hav- SARAT BORAH, R/a Rupakhat, Purani Tangla, Udalguri, Assam, changed name from PHULESWARA BORAH to PHULESWARI BORAH, notary KV Mani Bangalore.

J DINCY, W/o JC673298P Nb/SUB Raginald E, Vill-Neyyattinkara, Chaikottukonam, Trivandrum, Kerala, my name J DINCY to DINCY RAGINALD, Notary KV Mani, Bangalore.

FULY DEVI, Spouse/of, JC-681802-Y, SUB, MADAN LAL, Vill/Post- BHUNDANA, THE: PIPARCITY, JODHPUR, RAJASTHAN, changed my name from FULY DEVI to FULI, 12/11/2020 Notary HARISHA. G, Bangalore.

I, GEETHA, D/o. LateRamachandra Rao, hereby declare that GEETHA and M GEETHA, is one the same nameand person and two names. vide Affidavit Dt. 20.04.2021 Before NotarySivakumara.M.N. Bangaluru.

DH Classifieds
For Lineage & Single/ Multi Column Classifieds Display ads
BOOK YOUR AD ON SUNDAY & GET 50% OFF ON WEEKDAYS
For more information contact:
9880856233 / 9845114560
9606912256

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಬನ್ನೇರುಘಟ್ಟ ಉದ್ಯಾನ ವಾರಾಂತ್ಯ ರಜೆ

ಪ್ರಜಾವಾಣಿ ವಾರ್ತೆ

ಆನೇಕಲ್: ಕೊರೊನಾ ಸೋಂಕು ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಆದೇಶದಂತೆ ಬನ್ನೇರುಘಟ್ಟ ಜೈವಿಕ ಉದ್ಯಾನವು ಮೇ 2ರವರೆಗೆ ಶನಿವಾರ ಮತ್ತು ಭಾನುವಾರ ಮುಚ್ಚಿರುತ್ತದೆ ಎಂದು ಉದ್ಯಾನದ ಕಾರ್ಯ-ನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ ತಿಳಿಸಿದ್ದಾರೆ.

ಏಪ್ರಿಲ್ 24 ಮತ್ತು 25, ಮೇ 1 ಮತ್ತು 2ರಂದು ಉದ್ಯಾನದ ಮೃಗಾಲಯ, ಸಫಾರಿ, ಚಿಟ್ಟೆ ಉದ್ಯಾನ ಸೇರಿದಂತೆ ಎಲ್ಲಾ ವಿಭಾಗಗಳನ್ನು ಮುಚ್ಚಲಾಗುವುದು. ಸಾರ್ವಜನಿಕ ವೀಕ್ಷಣೆಗೆ ಅವಕಾಶವಿರುವುದಿಲ್ಲ.

ಬನ್ನೇರುಘಟ್ಟ ಜೈವಿಕ ಉದ್ಯಾನದ ವಾರದ ರಜೆಯಾದ ಮಂಗಳವಾರ ಕಾರ್ಯನಿರ್ವ-ಹಿಸಲು ತೀರ್ಮಾನಿಸಲಾಗಿದೆ. ಅದರಂತೆ ಏ.27 ಮತ್ತು ಮೇ 4ರ ಮಂಗಳವಾರ ಉದ್ಯಾನ ತೆರೆದಿದ್ದು ಸಾರ್ವಜನಿಕ ವೀಕ್ಷಣೆಗೆ ಲಭ್ಯವಿರುತ್ತದೆ ಎಂದು ತಿಳಿಸಿದ್ದಾರೆ.

ನೋಡಲ್ ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ

50 ಆಸ್ಪತ್ರೆಗಳಲ್ಲಿ ಹೆಲ್ಪ್ ಡೆಸ್ಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳ ಚಿಕಿತ್ಸೆಯ ಮೇಲುಸ್ತುವಾರಿಗಾಗಿ ಬಿಬಿಎಂಪಿಯಿಂದ ನೋಡಲ್ ಅಧಿಕಾ-ರಿಗಳನ್ನು ನಿಯೋಜಿಸಿರುವ 50 ಪ್ರಮುಖ ಆಸ್ಪತ್ರೆಗಳಲ್ಲಿ ತಕ್ಷಣವೇ ರೋಗಿಗಳು ಮತ್ತು ಅವರ ಕುಟುಂಬದರಿಗೆ ನೆರವು ಒದಗಿಸಲು ಹೆಲ್ಪ್ ಡೆಸ್ಕ್‌ಗಳನ್ನು ತೆರೆಯಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅಧಿಕಾರಿಗಳಿಗೆ ಸೂಚಿಸಿದರು.

ಪಾಲಿಕೆಯ ಎಲ್ಲ ವಲಯಗಳ ಆಯುಕ್ತರು, ವಲಯ ಜಂಟಿ ಆಯುಕ್ತರು, ವಿಧಾನಸಭಾ ಕ್ಷೇತ್ರದ ನೋಡಲ್ ಅಧಿಕಾರಿಗಳು ಮತ್ತು ಪ್ರಮುಖ ಆಸ್ಪತ್ರೆಗೆ ನಿಯೋಜಿಸಿರುವ ನೋಡಲ್ ಅಧಿಕಾರಿಗಳ ಜತೆ ಗುರುವಾರ ವರ್ಚ್ಯುವಲ್ ಸಭೆ ನಡೆಸಿದ ಅವರು, ಕೋವಿಡ್ ರೋಗಿಗಳ ಚಿಕಿತ್ಸೆಗೆ ಸಂಬಂಧಿಸಿದಂತೆ ಸಮನ್ವಯ ಸಾಧಿಸು-ವುದಕ್ಕಾಗಿ ಹೆಲ್ಪ್ ಡೆಸ್ಕ್ ಆರಂಭಿಸಬೇಕು ಎಂದು ಸೂಚನೆ ನೀಡಿದರು.

ಕೋವಿಡ್ ರೋಗಿಗಳ ಚಿಕಿತ್ಸೆಯಲ್ಲಿ ಯಾವುದೇ ತೊಂದರೆ ಆಗದಂತೆ ಎಚ್ಚರಿಕೆ ವಹಿಸಬೇಕು. ಆಯಾ ವಲಯದ ವಾರ್ ರೂಮ್ ಜತೆ ಸಮನ್ವಯದಿಂದ ಕೆಲಸ ಮಾಡಬೇಕು. ಇದಕ್ಕಾಗಿ ಪ್ರತಿ ಆಸ್ಪತ್ರೆಯಲ್ಲೂ ಒಂದು ಹೆಲ್ಪ್ ಡೆಸ್ಕ್ ಆರಂಭಿಸಬೇಕು. ಅಲ್ಲಿಗೆ ಅಗತ್ಯವಿರುವ ಸಿಬ್ಬಂದಿಯನ್ನು ತಕ್ಷಣವೇ ನಿಯೋಜಿಸಬೇಕು ಎಂದರು.

ಸೋಂಕಿತ ವ್ಯಕ್ತಿ ಆಸ್ಪತ್ರೆಗೆ ಬಂದಾಗ ಹಾಸಿಗೆ ವ್ಯವಸ್ಥೆ ಮಾಡುವ ಕೆಲಸವನ್ನು ಹೆಲ್ಪ್ ಡೆಸ್ಕ್ ಮೂಲಕವೇ ಮಾಡಬೇಕು. ರೋಗಿಗಳು ಗುಣಮುಖರಾದಾಗ ಆಸ್ಪ-ತ್ರೆಯಲ್ಲಿ ಖಾಲಿಯಾಗುವ ಹಾಸಿಗೆಗಳ ಮಾಹಿತಿಯನ್ನು ತಕ್ಷಣವೇ ವಾರ್ ರೂಮ್‌ಗೆ ಒದಗಿಸಬೇಕು. ಅಲ್ಲಿಂದ ಬೆಡ್ ಮ್ಯಾನೇಜ್‌ಮೆಂಟ್ ಸಿಸ್ಟಂನಲ್ಲಿ ಮಾಹಿತಿ ದಾಖಲಿಸಬೇಕು ಎಂದು ನಿರ್ದೇಶನ ನೀಡಿದರು.

ಕೋವಿಡ್ ನಿಯಂತ್ರಣಕ್ಕಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ಒಬ್ಬ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಅವರು ಆಯಾ ವಲಯಗಳ ಆಯುಕ್ತರು ಮತ್ತು ಜಂಟಿ ಆಯುಕ್ತರ ಜತೆ ನಿರಂತರ ಸಂಪರ್ಕದಲ್ಲಿ ಇದ್ದು, ಕೋವಿಡ್ ನಿಯಂತ್ರಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

1,000 ಹಾಸಿಗೆಗಳ ಐಸಿಯು ಆಸ್ಪತ್ರೆ

ನಗರದಲ್ಲಿ ಕೋವಿಡ್ ರೋಗಿಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣದಿಂದ ತಾತ್ಕಾಲಿಕವಾಗಿ 1,000 ಹಾಸಿಗೆಗಳ ತೀವ್ರ ನಿಗಾ ಘಟಕ (ಐಸಿಯು) ಆಸ್ಪತ್ರೆ-ಯನ್ನು ಆರಂಭಿಸುವ ಪ್ರಸ್ತಾವವನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ನಗರದಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಹಾಸಿಗೆಗಳ ಬೇಡಿಕೆ ಹೆಚ್ಚುತ್ತಿದೆ. ಮುಂದಿನ ಕೆಲವು ತಿಂಗಳುಗಳ ಬೇಡಿಕೆಯನ್ನು ಅಂದಾಜು ಮಾಡಿ, ಪ್ರತ್ಯೇಕ ಐಸಿಯು ಆಸ್ಪತ್ರೆ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ' ಎಂದರು.

ಹೋಟೆಲ್‌ಗಳಲ್ಲಿ ತಾತ್ಕಾಲಿಕ ಆಸ್ಪತ್ರೆಗನ್ನು ಆರಂಭಿಸುವ ಪ್ರಕ್ರಿಯೆಯೂ ಆರಂಭವಾಗಿದೆ. 12 ಕೋವಿಡ್ ಆರೈಕೆ ಕೇಂದ್ರಗಳನ್ನು ಗುರುವಾರದಿಂದಲೇ ಆರಂಭಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮಾರ್ಗಸೂಚಿ ಉಲ್ಲಂಘನೆ: ಫೋರ್ಟಿಸ್ ಆಸ್ಪತ್ರೆ ವಿರುದ್ಧ ಎಫ್‌ಐಆರ್

ಬೊಮ್ಮನಹಳ್ಳಿ: ಹಾಸಿಗೆ ಲಭ್ಯವಿಲ್ಲ ಎಂಬ ಕಾರಣ ನೀಡಿ ಕೊರೊನಾ ರೋಗಿಗಳನ್ನು ದಾಖಲು ಮಾಡಿಕೊಳ್ಳದೇ, ಹೊರ ಕಳುಹಿಸಲಾಗುತ್ತಿದೆ ಎಂಬ ದೂರು ಕೇಳಿ ಬಂದ ಕಾರಣ ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್ ಆಸ್ಪತ್ರೆಯ ಮುಖ್ಯಸ್ಥರ ಮೇಲೆ ಪುಟ್ಟೇನಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಉತ್ಪಾಲ್ ಸಿನ್ಹಾ (77) ಎಂಬ ಕೊರೊನಾ ಪೀಡಿತರೊಬ್ಬರು ತೀವ್ರ ಉಸಿರಾಟದ ತೊಂದರೆ ಎದುರಿಸುತ್ತಿದ್ದರು. ಆದರೂ ಆಸ್ಪತ್ರೆಗೆ ದಾಖಲು ಮಾಡಿಕೊಳ್ಳದೇ ಹೊರಗಡೆ ನಿಲ್ಲಿಸಿದ್ದರಿಂದ ಆಮ್ಲಜನಕದ ಕೊರತೆಯಿಂದ ನಿತ್ರಾಣರಾಗಿ ಅವರು ಬುಧವಾರ ಸಂಜೆ ಆಸ್ಪತ್ರೆಯ ಆವರಣದಲ್ಲೇ ನಿಧನ-ರಾಗಿದ್ದರು. ಫೋರ್ಟಿಸ್ ಆಸ್ಪತ್ರೆಯ ನಿರ್ಲಕ್ಷ್ಯದಿಂದಾಗಿ ರೋಗಿ ಸಾವನ್ನಪ್ಪಿದ್ದಾ-ರೆಂದು ಆರೋಪಿಸಿ ಬೊಮ್ಮನಹಳ್ಳಿ ಆರೋಗ್ಯ ವೈದ್ಯಾಧಿಕಾರಿ ಡಾ.ನಾಗೇಂದ್ರ ದೂರು ನೀಡಿದ್ದರು.

ಆಸ್ಪತ್ರೆಯಲ್ಲಿ 339 ಹಾಸಿಗೆಗಳು ಇದ್ದು ಇದರಲ್ಲಿ ಶೇಕಡ 50 ರಷ್ಟು ಹಾಸಿಗೆಗಳನ್ನು ಬಿಟ್ಟುಕೊಡಬೇಕಿತ್ತು. ಆದರೆ, 45 ಹಾಸಿಗೆಗಳನ್ನಷ್ಟೇ ಕೊಟ್ಟಿದ್ದಾರೆ. ಇದು ಸರ್ಕಾರದ ಕೋವಿಡ್ ಮಾರ್ಗಸೂಚಿಯ ಸ್ಪಷ್ಟ ಉಲ್ಲಂಘನೆ ಎಂದು ದೂರಿನಲ್ಲಿ ಹೇಳಲಾಗಿದೆ. ಹೀಗಾಗಿ, ಆಸ್ಪತ್ರೆಯ ಆಡಳಿತ ಮಂಡಳಿಯ ಆರು ಮುಖ್ಯಸ್ಥರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.

ಎರಡು ದಿನಗಳ ಹಿಂದೆ ಅಧಿಕಾರಿಗಳ ತಂಡವು ಆಸ್ಪತ್ರೆಗೆ ಧಿಡೀರ್ ಭೇಟಿ ನೀಡಿ ಪರಿಶೀಲನೆ ನಡೆಸಿ, ಮಾರ್ಗಸೂಚಿ ಉಲ್ಲಂಘನೆಗಾಗಿ ನೋಟಿಸ್ ಜಾರಿ ಮಾಡಿತ್ತು.

ಕೊರೊನಾ ಪಿವಿ ಸ್ಪಂದನ

ನಿಮ್ಮ ನೋವಿಗೆ ನಮ್ಮ ಧ್ವನಿ

ಕೊರೊನಾ ಕಾಲದಲ್ಲಿ ನೀವು ಅನುಭವಿಸುತ್ತಿರುವ ಸಂಕಷ್ಟ, ನೋವುಗಳಿಗೆ ನಿಮ್ಮೆಲ್ಲರ 'ಪ್ರಜಾವಾಣಿ' ಧ್ವನಿಯಾಗಲಿದೆ.

ಕೋವಿಡ್ ಕಾಲದಲ್ಲಿ ನೀವು ಅಥವಾ ನಿಮ್ಮ ಸಂಬಂಧಿಗಳು, ಸ್ನೇಹಿತರು ಹಾಸಿಗೆ ಸಿಗದೇ, ಆಕ್ಸಿಜನ್ ಸಿಗದೇ ಪರದಾಡಿದ್ದರೆ, ಆಂಬುಲೆನ್ಸ್‌ಗಾಗಿ ಗೋಳಾಡಿದ್ದರೆ, ಆಸ್ಪತ್ರೆಗೆ ದಾಖಲಾಗಿಯೂ ಚಿಕಿತ್ಸೆ, ಊಟ–ನೀರು ಸಿಗದೇ ಇದ್ದರೆ ನೋವಿನ ಕಥನವನ್ನು ನಮಗೆ ಬರೆದು ಕಳುಹಿಸಿ. ನೀವು ಉಂಡ ನೋವನ್ನು ಕಂಡಾದರೂ ಸರ್ಕಾರ ಉಳಿದವರಿಗೆ ಸೂಕ್ತ ವ್ಯವಸ್ಥೆ ಮಾಡಬಹುದು. ಆಸ್ಪತ್ರೆಗಳು ತಮ್ಮ ಕಾಯಕವೇ ಆಗಿರುವ ಕರುಣೆ–ಅನುಕಂಪ, ಚಿಕಿತ್ಸಕ ಸೇವೆಯನ್ನು ಒದಗಿಸಬಹುದು ಎಂಬ ವಿಶ್ವಾಸ ನಮ್ಮದು.

ನೀವು ಮಾಡಬೇಕಾಗಿರುವುದು ಇಷ್ಟೇ

ನಿಮ್ಮ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ನಿಮ್ಮದೊಂದು ಭಾವಚಿತ್ರವನ್ನು ಕಳುಹಿಸಿ. ನಿಮ್ಮ ಬರಹ ಸ್ಪಷ್ಟ, ನಿಖರವಾಗಿ ಇರಲಿ. ಗರಿಷ್ಠ ಮಿತಿ 150 ಪದಗಳು. ದುರುದ್ದೇಶ ಅಥವಾ ಕಲ್ಪಿತ–ಕೇಳಿಸಿಕೊಂಡ ಆರೋಪಗಳು ಬೇಡ. ನಿಮ್ಮದೇ ಸ್ವಂತ ಅನುಭವ ಆಗಿದ್ದರೆ ಮಾತ್ರ ಬರೆದು ಕಳಿಸಿ.

ವಾಟ್ಸ್ ಆ್ಯಪ್ ಸಂಖ್ಯೆ: 9606038256

ಸಹಾಯಕ್ಕಾಗಿ ಇಲ್ಲಿಗೆ ಕರೆ ಮಾಡಿ	
ಬೆಂಗಳೂರು ಕೋವಿಡ್–19 ಸಹಾಯವಾಣಿ	1912
ತುರ್ತು ಪ್ರಕರಣಗಳಲ್ಲಿ ಆಂಬುಲೆನ್ಸ್ ಸೌಲಭ್ಯಕ್ಕಾಗಿ	108
ಆಪ್ತಮಿತ್ರ ಸಹಾಯವಾಣಿ	14410
ರೆಮ್‌ಡಿಸಿವಿರ್ ಹಾಗೂ ಆಕ್ಸಿಜನ್ ಪೂರೈಕೆಯ ಸಹಾಯವಾಣಿ	8951755722
ಬಿಜೆಪಿ ಯುವಮೋರ್ಚಾ ಸಹಾಯವಾಣಿ	08296723451
ಬಿಜೆಪಿ ಯುವ ಮೋರ್ಚಾ ಬೆಂಗಳೂರು ಕೊರೊನಾ ವಾರ್‌ರೂಂ	918147474841 / 918105465006

ಬಿಬಿಎಂಪಿ ವಲಯದ 24/7 ಸಹಾಯವಾಣಿ ಸಂಖ್ಯೆಗಳು	
ಪೂರ್ವ ವಲಯ	7411038024 / 9886496295
ಪಶ್ಚಿಮ ವಲಯ	080-68248454
ದಕ್ಷಿಣ ವಲಯ	8431816718
ಮಹದೇವಪುರ ವಲಯ	080-23010101 / 23010102
ಬೊಮ್ಮನಹಳ್ಳಿ ವಲಯ	8884666670
ಯಲಹಂಕ ವಲಯ	9480685964
ಆರ್ ಆರ್ ನಗರ ವಲಯ	080-28601050
ದಾಸರಹಳ್ಳಿ ವಲಯ	29590057/29635904/5906

60 ಹಾಸಿಗೆಗಳ ಸಾಮರ್ಥ್ಯ: ಶಾಸಕ ಬೈರತಿ ಸುರೇಶ್ ಉದ್ಘಾಟನೆ

ಪಶು ವೈದ್ಯ ಕಾಲೇಜಿನಲ್ಲಿ ಆರೈಕೆ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳದ ಪಶುವೈದ್ಯ ಕಾಲೇಜಿನ ಆವರಣದಲ್ಲಿ 60 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರ ಆರಂಭವಾಗಿದ್ದು, ಕೇಂದ್ರವನ್ನು ಶಾಸಕ ಬೈರತಿ ಸುರೇಶ್ ಗುರುವಾರ ಉದ್ಘಾಟಿಸಿದರು.

'ರಾಜ್ಯದಾದ್ಯಂತ ಆಸ್ಪತ್ರೆಗಳಲ್ಲಿ ಬೆಡ್ ಹಾಗೂ ಆಕ್ಸಿಜನ್ ಇಲ್ಲದೇ ಪರದಾಡುವಂತ ಸ್ಥಿತಿ ಉಂಟಾಗಿದ್ದು, ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಇಲ್ಲಿ ಕೇಂದ್ರ ಆರಂಭಿಸಲಾಗಿದೆ' ಎಂದು ಸುರೇಶ್ ಹೇಳಿದರು.

'ಕೋವಿಡ್ ಆರೈಕೆ ಕೇಂದ್ರ ಆರಂಭದಿಂದ ಆಸ್ಪತ್ರೆಗಳ ಮೇಲಿನ ಒತ್ತಡ ಕಡಿಮೆ ಆಗಲಿದೆ. ರೋಗ ಲಕ್ಷಣ ಇಲ್ಲದ ಸೋಂಕಿತರು ಮನೆಯಲ್ಲಿ ಪ್ರತ್ಯೇಕವಾಗಿ ಆರೈಕೆಗೆ ಒಳಗಾಗಲು ಸೌಲಭ್ಯವಿಲ್ಲದಿದ್ದ-ರೆ ಕೋವಿಡ್ ಆರೈಕೆ ಕೇಂದ್ರದಲ್ಲಿ ಚಿಕಿತ್ಸೆ ಪಡೆಯಬಹುದು' ಎಂದರು.

ಪೂರ್ವ ವಲಯದ ಜಂಟಿ ಆಯುಕ್ತರಾದ ಪಲ್ಲವಿ, ಪಾಲಿಕೆಯ ಮಾಜಿ ಸದಸ್ಯರಾದ ಅಬ್ದುಲ್ ವಾಜೀದ್, ಆನಂದ್ ಕುಮಾರ್, ಆನಂದ್, ಹೆಬ್ಬಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಲಾಜಿ, ಕ್ಷೇತ್ರದ ಆರೋಗ್ಯಾಧಿಕಾರಿ ವೇದಾವತಿ ಇದ್ದರು.

ಕೋವಿಡ್ ಆರೈಕೆ ಕೇಂದ್ರವನ್ನು ಶಾಸಕ ಬೈರತಿ ಸುರೇಶ್ ಉದ್ಘಾಟಿಸಿ, ಪರಿಶೀಲಿಸಿದರು

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

5,98,919 ಒಟ್ಟು ಸೋಂಕಿತರು

4,55,655 ಗುಣಮುಖರಾದವರು | **1,37,813** ಸಕ್ರಿಯ ಪ್ರಕರಣ | **5,450** ಸಾವು

ಬುಧವಾರದ ಏರಿಕೆ

15,244 ದೃಢಪಟ್ಟ ಪ್ರಕರಣ

2,257 ಗುಣಮುಖ | **68** ಸಾವು

'ಆಕ್ಸಿಜನ್ ಲಭ್ಯತೆ ವಿವರ ಪ್ರಕಟಿಸಿ'

ಪ್ರತಿನಿತ್ಯ ಕೋವಿಡ್ ಪ್ರಕರಣಗಳು ಮತ್ತು ಸಾವಿನ ಸಂಖ್ಯೆ ಪ್ರಕಟಿಸುತ್ತಿರುವ ರೀತಿಯಲ್ಲಿ, ಕೋವಿಡ್ ಪರಿಹಾರ ಕ್ರಮಗಳ ಬಗ್ಗೆ ನಿತ್ಯ ವರದಿ ಪ್ರಕಟಿಸಬೇಕು. ಜೊತೆಗೆ, ಆಮ್ಲಜನಕ ಲಭ್ಯತೆಯ ವಿವರವನ್ನೂ ಬಹಿರಂಗಪಡಿಸಬೇಕು ಎಂದು ಕರ್ನಾಟಕ ಜನಾರೋಗ್ಯ ಚಳವಳಿ ಸಂಘಟನೆ ಒತ್ತಾಯಿಸಿದೆ.

ಈ ಕುರಿತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರಿಗೆ ಪತ್ರ ಬರೆದು ಒತ್ತಾಯಿಸಿದೆ. ತಜ್ಞರ ಹಾಗೂ ತಳಮಟ್ಟದಲ್ಲಿ ಕೆಲಸ ಮಾಡುತ್ತಿರುವವರ ಜೊತೆಗೆ ಸಮಾಲೋಚನೆ ನಡೆಸಿ, ಸಂಘಟನೆಯು ಈ ಒತ್ತಾಯ ಪತ್ರವನ್ನು ಸಿದ್ಧಪಡಿಸಿದೆ.

ಮೇ ಮೊದಲ ವಾರದ ವೇಳೆಗೆ ಪರಿಸ್ಥಿತಿ ಇನ್ನೂ ಬಿಗಡಾಯಿಸಲಿದೆ ಎಂದು ತಜ್ಞರು ಹೇಳಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರವು ತಕ್ಷಣ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಂಘಟನೆ ಒತ್ತಾಯಿಸಿದೆ.

- ಬೆಂಗಳೂರು ಮತ್ತು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ವೈದ್ಯಕೀಯ ಆಮ್ಲಜನಕ ವ್ಯವಸ್ಥೆ ಇರುವ ಹಾಸಿಗೆಗಳ ಸಂಖ್ಯೆ ಹೆಚ್ಚಿಸಬೇಕು
- ಪ್ರತಿದಿನ ಸರ್ಕಾರವು ಎಷ್ಟು ಆಮ್ಲಜನಕ ಹಾಸಿಗೆಗಳನ್ನು ಹೊಸದಾಗಿ ಎಲ್ಲಿ ಹೆಚ್ಚು ಮಾಡಲಾಗಿದೆ ಎಂಬುದನ್ನು ಪ್ರಕಟಿಸಬೇಕು.
- ರಾಜಧಾನಿಯಲ್ಲಿ ಪ್ರತಿ ದಿನ ಕನಿಷ್ಠ 500 ಮತ್ತು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ತಲಾ 50 ವೆಂಟಿಲೇಟರ್‌ಗಳನ್ನು ಇನ್ನೊಂದು ವಾರ ಹೆಚ್ಚಿಸುತ್ತಲೇ ಇರಬೇಕು
- ಆಸ್ಪತ್ರೆಗಳಲ್ಲಿ ಸಿಬ್ಬಂದಿಯ ಕೊರತೆ ಆಗದಂತೆ ಹೆಚ್ಚಿನ ಜನರನ್ನು ನೇಮಕ ಮಾಡಿಕೊಳ್ಳಬೇಕು
- ತುರ್ತು ಸಂದರ್ಭದಲ್ಲಿ ಯಾರನ್ನು ಸಂಪರ್ಕಿಸಬೇಕು ಎಂಬ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು

ಸಂಕ್ಷಿಪ್ತ ಸುದ್ದಿ

ಜೈನ ಮಠಕ್ಕೆ ಪ್ರವೇಶ ನಿರ್ಬಂಧ

ಶಿರಸಿ: ತಾಲ್ಲೂಕಿನ ಸೋಂದಾದ ಸ್ವಾದಿ ದಿಗಂಬರ ಜೈನ ಮಠಕ್ಕೆ ಮೇ 4ರವರೆಗೆ ಸಾರ್ವಜನಿಕರ ಪ್ರವೇಶ, ವಸತಿ, ಭೋಜನದ ವ್ಯವಸ್ಥೆಯನ್ನು ನಿರ್ಬಂಧಿಸಲಾಗಿದೆ.

ಕೊರೊನಾ ನಿಯಂತ್ರಣದ ಸಲುವಾಗಿ ಸರ್ಕಾರದ ಸೂಚನೆ ಪಾಲಿಸುವ ನಿಟ್ಟಿನಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಬಸದಿಗಳಲ್ಲಿ ವಿಶೇಷ ಪೂಜೆ, ದರ್ಶನ ನಿಲ್ಲಿಸಲಾಗುತ್ತಿದೆ. ಭಕ್ತರು ಪೂಜಾ ಕಾರ್ಯಕ್ರಮಗಳನ್ನು ಆನ್‌ಲೈನ್ ಮೂಲಕ ವೀಕ್ಷಿಸಲು ಅವಕಾಶವಿದೆ. ದೂರವಾಣಿ ಮೂಲಕ ಹೆಸರು ನೊಂದಾಯಿಸಿ ವಿಶೇಷ ಪೂಜೆ ಮಾಡಿಸಬಹುದು. ಮಾಹಿತಿಗೆ 9786713349, 7010474685, 8277468108 ಸಂಪರ್ಕಿಸಬ-ಹುದು ಎಂದು ಪ್ರಕಟಣೆ ತಿಳಿಸಿದೆ.

ಆಲಮಟ್ಟಿ ಉದ್ಯಾನ ಬಂದ್ ಇಂದಿನಿಂದ

ಆಲಮಟ್ಟಿ: ರಾಜ್ಯ ಸರ್ಕಾರದ ಕೋವಿಡ್ ಮಾರ್ಗಸೂಚಿಯ ಅನ್ವಯ ಆಲಮಟ್ಟಿಯ ವಿವಿಧ ಉದ್ಯಾನಗಳನ್ನು ಶುಕ್ರವಾರದಿಂದ ಬಂದ್ ಮಾಡಲಾಗುತ್ತಿದೆ.

'ಏ 23 ರಿಂದ ಮೇ 4 ರವರೆಗೆ ಉದ್ಯಾನ ಬಂದ್ ಇರಲಿದೆ' ಎಂದು ಕೆಬಿಜೆಎನ್ ಎಲ್ ಮುಖ್ಯ ಎಂಜಿನಿಯರ್ ಎಚ್. ಸುರೇಶ ತಿಳಿಸಿದ್ದಾರೆ.

ಬಿಜೆಪಿ (ಬೆಂಗಳೂರು ದಕ್ಷಿಣ) ಕೋವಿಡ್ ಸಹಾಯವಾಣಿ	
ಕೋವಿಡ್ ಸಂಬಂಧಿತ ವೈದ್ಯಕೀಯ ನೆರವು	
ಡಾ.ಸುನೀಲ್ ಬಾಬು	9844030490
ಡಾ.ಮಹೇಶ್	9986954102
ಡಾ.ಚಂದನ್	9901800222
ಡಾ.ವಿಶ್ವನಾಥ್	9611838743
ಔಷಧ ಹಾಗೂ ಲಸಿಕೆ ಪಡೆಯಲು	
ಅಶ್ವತ್ಥನಾರಾಯಣ್	9845372363
ಚಂದ್ರಶೇಖರಯ್ಯ	9480090678
ಆಸ್ಪತ್ರೆ ನೆರವು	
ಶ್ರೀನಿವಾಸ್ ಹುಚ್ಚಯ್ಯ	9448116269
ಚಂದ್ರಶೇಖರ್ ರೆಡ್ಡಿ	9740277002
ಗಣೇಶ್	9741677999
ಹನುಮಂತ ಶೆಟ್ಟಿ	8660783949
ಆಂಬುಲೆನ್ಸ್ ಸಹಾಯ	
ಸುದರ್ಶನ್	9901700020
ಸಂಕೀರ್ತ್	9902213333
ಅಂತ್ಯಸಂಸ್ಕಾರಕ್ಕೆ ಸಹಾಯ	
ಡಿ.ಎನ್.ರಮೇಶ್	9845966449
ಬಿ. ರವಿ	9901110111
ಇತರ ಸಹಾಯ	
ಜಿ.ವಿ. ಚಿನ್ನಗಿರಿಯಪ್ಪ	9449156115
ರಾಜು	9845651700

ಬಿಜೆಪಿ (ಬೆಂಗಳೂರು ಉತ್ತರ) ಕೋವಿಡ್ ಸಹಾಯವಾಣಿ	
ಕೋವಿಡ್ ಸಂಬಂಧಿತ ವೈದ್ಯಕೀಯ ನೆರವು	
ಡಾ.ಅನಂತ ರಾಮಯ್ಯ	9886169899
ಡಾ.ಜಗನ್ನಾಥ್	9880107651
ಔಷಧ, ಲಸಿಕೆ ನೆರವು	
ಬಿ.ಎಂ.ಶ್ರೀನಿವಾಸ್	9845122827
ಸತೀಶ್ ಕೆ.ಆರ್	9620401938
ವಿ.ವಿ.ಸತ್ಯನಾರಾಯಣ	9845457544
ಆಸ್ಪತ್ರೆಗೆ ದಾಖಲಾಗಲು ನೆರವು	
ಅನಂತರಾಜು	9036003357
ಮುನೇಗೌಡ	9844091488
ಕೃಷ್ಣಮೂರ್ತಿ	9986040808
ಆಂಬುಲೆನ್ಸ್ ನೆರವು	
ಬಿ.ಎಸ್. ಸತ್ಯನಾರಾಯಣ	9972174777
ಚಂದ್ರಶೇಖರ್	9341262449
ಜಯರಾಮಯ್ಯ	9731168829
ಅಂತ್ಯಸಂಸ್ಕಾರಕ್ಕೆ ಸಹಾಯ	
ಕೆ.ಗಂಗಹನುಮಯ್ಯ	9448479109
ಜಿ.ಎಸ್.ಕುಮಾರ್	9448083682
ಬಿ.ಆರ್.ಭುಜೇಂದ್ರ	9844551414
ಇತರ ನೆರವು	
ಜಿ.ಎನ್.ಮಂಜುನಾಥ್	9986553628
ಎಂ.ರಾಮಮೂರ್ತಿ	9844128979
ದೀಪಕ್ ಎಸ್.ಆರ್	9886895349

ಬಿಜೆಪಿ (ಕೇಂದ್ರ) ಸಹಾಯವಾಣಿ	
ಕೋವಿಡ್ ಸಂಬಂಧಿತ ವೈದ್ಯಕೀಯ ನೆರವು	
ಡಾ.ಶಾಂತಗಿರಿ ಮಲ್ಲಪ್ಪ	9482565654
ಡಾ.ಅಜಿತ್	9986180751
ಔಷಧ, ಲಸಿಕೆ ನೆರವು	
ಸಪ್ತಗಿರಿ ಗೌಡ	9900200009
ಅಭಿಷೇಕ್ ರೆಡ್ಡಿ	9845419991
ದರ್ಶನ್ ದೇವೇಗೌಡ	9886478804
ಹೇಮಂತ್	9036111976
ಆಂಬುಲೆನ್ಸ್ ನೆರವು	
ಯಲ್ಲಪ್ಪ ರೆಡ್ಡಿ	8792365415
ವಿಜೇಂದ್ರ ಎಸ್.ಎಂ	8861635038
ಇತರ ನೆರವು	
ಆರ್.ಕೆ.ಪುನಿತ್	7795606060
ಶ್ರೀನಿವಾಸ್	080-23565608

ಪರಸ್ಪರ ಅಂತರ ಕಾಯ್ದುಕೊಳ್ಳಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

27 ಐಸಿಯು ಹಾಸಿಗೆ ಮಾತ್ರ ಖಾಲಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ-ಲ್ಲಿನ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಕಾಯ್ದಿರಿಸಿದ್ದ 7,797 ಹಾಸಿಗೆಗಳ ಪೈಕಿ 6,244 ಭರ್ತಿಯಾಗಿವೆ. 1,553 ಹಾಸಿಗೆಗಳು ಖಾಲಿ ಇದ್ದು, 27 ಐಸಿಯು ಹಾಸಿಗೆಗಳು ಮಾತ್ರ ಲಭ್ಯವಿವೆ.

ಹಾಸ್ಪಿಟಲ್ ಬೆಡ್ ಮ್ಯಾನೇಜ್‌ಮೆಂಟ್ ವೆಬ್‌ಸೈಟ್‌ನಲ್ಲಿ ಪಾಲಿಕೆ ಈ ಮಾಹಿತಿ ಹಂಚಿಕೊಂಡಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಕೇವಲ ಒಂದು ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ ಲಭ್ಯವಿದೆ. ಖಾಸಗಿ ಆಸ್ಪತ್ರೆಗಳಲ್ಲಿ 14 ಸಾಮಾನ್ಯ ಐಸಿಯು ಹಾಸಿಗೆ ಮತ್ತು ಎಂಟು ವೆಂಟಿಲೇಟರ್ ಐಸಿಯು ಹಾಸಿಗೆಗಳು ಖಾಲಿ ಇವೆ. ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ನಾಲ್ಕು ಐಸಿಯು ಹಾಸಿಗೆಗಳು ಖಾಲಿ ಇವೆ.

ಸರ್ಕಾರಿ ಆಸ್ಪತ್ರೆಗಳು, ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು ಮತ್ತು ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಸೇರಿದಂತೆ 1,313 ಸಾಮಾನ್ಯ ವಾರ್ಡ್‌ಗಳು ಹಾಗೂ 213 ಎಚ್‌ಡಿಯು ವಾರ್ಡ್‌ಗಳು ಖಾಲಿ ಉಳಿದಿವೆ.

ಸರ್ಕಾರ ಆರಂಭಿಸಿರುವ ಕೋವಿಡ್ ಆರೈಕೆ ಕೇಂದ್ರಗಳಲ್ಲಿ 1,530 ಹಾಸಿಗೆಗಳು ಇವೆ. ಈ ಪೈಕಿ 545 ಭರ್ತಿಯಾಗಿದ್ದು, 985 ಖಾಲಿ ಇವೆ.

3,545 ಕೋವಿಡ್ ರೋಗಿಗಳು ಖಾಸಗಿಯಾಗಿ ಆಸ್ಪತ್ರೆಗಳಿಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. 1,071 ಜನರು ಖಾಸಗಿ ಕೋವಿಡ್ ಆರೈಕೆ ಕೇಂದ್ರಗಳಲ್ಲಿದ್ದಾರೆ. 37,149 ಮಂದಿ ಮನೆಗಳಲ್ಲೇ ಪ್ರತ್ಯೇಕವಾಸದಲ್ಲಿ ಇದ್ದಾರೆ.

ಆಸ್ಪತ್ರೆಗಳ ವಿಧ	ಸಾಮಾನ್ಯ ವಾರ್ಡ್	ಎಚ್‌ಡಿಯು	ಐಸಿಯು	ಐಸಿಯು ವೆಂಟಿಲೇಟರ್	ಒಟ್ಟು
ಸರ್ಕಾರಿ ಆಸ್ಪತ್ರೆಗಳು	71	03	00	01	75
ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು	04	31	00	00	35
ಖಾಸಗಿ ಆಸ್ಪತ್ರೆಗಳು	336	148	14	08	506
ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು	902	31	04	00	937

ವೈದ್ಯಕೀಯ ತ್ಯಾಜ್ಯ

ರಾಜರಾಜೇಶ್ವರಿನಗರದ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಹಿಂಭಾಗದಲ್ಲಿ ವೈದ್ಯಕೀಯ ತ್ಯಾಜ್ಯವನ್ನು ಹೀಗೆ ಬಿಸಾಡಲಾಗಿದೆ. ವಾಹನ ನಿಲುಗಡೆ ಪ್ರದೇಶವಾದ ಇಲ್ಲಿ ಜನರು ಓಡಾಡುತ್ತಿದ್ದು, ಬೀದಿ ನಾಯಿಗಳು ಈ ತ್ಯಾಜ್ಯವನ್ನು ಎಳೆದಾಡಿ ಸುತ್ತ–ಮುತ್ತ ಹರಡುತ್ತಿವೆ. ವೈದ್ಯಕೀಯ ತ್ಯಾಜ್ಯವನ್ನು ದಹನ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ. ಪ್ರಜಾವಾಣಿ ಚಿತ್ರ/ ಅನೂಪ್ ರಾಘ್ ಟಿ.

ಶ್ರವಣ್ ರಾಠೋಡ್ ನಿಧನ

ಮುಂಬೈ (ಪಿಟಿಐ): ಕೋವಿಡ್–19 ಸೋಂಕಿಗೆ ಒಳಗಾಗಿದ್ದ ಖ್ಯಾತ ಸಂಗೀತಗಾರ ಶ್ರವಣ್ ರಾಠೋಡ್ ಗುರುವಾರ ನಿಧನರಾಗಿದ್ದಾರೆ.

ಗಂಭೀರ ಸ್ಥಿತಿಯಲ್ಲಿದ್ದ ಶ್ರವಣ್ ಅವರನ್ನು ಎಸ್‌ಎಲ್ ರಹೇಜಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ರಾತ್ರಿ 10.15ಕ್ಕೆ ನಿಧನರಾದರು ಎಂದು ಶ್ರವಣ್ ಅವರ ಪುತ್ರ ಸಂಜೀವ್ ರಾಠೋಡ್ ತಿಳಿಸಿದ್ದಾರೆ.

ಖ್ಯಾತ ಸಂಗೀತ ನಿರ್ದೇಶಕ ನದೀಮ್ ಅವರ ಜತೆ ಸೇರಿ ಶ್ರವಣ್ ಅವರು ಹಲವು ಜನಪ್ರಿಯ ಚಲನಚಿತ್ರಗಳಿಗೆ ಸ್ವರ ಸಂಯೋಜನೆ ಮಾಡಿದ್ದರು.

₹5.08 ಲಕ್ಷ ಲಂಚದ ಹಣ ಕಾರಿನಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲೆಯ ಆರೋಗ್ಯ ಇಲಾಖೆಯ ವಿವಿಧ ಕಚೇರಿಗಳಿಂದ ಸಂಗ್ರಹಿಸಿ ಒಯ್ಯುತ್ತಿದ್ದ ₹5.08 ಲಕ್ಷ ಲಂಚದ ಹಣವನ್ನು ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು (ಎಸಿಬಿ) ಗುರುವಾರ ವಶಪಡಿಸಿಕೊಂಡಿದ್ದಾರೆ.

ಇಲ್ಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ (ಡಿಎಚ್‌ಒ) ಕಚೇರಿಯ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಮಹಾಂತೇಶ ವಿರೂಪಾಕ್ಷಪ್ಪ ನಿಡಸನೂರ ಅವರು ಚಲಾಯಿಸುತ್ತಿದ್ದ ಕಾರಿನಲ್ಲಿ ಈ ಹಣ ಪತ್ತೆಯಾಗಿದೆ. ಹಣದೊಂದಿಗೆ ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಪ್ರಯಾಣ ಭತ್ಯೆ ಬಿಲ್‌ಗಳಿಗೆ ಸಂಬಂಧಿಸಿದ ರಿಜಿಸ್ಟ್ರಾರ್ ಕೂಡ ದೊರೆತಿದೆ.

ಎಸಿಬಿ ಉತ್ತರ ವಲಯ ಎಸ್ಪಿ ಬಿ.ಎಸ್.ನೇಮಗೌಡ ಮಾರ್ಗದರ್ಶನದ-ಲ್ಲಿ ಅಧಿಕಾರಿಗಳು ದಾಳಿ ನಡೆಸಿ ಪ್ರಕರಣ ದಾಖಲಿಸಿಕೊಂಡು ಕಾರು ಸಮೇತ ಹಣವನ್ನು ವಶಪಡಿಸಿಕೊಂಡಿದ್ದಾರೆ.



ಸ್ಮಶಾನದ ಸ್ಥಳ ಪರಿಶೀಲನೆ ನಡೆಸಿದ ಸಚಿವರಾದ ಬಸವರಾಜ ಬೊಮ್ಮಾಯಿ ಮತ್ತು ಆರ್. ಅಶೋಕ

ಹೊಸ ಸ್ಮಶಾನ ಸಿದ್ಧತೆ: ಸಚಿವರ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟವರ ಅಂತ್ಯ ಸಂಸ್ಕಾರಕ್ಕಾಗಿ ತಾವರೆಕೆರೆ ಗ್ರಾಮದ ಬಳಿ ನಿರ್ಮಿಸುತ್ತಿ-ರುವ ಸ್ಮಶಾನದ ಸಿದ್ಧತಾ ಕಾರ್ಯವನ್ನು ಗೃಹ ಸಚಿವ ಬಸವರಾಜ ಬೊಮ್ಮಾಯಿ ಮತ್ತು ಕಂದಾಯ ಸಚಿವ ಆರ್.ಅಶೋಕ ಗುರುವಾರ ರಾತ್ರಿ ಪರಿಶೀಲಿಸಿದರು.

ಸುಮಾರು 50 ಎಕರೆ ಪ್ರದೇಶದಲ್ಲಿ ಈ ವ್ಯವಸ್ಥೆ ಮಾಡಲಾಗಿದ್ದು, ಏಕ ಕಾಲಕ್ಕೆ 20 ಶವಗಳ ದಹನ ಮಾಡಬಹುದಾಗಿದೆ. ಇಲ್ಲಿ ಬೋರ್‌ವೆಲ್ ಸೇರಿದಂತೆ ಅಗತ್ಯ ವ್ಯವಸ್ಥೆಯನ್ನು ಮಾಡಲಾಗಿದೆ. ನಗರದ ವಿದ್ಯುತ್ ಚಿತಾಗಾರಗಳ ಮೇಲೆ ಒತ್ತಡ ಹೆಚ್ಚಾಗಿರುವುದರಿಂದ ಈ ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ಶವಗಳ ದಹನ ಕಾರ್ಯ ನಡೆಯಲಿದೆ. ಇದಕ್ಕಾಗಿ ಸುಮಾರು 100 ಟನ್‌ಗೂ ಅಧಿಕ ಸೌದೆಯನ್ನು ಸಂಗ್ರಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಸರ್ಕಾರ ಯೋಜನಾಬದ್ಧವಾಗಿ ಕ್ರಮಕೈಗೊಳ್ಳಬೇಕಿತ್ತು'

ಚಿಕ್ಕಪೇಟೆ ಸ್ತಬ್ಧ: ವರ್ತಕರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 15 ಸಾವಿರಕ್ಕೂ ಹೆಚ್ಚು ವಾಣಿಜ್ಯ ಮಳಿಗೆಗಳು ಇರುವ ಚಿಕ್ಕಪೇಟೆ ಗುರುವಾರ ಮಧ್ಯಾಹ್ನವೇ ಸ್ತಬ್ಧವಾಯಿತು.

'ಚಿಕ್ಕಪೇಟೆಯಲ್ಲಿ ಬಟ್ಟೆ, ಚಿನ್ನಾಭರಣ ಸೇರಿದಂತೆ ಎಲ್ಲ ಉತ್ಪನ್ನಗಳು ಸಿಗುತ್ತವೆ. ಈಗ ಮದುವೆ ಸಮಾರಂಭಗಳು ಹೆಚ್ಚಿದ್ದು, ಬಟ್ಟೆ–ಚಿನ್ನಾಭರಣ ಹೆಚ್ಚು ಮಾರಾಟವಾಗು-ತ್ತವೆ. ಅಲ್ಲದೆ, ಈಗ ರಂಜಾನ್ ಇದೆ. ಇಡೀ ವರ್ಷದಲ್ಲಿ ಆಗುವ ವ್ಯಾಪಾರದ ಪೈಕಿ ಈ ಅವಧಿಯಲ್ಲಿಯೇ ಶೇ 60ರಷ್ಟು ವ್ಯಾಪಾರ ವಹಿವಾಟು ನಡೆಯುತ್ತದೆ. ಈ ಸಂದರ್ಭದಲ್ಲಿ ಹೀಗೆ ದಿಢೀರ್ ಬಂದ್ ಮಾಡಿಸಿದ್ದು ಸರಿಯಲ್ಲ' ಎಂದು ಕರ್ನಾಟಕ ಗಾರ್ಮೆಂಟ್ ವ್ಯಾಪಾರಿಗಳ ಸಂಘದ ಹಿರಿಯ ಉಪಾಧ್ಯಕ್ಷ ಪಿ.ಎಸ್. ರಾಜಪುರೋಹಿತ್ ಹೇಳಿದರು.

ನಗರದ ಚಿಕ್ಕಪೇಟೆಯ ಮುಚ್ಚಿದ ವಾಣಿಜ್ಯ ಮಳಿಗೆಯ ಮುಂದೆ ಕುಳಿತಿದ್ದ ಮಹಿಳೆಯರು –ಪ್ರಜಾವಾಣಿ ಚಿತ್ರ

'ಕೋವಿಡ್ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು, ಜನರ ಆರೋಗ್ಯವೇ ಮುಖ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಸರ್ಕಾರ ಯೋಜನಾಬದ್ಧ-ವಾಗಿ ಕ್ರಮ ಕೈಗೊಳ್ಳಬೇಕು' ಎಂದು ಹೇಳಿದರು.

'ರಾಜ್ಯಕ್ಕೆ ವ್ಯಾಪಾರ–ವಹಿವಾಟಿನಿಂದ ಬರುವ ಒಟ್ಟು ವರಮಾನದಲ್ಲಿ ಶೇ 60ರಷ್ಟು ಆದಾಯ ಹೋಗುವುದು ಬೆಂಗಳೂರಿನಿಂದ. ಆದರೆ, ರಾಜಧಾನಿಯಲ್ಲಿ ಶೇ 60ರ ಪೈಕಿ ಶೆ 27ರಷ್ಟು ತೆರಿಗೆ ಸಂದಾಯ ಆಗುವುದು ಈ ಚಿಕ್ಕಪೇಟೆ ಅಥವಾ ಕೇಂದ್ರ ವ್ಯಾಪಾರ ಪ್ರದೇಶದಿಂದ. ಸರ್ಕಾರಕ್ಕೆ ಇಷ್ಟು ಪ್ರಮಾಣದ ವರಮಾನ ನಷ್ಟವಾಗಲಿದೆ' ಎಂದೂ ಹೇಳಿದರು.

'ಕಳೆದ ಬಾರಿಯ ಲಾಕ್‌ಡೌನ್‌ನಲ್ಲಿ ತಮ್ಮ ರಾಜ್ಯಕ್ಕೆ ಹೋಗಿದ್ದ ಅನೇಕ ಕಾರ್ಮಿಕರು ವಾಪಸ್ ಬಂದಿಲ್ಲ. ಭದ್ರತಾ ಸಿಬ್ಬಂದಿ, ಸಹಾಯಕರು, ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಅನೇಕರು ಪಶ್ಚಿಮ ಬಂಗಾಳ, ಒಡಿಶಾ, ಬಿಹಾರದಿಂದ ಬಂದಿದ್ದಾರೆ. ಅವರು ಮತ್ತೆ ಹೋದರೆ ವ್ಯಾಪಾರಿಗಳು ಕೂಡ ರಾಜ್ಯವನ್ನು ಬಿಟ್ಟು ಓಡಿ ಹೋಗಬೇಕಾ-ಗುತ್ತದೆ' ಎಂದೂ ಅವರು ಆತಂಕ ವ್ಯಕ್ತ-ಪಡಿಸಿದರು.

ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್, ಸಿದ್ದಾಪೂರ

ನೊಂದಾಯಿತ ಕಛೇರಿ: ಜಗದೀಶ ಗುಡಗುಂಟಿಮಠ ವಾಣಿಜ್ಯ ಸಂಕೀರ್ಣ, 2 ನೇ ಮಹಡಿ, ಉಮಾರಾಮೇಶ್ವರ ದೇವಸ್ಥಾನ ಹತ್ತಿರ, ಪೋಸ್ಟ–ತಾಲೂಕ : ಜಮಖಂಡಿ–587301
ಜಿಲ್ಲಾ: ಬಾಗಲಕೋಟ ದೂರವಾಣಿ: 08353–221115 ಇ ಮೇಲ್– shriprabhu2003@gmail.com

ಬೇಕಾಗಿದ್ದಾರೆ

ಬಾಗಲಕೋಟೆ, ಬೆಳಗಾವಿ, ವಿಜಯಪುರ ಹಾಗೂ ಧಾರವಾಡ ಜಿಲ್ಲೆಗಳ ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರಿಗೆ ಈ ಕೆಳಗಿನ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಅ.ಸಂ	ನೇಮಕಾತಿ ಹುದ್ದೆಯ ವಿವರ	ವಿದ್ಯಾರ್ಹತೆ ಹಾಗೂ ಅನುಭವ
1	ಪ್ರಧಾನ ವ್ಯವಸ್ಥಾಪಕರು (General Manager) ಸೌಹಾರ್ದ ಸಹಕಾರಿಯ ಎಲ್ಲ ತತ್ವ, ಸಿದ್ಧಾಂತ ಹಾಗೂ ಕಾನೂನಾತ್ಮಕವಾದ ಆಡಳಿತ ಬಲ್ಲವರಾಗಿದ್ದು ಹಣಕಾಸು, ಲೆಕ್ಕಪತ್ರ ಮತ್ತು ಹಣಕಾಸಿನ ನಿಯಂತ್ರಣಗಳ ಜವಾಬ್ದಾರಿಯನ್ನು ಯಶಸ್ವಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸುವ ಹಾಗೂ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸಂಸ್ಥೆಯು ಸರ್ವತೋಮುಖ ಅಭಿವೃದ್ಧಿ ಹೊಂದಲು ವಿವಿಧ ರೀತಿಯ ಯೋಜನೆಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವಂತಹ ವ್ಯಕ್ತಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ.	ವಿದ್ಯಾರ್ಹತೆ : ಎಂ.ಬಿ.ಎ (ಹಣಕಾಸು) ಅಥವಾ ಎಂ.ಕಾಂ ಅನುಭವ : 15 ವರ್ಷಗಳ ಉನ್ನತ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹಾಗೂ ಕಂಪ್ಯೂಟರ್ ಹಾಗೂ ಇ–ಬ್ಯಾಂಕ್ ಸಾಫ್ಟ್‌ವೇರ್‌ದಲ್ಲಿ ನುರಿತವರಾಗಿರಬೇಕು. ಜನರಲ್ ಡಿಪ್ಲೋಮಾ ಇನ್ ಕೋ–ಆಪರೇಟಿವ್ಹ ಮ್ಯಾನೆಜಮೆಂಟ್ ಕೈಕೊಂಡಿದ್ದಲ್ಲಿ ಹೆಚ್ಚಿನ ಆಧ್ಯತೆ ನೀಡಲಾಗುವುದು

ಸೂಚನೆಗಳು: (1) ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರ, ವಿದ್ಯಾರ್ಹತೆಯ ಧೃಡೀಕರಣ ಪತ್ರಗಳು ಹಾಗೂ ಅನುಭವ ಪ್ರಮಾಣ ಪತ್ರದೊಂದಿಗೆ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗೆ ಮೇಲಿನ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು. (3) ಅರ್ಜಿ ಸಲ್ಲಿಸುವ ವಿಳಾಸ: ನಾಡೋಜ ಜಗದೀಶ ಎಸ್. ಗುಡಗುಂಟಿ, ಅಧ್ಯಕ್ಷರು, ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ಹ ಲಿಮಿಟೆಡ್, ಸಾಕ್ಷಾತ್ಕಾರ ನಿಲಯ, ರಾಮತೀರ್ಥ ಅರಮನೆ ರಸ್ತೆ, ಕಿತ್ತೂರು ಚನ್ನಮ್ಮ ಸರ್ಕಲ್, ಮುಖಂಡಿ – 587301, ಜಿಲ್ಲೆ: ಬಾಗಲಕೋಟ ಹಾಗೂ ಇ–ಮೇಲ್ ಮೂಲಕ ಅರ್ಜಿ ಸಲ್ಲಿಸುವವರು jagadeeshgudagunti@gmail.com ಹಾಗೂ shriprabhu2003@gmail.com ಎರಡು ಇ–ಮೇಲ್ ವಿಳಾಸಗಳಿಗೆ ರವಾನಿಸಲು ತಿಳಿಸಲಾಗಿದೆ. (3) ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಬಂದು ಹೋಗುವ ರೇಲ್ವೆ/ಬಸ್ ಪ್ರಯಾಣದ ವೆಚ್ಚಗಳನ್ನು ಕೊಡಲಾಗುವುದು.

ಸ್ಥಳ : ಜಮಖಂಡಿ
ದಿನಾಂಕ: 23 ನೇ ಏಪ್ರಿಲ್, 2021

ನಾಡೋಜ ಜಗದೀಶ ಎಸ್ ಗುಡಗುಂಟಿ
ಅಧ್ಯಕ್ಷರು ಹಾಗೂ ಸಂಸ್ಥಾಪಕರು

ಹಾಸ್ಟೆಲ್‌ನಿಂದ ಹೊರಹಾಕುವಂತಿಲ್ಲ: ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಸ್ಟೆಲ್‌ಗಳಲ್ಲಿ ಉಳಿದುಕೊಂಡು ಎಂಜಿನಿಯರಿಂಗ್, ಡಿಪ್ಲೊಮಾ, ಪಾಲಿಟೆಕ್ನಿಕ್, ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳನ್ನು ಅಲ್ಲಿಂದ ಹೊರ ಕಳುಹಿಸಬಾರದು' ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.

'ಪರೀಕ್ಷೆ ಮುಗಿಯುವವರೆಗೆ ಈ ವಿದ್ಯಾರ್ಥಿಗಳಿಗೆ ಊಟ ವಸತಿ ಸೇರಿದಂತೆ ನೀಡಲಾಗುತ್ತಿರುವ ಎಲ್ಲ ಸೌಲಭ್ಯಗಳನ್ನು ಮುಂದುವರಿಸಬೇಕು. ಹಾಸ್ಟೆಲ್‌ಗಳಲ್ಲಿ ಕೋವಿಡ್ ಬಗ್ಗೆ ಎಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು. ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದೂ ನಿರ್ದೇಶನ ನೀಡಿದ್ದಾರೆ.

ಕೋವಿಡ್– 19 ವಿರುದ್ಧ ಸಮರಕ್ಕೆ ಸ್ವಯಂ ಸೇವಕರು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೋವಿಡ್ ಎರಡನೇ ಅಲೆಯ ವಿರುದ್ಧದ ಸಮರದಲ್ಲಿ ತೊಡಗಿಸಿಕೊಳ್ಳಲು ರಾಜ್ಯ ಸರ್ಕಾರ ಸೇವಾ ಸಂಸ್ಥೆಗಳು ಮತ್ತು ಆಸಕ್ತ ವ್ಯಕ್ತಿಗಳ ನೆರವು ಪಡೆಯಲು ನಿರ್ಧರಿಸಿದೆ. ಸಾಕಷ್ಟು ಸೇವಾ ಸಂಸ್ಥೆಗಳು ಮತ್ತು ವ್ಯಕ್ತಿಗಳು ಈಗಾಗಲೇ ಸಿದ್ಧರಾಗಿದ್ದಾರೆ.

ಈ ಕಾರ್ಯದಲ್ಲಿ ನೆರವಾಗಲು ಬಯಸುವ ಸೇವಾ ಸಂಸ್ಥೆಗಳು ಮತ್ತು ಸೇವಾ ಮನೋಭಾವದ ವ್ಯಕ್ತಿಗಳು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಹಿರಿಯ ಐಎಎಸ್ ಅಧಿಕಾರಿ, ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ ಉಮಾ ಮಹಾದೇವನ್ ಅವರು ಇದರ ಉಸ್ತುವಾರಿ ನೋಡಿಕೊಳ್ಳಲಿದ್ದಾರೆ. ಕಳೆದ ವರ್ಷ ಕೋವಿಡ್ ಸಂದರ್ಭದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇವರನ್ನು ಈ ಕಾರ್ಯಕ್ಕೆ ನೇಮಿಸಿದ್ದರು.

'ನಮ್ಮ ಬಳಿ 200 ದೊಡ್ಡ ಸೇವಾ ಸಂಸ್ಥೆಗಳ ಜಾಲವಿದೆ. ವಿವಿಧ ಜಿಲ್ಲೆಗಳಲ್ಲಿ ಇನ್ನಷ್ಟು ಸೇವಾ ಸಂಸ್ಥೆಗಳನ್ನು ಗುರುತಿಸಿ ಅವರ ಮಾಹಿತಿಯನ್ನು ಪಡೆಯಲಾಗುವುದು' ಎಂದು ಉಮಾ ಅವರು ಪ್ರಜಾವಾಣಿಗೆ ತಿಳಿಸಿದರು.

'ಸರ್ಕಾರದ ಆಕ್ಸಿಜನ್ ಕಾಲ್ ಸೆಂಟರ್‌ಗಳಲ್ಲಿ ಕಾರ್ಯ ನಿರ್ವಹಿಸಲು ಸ್ವಯಂ ಸೇವಕರನ್ನು ಕಳುಹಿಸುವಂತೆ ಮನವಿ ಬಂದಿದೆ. ಇದರ ಸಮನ್ವಯ ನಡೆಸುತ್ತಿದ್ದೇವೆ. ಅಲ್ಲದೇ ಲಸಿಕೆ ಕಾರ್ಯದಲ್ಲೂ ತೊಡಗಿಸಿಕೊಳ್ಳಲಾಗುವುದು. ಕೆಲವು ಮನೆಗಳಲ್ಲಿ ವಯಸ್ಸಾದವರು ಇರುತ್ತಾರೆ. ಅವರು ತಾವಾಗಿಯೇ ಹೋಗಿ ಲಸಿಕೆ ಹಾಕಿಸಿಕೊಳ್ಳಲು ಆಗುವುದಿಲ್ಲ ಅವರಿಗೆ ಸ್ವಯಂ ಸೇವಕರು ನೆರವು ನೀಡಲಿದ್ದಾರೆ' ಎಂದು ಹೇಳಿದರು.

'ಕೋವಿಡ್‌ನಿಂದ ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಆಹಾರವನ್ನು ತಯಾರಿಸಿಕೊಡಲು ಸಾಕಷ್ಟು ಜನ ಮುಂದೆ ಬಂದಿದ್ದಾರೆ' ಎಂದರು.

ಸೇವಾ ಕಾರ್ಯದಲ್ಲಿ ತೊಡಗಲು ಆಸಕ್ತಿ ಹೊಂದಿರುವವರು ಆನ್‌ಲೈನ್ bit.ly/GoKVolunteer ಮೂಲಕ ಅರ್ಜಿ ಸಲ್ಲಿಸಬಹುದು.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಡಗಲಿ

ಸಂ:ಕಾನಿಅ/ಪಂರಾಇಂವಿ/ಹಡಗಲಿ/ಪಿಬಿ–3/ಟೆಂಡರ್/ಸ/87/2020–2021 ದಿನಾಂಕ:20.04.2021.

ಅಲ್ಪಾವಧಿ ಟೆಂಡರ್ ಪ್ರಕಟಣೆ

(Through Government of Karnataka e-procurement)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಡಗಲಿ ಬಳ್ಳಾರಿ ಜಿಲ್ಲೆ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ – 2000 ರಂತೆ ಕೂಡ್ಲಿಗಿ ತಾಲೂಕು ವ್ಯಾಪ್ತಿಯ ವಿವಿಧ ಸಾಲಿನ ವಿವಿಧ ಲೆಕ್ಕ ಶೀರ್ಷಿಕೆಗಳ ಅನುದಾನಗಳಡಿ ಅನುಮೋದನೆಯಾದ ಕಾಮಗಾರಿಗಳಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ **Standard Bid Document KW-1,&3** ರ ನಿಯಮಗಳ ನಿಬಂದನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) ಟರ್ನ ಕೀ ಆಧಾರದ ಮೇಲೆ **GOK e- procurement** ಮೂಲಕ ಅಲ್ಪಾವದಿ ಟೆಂಡರ್‌ಗಳನ್ನು ಆಹ್ವಾನಿಸಿದ್ದು , ಘಟನಾವಳಿಗಳ ವಿವರ ಈ ಕೆಳಕಂಡಂತೆಯಿದೆ.

1)ಟೆಂಡರ್ ಪ್ರಕಟಣೆಯ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಿ, ಪರಿಹರಿಸಿಕೊಳ್ಳಲು ನಿಗಧಿಪಡಿಸಿದ ಕೊನೆಯ ದಿನಾಂಕ: 28.04.2021 ರ ಸಂಜೆ: 17.00ರವರೆಗೆ.

2)ಅರ್ಜಿಗಳನ್ನು ಸ್ವೀಕರಿಸುವ ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ : 30.04.2021 ರ ಸಂಜೆ:17.00ರ ವರೆಗೆ

3)ಟೆಂಡರ್‌ಗಳನ್ನು ತೆರೆಯುವ ದಿನಾಂಕ: 04.05.2021. ರಂದು ಬೆಳಿಗ್ಗೆ 11.00 ಕ್ಕೆ

ಟೆಂಡರ್ ಪ್ರಕಟಣೆಯ ಹೆಚ್ಚಿನ ಮಾಹಿತಿಗಾಗಿ *CEG (Government of Karnataka)* 080–25501216/25501227 ಅಥವಾ *www.eproc.karnataka.gov.in* ಮತ್ತು ಕಛೇರಿ ವೇಳೆಯಲ್ಲಿ ಖುದ್ದಾಗಿ *(eepredhadagali@gmail.com)* ಸಂಪರ್ಕಿಸಬಹುದು.

ಸಹಿ/– ಕಾನಿಅ ಪಂರಾಇಂ ವಿಭಾಗ, ಹಡಗಲಿ.

ಡಿಐಪಿಆರ್/ಬಳ್ಳಾರಿ/38/ಎಂಸಿಎ/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು) ರವರ ಕಛೇರಿ, 3ನೇ ಮಹಡಿ, ಹೊಸ ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–560002

ನಂ.: ಕಾಪಾಅ–1(ಕೆರೆಗಳು)/ಟೆಂಡರ್/03/2021–22 ದಿನಾಂಕ: 22.04.2021

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ)

(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು), ಬಿಬಿಎಂಪಿ, ಬೆಂಗಳೂರು ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷ)
1	ಗಂಗಶೆಟ್ಟಿ ಕೆರೆಯ ಅಭಿವೃದ್ಧಿ. (ಕರೆ–3)	400.00

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **23.04.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು ಮುಖ್ಯ ಅಭಿಯಂತರರ ಕಛೇರಿ, ಕೆರೆಗಳು, ಬಿಬಿಎಂಪಿ ಇಲ್ಲಿ **28.04.2021**ರ **ಮಧ್ಯಾಹ್ನ 3:30 ಗಂಟೆಗೆ** ನಡೆಯಲಿದೆ. (3) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **14.05.2021**ರ **ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದ್ದು ಮತ್ತು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್ **https://eproc.karnataka.gov.in**ನಲ್ಲಿ ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು)ರವರ ಕಛೇರಿಯಲ್ಲಿ **15.05.2021**ರ **ಸಂಜೆ 4:30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–1, ಕೆರೆಗಳು, ಬಿಬಿಎಂಪಿ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಜಲ ಸಂಪನ್ಮೂಲ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ, ಜಲಮಾಪನ ವಿಭಾಗ ಸಂ–2, ಬಾಗಲಕೋಟ

ಸಂ:.ಕಾ.ಇಂ: ಜ.ಮಾವಿ–2 :ತಾ.ಶಾ: ಕೊಟೇಷನ್ ಪ್ರಕಟಣೆ/2021–22/82 ದಿನಾಂಕ:–21–04–2021

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ನಿಗದಿತ ನಮೂನೆಯಲ್ಲಿ ರಾಜ್ಯಪಾಲರು ಕರ್ನಾಟಕ ಸರಕಾರದ ಪರವಾಗಿ ಲೆಕ್ಕಶೀರ್ಷಿಕೆ ಎನ್.ಎಚ್.ಪಿ ಅಡಿಯಲ್ಲಿ **Establishing Hydrological Observation sites in Karnataka by Supply, testing, commissioning, operations and maintenance of continuous discharge flow meters , water level recorders , telemetry data transmission and integrate with data center located at Bengaluru, Karnataka** ಕಾಮಗಾರಿ ಟೆಂಡರ ಅನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

ಸದರಿ ಬಿಡ್ಡು ನ್ಯಾಷನಲ್ ಕಾಂಪಿಟೆಟಿವ್ ಬಿಡ್ಡಿಂಗ ನಂತಿದ್ದು. ಇ.ಎಮ್.ಡಿ ಮೊತ್ತದ ಕುರಿತು ಇ–ಪೋರ್ಟಲ್ ನಲ್ಲಿ ತಿಳಿಸಲಾಗಿರುತ್ತದೆ. ಬಿಡ್ಡುದಾರರು ಟೆಂಡರ ಅನ್ನು ಇ–ಪೋರ್ಟಲ್ ಮೂಲಕ ದಿನಾಂಕ: **28–04–2021** ರಿಂದ **07–06–2021** ಸಮಯ **15.00** ರವರೆಗೆ ವೆಬ್‌ಸೈಟ್ **http://eproc.karnataka.gov.in.** ಮೂಲಕ ಪ್ರವೇಶಿಸಬಹುದಾಗಿದೆ. ಟೆಂಡರ ಅನ್ನು ದಿನಾಂಕ: **08–06–2021** ರಂದು ತೆರೆಯಲಾಗುವದು. ಟೆಂಡರನ ಪ್ರೀ ಬಿಡ್ಡ ಸಭೆ ದಿ: **13–05–2021** ರಂದು ಮುಖ್ಯ ಇಂಜಿನೀಯರರ ಕಛೇರಿ ಆನಂದರಾವ ವೃತ್ತ ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಸಹಿಮಾಡಿದ ಕಛೇರಿಗೆ, ಕಾರ್ಯಾವಧಿಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್:– **08354– 297367**

ಸಹಿ/–
(ಶ್ರೀ ಎಸ್.ಜಿ.ಪಾಟೀಲ)
ಕಾರ್ಯನಿರ್ವಾಹಕ ಇಂಜಿನೀಯರರು,
ಜಲ ಮಾಪನ ವಿಭಾಗ ಸಂ.– 2, ಬಾಗಲಕೋಟ.

ವಾಸಾಸಂಇ/ಬಾಗಲಕೋಟ/ಶಿರಡಿ ಸಾಯಿ/41/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ. 5 ಭದ್ರಾ ನಾಲಾ ವಿಭಾಗ ದಾವಣಗೆರೆ.

ಫೋನ್ : 08192–264669, ಇ–ಮೇಲ್ : eebcddvg@yahoo.co.in

ಟೆಂಡರ್ ಪ್ರಕಟಣೆ

ಉಲ್ಲೇಖ : ಸಂ.ಕಾಇಂ/ಕನೀನಿನಿ/ಭನಾವಿ–5:ದಾ/ಸ.ಇಂ–2/4701–ಭ.ಏ.ನೀ.ಯೋ/224/10/2021–22 ದಿನಾಂಕ : 22.04.2021

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ. ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ. ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು. ಉಲ್ಲೇಖಿತ ಟೆಂಡರ್ ಪ್ರಕಟಣೆಗಳಲ್ಲಿ ಲೆಕ್ಕ ಶೀರ್ಷಿಕೆ 4701–ಭ.ಏ.ನೀ.ಯೋ ಅಡಿಯಲ್ಲಿನ ಕಾಮಗಾರಿಗೆ ಏಕ–ಲಕೋಟೆ ಪದ್ಧತಿಯಡಿ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರಿಂದ. ಶೇಕಡಾವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ **https://eproc.karnataka.gov.in** ಮುಖಾಂತರವೇ ದಿನಾಂಕ :**23.04.2021 ರ ಬೆಳಗ್ಗೆ 11.00 ರಿಂದ** ಡೌನಲೋಡ್ ಮಾಡಿಕೊಂಡು ದಿನಾಂಕ : 03.05.2021 ರ ಸಂಜೆ 4.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ ದಿನಾಂಕ : 27.04.2021 ರಂದು ಘಂಟೆವರೆಗೆ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ **: 04.05.2021 ರಂದು ಸಂಜೆ 4.30 ಘಂಟೆಗೆ,** ಒಟ್ಟು ಕಾಮಗಾರಿ ಸಂಖ್ಯೆ :– 1, ಕಾಮಗಾರಿ **ಮೊತ್ತ ರೂ.49.59 ಲಕ್ಷಗಳು** ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– (ಹೆಚ್.ಬಿ.ಮಲ್ಲಪ್ಪ)
ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ ನಂ.5, ಭದ್ರಾ ನಾಲಾ ವಿಭಾಗ
ದಾವಣಗೆರೆ.

ವಾ.ಸಾ.ಸಂ.ಇ./ದಾ/ನಂ.55 ಝೇಂಕಾರ್/2021–22

Government of Karnataka

OFFICE OF THE SUPERINTENDENT, CENTRAL PRISON, VIJAYAPUR

No:CPV/TENDER/2021-22 Dated: 20.04.2021

E-PROCUREMENT NOTICE

As per the Head office Order dated: 22-01-2021 and 08-04-2021 and this office proceeding dated 19-04-2021. The purchases of food articles, vegetables, Misc.articles meat, eggs and Factory articles to Vijayapur Zone jails under following lots for the year 2021-22 to be procured through e-Procurement call-2 & 3 as per the KTPP Act.

Sl.No	Tender No	Lot No	Brief Detail of Tender	EMD Amount	Last Date for Submission
			CALL-2		
1	DP/2020-21/IND1031/ Lot-1/ Call-2 Dated: 20.04.2021	Lot-1	Purchase of Food articles to Vijayapur Zone.	As per E-Portal	As per E-Portal
2	DP/2020-21/IND1032/ Lot-2/ Call-2 Dated: 20.04.2021	Lot-2	Purchase of Food articles to Vijayapur Zone.	As per E-Portal	As per E-Portal
3	DP/2020-21/IND1033/ Lot-3/ Call-2 Dated: 20.04.2021	Lot-3	Purchase of Food articles to Vijayapur Zone.	As per E-Portal	As per E-Portal
4	DP/2020-21/IND1034/ Lot-4/ Call-2 Dated: 20.04.2021	Lot-4	Purchase of Food articles to Vijayapur Zone.	As per E-Portal	As per E-Portal
5	DP/2020-21/IND1035/Lot-5/ Call-2 Dated: 20.04.2021	Lot-5	Purchase of Food articles to Vijayapur Zone.	As per E-Portal	As per E-Portal
6	DP/2020-21/IND1036/ Lot-6/ Call-2 Dated: 20.04.2021	Lot-6	Purchase of Food articles to Vijayapur Zone.	As per E-Portal	As per E-Portal
7	DP/2020-21/IND1037/Lot-7/ Call-2 Dated: 20.04.2021	Lot-7	Purchase of Food articles to Vijayapur Zone.	As per E-Portal	As per E-Portal
			CALL-3		
8	DP/2020-21/IND1038/ Call-3 Dated: 20.04.2021	Lot-8	Purchase of green leaf vegetables to Vijayapur Zone.	As per E-Portal	As per E-Portal
9	DP/2020-21/IND1039/Lot-9/ Call-3Dated: 20.04.2021	Lot-9	Purchase of raw vegetable to Vijayapur Zone.	As per E-Portal	As per E-Portal
10	DP/2020-21/IND1040/ Lot-10/ Call-3Dated: 20.04.2021	Lot-10	Purchase of meat and eggs to Vijayapur Zone.	As per E-Portal	As per E-Portal
11	DP/2020-21/IND1041/Lot-11/ Call-3Dated: 20.04.2021	Lot-11	Purchase of Misc.articles to Vijayapur Zone.	As per E-Portal	As per E-Portal
12	DP/2020-21/IND1042/Lot-12/ Call-3Dated: 20-04-2021	Lot-12	Purchase of factory Raw materials to Vijayapur Zone.	As per E-Portal	As per E-Portal

Suppliers can also take assistance with E-procurement help desk at 08352-272044 for further details Please visit at https://eproc.karnataka.gov.in or helpline number. 9480806487.

ವಾಸಾಸಂಇ/ವಿಜಯಪುರ/42/ಎಂಸಿಎ/2020–21

Sd/- (Dr. I J Myageri), Superintendent, Central Prison, Vijayapur

ಪೊಲೀಸರ ಕ್ರಮಕ್ಕೆ ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ಬೇಸರ

ಹಠಾತ್ ನಿರ್ಬಂಧಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಪೆರಿಕಲ್ ಎಂ. ಸುಂದರ್

ಸಂಪತ್ ರಾಮನ್

ಬೆಂಗಳೂರು: ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ನಗರಗಳಲ್ಲಿ ವ್ಯಾಪಾರ ಮಳಿಗೆಗಳನ್ನು ಪೊಲೀಸರು ಗುರುವಾರ ಹಠಾತ್ ಆಗಿ ಬಂದ್ ಮಾಡಿಸಿದ ಕ್ರಮಕ್ಕೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಕೈಗಾರಿಕಾ ಚಟುವಟಿಕೆಗಳಿಗೆ ಯಾವುದೇ ಅಡ್ಡಿ ಇಲ್ಲ ಎಂದು ಸರ್ಕಾರ ಹೇಳಿದೆ. ಜನರ ಆರೋಗ್ಯದ ಹಿತದೃಷ್ಟಿಯಿಂದ ತೆಗೆದುಕೊಳ್ಳುವ ತೀರ್ಮಾನಗಳಿಗೆ ವಿರೋಧವಿಲ್ಲ. ಆದರೆ, ಪೊಲೀಸರು ಹಠಾತ್ತನೆ ಬಾಗಿಲು ಮುಚ್ಚಿಸಿದ ಕ್ರಮವನ್ನು ಒಪ್ಪಲಾಗದು' ಎಂದು ಸುಂದರ್ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದರು.

ವ್ಯಾಪಾರಸ್ಥರು ತಿಂಗಳ ಅಂತ್ಯದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿವರ ಸಲ್ಲಿಸಬೇಕಿರುತ್ತದೆ. ಕೆಲಸಗಾರರ ಸಂಬಳ ಸೇರಿದಂತೆ ಹಲವು ಪಾವತಿಗಳನ್ನು ಮಾಡಬೇಕಿರುತ್ತದೆ. ಸಾಲದ ಕಂತುಗಳನ್ನು ಕಟ್ಟಬೇಕಿರುತ್ತದೆ. ಹೀಗೆ ಬಂದ್ ಮಾಡಲಾಗುತ್ತದೆ ಎಂಬುದನ್ನು ಮೊದಲೇ ತಿಳಿಸಿದ್ದರೆ ಸೂಕ್ತವಾಗುತ್ತಿತ್ತು. ಕೆಲಸಗಾರರನ್ನು ಅವರ ಊರುಗಳಿಗೆ ಕಳುಹಿಸಲು ಸಾಧ್ಯವಾಗುತ್ತಿತ್ತು ಎಂದು ಸುಂದರ್ ಹೇಳಿದರು.

'ಸಂಬಂಧಪಟ್ಟ ಎಲ್ಲರಿಗೂ ಸೂಚನೆ ನೀಡಿಯೇ ಯಾವುದೇ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ನಮಗೆ ಭರವಸೆ ನೀಡಿದ್ದರು' ಎಂದು ಸುಂದರ್ ಅವರು ನೆನಪಿಸಿಕೊಂಡರು.

ಪೊಲೀಸರ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಉದ್ಯಮಿ, ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಸಂಪತ್ ರಾಮನ್, 'ಕಟ್ಟಡ ನಿರ್ಮಾಣ ಕಾರ್ಯಗಳಿಗೆ ನಿರ್ಬಂಧವಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಆದರೆ ಕಟ್ಟಡ ನಿರ್ಮಾಣಕ್ಕೆ ಜನರೇಟರ್ ಸೆಟ್ ಬಾಡಿಗೆಗೆ ಬೇಕು ಎಂದರೆ, ಅದು ಸಿಗದಂತೆ ಮಾಡಿದೆ' ಎಂದು ಸಮಸ್ಯೆ ವಿವರಿಸಿದರು.

'ತಯಾರಿಕಾ ವಲಯದ ಉದ್ಯಮಗಳು ತಮ್ಮ ಚಟುವಟಿಕೆ ಮುಂದುವರಿಸಬಹುದು ಎಂದು ಹೇಳಲಾಗಿದೆ. ಆದರೆ ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಮಾಡಲು ಇರುವ ಮಾರುಕಟ್ಟೆಗಳನ್ನು ಬಂದ್ ಮಾಡಲಾಗಿದೆ. ಹೀಗೆ ಮಾಡಲಾಗುತ್ತದೆ ಎಂದು ಮುಂಚಿತವಾಗಿಯೇ ತಿಳಿಸಬಹುದಿತ್ತು. ಏಕಾಏಕಿ ಈ ರೀತಿ ಮಾಡಿದ್ದೇಕೆ ಎಂಬುದು ಗೊತ್ತಾಗುತ್ತಿಲ್ಲ' ಎಂದು ಅವರು ಹೇಳಿದರು.

12 ದಿನ ಭಾಗಶಃ ಲಾಕ್‌ಡೌನ್

ಒಂದನೇ ಪುಟದಿಂದ...

ಸರ್ಕಾರ ಲಾಕ್‌ಡೌನ್ ಘೋಷಿಸಿತೇ ಎಂಬ ಅನುಮಾನವೂ ಮೂಡಿತು.

ದಿನಸಿ ಅಂಗಡಿ, ಮೆಡಿಕಲ್ ಸ್ಟೋರ್, ಹೋಟೆಲ್, ಬೇಕರಿ ಸೇರಿದಂತೆ ದಿನಬಳಕೆಯ ವಸ್ತು, ಅವಶ್ಯ ವಸ್ತುಗಳಡಿ ಬರುವ ಅಂಗಡಿಗಳನ್ನು ಬಿಟ್ಟು ಇನ್ನುಳಿದ ಅಂಗಡಿಗಳ ಬಾಗಿಲನ್ನು ಪೊಲೀಸರು ಮುಚ್ಚಿಸಿದರು. ಯಾವುದೇ ಮುನ್ಸೂಚನೆ ನೀಡದೆ ದಿಢೀರ್ ತೆಗೆದುಕೊಂಡ ಕ್ರಮಕ್ಕೆ ತೀವ್ರ ಆಕ್ರೋಶ ವ್ಯಕ್ತವಾಯಿತು.

'ಸರ್ಕಾರದ ಸುತ್ತೋಲೆ, ಕೋವಿಡ್ ಮಾರ್ಗಸೂಚಿ ಅನ್ವಯ ಕೆಲಸ ಮಾಡುತ್ತಿದ್ದೇವೆ. ಅವಶ್ಯಕ ವಸ್ತುಗಳ ಅಂಗಡಿ ಹೊರತುಪಡಿಸಿ ಉಳಿದವುಗಳನ್ನು ಮುಚ್ಚಿಸಲಾಗಿದೆ' ಎಂದು ಮೈಸೂರು ಡಿಸಿಪಿ ಡಾ.ಎ.ಎನ್. ಪ್ರಕಾಶ್‌ಗೌಡ ಪ್ರತಿಕ್ರಿಯಿಸಿದರು. ಹಾಸನದಲ್ಲಿ ಸ್ವತಃ ಜಿಲ್ಲಾಧಿಕಾರಿ ಆರ್. ಗಿರೀಶ್ ರಸ್ತೆಗಿಳಿದು ಅಂಗಡಿಗಳ ಬಾಗಿಲು ಮುಚ್ಚಿಸಿದರು. ಗುರುವಾರ ಬೆಳಿಗ್ಗೆಯಿಂದಲೇ ಪೊಲೀಸರು ಮತ್ತು ನಗರಸಭೆ ಅಧಿಕಾರಿಗಳು ಮಾರುಕಟ್ಟೆ ಪ್ರದೇಶ ಹಾಗೂ ಬಡಾವಣೆಗಳಲ್ಲಿ ಅಂಗಡಿಗಳನ್ನು ದಿಢೀರ್ ಬಂದ್ ಮಾಡಿಸಿದರು. ಇದು ವ್ಯಾಪಾರಿಗಳ ಆಕ್ರೋಶಕ್ಕೆ ಕಾರಣವಾಯಿತು.

ಚಾಮರಾಜನಗರ ಜಿಲ್ಲೆಯಾದ್ಯಂತ ಪೊಲೀಸರು ಜವಳಿ, ಆಭರಣ, ಗಿರವಿ ಎಲೆಕ್ಟ್ರಾನಿಕ್ಸ್, ಮೊಬೈಲ್, ಪಾದರಕ್ಷೆಗಳ ಅಂಗಡಿಗಳನ್ನು ಮುಚ್ಚಿಸಿದರು. ರಾಯಚೂರು, ಬೀದರ್, ಕಲಬುರ್ಗಿ ಮಂಡ್ಯ ಜಿಲ್ಲೆಯಲ್ಲಿಯೂ ಅಗತ್ಯ ವಸ್ತುಗಳ ಅಂಗಡಿಗಳಿಗೆ ಮಾತ್ರ ಪೊಲೀಸರು ಅವಕಾಶ ನೀಡಿದರು. ಚಿಕ್ಕಬಳ್ಳಾಪುರ ನಗರದಲ್ಲಿ ಕಾರ್ಯಾಚರಣೆಗಿಳಿದಿರುವ ಪೊಲೀಸರು, ನಗರಸಭೆ ಮಾರ್ಷಲ್‌ಗಳು ಚಿನ್ನ–ಬೆಳ್ಳಿ ಅಂಗಡಿ, ಬಟ್ಟೆ ಅಂಗಡಿ, ಟೀ ಅಂಗಡಿಗಳನ್ನು ಬಂದ್ ಮಾಡಿಸಿದರು. ಏಕಾಏಕಿ ಬಂದ್ ಮಾಡಿಸಿದ್ದರಿಂದಾಗಿ ಜಿಲ್ಲಾಡಳಿತದ ಸಿಬ್ಬಂದಿ ಮತ್ತು ವ್ಯಾಪಾರಸ್ಥರ ಮಧ್ಯೆ ಕೆಲವು ಕಡೆ ವಾಗ್ವಾದವೂ ನಡೆಯಿತು.

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ

49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1

ತಿದ್ದುಪಡಿ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ: ಕೆಟಿಐಎಲ್/ಟೆಂಡರ್‌ನೇಮಕಾತಿ–01/02/2021–22, ದಿನಾಂಕ: 21.04.2021ಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದ ಟೆಂಡರ್ ದಿನಾಂಕಗಳನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ.

ಪರಿಷ್ಕೃತ ಟೆಂಡರ್ ದಿನಾಂಕಗಳು: (1) ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ತಾಂತ್ರಿಕ 05ನೇ ಮೇ 2021, 16.00 ಗಂಟೆಯವರೆಗೆ ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ 06ನೇ ಮೇ 2021, 17.00 ಗಂಟೆಗೆ ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ 10ನೇ ಮೇ 2021, 14.00 ಗಂಟೆಗೆ. ಉಳಿದಂತೆ ಟೆಂಡರ್ ಪ್ರಕಟಣೆಯ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು
ಟೆಂಡರ್‌ಆಹ್ವಾನ ಪ್ರಾಧಿಕಾರಿ, ಕೆಟಿಐಎಲ್

DIPR/DDU/YC/247/2021-22

ವಾಹನಗಳಿಗೆ ಗುದ್ದಿದ ರೈಲು: ಐವರು ಸಾವು

ಶಹಜಹಾನ್‌ಪುರ (ಉತ್ತರಪ್ರದೇಶ) (ಪಿಟಿಐ): ಗೇಟುಗಳು ತೆರೆದೇ ಇದ್ದ ಲೆವೆಲ್‌ಕ್ರಾಸಿಂಗ್ ಒಂದರಲ್ಲಿ ರೈಲೊಂದು ಹಲವು ವಾಹನಗಳಿಗೆ ಡಿಕ್ಕಿ ಹೊಡೆದುದರಿಂದ ಕನಿಷ್ಠ ಐವರು ಮೃತಪಟ್ಟ ಘಟನೆ ಮೀರನ್‌ಪುರ ಕಟ್ರಾ ರೈಲು ನಿಲ್ದಾಣದ ಸಮೀಪ ಗುರುವಾರ ಬೆಳಿಗ್ಗೆ ಸಂಭವಿಸಿದೆ.

'ಲಖನೌ-ಚಂಡೀಗಢ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಎರಡು ಟ್ರಕ್‌ಗಳು, ಒಂದು ಕಾರು ಮತ್ತು ಬೈಕೊಂದಕ್ಕೆ ಡಿಕ್ಕಿ ಹೊಡೆಯಿತು. ಬಳಿಕ ಅದರ ಎಂಜಿನ್ ಹಳಿ ತಪ್ಪಿತು. ಇದರಿಂದ ರೈಲು ಮಾರ್ಗದ ಎರಡೂ ದಿಕ್ಕುಗಳಲ್ಲಿ ರೈಲುಗಳ ಸಂಚಾರಕ್ಕೆ ಅಡ್ಡಿ ಉಂಟಾಗಿದೆ' ಎಂದು ಗ್ರಾಮಾಂತರ ವಿಭಾಗದ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂಜೀವ್ ಬಾಜಪೇಯಿ ತಿಳಿಸಿದರು.

'ಮೃತರಲ್ಲಿ ಮೂವರು ಒಂದೇ ಕುಟುಂಬಕ್ಕೆ ಸೇರಿದವರು. ಒಬ್ಬರು ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಪರಿಹಾರಕಾರ್ಯ ಮುಂದುವರಿದಿದೆ' ಎಂದು ಬಾಜಪೇಯಿ ಹೇಳಿದ್ದಾರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಕ.ನೀ.ನಿ.ನಿ., ಗುಣ ನಿಯಂತ್ರಣ ವಿಭಾಗ ಮುನಿರಾಬಾದ್.

ಸಂ:ಕಾನಿಅ:ಕ.ನೀ.ನಿ.ನಿ:ಗು.ನಿ.ವಿ:ಮುನಿಬಾ:ಟೆಂಡರ್:2021–22:38 ದಿನಾಂಕ:16.04.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮೂಲಕ)

2021–22ನೇ ಸಾಲಿಗೆ ಮಾನವ ಸಂಪನ್ಮೂಲ ಒದಗಿಸುವ 1 ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿ ವಿವರಗಳನ್ನು ದಿನಾಂಕ: 16.04.2021 ರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಸ್ವೀಕೃತಿ ಕೊನೆಯ ದಿನಾಂಕ: 27.04.2021 ರಂದು ಸಂಜೆ 4.30 ಗಂಟೆವರೆಗೆ. ಟೆಂಡರ್‌ಗಿಟ್ಟ ಮೊತ್ತ ರೂ. 18.36 ಲಕ್ಷಗಳು ಇನ್ನಿತರ ಹೆಚ್ಚಿನ ಮಾಹಿತಿಯನ್ನು http://www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಹಾಗೂ ಕಛೇರಿ ವೇಳೆಯಲ್ಲಿ ಮೇಲಿನ ವಿಳಾಸದಲ್ಲಿ ದೂರವಾಣಿ ಮೂಲಕ ಪಡೆಯಬಹುದು. ದೂರವಾಣಿ ಸಂ: 08539–270610.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ. ಗುಣ ನಿಯಂತ್ರಣ ವಿಭಾಗ, ಮುನಿರಾಬಾದ್.

ಡಿಐಪಿಆರ್/ಕೊಪ್ಪಳ/27/ಎಂಸಿಎ/2021–22

SBI ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಆರ್‌ಇಹೆಚ್‌ಬಿಯು ವಿಭಾಗ, ಸ್ಥಳೀಯ ಕೇಂದ್ರ ಕಛೇರಿ, 1ನೇ ಮಹಡಿ, ನಂ.65, ಸೇಂಟ್ ಮಾರ್ಕ್ಸ್ ರಸ್ತೆ, ಬೆಂಗಳೂರು – 560 001

ಇ–ಮೇಲ್: reh2.lhoban@sbi.co.in ದೂರವಾಣಿ: 080–25943325

ಬ್ಯಾಂಕ್ ದಾಖಲೆಗಳ ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣಕ್ಕಾಗಿ ಹೊರಗುತ್ತಿಗೆ ಏಜೆಂಟ್‌ಗಳ ಪಟ್ಟಿಗೆ ಸೇರ್ಪಡೆ

ಬೆಂಗಳೂರು ವೃತ್ತಕ್ಕಾಗಿ ಬ್ಯಾಂಕ್ ದಾಖಲೆಗಳ ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣಕ್ಕಾಗಿ ಹೊರಗುತ್ತಿಗೆ ಏಜೆಂಟ್‌ಗಳಾಗಿ ಪಟ್ಟಿಗೆ ಸೇರ್ಪಡೆ ಮಾಡಲು ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ವಿವರಗಳಿಗಾಗಿ, ಬ್ಯಾಂಕ್‌ನ ವೆಬ್‌ಸೈಟ್ **www.sbi.co.in**ನ "SBI in the News – Procurement News / Auction Notices" ಗೆ ಲಾಗ್‌ಆನ್ ಮಾಡಿ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 05–05–2021.

ಸ್ಥಳ : ಬೆಂಗಳೂರು
ದಿನಾಂಕ : 20–04–2021

ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆರ್‌ಇಹೆಚ್‌ಬಿಯು)

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬ್ಯಾಡಗಿ

ಕ್ರಮ ಸಂಖ್ಯೆ:ಕೃಮಾಇ/ಕೃಉಮಾಸ(ಬ್ಯಾ)/ನಿಯವಿ/2021–22/99 ದಿನಾಂಕ:22–04–2021

ಪ್ರಕಟಣೆ

ಈ ಮೂಲಕ ರೈತ ಬಾಂಧವರಿಗೆ, ಪೇಟೆಕಾರ್ಯಕರ್ತರಿಗೆ ಹಾಗೂ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕೊರೋನಾ (ಕೋವಿಡ್–19) ವೈರಸ್‌ನ 2ನೇ ಅಲೆ ವ್ಯಾಪಕವಾಗಿ ಹರಡುತ್ತಿರುವುದರಿಂದ ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಮಾರುಕಟ್ಟೆಗೆ ಬರುವ ಸಮಸ್ತ ರೈತಬಾಂಧವರ, ಎಲ್ಲ ಪೇಟೆಕಾರ್ಯಕರ್ತರ, ಎಲ್ಲ ಕಾರ್ಮಿಕರ ಮತ್ತು ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಬ್ಯಾಡಗಿಯ ವರ್ತಕರ ಸಂಘದಿಂದ ಬ್ಯಾಡಗಿ ಮಾರುಕಟ್ಟೆ ಪ್ರಾಂಗಣದಲ್ಲಿ ಜರುಗುವ ಒಣಮೆಣಸಿನಕಾಯಿಯ ಟೆಂಡರ್‌ನ್ನು **ದಿನಾಂಕ: 22–04–2021** ರಿಂದ ಅನಿರ್ದಿಷ್ಟಾವಧಿಯವರೆಗೆ ಸ್ಥಗಿತಗೊಳಿಸುವುದಾಗಿ ತಿಳಿಸಿರುತ್ತಾರೆ. ಆದುದರಿಂದ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಬ್ಯಾಡಗಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಜರುಗುವ ಒಣಮೆಣಸಿನಕಾಯಿಯ ಇ-ಟೆಂಡರ್‌ನ್ನು **ದಿನಾಂಕ: 23–04–2021 ರಿಂದ 04–05–2021** ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ನಂತರದ ದಿನಗಳಲ್ಲಿ ಸರ್ಕಾರವು ನೀಡುವ ನಿರ್ದೇಶನಗಳಂತೆ ಕ್ರಮ ಜರುಗಿಸಲಾಗುವುದು. ಯಾವತ್ತೂ ರೈತಬಾಂಧವರು, ಪೇಟೆಕಾರ್ಯಕರ್ತರು ಹಾಗೂ ಕಾರ್ಮಿಕರು ಸಹಕರಿಸಬೇಕೆಂದು ಕೋರಿದೆ.

ಸಹಿ/– ಕಾರ್ಯದರ್ಶಿ(ಪ್ರ) ಕೃ.ಉ.ಮಾ.ಸ.ಬ್ಯಾಡಗಿ

ಸಹಿ/– ಅಧ್ಯಕ್ಷರು ಕೃ.ಉ.ಮಾ.ಸ.ಬ್ಯಾಡಗಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ

ಸಂ: ಟೆಂಡರ್ ಅಧಿಸೂಚನೆ/ನಬಾರ್ಡ್–24(ಶೇವಣಿವಂತಿಗೆ/ಅಧಿಸೂಚನೆ/2021–22/78 ದಿನಾಂಕ: 16.04.2021

ಇ–ಟೆಂಡರ್ ಅಧಿಸೂಚನೆ IFT-KW-4

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ದತಿಯಲ್ಲಿ)(ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿದೆ.

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 30.04.2021 (16.00 ಗಂಟೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 03.05.2021 (16.00 ಗಂಟೆವರೆಗೆ). (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.05.2021 (16.30 ಗಂಟೆವರೆಗೆ). (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 06.05.2021 (16.00 ಗಂಟೆವರೆಗೆ).

ಕಾಮಗಾರಿ ವಿವರ: (1) ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಸಿದ್ದಾಪುರ–ಹೊಸೂರು ತೋಟಗಾರಿಕೆ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ. (137127) ಅಂದಾಜು ಮೊತ್ತ ರೂ. 200.00 ಲಕ್ಷ. ಟೆಂಡರಿಗಿಟ್ಟ ಮೊತ್ತ ರೂ. 174.09 ಲಕ್ಷ ಮುಂಗಡ ಠೇವಣಿ (ರೂ.ಗಳಲ್ಲಿ) ಆಇ675 ವೆಚ್ಚ–12/2020, ಬೆಂಗಳೂರು, ದಿನಾಂಕ 22.12.2020 ಟೆಂಡರ್ ನಿರ್ವಹಣೆ ಶುಲ್ಕ (ರೂ.ಗಳಲ್ಲಿ) www.epoc.knataka.gov.in ವೆಬ್‌ಸೈಟ್ ನೋಡಿ. ಕಾಮಗಾರಿ ಪೂರ್ಣಗೊಳಿಸುವ ಅವಧಿ : 11 ತಿಂಗಳು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ
ಲೋಕೋಪಯೋಗಿ ಇಲಾಖೆ, ವಿಭಾಗ ಶಿರಸಿ (ಉತ್ತರ ಕನ್ನಡ ಜಿಲ್ಲೆ)

DIPR/ADK/MCA/58/21-22 dt.22.4.2021

ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಮೈಸೂರು

ಅರಣ್ಯ ಭವನ, ಅಶೋಕಪುರಂ, ಮೈಸೂರು–8

ದೂ. ಮತ್ತು ಫ್ಯಾ: 0821-2484606 Email: dcfsfmys@yahoo.com

ಕ್ರಸಂ:ಬಿ1/ಬಿಯುಡಿ/ಹೊ.ಗು.ಇ.ಟೆಂಡರ್/ಸಿಆರ್.2/2021–22

ದಿನಾಂಕ: 19.4.2021

ಇ–ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೈಸೂರು ಸಾಮಾಜಿಕ ಅರಣ್ಯ ವಿಭಾಗ ಹಾಗೂ ವಿಭಾಗ ವ್ಯಾಪ್ತಿಯ ವಲಯಗಳಲ್ಲಿ 2406–00–101–0–26– ಸಾಮಾಜಿಕ ಅರಣ್ಯ– 034 ಗುತ್ತಿಗೆ /ಹೊರಗುತ್ತಿಗೆ ಲೆಕ್ಕ ಶೀರ್ಷಿಕೆಯಡಿ ಮಾನವ ಸಂಪನ್ಮೂಲ ಸೇವೆಯನ್ನು ದಿನಾಂಕ: 01.4.2021 ರಿಂದ 31.03.2022 ರವರೆಗೆ (12 ತಿಂಗಳ ಅವಧಿಗೆ) ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಮೈಸೂರುರವರ ಕಛೇರಿ, ಹಾಗೂ ಮೈಸೂರು ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಗೊಳಪಡುವ ಮೈಸೂರು / ನಂಜನಗೂಡು / ಟಿ.ನರಸಿಪುರ /ಪಿರಿಯಾಪಟ್ಟಣ / ಹುಣಸೂರು / ಹೆಚ್.ಡಿ.ಕೋಟೆ ಹಾಗೂ ಕೆ.ಆರ್.ನಗರ ವಲಯ ಅರಣ್ಯಾಧಿಕಾರಿಗಳ ಕಛೇರಿಗಳು ಸೇರಿದಂತೆ 11 ಮಂದಿ ಗಣಕಯಂತ್ರ ನಿರ್ವಾಹಕರು (ಡಾಟ ಎಂಟ್ರಿ ಆಪರೇಟರ್) 2 ಮಂದಿ ವಾಹನ ಚಾಲಕರು, 7 ಮಂದಿ ಕಛೇರಿ ಕಾವಲುಗಾರ (ಕಛೇರಿ ಸೇವಕ) 3 ಮಂದಿ ಲಿಪಿಕ ಸಹಾಯಕರು ಸೇರಿದಂತೆ ಒಟ್ಟಾರೆ 23 ಮಂದಿ ನೌಕರರನ್ನು ಹೊರಸಂಪನ್ಮೂಲ ಗುತ್ತಿಗೆದಾರರು / ಸಂಸ್ಥೆಯವರಿಂದ ಪಡೆಯಲು ಅರ್ಹಗುತ್ತಿಗೆದಾರರು / ಸಂಸ್ಥೆಯಿಂದ ನಿಬಂಧನೆಗಳನ್ನೊಳಗೊಂಡಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ಸ್ವೀಕರಿಸಲು ಮೊದಲನೇ ದಿನಾಂಕ: 18.05.2021ರ ಸಂಜೆ 4.00 ಘಂಟೆಯವರೆಗೆ ಕಡೆಯ ದಿನಾಂಕವಾಗಿರುತ್ತದೆ. ಸದರಿ ಇ–ಟೆಂಡರನ್ನು ದಿನಾಂಕ: 19.05.2021 ರಂದು ಅಪರಾಹ್ನ 4.15 ಘಂಟೆಗೆ ತೆರೆಯಲಾಗುವುದು. ಮೇಲ್ಕಂಡ ದಿನದಂದು ಸದರಿ ಇ–ಟೆಂಡರ್‌ನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಮೇಲ್ಕಂಡ ಕಾಮಗಾರಿಗಳಿಗೆ ಎರಡನೇ ಬಾರಿಗೆ ಇ–ಟೆಂಡರ್ ಸ್ವೀಕರಿಸಲು ದಿನಾಂಕ: 29.5.2021ರ ಸಂಜೆ 4.00 ಘಂಟೆಯವರೆಗೆ ಕಡೆಯ ದಿನಾಂಕವಾಗಿರುತ್ತದೆ. ಸದರಿ ಟೆಂಡರನ್ನು ದಿನಾಂಕ: 31.5.2021 ರಂದು ಅಪರಾಹ್ನ 11.00 ಘಂಟೆಗೆ ತೆರೆಯಲಾಗುವುದು. **ಮರು ಟೆಂಡರ್ ಸಂಬಂಧ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಇತರೆ ಹೆಚ್ಚಿನ ಮಾಹಿತಿಗಳನ್ನು** https://www.eproc.karnataka.gov.in **ವೆಬ್‌ಸೈಟ್‌ನಲ್ಲಿ ಹಾಗೂ ಸದರಿ ಕಛೇರಿಯಿಂದ ಕರ್ತವ್ಯ ದಿನಗಳಂದು ಕೆಲಸದ ಅವಧಿಯಲ್ಲಿ ಪಡೆಯಬಹುದು.**

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ, ಮೈಸೂರು.

DIPR/DDMYS/MCA/74/2020-21

ಕರ್ನಾಟಕ ಸರ್ಕಾರ

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಎಸ್.ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು–70.

ಸಂ:ಅಭಿ(6)ಉಖಾಯೋ/ಅ.ಇ.ತಾಂ.ಸ/01/2020–21 ದಿನಾಂಕ : 21.04.2021

ತಾಂತ್ರಿಕ ಸಹಾಯಕರು ಹುದ್ದೆಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಪ್ರಕಟಣೆ

ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಪತ್ರ ಸಂ:RDC-EGS/50/2021(E-442252) ದಿನಾಂಕ:04.03.2021ರವರ ಪತ್ರದಲ್ಲಿ ಸೂಚಿಸಿರುವಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಈ ಕೆಳಕಂಡ ಹುದ್ದೆಗಳಿಗೆ 11 ತಿಂಗಳ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ತಾಂತ್ರಿಕ ಸಹಾಯಕರನ್ನು (ಅರಣ್ಯ / ತೋಟಗಾರಿಕೆ) ನೇಮಕ ಮಾಡಿಕೊಳ್ಳಲು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ನೇಮಕಾತಿ ಅರ್ಜಿ ನಮೂನೆಗಳನ್ನು ಜಿಲ್ಲಾ ಪಂಚಾಯಿತಿ ಕಾರ್ಯಾಲಯದ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಶಾಖೆಯಿಂದ ನೇರವಾಗಿ ಪಡೆದುಕೊಳ್ಳುವುದು.
2. ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ:15–05–2021ರ ಸಂಜೆ 5.30ಗಂಟೆಯೊಳಗೆ ಖುದ್ದಾಗಿ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಟಪಾಲು ಶಾಖೆಗೆ ಸಲ್ಲಿಸುವುದು. ಮಹಾತ್ಮ ಗಾಂಧಿ ನರೇಗಾ ಯೋಜನೆಯ ತಾಂತ್ರಿಕ ಸಹಾಯಕರ ಹುದ್ದೆಗಳಿಗೆ ಈ ಕೆಳಗಿನಂತೆ ವಿದ್ಯಾರ್ಹತೆ, ವಯೋಮಿತಿ ಮತ್ತು ಮಾಸಿಕ ಸಂಭಾವನೆಯನ್ನು ನಿಗಧಿಪಡಿಸಲಾಗಿದೆ.

ಕ್ರ. ಸಂ	ಹುದ್ದೆಯ ಹೆಸರು ಮತ್ತು ಸಂಖ್ಯೆ	ಕನಿಷ್ಠ ವಿದ್ಯಾರ್ಹತೆ	ಅಪೇಕ್ಷಣಿಯ	ವಯೋಮಿತಿ	ಮಾಸಿಕ ಸಂಭಾವನೆ
1	ತಾಂತ್ರಿಕ ಸಹಾಯಕರು (ಅರಣ್ಯ)–01	BSc (Forestry)	MSc (Forestry) ಮತ್ತು ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಅನುಭವ	21–40 ವರ್ಷ	ರೂ.24,000/– (ಪ್ರಯಾಣ ಭತ್ಯೆ ಪ್ರತಿ ಕಿ.ಮೀಗೆ 5 ರೂ.ನಂತೆ ಗರಿಷ್ಠ ಮಾಸಿಕ ರೂ 1,500/–)
2	ತಾಂತ್ರಿಕ ಸಹಾಯಕರು (ತೋಟಗಾರಿಕೆ) –01	BSc (Horti-culture)	MSc Horticulture) ಮತ್ತು ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಅನುಭವ	21–40 ವರ್ಷ	ರೂ.24,000/– (ಪ್ರಯಾಣ ಭತ್ಯೆ ಪ್ರತಿ ಕಿ.ಮೀಗೆ 5.ರೂ.ನಂತೆ ಗರಿಷ್ಠ ಮಾಸಿಕ ರೂ 1,500/–)

ಅರ್ಜಿ ಸಲ್ಲಿಸುವ ವಿಳಾಸ :– ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಬನಶಂಕರಿ ದೇವಸ್ಥಾನದ ಹತ್ತಿರ, ಎಸ್.ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು–70.

ಸಹಿ/–
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ,
ಬೆಂಗಳೂರು

ವಾಸಾಸಂಇ/ಉನಿಕ/ಬೆಂ.ನ/207/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಐಶಾನಿ ಶೆಟ್ಟಿ ಕಟ್ಟಿದ್ದಾರೆ ಗೆಜ್ಜೆಪಟ್ಟಿ!

ಐಶಾನಿ ಶೆಟ್ಟಿ

'ವಾಸ್ತು ಪ್ರಕಾರ' ಚಂದನವನಕ್ಕೆ ಕಾಲಿಟ್ಟ ಐಶಾನಿ ಶೆಟ್ಟಿ, ಇದೀಗ 'ಹೊಂದಿಸಿ ಬರೆಯಿರಿ' ಎನ್ನುತ್ತಿದ್ದಾರೆ. ಜೊತೆಗೆ 'ಧರಣಿ ಮಂಡಲ ಮಧ್ಯದೊಳಗೆ' ಐಶಾನಿ ಪ್ರವೇಶಿಸಿದ್ದು, ಹಿಂದೆ ಕಾಣಿಸಿಕೊಳ್ಳದಂತಹ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಇದೆಲ್ಲದರ ಕುರಿತು 'ಸಿನಿಮಾ ಪುರವಣಿ' ಜೊತೆ ಅವರು ಮಾತಿಗಿಳಿದರು...

ಅಭಿಲಾಷ್ ಪಿ.ಎಸ್.

• 'ಗಣಿ B.Com ಪಾಸ್' ಆದ ಮೇಲೆ ಬ್ರೇಕ್ ತೆಗೆದುಕೊಂಡ್ರಾ?

ಹಾಗೇನಿಲ್ಲ! ಈ ಚಿತ್ರದ ಬಳಿಕ 'ಹೊಂದಿಸಿ ಬರೆಯಿರಿ' ಹಾಗೂ 'ಧರಣಿ ಮಂಡಲ ಮಧ್ಯದೊಳಗೆ' ಚಿತ್ರದ ಚಿತ್ರೀಕರಣದಲ್ಲಿ ನಾನು ತೊಡಗಿಸಿಕೊಂಡಿದ್ದೆ. ಕೋವಿಡ್ ಬಂದ ಕಾರಣ, ಎಲ್ಲ ಚಿತ್ರಗಳ ಶೂಟಿಂಗ್ ನಿಂತಿತ್ತು. 2020 ಸೆಪ್ಟೆಂಬರ್‌ನಿಂದ ಮತ್ತೆ ಈ ಚಿತ್ರಗಳ ಚಿತ್ರೀಕರಣ ಆರಂಭವಾಯಿತು. 'ಹೊಂದಿಸಿ ಬರೆಯಿರಿ' ಶೂಟಿಂಗ್ ಮುಗಿದಿದ್ದು, ಇದರ ಡಬ್ಬಿಂಗ್ ನಡೆಯುತ್ತಿದೆ. ಇನ್ನೊಂದು ವಾರದಲ್ಲಿ ಇದು ಪೂರ್ಣಗೊಳ್ಳಲಿದೆ. ಮತ್ತೊಂದು ಚಿತ್ರದ ಚಿತ್ರೀಕರಣ ಸದ್ಯ ನಡೆಯುತ್ತಿದೆ.

• ಮತ್ತೆ ಮಿನಿ ಲಾಕ್‌ಡೌನ್ ಬಂದಿದೆ? ಕಳೆದ ಲಾಕ್‌ಡೌನ್ ಏನ್ಮಾಡಿದ್ರಿ?

ಮೊದಲ ಲಾಕ್‌ಡೌನ್ ಹೊಸದಾಗಿತ್ತು. ಎಲ್ಲ ಚಿತ್ರದ ಚಿತ್ರೀಕರಣ ನಿಂತಿತ್ತು. ಬಹುತೇಕ ಜನರು ಇಂಟರ್‌ನೆಟ್‌ನಲ್ಲಿ ಟ್ರೆಂಡ್ ಆಗಿರುವುದನ್ನು ತಾವೂ ಮಾಡಿದರು. ಈ ಬಾರಿ ನಾವೆಲ್ಲರೂ ಕೆಲಸದಲ್ಲೇ ತಲ್ಲೀನರಾಗಿದ್ದೇವೆ. ಪರಿಸ್ಥಿತಿಗೆ ಹೇಗೆ ಹೊಂದಿಕೊಂಡು ಹೋಗಬೇಕು ಎನ್ನುವುದನ್ನು ಕಲಿತಿದ್ದೇವೆ. ಇದೀಗ ನಾನು ಭರತನಾಟ್ಯ ಹಾಗೂ Jazz ಹೀಗೆ ಎರಡು ಮಾದರಿಯ ನೃತ್ಯ ಕಲಿಯುತ್ತಿದ್ದೇನೆ. ಈ ಕಲಿಕೆ ಸಿನಿಮಾಗಾಗಿಯೂ ಹೌದು ಮತ್ತು ನನ್ನ ವೈಯಕ್ತಿಕ ಆಸಕ್ತಿಯಿಂದಲೂ ಹೌದು.

• 'ಧರಣಿ ಮಂಡಲ ಮಧ್ಯದೊಳಗೆ' ಐಶಾನಿ ಹೇಗೆ ವಿಭಿನ್ನವಾಗಿ ಕಾಣಿಸಿಕೊಂಡಿದ್ದಾರೆ?

ಚಿತ್ರದಲ್ಲಿ ನನ್ನದು 'ಶ್ರೇಯ' ಎನ್ನುವ ಅಸಾಂಪ್ರದಾಯಿಕ ಹುಡುಗಿಯ ಪಾತ್ರ. ಚಿತ್ರದ ಕ್ಯಾರೆಕ್ಟರ್ ಲುಕ್ ಪೋಸ್ಟರ್‌ನಲ್ಲಿ ಉಲ್ಲೇಖಿಸಿರುವಂತೆ 'She's a wild one... Just let her be', ಆಕೆ ತುಂಬಾ ಬೋಲ್ಡ್ ಹುಡುಗಿ. ಯಾರನ್ನೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಧೈರ್ಯ ಹೆಚ್ಚು. ತನಗೆ ಹೇಗೆ ಬೇಕೋ ಹಾಗೆ ಇರುತ್ತಾಳೆ. ಸಣ್ಣ ವಯಸ್ಸಿನಲ್ಲಿ ನಡೆದ ಘಟನೆ ಕಾರಣ ಅವಳು ಕೆಟ್ಟ ಚಟಗಳ ವ್ಯಸನಿಯಾಗಿರುತ್ತಾಳೆ. ಈ ಚಿತ್ರ ಕ್ರೈಂ ಡ್ರಾಮಾ. ನವೀನ್ ಶಂಕರ್ ಅವರು ಈ ಚಿತ್ರದ ನಾಯಕ. ಪ್ರೇಮಕಥೆ ಜೊತೆ, ನಡೆಯುವ ಘಟನೆಯೊಂದರೊಳಗೆ ಆಕೆ ಹೇಗೆ ಸಿಲುಕಿಕೊಳ್ಳುತ್ತಾಳೆ ಎನ್ನುವುದು ಚಿತ್ರದ ಸಾರಾಂಶ. ಈ ಹಿಂದಿನ ಎಲ್ಲ ಸಿನಿಮಾಗಳನ್ನೂ ನಟನೆಗೆ ಪ್ರಾಮುಖ್ಯತೆ ಇತ್ತು. ಈ ಸಿನಿಮಾದಲ್ಲಿ ತುಂಬಾ ವಿಭಿನ್ನವಾಗಿ ಕಾಣಿಸಿಕೊಳ್ಳುತ್ತೇನೆ. ಈ ಹಿಂದೆ ಐಶಾನಿಯನ್ನು ಜನರು ಹೀಗೆ ನೋಡಿಲ್ಲ. ನಿರ್ದೇಶಕರಾದ ಶ್ರೀಧರ್ ಶಿಕಾರಿಪುರ ಅವರು ನನಗೇ ಎಂದು ಕಥೆ ಬರೆದಿದ್ದಾರೆ. ನಾನು ಈ ಪಾತ್ರವನ್ನು ಮಾಡಬಲ್ಲೆ ಎನ್ನುವ ನಂಬಿಕೆ ಅವರಲ್ಲಿ ಇತ್ತು. ಈ ಚಿತ್ರವು ನನಗೆ ಬೇರೆ ರೀತಿ ಸವಾಲಾಗಿತ್ತು.

• 'ಹೊಂದಿಸಿ ಬರೆಯಿರಿ' ಯಾವಾಗ ತೆರೆಗೆ?

ಇದು ಪ್ರೇಮಕಥೆ ಮತ್ತು ನಾಲ್ಕೈದು ಸ್ನೇಹಿತರ ನಡುವೆ ನಡೆಯುವ ಕಥೆ. ಎಲ್ಲರೂ ಎಂಜಿನಿಯರಿಂಗ್ ವಿದ್ಯಾರ್ಥಿಗಳು. ಓದುವುದರಲ್ಲಿ ತುಂಬಾ ಆಸಕ್ತಿ ಇರುವ, ವಿಜ್ಞಾನಿಯಾಗುವ ಕನಸು ಕಾಣುತ್ತಿರುವ ಹುಡುಗಿಯ ಪಾತ್ರ ನನ್ನದು. ಶಿಕ್ಷಣದ ಮುಂದಿನ ಜೀವನ ಸಿನಿಮಾದಲ್ಲಿದೆ. ಎಲ್ಲರೂ ಮೂರು ಲುಕ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದೇವೆ. ಮೇ–ಜೂನ್‌ಗೆ ಸಿನಿಮಾ ಬಿಡುಗಡೆ ಮಾಡುವ ಚಿಂತನೆ ಇತ್ತು. ಇದೀಗ ಮತ್ತೆ ಚಿತ್ರಮಂದಿರಗಳು ಮುಚ್ಚಿರುವುದರಿಂದ ಏನಾಗುತ್ತದೆಯೋ ತಿಳಿದಿಲ್ಲ. ಎಲ್ಲರೂ ಕಷ್ಟಪಟ್ಟು ಸಿನಿಮಾ ಮಾಡಿರುತ್ತಾರೆ. ಇದಕ್ಕೆ ಸೂಕ್ತ ಪ್ರತಿಫಲ ದೊರೆಯಬೇಕು.

• ಕರಾವಳಿ ನಿಮ್ಮ ಮೂಲ. ತುಳು ಭಾಷೆಯ ಸಿನಿಮಾಗಳಲ್ಲಿ ಇನ್ನೂ ಕಾಣಿಸಿಕೊಂಡಿಲ್ಲವಲ್ಲ ಏಕೆ?

ನಾನು ಬೆಳೆದಿದ್ದು ಬೆಂಗಳೂರಿನಲ್ಲಿ. ಅಜ್ಜಿ ಮನೆ ಮಂಗಳೂರು ಕಡೆ. ನನಗೆ ತುಳು ಭಾಷೆ ಚೆನ್ನಾಗಿ ಬರುತ್ತದೆ. ಊರಿನ ಕಡೆ ರಜೆ ಇದ್ದಾಗ ಹೋಗುತ್ತೇನೆ. ತುಳು ಭಾಷೆ ಸಿನಿಮಾ ಕಡೆ ನಾನು ಗಮನಹರಿಸಿಲ್ಲ. ಚಂದನವನದಲ್ಲೇ ನನಗೆ ಒಂದು ಸ್ಥಾನವಿದೆ ಹಾಗೂ ಹೆಚ್ಚಿನ ಅವಕಾಶಗಳು ದೊರೆಯುತ್ತಿವೆ.

• ಮುಂದಿನ ಪ್ರೊಜೆಕ್ಟ್‌ಗಳು ಯಾವುದು?

ಒಂದೆರಡು ಸಿನಿಮಾಗಳ ಮಾತುಕತೆ ನಡೆಯುತ್ತಿದೆ. ಒಂದು ಸ್ಕ್ರಿಪ್ಟ್ ಬರೆಯುತ್ತಿದ್ದೇನೆ. ಇದು ಪೂರ್ಣಗೊಳ್ಳಲು ಒಂದು ವರ್ಷ, ಎರಡು ವರ್ಷ ಹಿಡಿಯಬಹುದು. ಆದರೆ, ನನ್ನ ಮೊದಲ ಆಯ್ಕೆ ನಟನೆ. ಸಮಯವಿದ್ದರಷ್ಟೇ ನಿರ್ದೇಶನ ಮಾಡುತ್ತೇನೆ. ಬೇರೆ ಭಾಷೆಗಳಿಂದಲೂ ಆಫರ್ ಬಂದಿದೆ. ಆದರೆ ನನಗೆ ಕಥೆ, ತಂಡ ಇಷ್ಟವಾದರೆ ಮಾತ್ರ ಬೇರೆ ಭಾಷೆಗಳಲ್ಲೂ ನಟಿಸುತ್ತೇನೆ. ❖

ಗಿಣಿರಾಮನ ತಂಗಿ

ರೇಷ್ಮಾ

ಬಾಲ್ಯದಿಂದಲೂ ನಟನೆಯ ಕನಸು ಹೊತ್ತು ಸಾಗಿದ್ದ ಬಾಗಲಕೋಟೆಯ ಹುಡುಗಿಗೆ ಅವಕಾಶ ಅರಸಿ ಬಂದಿತ್ತು. ಬಂದ ಅವಕಾಶವನ್ನು ತ್ಯಜಿಸದ ಆಕೆ ಇಂದು ಕರ್ನಾಟಕದ ತಂಗಿಯಾಗಿದ್ದಾಳೆ. ಮೊದಲ ಧಾರಾವಾಹಿಯಲ್ಲೇ 'ಬೆಸ್ಟ್ ಸಿಸ್ಟರ್' ಪ್ರಶಸ್ತಿ ಪಡೆದಿರುವ ಈ ಹುಡುಗಿ ಕಲರ್ಸ್ ಕನ್ನಡ ವಾಹಿನಿಯ 'ಗಿಣಿರಾಮ' ಧಾರಾವಾಹಿಯ ನಾಯಕನ ತಂಗಿ ಸೀಮಾ. ಈಕೆಯ ನಿಜನಾಮಧೇಯ ಕಾವೇರಿ.

ಈಕೆ ಶಾಲಾ ದಿನಗಳಲ್ಲಿ ಪ್ರತಿಭಾ ಕಾರಂಜಿಯಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ನಟನೆಯ ಆಸೆಗೆ ನೀರೆರೆದು ಪೋಷಿಸಿದವರು. ಬಿ.ಕಾಂ. ಮುಗಿಸಿದ್ದ ಇವರಿಗೆ ಗಿಣಿರಾಮ ಧಾರಾವಾಹಿಯಲ್ಲಿನ ಆಡಿಷನ್ ಬಗ್ಗೆ ತಿಳಿಯಿತು. ಆಡಿಷನ್ ನೀಡಿ ಆಯ್ಕೆಯಾದ ಕಾವೇರಿ ಈಗ ಸೀಮಾಳಾಗಿಯೇ ಮನೆಮಾತು. ಈಕೆ ತಮ್ಮ ಕಿರುತೆರೆ ಪಯಣದ ಕುರಿತು 'ಸಿನಿಮಾ ಪುರವಣಿ' ಜೊತೆ ಮಾತನಾಡಿದ್ದಾರೆ.

ಗಿಣಿರಾಮ ಧಾರಾವಾಹಿ ಹಾಗೂ ಪಾತ್ರದ ಬಗ್ಗೆ

ಇದು ಉತ್ತರ ಕರ್ನಾಟಕ ಭಾಷಾ ಸೊಗಡಿನ ಧಾರಾವಾಹಿ. ನಾನು ಆ ಕಡೆಯವಳಾದ ಕಾರಣ ನನಗೆ ಭಾಷೆಯ ಸಮಸ್ಯೆ ಕಾಡಿರಲಿಲ್ಲ. ಧಾರಾವಾಹಿಯಲ್ಲಿ ನನ್ನದು ಸೀಮಾ ಎಂಬ ಮುಗ್ಧ ಕಾಲೇಜು ಹುಡುಗಿಯ ಪಾತ್ರ. ಅಣ್ಣನನ್ನು ಅತಿಯಾಗಿ ಪ್ರೀತಿಸುವ, ಅತ್ತಿಗೆಯನ್ನು ಸ್ನೇಹಿತೆಯಂತೆ ನೋಡುವ ಅಪ್ಪನ ಮುದ್ದಿನ ಮಗಳು ಸೀಮಾ.

ಪಾತ್ರ ತಂದುಕೊಟ್ಟ ಯಶಸ್ಸು

ಸೀಮಾ ಪಾತ್ರ ನನ್ನ ನಟನಾ ಬದುಕಿನ ಅಡಿಪಾಯ. ಇದರಿಂದಲೇ ನಾನು ಇಷ್ಟರಮಟ್ಟಿಗೆ ಖ್ಯಾತಿ ಗಳಿಸಲು ಸಾಧ್ಯವಾಗಿದ್ದು. ಧಾರಾವಾಹಿ ಆರಂಭವಾಗಿ ನಾಲ್ಕೇ ತಿಂಗಳಲ್ಲಿ ನನಗೆ ಪ್ರಶಸ್ತಿ ಕೂಡ ಸಿಕ್ಕಿತ್ತು. ನನ್ನ ವೈಯಕ್ತಿಕ ಜೀವನಕ್ಕೂ ಪಾತ್ರಕ್ಕೂ ಸಾಮ್ಯತೆ ಇರುವ ಕಾರಣ ಇನ್ನಷ್ಟು ಚೆನ್ನಾಗಿ ಪಾತ್ರಕ್ಕೆ ಜೀವ ತುಂಬಲು ಸಾಧ್ಯವಾಗಿತ್ತು. ಒಟ್ಟಾರೆ ಈ ಪಾತ್ರದ ಬಗ್ಗೆ ತುಂಬಾನೇ ಖುಷಿ ಇದೆ.

ಪರಭಾಷೆಯಿಂದಲೂ ಅವಕಾಶ

ನನಗೆ ತೆಲುಗು ಕಿರುತೆರೆ ಕ್ಷೇತ್ರದಿಂದಲೂ ಅವಕಾಶ ಬಂದಿದೆ. ಆದರೆ ಸದ್ಯ ಕನ್ನಡದಲ್ಲೇ ನೆಲೆ ನಿಲ್ಲಬೇಕು ಎಂಬ ಆಶಯವಿದೆ. ಹಳ್ಳಿ ಹುಡುಗಿ ಪಾತ್ರದಲ್ಲಿ ನಟಿಸುವ ಆಸೆ ಇದೆ. ಸಿನಿಮಾಗಳಲ್ಲಿ ಅವಕಾಶ ಸಿಕ್ಕರೆ ಖಂಡಿತ ನಟಿಸುತ್ತೇನೆ.

ಜನರ ಪ್ರೀತಿಗೆ ಅಭಾರಿ

ಸೀಮಾ ಪಾತ್ರದಲ್ಲಿ ನಟಿಸಲು ಆರಂಭಿಸಿದ ಮೇಲೆ ಜನರು ನನ್ನನ್ನು ಎಲ್ಲಿ ನೋಡಿದರೂ 'ನೀವು ಸೀಮಾ ಅಲ್ವಾ? ತುಂಬಾ ಚೆನ್ನಾಗಿ ನಟಿಸ್ತೀರಿ, ನಮಗೆ ನಿಮ್ಮ ನಟನೆ ತುಂಬಾ ಇಷ್ಟವಾಗುತ್ತದೆ' ಎನ್ನುತ್ತಾರೆ. ಎಲ್ಲೋ ಬಾಗಲಕೋಟೆಯ ಹಳ್ಳಿ ಹುಡುಗಿ ಇಷ್ಟರ ಮಟ್ಟಿಗೆ ಹೆಸರು ಮಾಡುವಂತೆ ಮಾಡಿದ್ದು ಈ ಪಾತ್ರ ಹಾಗೂ ಜನರು. ಹಾಗಾಗಿ ಜನರಿಗೆ ನಾನು ಅಭಾರಿ.

ಧಾರಾವಾಹಿ ತಂಡದ ಸಹಕಾರ

ನಾನು ನಟಿಸಲು ಹೋಗುತ್ತೇನೆ ಎಂದಾಗ ಮನೆಯಲ್ಲಿ ನಮ್ಮ ತಾಯಿ ಹಾಗೂ ಅಕ್ಕ ತುಂಬಾನೇ ಸಹಕಾರ ನೀಡಿದ್ದರು. ಈಗ ಧಾರಾವಾಹಿ ತಂಡವೂ ನನಗೆ ಎರಡನೇ ಮನೆಯಂತಾಗಿದೆ. ತಂಡದವರೂ ನನಗೆ ನಟನೆ ಕಲಿಸುತ್ತಾರೆ. ನನ್ನಳೊಗಿನ ನಟಿಯನ್ನು ಹೊರ ತರುವಲ್ಲಿ ನಮ್ಮ ನಿರ್ದೇಶಕರ ಪಾತ್ರವೂ ಹೆಚ್ಚಿದೆ. ಒಟ್ಟಾರೆ ಎಲ್ಲರ ಸಹಕಾರದಿಂದ ನಾನು ಇಂದು ನಟಿಯಾಗಿದ್ದೇನೆ. ❖

ಕೋವಿಡ್ ಜಾಗೃತಿಗೆ ಮೊಳಗಿದ ಸಿನಿ ದನಿ

ಶರತ್ ಹೆಗ್ಡೆ

ಕೊರೊನಾ ಸೋಂಕು ಹರಡದಂತೆ ಜಾಗೃತಿಯಲ್ಲಿ ತೊಡಗಿದ್ದಾರೆ ಚಂದನವನದ ತಾರೆಯರು. ಸದ್ಯ ಕರ್ಫ್ಯೂ, ಕಠಿಣ ನಿಯಮಗಳ ಕಾರಣ ಚಿತ್ರೋದ್ಯಮದ ಚಟುವಟಿಕೆಗಳೂ ಬಹುತೇಕ ಮಂದಗತಿಗೆ ಸರಿದಿವೆ. ಈ ನಡುವೆ ಚಿತ್ರರಂಗದ ಕೆಲವರೂ ಕೋವಿಡ್‌ಗೆ ಬಲಿಯಾಗಿದ್ದಾರೆ. ನಿರ್ಮಾಪಕ ಡಾ.ಡಿ. ಎಸ್. ಮಂಜುನಾಥ್, ಪೋಸ್ಟರ್ ವಿನ್ಯಾಸಕ ಮಸ್ತಾನ್ ಅವರನ್ನು ಕೊರೊನಾ ಬಲಿ ಪಡೆದಿದ್ದೂ ಆಗಿದೆ.

ನಟಿ ಅನು ಪ್ರಭಾಕರ್, ಸಮೀರಾ ರೆಡ್ಡಿ, ಸಂಜನಾ ಗಲ್ರಾನಿ, ನಟ–ರಾಜಕಾರಣಿ ನಿಖಿಲ್ ಕುಮಾರಸ್ವಾಮಿ ಅವರಿಗೆ ಸೋಂಕು ತಗುಲಿದೆ. ಮೇಘನಾ ಚಿರಂಜೀವಿ ಸರ್ಜಾ ಅವರು ಕೋವಿಡ್ ಸೋಂಕಿತರೊಬ್ಬರ ಸಂಪರ್ಕಕ್ಕೆ ಬಂದು ಕೆಲಕಾಲ ಆತಂಕ ಎದುರಿಸಿದ್ದೂ ಆಯಿತು. ನಟ, ಸಂಗೀತ ನಿರ್ದೇಶಕ ಸಾಧು ಕೋಕಿಲ ಅವರ ಅಣ್ಣನ ಮಗನಿಗೆ ಸೋಂಕು ತಗುಲಿತ್ತು. 'ಅವರಿಗೆ ಆಕ್ಸಿಜನ್ ವ್ಯವಸ್ಥೆ ಮಾಡಲು ಕಷ್ಟಪಡಬೇಕಾಯಿತು. ಹಾಗಾಗಿ ಯಾರೂ ಸೋಂಕಿನ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಬೇಡಿ' ಎಂದು ಸಾಧು ಮನವಿ ಮಾಡಿದರು.

ನಟಿಯರಾದ ಅನು, ಸಮೀರಾ, ಮೇಘನಾ ಅವರು ಜಾಲತಾಣಗಳಲ್ಲಿ ಕಾಣಿಸಿಕೊಂಡು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಕೆಲಸಕ್ಕೆ ಮುಂದಾಗಿದ್ದಾರೆ. ಕೆಲವು ಕಂಪನಿಗಳೂ ಕೂಡಾ ನಟನಟಿಯರ ಮೂಲಕ ಕೋವಿಡ್ ಜಾಗೃತಿ ಸಂದೇಶಗಳನ್ನು ಪ್ರಾಯೋಜಿಸಿ ಪ್ರಸಾರ ಮಾಡುತ್ತಿವೆ.

ಒಂದೆಡೆ ಕೋವಿಡ್ ಜಾಗೃತಿ ಮೂಡಿಸಿದಂತೆಯೂ ಆಯಿತು. ತಾವು ಜನರನ್ನು ತಲುಪಿದಂತೆಯೂ ಆಯಿತು ಎಂಬುದು ಸಿನಿಗಣ್ಯರ ಲೆಕ್ಕಾಚಾರ.

ನಟ ರಮೇಶ್ ಅರವಿಂದ್ ಅವರು ಬಿಬಿಎಂಪಿ ವತಿಯಿಂದ ಕೊರೊನಾ ಜಾಗೃತಿ ಮೂಡಿಸುವ ರಾಯಭಾರಿಯಾಗಿಯೂ ಕಾಣಿಸಿಕೊಂಡಿದ್ದು ಹಳೆಯ ಸುದ್ದಿ. ಈಗ ಅವರು ಟ್ವಿಟರ್, ಇನ್‌ಸ್ಟಾಗ್ರಾಂನಲ್ಲಿ ಸಕ್ರಿಯರಾಗಿದ್ದು, ನ'ಮಾಸ್ಕಾ'ರಂ ಎಂದು ಹೇಳುತ್ತಾ ಮಾಸ್ಕ್ ಧರಿಸುವ ವಿಡಿಯೊವನ್ನು ಇನ್‌ಸ್ಟಾಗ್ರಾಂನಲ್ಲಿ ಹರಿಯಬಿಟ್ಟು ಜಾಗೃತಿ ಮೂಡಿಸಿದರು.

ಈ ನಡುವೆ ನಟ ಉಪೇಂದ್ರ ಅವರು ಸರ್ಕಾರದ ವಿರುದ್ಧ ಸ್ವಲ್ಪ ಗರಂ ಆಗಿದ್ದೂ ನಡೆಯಿತು. 'ಲಗಾಮ್' ಚಿತ್ರದ ಸಂದರ್ಭದಲ್ಲಿ ಉಪೇಂದ್ರ, 'ರಾಜಕಾರಣಿಗಳೇ ನಮ್ಮನ್ನು ಗೊಂದಲಕ್ಕೆ ತಳ್ಳುತ್ತಿದ್ದಾರೆ. ರಾಜಕಾರಣಿಗಳು ಸಭೆ, ಸಮಾರಂಭ ನಡೆಸುತ್ತಾರೆ. ಅಲ್ಲಿ ಲಕ್ಷಾಂತರ ಜನರು ಇರುತ್ತಾರೆ. ಇದನ್ನು ಟಿವಿಯಲ್ಲಿ ನೋಡಿ, ಜನರು ಗೊಂದಲಕ್ಕೆ ಈಡಾಗುತ್ತಿದ್ದಾರೆ. ನಾಯಕರು ಮೊದಲು ಜನರಿಗೆ ಮಾದರಿಯಾಗಬೇಕು' ಎಂದು ಕಿಡಿಕಾರಿದರು.

'ಸೋಂಕಿಗೆ ತುತ್ತಾದವರು ಮನಸ್ಸು ಗಟ್ಟಿಯಾಗಿಟ್ಟುಕೊಳ್ಳಿ. ಮನಸ್ಸಿಗೆ ಮೊದಲು ಕಾಯಿಲೆ ಬರುತ್ತದೆ, ನಂತರ ದೇಹಕ್ಕೆ. ಜನರು ಧೈರ್ಯವಾಗಿರಬೇಕು. ಹೀಗೆಂದ ಮಾತ್ರಕ್ಕೆ ಎಲ್ಲೆಂದರಲ್ಲಿ ಓಡಾಡಬೇಡಿ. ಮಾಸ್ಕ್ ಹಾಕಿಕೊಳ್ಳಿ, ಪರಸ್ಪರ ಅಂತರ ಕಾಪಾಡಿಕೊಳ್ಳಬೇಕು' ಎಂಬ ಕಿವಿಮಾತನ್ನೂ ಉಪೇಂದ್ರ ಹೇಳಿದರು.

ಹೀಗೆ ಸಿನಿಕ್ಷೇತ್ರದ ಪ್ರಮುಖರು ಸ್ಕ್ರಿಪ್ಟ್‌ನ ಆಚೆ ನಿಜ ಬದುಕಿನ ಕತೆಗೆ ಧ್ವನಿಯಾಗಿದ್ದಾರೆ ಎನ್ನುತ್ತಿದ್ದಾರೆ ಚಿತ್ರಾಭಿಮಾನಿಗಳು. ❖

ಬೆಳ್ಳಿ ತೆರೆ ಮೇಲೆ 'ನಾಯಿ ಇದೆ ಎಚ್ಚರಿಕೆ'

'ನಾಯಿ ಇದೆ ಎಚ್ಚರಿಕೆ' ಹೀಗೆಂದು ಮನೆಯ ಮುಂದಿರುವ ಫಲಕ ಬೆಳ್ಳಿ ತೆರೆ ಮೇಲೆ ಕಾಣಿಸಿಕೊಳ್ಳಲಿದೆ.

'ವೈರಸ್ ಸಂಬಂಧಿತ ಕಥಾ ಹಂದರ ಇರುವ ಹಾಸ್ಯ ಪ್ರಧಾನ ಚಿತ್ರ ಇದು. ಇದರಲ್ಲಿ ಜರ್ಮನ್ ಷೆಫರ್ಡ್ ನಾಯಿಯದ್ದೇ ಪ್ರಮುಖ ಪಾತ್ರ. ಕಂದು, ಕಪ್ಪು ಮಿಶ್ರ ಬಣ್ಣದ ನಾಯಿ ರೂಬಿಯೇ ಚಿತ್ರದ ಕಥಾನಾಯಕ' ಎನ್ನುತ್ತಾರೆ ನಿರ್ಮಾಪಕ ಪ್ರಬಿಕ್ ಮೊಗವೀರ್. ಅವರ ಪ್ರಕಾರ ಕನ್ನಡದಲ್ಲಿ ಇದು ಮೊದಲ ಪ್ರಯೋಗವಂತೆ.

'ಶ್ವಾನಪ್ರಿಯರಾದ ಸ್ವಾಮಿ ಎಂಬುವವರ ಬಳಿ ನಾಯಿಯನ್ನು ತೆಗೆದುಕೊಳ್ಳಲಾಗಿದೆ. ಅದರ ನಟನೆಯನ್ನು ನೀವು ಪರದೆಯ ಮೇಲೆ ನೋಡಿದರೆ ಬೆರಗಾಗುತ್ತೀರಿ' ಎನ್ನುತ್ತಾರೆ ಪ್ರಬಿಕ್. ರೂಬಿಯ ಚಿತ್ರವುಳ್ಳ ಪೋಸ್ಟರ್ ಈಗಾಗಲೇ ವೈರಲ್ ಆಗಿದೆ.

ಜಿ.ಎಸ್.ಕಲಿಗೌಡ ಅವರು ಈ ಚಿತ್ರದ ನಿರ್ದೇಶಕರು. ಕ್ರಿಸ್ಟೋಫರ್ ಅವರ ಸಂಗೀತ, ಶ್ಯಾಮ್ ಸಿಂಧನೂರು ಅವರ ಛಾಯಾಗ್ರಹಣ, ಧನು ಕೃಷ್ಣ ಸಂಕಲನ ಈ ಚಿತ್ರಕ್ಕಿದೆ. ❖

ಹರಿಪ್ರಿಯಾ

ಉಪೇಂದ್ರ

'ಲಗಾಮ್' ಹಿಡಿದ ಉಪ್ಪಿ ಜತೆ ಹರಿಪ್ರಿಯಾ

ರಿಯಲ್ ಸ್ಟಾರ್ ಉಪೇಂದ್ರ ಹಾಗೂ ನಟಿ ಹರಿಪ್ರಿಯಾ ಮುಖ್ಯಭೂಮಿಕೆಯಲ್ಲಿ ಕಾಣಿಸಿಕೊಳ್ಳಲಿರುವ 'ಲಗಾಮ್' ಚಿತ್ರದ ಚಿತ್ರೀಕರಣ ಇದೇ 26ರಿಂದ ಆರಂಭವಾಗಲಿದೆ.

ಚಿತ್ರದ ಮುಹೂರ್ತ ಸೋಮವಾರ ಕಂಠೀರವ ಸ್ಟುಡಿಯೋದಲ್ಲಿ ನಡೆದಿದ್ದು, ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಕ್ಲ್ಯಾಪ್ ಮಾಡಿದರು. ಮಾಸ್ಕ್ ಧರಿಸಿ, ಪರಸ್ಪರ ಅಂತರ ಕಾಪಾಡಿಕೊಳ್ಳಿ ಎಂದು ನಟ ಉಪೇಂದ್ರ ಸಂದೇಶ ನೀಡುವ ದೃಶ್ಯದ ಮುಖಾಂತರವೇ ಚಿತ್ರದ ಚಿತ್ರೀಕರಣ ಆರಂಭವಾಯಿತು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಿರ್ದೇಶಕ, ಕೆ.ಮಾದೇಶ್, 'ಏಪ್ರಿಲ್ 26ರಿಂದ ಚಿತ್ರೀಕರಣ ಆರಂಭಿಸಲಿದ್ದೇವೆ. ಚಿತ್ರೀಕರಣಕ್ಕೆ ನಿರ್ಬಂಧ ಬಂದರೆ, ಅದನ್ನು ಗೌರವಿಸಿ ಮೇ 30ರ ನಂತರ ಚಿತ್ರೀಕರಣ ಆರಂಭಿಸುತ್ತೇವೆ. ಇದೊಂದು ಪಕ್ಕಾ ಕಮರ್ಷಿಯಲ್ ಸಿನಿಮಾ. ಕೋವಿಡ್ ಸಮಯದಲ್ಲೇ ಆಗುವ ಚಿತ್ರವಿದು' ಎಂದು ಮಾಹಿತಿ ನೀಡಿದರು.

ನಟ ಉಪೇಂದ್ರ ಮಾತನಾಡಿ, 'ಸುಮಾರು ಒಂದೂವರೆ ವರ್ಷದ ಬಳಿಕ ಇಂತಹ ಮುಹೂರ್ತ ಕಾರ್ಯಕ್ರಮ ನಡೆಯುತ್ತಿದೆ. ಒಳ್ಳೆಯ ತಂತ್ರಜ್ಞರು, ಕಲಾವಿದರು ಇರುವ ಪಕ್ಕಾ ಎಂಟರ್‌ಟೈನ್‌ಮೆಂಟ್ ಚಿತ್ರ ಇದು. ಇದು ಕನ್ನಡದ ಲಗಾನ್ ಆಗಲಿ ಎಂದು ಆಶಿಸುತ್ತೇನೆ. ಚಿತ್ರದಲ್ಲಿ ನನ್ನದು ಮೂರು ಲುಕ್ ಇದೆ. ಇನ್ನೊಂದು ವಾರದಲ್ಲಿ ಇದು ಅಂತಿಮವಾಗಲಿದೆ. 'ಕಬ್ಜ' ಒಂದು ಪೀರಿಯಡ್ ಸಬ್ಜೆಕ್ಟ್ ಇಟ್ಟುಕೊಂಡು ಮಾಡಿದ ಸಿನಿಮಾ. 'ಲಗಾಮ್' ಈಗ ನಡೆಯುವ ವಿಷಯ. ಕಬ್ಜ ಚಿತ್ರೀಕರಣದ ನಡುವೆಯೇ ಇದರ ಚಿತ್ರೀಕರಣವೂ ನಡೆಯಲಿದೆ. ಕಬ್ಜ ಚಿತ್ರಕ್ಕೆ ಪ್ರತಿಯೊಂದು ಘಟನೆಗೂ ಸೆಟ್ ಹಾಕಬೇಕು, ಇದಕ್ಕೆ ಸಮಯ ಹಿಡಿಯುತ್ತದೆ. ಎಲ್ಲೆಂದರಲ್ಲಿ ಇದರ ಚಿತ್ರೀಕರಣ ಆಗಲ್ಲ. ಇದರ ನಡುವೆ ಸಿಗುವ ಸಮಯದಲ್ಲಿ ಲಗಾಮ್ ಚಿತ್ರೀಕರಣ ಮಾಡುತ್ತೇವೆ' ಎಂದರು.

ಇದೇ ಮೊದಲ ಬಾರಿಗೆ ಉಪೇಂದ್ರ ಅವರ ಜೊತೆ ಸಿನಿಮಾದಲ್ಲಿ ನಟಿಸುತ್ತಿರುವ ಹರಿಪ್ರಿಯಾ, 'ಈ ಹಿಂದೆ ರೆಟ್ರೊ, ಪೌರಾಣಿಕ ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದೆ. ಈ ಚಿತ್ರದಲ್ಲಿ ಈಗಿರುವ ಯುವತಿಯರಂತೆ ಕಾಣಿಸಿಕೊಳ್ಳಲಿದ್ದೇನೆ. ಉಪೇಂದ್ರ ಅವರ ಜೊತೆ ನಟಿಸುವ ಅವಕಾಶ ದೊರೆತಿರುವುದು ಬಹಳ ಸಂತೋಷ' ಎಂದರು. ❖

ಚಿತ್ರಕಲಾವಿದೆಯಾದ್ರು ಪ್ರಿಯಾಂಕ!

'ದಿಯಾ' ಖ್ಯಾತಿಯ ಪೃಥ್ವಿ ಅಂಬರ್ ನಾಯಕರಾಗಿ ನಟಿಸಿರುವ 'ಲೈಫ್ ಈಸ್ ಬ್ಯೂಟಿಫುಲ್' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಈ ಸಿನಿಮಾದಲ್ಲಿ ಚಿತ್ರಕಲಾವಿದೆಯಾಗಿ ವಿಶೇಷ ಪಾತ್ರದಲ್ಲಿ ಪ್ರಿಯಾಂಕ ಉಪೇಂದ್ರ ನಟಿಸಿದ್ದಾರೆ.

ಆಂಗ್ಲೋ ಇಂಡಿಯನ್ ಆಗಿ ಕ್ಯಾರೋಲಿನ್ ಹೆಸರಿನ ಈ ಪಾತ್ರಕ್ಕೆ ಪ್ರಿಯಾಂಕ ಅವರು ಬಣ್ಣ ಹಚ್ಚಿದ್ದು, ಒಟ್ಟು ನಲವತ್ತು ದಿನಗಳ ಕಾಲ ಬೆಂಗಳೂರು ಹಾಗೂ ಸುತ್ತಮುತ್ತ ಚಿತ್ರೀಕರಣ ನಡೆದಿದೆ. 'ಮಮ್ಮಿ' ಸಿನಿಮಾ ಖ್ಯಾತಿಯ ಲೋಹಿತ್ ಮೇಲ್ವಿಚಾರಣೆ ವಹಿಸಿಕೊಂಡಿದ್ದು, ನಿರ್ದೇಶನದ ಹೊಣೆಯನ್ನು ಅರುಣ್‌ಕುಮಾರ್ ಹಾಗೂ ಸಾಬುಅಲೋಶಿಯಸ್ ಜಂಟಿಯಾಗಿ ನಿರ್ವಹಿಸಿದ್ದಾರೆ.

ಲಾಸ್ಯ ನಾಗರಾಜ್ ಈ ಚಿತ್ರದ ನಾಯಕಿ. ಉಳಿದಂತೆ ಸಿದ್ಲಿಂಗು ಶ್ರೀಧರ್, ಪದ್ಮ ಶಿವಮೊಗ್ಗ, ಮಾಂತೇಶ್ ಮುಂತಾದವರು ನಟಿಸಿದ್ದಾರೆ. ಸಿನಿಮಾಕ್ಕೆ ಕಿಶೋರ್ ನರಸಿಂಹಯ್ಯ ಮತ್ತು ಬಿ.ಜಿ.ಅರುಣ್ ಬಂಡವಾಳ ಹೂಡಿದ್ದಾರೆ. ಫ್ರೈಡೆ ಫಿಲಿಂಸ್ ಮತ್ತು ಸಿಲ್ವರ್ ಟ್ರೈನ್ ಇಂಟರ್‌ನ್ಯಾಷನಲ್ ಸಹಯೋಗದಲ್ಲಿ ನಿರ್ಮಾಣಗೊಂಡಿರುವ ಈ ಚಿತ್ರ ಶೀಘ್ರದಲ್ಲೇ ತೆರೆಗೆ ಬರಲಿದೆ. ❖



ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವ ಆರೋಪ: ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

‘ರೆಮ್‌ಡಿಸಿವಿರ್ ಮಾಹಿತಿ ನಿತ್ಯ ಪ್ರಕಟಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಔಷಧ ಅಂಗಡಿಗಳಲ್ಲಿ ಲಭ್ಯವಿರುವ ರೆಮ್‌ಡಿಸಿವಿರ್ ಪ್ರಮಾಣ ಮತ್ತು ಸಂಪರ್ಕ ಸಂಖ್ಯೆಗಳನ್ನು ಪ್ರತಿನಿತ್ಯ ಪ್ರಕಟಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ರೆಮ್‌ಡಿಸಿವಿರ್ ಔಷಧ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ ಎಂದು ಆರೋಪಿಸಿ ಅಸೋಸಿಯೇಷನ್ ಆಫ್ ಮ್ಯಾನೇಜ್ಮೆಂಟ್ ಆಫ್ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಸಂಸ್ಥೆಗಳ ಅಧ್ಯಕ್ಷ ಎಸ್.ಶಿವಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದಕುಮಾರ್ ಅವರನ್ನು ಒಳಗೊಂಡ ವಿಶೇಷ ನ್ಯಾಯಪೀಠ ಈ ಆದೇಶ ನೀಡಿತು.

ಕಾಳಸಂತೆಯಲ್ಲಿ ರೆಮ್‌ಡಿಸಿವಿರ್ ಮಾರಾಟ ಮತ್ತು ಪೂರೈಕೆ ಕೊರತೆ ಮೇಲ್ವಿಚಾರಣೆ ಮಾಡಲು ಔಷಧ ಸಗಟು ವ್ಯಾಪಾರ ಸ್ಥಳಗಳಿಗೆ ಆಗಾಗ ಭೇಟಿ ನೀಡಿ ಪರಿಶೀಲನೆ ನಡೆಸಲು ಅಧಿಕಾರಿಗಳು ಮತ್ತು ಎನ್‌ಜಿಒಗಳನ್ನು ಒಳಗೊಂಡ ಸಮಿತಿ ನೇಮಿಸುವಂತೆ ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿತು.

‘ಔಷಧ ಅಂಗಡಿಗಳಲ್ಲಿ ರೆಮ್‌ಡಿಸಿವಿರ್ ಔಷಧ ಎಷ್ಟಿದೆ ಎಂಬುದನ್ನು ಪ್ರತಿ 12 ಗಂಟೆಗೊಮ್ಮೆ ಪ್ರಚಾರ ನೀಡಬೇಕು. ಈ ಔಷಧಿ ದೊರೆಯುವ ಅಂಗಡಿಗಳ ವಿಳಾಸ, ಸಂಪರ್ಕ ಸಂಖ್ಯೆಯನ್ನೂ ಒದಗಿಸಬೇಕು’ ಎಂದು ಪೀಠ ತಿಳಿಸಿತು.

‘ಕೋವಿಡ್ ಹೊರತಾದ ರೋಗಿಗಳು ಆಸ್ಪತ್ರೆಗೆ ದಾಖಲಾಗಲು ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಕೇಳಲಾಗುತ್ತಿದೆ. ಆದ್ದರಿಂದ ಗರ್ಭಿಣಿ ಸ್ತ್ರೀಯರು, ಹಿರಿಯ ನಾಗರಿಕರು ವರದಿ ಪಡೆಯಲು ಪ್ರಯೋಗಾಲಯಗಳ ಮುಂದೆ ಸಾಲುಗಟ್ಟಿ ನಿಲ್ಲುವಂತಾಗಿದೆ. ಕೋವಿಡ್ ಲಕ್ಷಣ ಇಲ್ಲದವರು ಬೇರೆ ಕಾರಣಕ್ಕೆ ಆಸ್ಪತ್ರೆಗೆ ದಾಖಲಾಗಲು ಆರ್‌ಟಿಪಿಸಿಆರ್ ನೆಗೆಟಿವ್ ವರದಿ ನೀಡಲು ಒತ್ತಾಯಿಸದಂತೆ ನೀತಿ ರೂಪಿಸಬೇಕು’ ಎಂದು ಪೀಠ ನಿರ್ದೇಶನ ನೀಡಿತು.

‘ತಾಂತ್ರಿಕ ಸಲಹಾ ಸಮಿತಿ ಮತ್ತು ತಜ್ಞರ ಪ್ರಕಾರ ಮೇ ಮೊದಲ ಮತ್ತು ಎರಡನೇ ವಾರದಲ್ಲಿ ಕೋವಿಡ್ ಎರಡನೇ ಅಲೆ ಉತ್ತುಂಗಕ್ಕೆ ಏರುವ ಸಾಧ್ಯತೆ ಇದೆ. ಹಾಸಿಗೆ, ಆಮ್ಲಜನಕ ಲಭ್ಯತೆಯ ಬಗ್ಗೆ ಮೌಲ್ಯಮಾಪನ ಅಗತ್ಯವಿದೆ’ ಎಂದು ಅರ್ಜಿದಾರ ಸಂಸ್ಥೆ ಎಐಸಿಸಿಟಿಯು ಹೇಳಿತು.

‘ಎಐಸಿಸಿಟಿಯು ನೀಡಿರುವ ಅಂಕಿ–ಅಂಶ ಸರಿಯಾಗಿದ್ದರೆ, ಪರಿಸ್ಥಿತಿ ಆತಂಕಕಾರಿಯಾಗಿದೆ. ಇದರ ಆಧಾರದಲ್ಲಿ ಅಡ್ವೊಕೇಟ್ ಜನರಲ್ ಅವರು ಶುಕ್ರವಾರ ವರದಿ ಸಲ್ಲಿಸಬೇಕು’ ಎಂದು ಪೀಠ ತಿಳಿಸಿತು.

ದೂರು ಸ್ವೀಕರಿಸುವ ವ್ಯವಸ್ಥೆ ರೂಪಿಸಲು ನಿರ್ದೇಶನ

ಮಾಸ್ಕ್ ಧರಿಸುವುದು, ಅಂತರ ಕಾಪಾಡುವುದು ಸೇರಿ ಕೋವಿಡ್ ನಿಯಮಗಳ ಉಲ್ಲಂಘನೆ ಬಗ್ಗೆ ನಾಗರಿಕರಿಂದ ದೂರುಗಳನ್ನು ಸ್ವೀಕರಿಸಲು ಮೂರು ದಿನಗಳಲ್ಲಿ ವ್ಯವಸ್ಥೆ ರೂಪಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

‘ಇ-ಮೇಲ್ ಮತ್ತು ವಾಟ್ಸ್‌ಆ್ಯಪ್ ಮೂಲಕವೂ ದೂರುಗಳನ್ನು ಸಲ್ಲಿಸಲು ಅವಕಾಶ ಆಗುವಂತೆ ಕಾರ್ಯವಿಧಾನ ರೂಪಿಸಬೇಕು’ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ತಿಳಿಸಿತು.

‘ಅಹವಾಲು ಸ್ವೀಕರಿಸುವ ವ್ಯವಸ್ಥೆ ಇದ್ದರೆ ನಾಗರಿಕರ ದೂರುಗಳನ್ನು ರಾಜ್ಯ ಮಟ್ಟದ ಸಮಿತಿ ಮತ್ತು ಬೆಂಗಳೂರು ನಗರ ಸಮಿತಿ ಕೂಡಲೇ ಪರಿಶೀಲಿಸಬಹುದು. ದೂರು ನೀಡಲು ಕಾರ್ಯವಿಧಾನ ರೂಪಿಸಿ ಮಾಧ್ಯಮಗಳಲ್ಲಿ ಹೆಚ್ಚಿನ ಪ್ರಚಾರ ನೀಡಬೇಕು. ಬಿಬಿಎಂಪಿ ಸೇರಿ ಸ್ಥಳೀಯ ಕಚೇರಿಗಳಲ್ಲಿ ಈ ಮಾಹಿತಿ ಪ್ರಕಟಿಸಬೇಕು’ ಎಂದು ಹೇಳಿತು.

ಕೋವಿಡ್ ಹರಡದಂತೆ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಪೊಲೀಸ್ ಮಹಾನಿರ್ದೇಶಕರು ಹೊರಡಿಸಿದ್ದ ಸುತ್ತೋಲೆಯನ್ನು ರಾಜ್ಯ ಸರ್ಕಾರ ಪೀಠಕ್ಕೆ ಸಲ್ಲಿಸಿತು.

ಕಾಳಸಂತೆಯಲ್ಲಿ ರೆಮ್‌ಡಿಸಿವಿರ್: ಇಬ್ಬರ ಬಂಧನ

ದಾವಣಗೆರೆ: ಕೊರೊನಾ ಸೋಂಕಿತರಿಗೆ ನೀಡುವ ರೆಮ್‌ಡಿಸಿವಿರ್ ಚುಚ್ಚುಮದ್ದು ಅನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಇಬ್ಬರು ಸಿಬ್ಬಂದಿಯನ್ನು ಬಡಾವಣೆ ಪೊಲೀಸರು ಬಂಧಿಸಿದ್ದಾರೆ.

ಜಿಲ್ಲಾ ಆಸ್ಪತ್ರೆಯಲ್ಲಿ ದಿನಗೂಲಿ ಆಧಾರದಲ್ಲಿ ಕೆಲಸ ಮಾಡುವ ಗಣೇಶ್ (38), ಫಾರ್ಮಸಿಸ್ಟ್ ಮಂಜುನಾಥ ರಾವ್ ಜಿ. (58) ಬಂಧಿತ ಆರೋಪಿಗಳು. ಅವರಿಂದ 9 ರೆಮ್‌ಡೆಸಿವಿರ್ ಇಂಜೆಕ್ಷನ್, ಒಂದು ಆಟೊ ಹಾಗೂ ₹ 10 ಸಾವಿರ ನಗದು ವಶಪಡಿಸಿಕೊಳ್ಳಲಾಗಿದೆ.

ಗಣೇಶಪ್ಪ ಆಸ್ಪತ್ರೆಯಲ್ಲಿ ಕೆಲಸ ಮಾಡುವ ಜತೆಗೆ ಆಟೊ ಕೂಡ ಓಡಿಸುತ್ತಾನೆ. ಬಾಪೂಜಿ ಆಸ್ಪತ್ರೆ ಸಮೀಪದ ನಿಲ್ದಾಣದ ಬಳಿ ಆಟೊ ಮೂಲಕ ರೆಮ್‌ಡಿಸಿವಿರ್ ಇಂಜೆಕ್ಷನ್ ಮಾರುತ್ತಿರುವ ಬಗ್ಗೆ ಮಾಹಿತಿ ಆಧರಿಸಿ ಬಡಾವಣೆ ಠಾಣೆ ಪಿಎಸ್‌ಐ ಅರವಿಂದ ಮತ್ತು ಡ್ರಗ್ಸ್ ಇನ್‌ಸ್ಪೆಕ್ಟರ್ ಗೀತಾ ಜತೆಯಾಗಿ ಕಾರ್ಯಾಚರಣೆ ನಡೆಸಿದರು.

ಅಮಾನತು: ಮಂಜುನಾಥ ರಾವ್ ಜಿ.ಯನ್ನು ಅಮಾನತು ಮಾಡಲಾಗಿದೆ. ಸ್ವಚ್ಛತಾ ಸಿಬ್ಬಂದಿ ಗಣೇಶ್‌ನ ಗುತ್ತಿಗೆ ರದ್ದತಿಗೆ ಏಜೆನ್ಸಿಗೆ ತಿಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ರೆಮ್‌ಡಿಸಿವಿರ್ ಚುಚ್ಚುಮದ್ದಿಗಾಗಿ ರಾಜ್ಯದಾದ್ಯಂತ ಹಾಹಾಕಾರ

ಒಂದನೇ ಪುಟದಿಂದ

ನಾಲ್ಕರಿಂದ ಆರು ಡೋಸ್ ಚುಚ್ಚುಮದ್ದಿಗಾಗಿ ರೋಗಿಗಳು, ಅವರ ಸಂಬಂಧಿಕರು ಕಂಡ ಕಂಡವರ ಬಳಿ ಅಂಗಲಾಚುತ್ತಿದ್ದಾರೆ.

ಎರಡು ದಿನ ಅಲೆದಾಡಿದರೂ ಒಂದು ಡೋಸ್ ರೆಮ್‌ಡಿಸಿವಿರ್ ಕೂಡ ಪಡೆಯಲಾಗದೆ ಅಸಹಾಯಕ ಸ್ಥಿತಿಗೆ ತಲುಪಿರುವ ನೂರಾರು ಮಂದಿ ಕಾಣಸಿಗುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಬೇಡಿಕೆ ಮಂಡಿಸಿ ಪೋಸ್ಟ್ ಹಾಕುತ್ತಿರುವವರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ.

ಎಲ್ಲಿ ಹೋಗುತ್ತಿದೆ ರೆಮ್‌ಡಿಸಿವರ್?: ಆರೋಗ್ಯ ಇಲಾಖೆಯ ಅಧಿಕಾರಿಗಳ ಪ್ರಕಾರ, ರಾಜ್ಯದಲ್ಲಿ ರೆಮ್‌ಡಿಸಿವಿರ್ ಕೊರತೆ ಇಲ್ಲ. ಅಗತ್ಯ ಪ್ರಮಾಣದಷ್ಟು ಒದಗಿಸಲು ವ್ಯವಸ್ಥೆಯನ್ನು ಮಾಡಲಾಗಿದೆ ಎನ್ನುತ್ತಾರೆ ಅವರು.

‘ಸರ್ಕಾರಿ ಕೋಟಾದಡಿ ದಾಖಲಾಗುವ ಕೋವಿಡ್ ರೋಗಿಗಳಿಗೆ ಒದಗಿಸುವುದಕ್ಕಾಗಿ 25,000 ಡೋಸ್‌ಗಳಷ್ಟು ರೆಮ್‌ಡಿಸಿವಿರ್ ಕಾಯ್ದಿರಿಸಲಾಗಿದೆ. ಖಾಸಗಿಯಾಗಿ ದಾಖಲಾಗುವ ರೋಗಿಗಳಿಗೂ ಪೂರೈಸಲು ಆರೋಗ್ಯ ಇಲಾಖೆಯ ಮೂಲಕ ಕ್ರಮ ಕೈಗೊಳ್ಳಲಾಗಿದೆ. ಉತ್ಪಾದಕರು ವಿತರಕರ ಮೂಲಕವೂ ಪೂರೈಕೆ ಮಾಡುತ್ತಿದ್ದಾರೆ. ಖಾಸಗಿ ಬಳಕೆಗಾಗಿ ಗುರುವಾರ 6,500 ಡೋಸ್ ಪೂರೈಕೆಯಾಗಿದೆ’ ಎಂದು ಆರೋಗ್ಯ ಇಲಾಖೆ ಆಯುಕ್ತ ಕೆ.ವಿ. ತ್ರಿಲೋಕಚಂದ್ರ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಆದರೆ, ಖಾಸಗಿಯಾಗಿ ದಾಖಲಾದ ರೋಗಿಗಳಿಗೆ ಪೂರೈಸುವುದಕ್ಕಾಗಿ ಒದಗಿಸುತ್ತಿರುವ ಅಷ್ಟೊಂದು ಪ್ರಮಾಣದ ರೆಮ್‌ಡಿಸಿವಿರ್ ಚುಚ್ಚುಮದ್ದು ಎಲ್ಲಿಗೆ ಹೋಗುತ್ತಿದೆ? ಎಂಬ ಪ್ರಶ್ನೆಗೆ ಆರೋಗ್ಯ ಇಲಾಖೆ, ಔಷಧ ನಿಯಂತ್ರಕರು ಯಾರ ಬಳಿಯೂ ಉತ್ತರ ಸಿಗುವುದಿಲ್ಲ.

ಸಿಪ್ಲಾ, ಝೈಡಸ್, ಹೆಟ್ರೋ, ಡಾ. ರೆಡ್ಡೀಸ್ ಲ್ಯಾಬೋರೇಟರಿ ಸೇರಿದಂತೆ ಹಲವು ಕಂಪನಿಗಳು ಭಾರತದಲ್ಲಿ ರೆಮ್‌ಡಿಸಿವಿರ್ ಉತ್ಪಾದನೆ ಮಾಡುತ್ತಿವೆ. ಪ್ರತಿ ಡೋಸ್‌ಗೆ ₹ 2,800ರಿಂದ ₹ 6,000ದವರೆಗೂ ದರವಿದೆ. ಆದರೆ, ರಾಜ್ಯದಲ್ಲಿ ಹೆಚ್ಚಿದ ಬೇಡಿಕೆಯಿಂದಾಗಿ ಕಾಳಸಂತೆಯಲ್ಲಿ ಪ್ರತಿ ಡೋಸ್‌ಗೆ ₹ 40,000ದವರೆಗೂ ಮಾರಾಟ ಮಾಡುತ್ತಿರುವ ಪ್ರಕರಣಗಳೂ ಪತ್ತೆಯಾಗಿವೆ.

ವೈರಾಣು ಸೋಂಕು ನಿಯಂತ್ರಣಕ್ಕೆ ಸಹಕಾರಿ

‘ರೆಮ್‌ಡಿಸಿವಿರ್ ಔಷಧಿಯನ್ನು ವೈರಾಣು ಸೋಂಕು ನಿಯಂತ್ರಣಕ್ಕೆ ಬಳಸಲಾಗುತ್ತದೆ. ಹಿಂದೆ ಹೆಪಟೈಟಸ್–ಸಿ, ಎಬೋಲಾ ವೈರಸ್ ಸೋಂಕು, ಮಿಡ್ಲ್ ಈಸ್ಟ್ ರೆಸ್ಪಿರೇಟರಿ ಸಿಂಡ್ರೋಮ್‌ನಂತಹ ರೋಗಗಳ ಚಿಕಿತ್ಸೆಯಲ್ಲಿ ಬಳಸಲಾಗುತ್ತಿತ್ತು. ಈಗ ಕೊರೊನಾ ಸೋಂಕು ನಿಯಂತ್ರಣಕ್ಕೆ ಬಳಕೆ ಆಗುತ್ತಿದೆ’ ಎನ್ನುತ್ತಾರೆ ಬಿಜಿಎಸ್ ಗ್ಲೋಬಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ. ಬಾಲಚಂದ್ರ ಜಿ.

‘ವೈರಾಣು ನಿಯಂತ್ರಿಸುವ ಅಂಶ ಈ ಔಷಧಿಯಲ್ಲಿದೆ. ಶ್ವಾಸಕೋಶದ ಉರಿಯೂತ ತಡೆಯುವುದು, ಶ್ವಾಸಕೋಶಕ್ಕೆ ಆಗುವ ಹಾನಿ ತಪ್ಪಿಸಲು ಇದು ಸಹಕಾರಿ ಎಂಬುದು ಬಳಕೆಯಿಂದ ಸಾಬೀತಾಗಿದೆ. ಈ ಕಾರಣದಿಂದ ಕೋವಿಡ್ ಚಿಕಿತ್ಸೆಯಲ್ಲಿ ರೆಮ್‌ಡಿಸಿವಿರ್ ಲಸಿಕೆಗೆ ಬೇಡಿಕೆ ಹೆಚ್ಚಿದೆ’ ಎಂದರು.

‘ಕೇಂದ್ರದಿಂದ 2 ಸಾವಿರ ವೆಂಟಿಲೇಟರ್’

ರಾಮನಗರ: ಕೇಂದ್ರ ಸರ್ಕಾರವು ರಾಜ್ಯಕ್ಕೆ ಎರಡು ಸಾವಿರ ವೆಂಟಿಲೇಟರ್ ನೀಡಿದ್ದು, ಕೋವಿಡ್ ನಿಯಂತ್ರಣಕ್ಕೆ ಕೇಂದ್ರದಿಂದ ಎಲ್ಲ ರೀತಿಯ ನೆರವು ಸಿಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಗುರುವಾರ ಹೇಳಿದ್ದಾರೆ.

ನಗರದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಮೊದಲು ನಮ್ಮಲ್ಲಿ ವೆಂಟಿಲೇಟರ್‌ಗಳೇ ಉತ್ಪಾದನೆ ಆಗುತ್ತಿರಲಿಲ್ಲ. ಈಗ ಕೇಂದ್ರವೇ ನೀಡಿದೆ. ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಪೂರೈಕೆ ಇದೆ. ಕೆಲ ಆಸ್ಪತ್ರೆಗಳಲ್ಲಿ ಸೌಕರ್ಯಗಳು ಇಲ್ಲದೆ ರೋಗಿಗಳಿಗೆ ತೊಂದರೆ ಆಗಿದ್ದು, ಸರಿಪಡಿಸಲಾಗುತ್ತಿದೆ’ ಎಂದು ತಿಳಿಸಿದರು.

ಶಾಸಕ ನಡಹಳ್ಳಿ ಬೆಂಗಳೂರಿಗೆ ದಾಖಲು

ಮುದ್ದೇಬಿಹಾಳ (ವಿಜಯಪುರ): ಕೋವಿಡ್ ದೃಢಪಟ್ಟ ಹಿನ್ನೆಲೆಯಲ್ಲಿ ವೈದ್ಯರ ಸಲಹೆ ಮೇರೆಗೆ ಹೋಂ ಐಸೋಲೇಶನ್‌ಲ್ಲಿದ್ದ ಮತಕ್ಷೇತ್ರದ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಮತ್ತು ಅವರ ತಂದೆ ಸಂಗನಗೌಡ ಪಾಟೀಲ ಅವರನ್ನು ಬುಧವಾರ ಸಂಜೆ ಬೆಂಗಳೂರಿನ ಮಣಿಪಾಲ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ಇಬ್ಬರಿಗೂ ಸೋಂಕಿನ ಲಕ್ಷಣಗಳು ಅಲ್ಪ ಪ್ರಮಾಣದಲ್ಲಿ ಕಾಣಿಸಿದ್ದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಶಾಸಕರು ಈ ತೀರ್ಮಾನ ಕೈಗೊಂಡಿದ್ದಾರೆ ಎಂದು ಶಾಸಕರ ಆಪ್ತ ಸಹಾಯಕ ಬಾಬುರಾವ್ ಕುಲಕರ್ಣಿ ತಿಳಿಸಿದ್ದಾರೆ.

ಶಾಸಕ ಜಮೀರ್‌ಗೆ ಕೋವಿಡ್ (ಬೆಂಗಳೂರು ವರದಿ): ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ಅವರಿಗೆ ಕೋವಿಡ್ ದೃಢಪಟ್ಟಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ‘ಸಣ್ಣ ಪ್ರಮಾಣದ ಜ್ವರ ಕಾಣಿಸಿಕೊಂಡ ಕಾರಣ ಬುಧವಾರ ಕೋವಿಡ್ ಪರೀಕ್ಷೆಗೆ ಒಳಗಾಗಿದ್ದೆ. ವರದಿಯಲ್ಲಿ ಪಾಸಿಟಿವ್ ಬಂದಿದೆ. ವೈದ್ಯರ ಸಲಹೆ ಮೇರೆಗೆ ಹೋಂ ಕ್ವಾರಂಟೈನ್‌ನಲ್ಲಿ ಇದ್ದೇನೆ’ ಎಂದಿದ್ದಾರೆ.

24 ಗಂಟೆ: 25 ಸಾವಿರ ದಾಟಿದ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ದಿನೇ ದಿನೆ ಏರುತ್ತಲೇ ಇದೆ. ಗುರುವಾರ ಒಟ್ಟು 25,795 ಮಂದಿಯಲ್ಲಿ ಸೋಂಕು ದೃಢಪಟ್ಟಿದ್ದು, 123 ಮಂದಿ ಮೃತರಾಗಿದ್ದಾರೆ.

ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ನಂತರ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣ ಇದಾಗಿದೆ. ರಾಜ್ಯದ ವಿವಿಧೆಡೆ ಕೋವಿಡ್ ತೀವ್ರಗತಿಯಲ್ಲಿ ಏರುತ್ತಿದೆ. ಹೀಗಾಗಿ ಪರೀಕ್ಷೆಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ. ಗುರುವಾರ ಒಟ್ಟು 1.62 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 15.87ಕ್ಕೆ ಏರಿಕೆಯಾಗಿದೆ. ಮರಣ ಪ್ರಮಾಣ ದರ ಶೇ 0.47ಕ್ಕೆ ತಲುಪಿದೆ.

ಗದಗ (73) ಹಾಗೂ ಹಾವೇರಿ (46) ಬಿಟ್ಟು ಇತರ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಮೂರಂಕಿ ಮುಟ್ಟಿದೆ. ತುಮಕೂರಿನಲ್ಲಿ ಪ್ರಕರಣಗಳು ಹೆಚ್ಚುತ್ತಲೇ ಇವೆ. ಗುರುವಾರ ಒಟ್ಟು 1,231 ಮಂದಿಗೆ ಸೋಂಕು ತಗುಲಿರುವುದು ಖಚಿತಪಟ್ಟಿದೆ. ಬೆಂಗಳೂರಿನಲ್ಲಿ 15,244 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ.

ಬಳ್ಳಾರಿ (940), ಮೈಸೂರು (818), ಹಾಸನ (689), ಕಲಬುರ್ಗಿ (659), ಕೋಲಾರ (587) ಹಾಗೂ ಬೆಂಗಳೂರು ಗ್ರಾಮಾಂತರ (405) ಜಿಲ್ಲೆಗಳಲ್ಲೂ ಅಧಿಕ ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ ಈವರೆಗೆ ಸೋಂಕಿಗೊಳಗಾದವರ ಸಂಖ್ಯೆ 12.47 ಲಕ್ಷದ ಗಡಿ ದಾಟಿದೆ.

ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ ಒಟ್ಟು 68 ಮಂದಿ ಮೃತರಾಗಿದ್ದಾರೆ. ಕಲಬುರ್ಗಿಯಲ್ಲೂ (11) ಮೃತರ ಸಂಖ್ಯೆ ಏರಿದೆ. ಬಳ್ಳಾರಿ, ಧಾರವಾಡ ಮತ್ತು ತುಮಕೂರಿನಲ್ಲಿ ತಲಾ ಐದು ಮಂದಿ, ಬೆಂಗಳೂರು ಗ್ರಾಮಾಂತರ, ಹಾಸನ, ಮಂಡ್ಯದಲ್ಲಿ ತಲಾ ನಾಲ್ವರು, ಬೀದರ್ ಹಾಗೂ ಮೈಸೂರಿನಲ್ಲಿ ತಲಾ ಮೂವರು, ಬಾಗಲಕೋಟೆ, ಚಿಕ್ಕಬಳ್ಳಾಪುರ, ಕೊಡಗು ಹಾಗೂ ಉತ್ತರ ಕನ್ನಡದಲ್ಲಿ ತಲಾ ಇಬ್ಬರು, ಬೆಳಗಾವಿ, ಶಿವಮೊಗ್ಗ ಮತ್ತು ವಿಜಯಪುರದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಹೀಗಾಗಿ ಇದುವರೆಗೆ ಸತ್ತವರ ಸಂಖ್ಯೆ 13,885ಕ್ಕೆ ಹೆಚ್ಚಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಎರಡು ಲಕ್ಷದ (1.96) ಸನಿಹದಲ್ಲಿದ್ದು, ಒಟ್ಟು 985 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್ ಪೀಡಿತರ ಪೈಕಿ 5,624 ಜನ ಚೇತರಿಸಿಕೊಂಡಿದ್ದಾರೆ. ಇದರೊಂದಿಗೆ ಗುಣಮುಖರ ಸಂಖ್ಯೆ 10.37 ಲಕ್ಷಕ್ಕೆ ಏರಿಕೆಯಾಗಿದೆ.

ರಾಜ್ಯದ ವಿವಿಧೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರ ಕೊಡಗು, ಮಂಡ್ಯ, ಚಿತ್ರದುರ್ಗದ ವಿವಿಧೆಡೆ ಉತ್ತಮ ಮಳೆಯಾಗಿದೆ. ಚಿತ್ರದುರ್ಗ ಜಿಲ್ಲೆಯ ತಂಡಗ ಗ್ರಾಮದ ತೋಟದ ಮನೆಯ ಗೋಡೆ ಬಿದ್ದು ಪರಣ್ಣ ಎಂಬುವವರು ಗಾಯಗೊಂಡಿದ್ದಾರೆ.

ಕೊಡಗಿನಲ್ಲಿ ಮಳೆಯ ಆರ್ಭಟ ಮುಂದುವರಿದಿದ್ದು, ಜಿಲ್ಲೆಯ ವಿವಿಧೆಡೆ ಧಾರಾಕಾರ ಮಳೆಯಾಗಿದೆ. ನಾಪೋಕ್ಲು, ಸಿದ್ದಾಪುರ, ಭಾಗಮಂಡಲ, ಕಕ್ಕಬ್ಬೆ, ಕರಿಕೆ ಭಾಗದಲ್ಲಿ ಭಾರೀ ಮಳೆಯಾಯಿತು. ಸಿದ್ದಾಪುರ, ನೆಲ್ಯಹುದಿಕೇರಿ, ಕರಡಿಗೋಡು, ಗುಹ್ಯ ಭಾಗದಲ್ಲೂ ಜೋರು ಮಳೆ ಸುರಿಯಿತು.

ಮಡಿಕೇರಿ– ಸೋಮವಾರಪೇಟೆ ರಾಜ್ಯ ಹೆದ್ದಾರಿಯಲ್ಲಿ ಗಾಳಿಗೆ ಬೃಹತ್ ಮರ ರಸ್ತೆಗೆ ಉರುಳಿ ಸಂಚಾರ ವ್ಯತ್ಯಯವಾಗಿತ್ತು. ನಾಲ್ಕು ದಿನಗಳಿಂದ ನಿರಂತರವಾಗಿ ಮಳೆಯಾಗುತ್ತಿದ್ದು, ನದಿ ಹಾಗೂ ಹೊಳೆಗಳಲ್ಲಿ ನೀರಿನ ಹರಿವು ಹೆಚ್ಚಳವಾಗಿದೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನಾದ್ಯಂತ ಬುಧವಾರ ರಾತ್ರಿ ಗುಡುಗು, ಗಾಳಿ ಸಹಿತ ಸುರಿದ ಭಾರಿ ಮಳೆಯಿಂದ ಹಲವೆಡೆ ಬಾಳೆ ಬೆಳೆ ನಾಶವಾಗಿವೆ. ತಳಗವಾದಿ ಗ್ರಾಮದಲ್ಲಿ ಟ್ರಾನ್ಸ್‌ಫಾರ್ಮರ್ ಹಾಗೂ ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಉಪ್ಪನಹಳ್ಳಿ ಗ್ರಾಮದ ಮಂಚೇಗೌಡ 3.5 ಎಕರೆಯಲ್ಲಿ ಬೆಳೆದಿದ್ದ, ಕಟಾವಿಗೆ ಬಂದಿದ್ದ ಬಾಳೆ ನಾಶವಾಗಿದೆ.

ಹಾಸನ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬುಧವಾರ ರಾತ್ರಿ ಹಾಗೂ ಗುರುವಾರ ಬೆಳಿಗ್ಗೆ ಉತ್ತಮ ಮಳೆಯಾಗಿದೆ. ಸಕಲೇಶಪುರ ತಾಲ್ಲೂಕು ಕೊಣ್ಣೂರು ಗ್ರಾಮದ ಕೃಷ್ಣಯ್ಯ ಅವರ ಗದ್ದೆಯಲ್ಲಿ ಬೆಳೆದಿದ್ದ ಬೀನ್ಸ್ ಮಳೆ, ಗಾಳಿಗೆ ನೆಲ ಕಚ್ಚಿದೆ. ಶ್ರವಣಬೆಳಗೊಳದಲ್ಲಿ 7 ಸೆ.ಮೀ. ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಕೆಲವೆಡೆ ಗುರುವಾರ ಗುಡುಗು, ಸಿಡಿಲು, ಬಿರುಗಾಳಿ ಸಹಿತ ಮಳೆಯಾಯಿತು. ಹೊಸದುರ್ಗ ತಾಲ್ಲೂಕಿನ ಕಂಚೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗುಡುಗು, ಸಿಡಿಲು ಸಹಿತ ಆಲಿಕಲ್ಲು ಮಳೆಯಾಗಿದ್ದು, ಚಿಕ್ಕ ಚಿಕ್ಕ ಚೆಕ್‌ಡ್ಯಾಂಗಳು ಭರ್ತಿಯಾಗಿವೆ. ಬಿರುಗಾಳಿಗೆ ಬಾಳೆ, ತೆಂಗು, ಅಡಿಕೆ ಮರಗಳು ಧರೆಗುರುಳಿವೆ.

ಚಳ್ಳಕೆರೆಯಲ್ಲಿ ಬಿರುಗಾಳಿಗೆ ರಸ್ತೆ ಬದಿಯ ಗೂಡಂಗಡಿಯ ಶೀಟ್‌ಗಳು ತುಂಡಾಗಿ ಬಿದ್ದಿವೆ. ಕೆಲ ಅಂಗಡಿಗಳ ಬಿದಿರು ತಡಿಕೆ ಹಾರಿಹೋಗಿವೆ. ಹಣ್ಣು, ತರಕಾರಿ ಪಟ್ಟಿಗೆ ಅಂಗಡಿಗಳು ಉರುಳಿ ಬಿದ್ದಿದ್ದವು.

ಶ್ರೀರಾಂಪುರದಲ್ಲಿ ಮರಕ್ಕೆ ಸಿಡಿಲು ಬಡಿದಿದೆ. ಹೋಬಳಿಯ ಕುರುಬರಹಳ್ಳಿ ಗ್ರಾಮದಲ್ಲಿ ರಂಗಪ್ಪ ಅವರ ಮನೆಯ ಶೀಟ್‌ಗಳು ಹಾರಿ ಹೋಗಿದ್ದು, ಮನೆಯಲ್ಲಿ ದಾಸ್ತಾನು ಮಾಡಿದ್ದ ರಾಗಿ ಬೆಳೆ ಹಾಳಾಗಿದೆ. ದಾವಣಗೆರೆ ನಗರ ಸೇರಿ ವಿವಿಧೇಡೆ ಸಾಧಾರಣ ಹಾಗೂ ಜಿಲ್ಲೆಯ ಜಗಳೂರಿನಲ್ಲಿ ಗುಡುಗು ಸಹಿತ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬೆಳ್ತಂಗಡಿ, ಪುತ್ತೂರು, ಬಂಟ್ವಾಳ, ವಿಟ್ಲ, ಮುಡಿಪು ಸೇರಿದಂತೆ ಹಲವೆಡೆ ಮಳೆಯಾಗಿದೆ. ಬೆಳ್ತಂಗಡಿ ತಾಲ್ಲೂಕಿನ ಮೇಲಂತಬೆಟ್ಟುವಿನಲ್ಲಿ ಮನೆಗೆ ಹಾನಿಯಾಗಿದೆ. ಮುಂಡಾಜೆಯಲ್ಲಿ ರಬ್ಬರ್ ಮರಗಳು, ಅಡಿಕೆ ಮರಗಳು ಧರೆಗುರುಳಿವೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಕಡೂರು, ನರಸಿಂಹರಾಜಪುರ, ಕಳಸ, ಬಾಳೆಹೊನ್ನೂರು, ಬೀರೂರಿನಲ್ಲೂ ಉತ್ತಮ ಮಳೆ ಸುರಿದಿದೆ. ಉಡುಪಿ ಜಿಲ್ಲೆಯಲ್ಲಿ ತುಂತುರು ಮಳೆಯಾಗಿದೆ.

ವಿಜಯಪುರ ಹಾಗೂ ಗದಗ ಜಿಲ್ಲೆಯ ಡಂಬಳ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಗುರುವಾರ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗಿದೆ. ಡಂಬಳದ ವಾರದ ಗ್ರಾಮೀಣ ಸಂತೆಯ ವಸ್ತುಗಳು ರಭಸದ ಮಳೆಗೆ ನೀರು ಪಾಲಾಗಿದ್ದವು. ತಾಳಿಕೋಟೆಯಲ್ಲಿ ಕೆಲ ಸಮಯ ಮಳೆಯಾಗಿದೆ.

ಶಿಡ್ಲಘಟ್ಟ ತಾಲ್ಲೂಕು ಗೌಡನಹಳ್ಳಿ ಸಮೀಪ ಗುರುವಾರ ಸಂಜೆ ಪಾಲಿಹೌಸ್ ಮೇಲೆ ಬಿದ್ದ ಬೃಹತ್ ಗಾತ್ರದ ಆಲಿಕಲ್ಲಿನೊಂದಿಗೆ ರೈತರು

ಭಾರಿ ಗಾತ್ರದ ಆಲಿಕಲ್ಲು: ದ್ರಾಕ್ಷಿ ಬೆಳೆ, ಪಾಲಿಹೌಸ್‌ಗೆ ಹಾನಿ

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಗೌಡನಹಳ್ಳಿಯ ಸುತ್ತಮುತ್ತ ಗುರುವಾರ ಸಂಜೆ ಸುರಿದ ಮಳೆಯ ವೇಳೆ ಭಾರಿ ಬೃಹತ್ ಗಾತ್ರದ ಆಲಿಕಲ್ಲುಗಳು ಬಿದ್ದಿವೆ.

ತಾಲ್ಲೂಕಿನ ಬಶೆಟ್ಟಹಳ್ಳಿ ವ್ಯಾಪ್ತಿಯ ಅಮ್ಮಗಾರಹಳ್ಳಿ, ಗೌಡನಹಳ್ಳಿ ಸುತ್ತಮುತ್ತ ಬಿದ್ದ ದೊಡ್ಡ ಆಲಿಕಲ್ಲುಗಳ ಭಾರಕ್ಕೆ ಅನೇಕ ದ್ರಾಕ್ಷಿತೋಟ ಮತ್ತು ಪಾಲಿಹೌಸ್‌ಗಳು ನೆಲಕಚ್ಚಿವೆ. ತೋಟದಲ್ಲಿ ಹರಡಿಕೊಂಡಿದ್ದ ಆಲಿಕಲ್ಲುಗಳು ಹಿಮದ ಬಂಡೆಯಂತೆ ಕಾಣುತ್ತಿದ್ದವು. ಎರಡೂ ಕೈಗಳಿಂದ ಸುಲಭವಾಗಿ ಎತ್ತಲೂ ಸಾಧ್ಯವಾಗದಷ್ಟು ಇವು ದೊಡ್ಡದಾಗಿವೆ.

ದ್ರಾಕ್ಷಿ ತೋಟ, ಟೊಮೊಟೊ, ಹೂಕೋಸು ಬೆಳೆಗಳು ಹಾಳಾಗಿವೆ. ಗೌಡನಹಳ್ಳಿ ಸಮೀಪದ ಎನ್.ಬಚ್ಚೇಗೌಡ ಅವರಿಗೆ ಸೇರಿರುವ 6 ಎಕರೆ ದ್ರಾಕ್ಷಿ ತೋಟ, ಒಂದು ಎಕರೆ ಟೊಮೊಟೋ ಮತ್ತು ಒಂದು ಎಕರೆ ಕೋಸು ಬೆಳೆ ಭಾರಿ ಗಾತ್ರದ ಆಲಿಕಲ್ಲುಗಳಿಂದ ನಾಶವಾಗಿವೆ. ಅಂದಾಜು ₹ 27 ಲಕ್ಷ ನಷ್ಟ ಉಂಟಾಗಿರುವುದಾಗಿ ಅವರು ತಿಳಿಸಿದ್ದಾರೆ.

ಸಿಡಿಲು ಬಡಿದು 7 ಮಂದಿಗೆ ಗಾಯ

ಚಿಂತಾಮಣಿ: ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಸೋಮಯಾಜಲಹಳ್ಳಿಯಲ್ಲಿ ಗುರುವಾರ ಮನೆಯೊಂದಕ್ಕೆ ಸಿಡಿಲು ಬಡಿದು ನಾಲ್ವರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಏಳು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಸಿಡಿಲಿನ ಹೊಡೆತಕ್ಕೆ ಮನೆ ನೆಲಸಮವಾಗಿದೆ. ಮನೆಯಲ್ಲಿದ್ದವರು ಗಾಯಗೊಂಡಿದ್ದು, ಗಾಯಾಳುಗಳಿಗೆ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಕೆಲವರ ಸ್ಥಿತಿ ಗಂಭೀರವಾಗಿದ್ದು, ಅವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಸಿಡಿಲು ಬಡಿದು ಸಾವು: ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಯಾದಲಡಕು ಗ್ರಾಮದ ಮಹಲಿಂಗಯ್ಯ (46) ಗುರುವಾರ ಮುಂಜಾನೆ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಸುದ್ದಿ 2 ನಿಮಿಷ

ಜಾತ್ರೆ ನಡೆಸಿದ 7 ಮಂದಿ ಬಂಧನ

ಕುಷ್ಟಗಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಜಾಲಿಹಾಳ ಗ್ರಾಮದಲ್ಲಿ ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿ ದುರ್ಗಾದೇವಿ ಜಾತ್ರೆ ನಡೆಸಿದ ಕಾರಣಕ್ಕೆ ದೇವಸ್ಥಾನದ ಪೂಜಾರಿ ಸೇರಿ ಏಳು ಜನರನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಗ್ರಾಮದಲ್ಲಿ ಬುಧವಾರ (ಏ.21) ರಾತ್ರಿ ಜಾತ್ರೆ ಅಂಗವಾಗಿ ಅಗ್ನಿಕುಂಡ ಹಾಯುವುದು, ಅಕ್ಕಿಪಾಯಸ ವಿತರಣೆ ಇತರೆ ಧಾರ್ಮಿಕ ಆಚರಣೆಗಳು ನಡೆದಿವೆ. ಅಂತರ ಕಾಯ್ದುಕೊಳ್ಳದೇ ಹೆಚ್ಚಿನ ಜನ ಸೇರಿದ್ದಾರೆ. ಊರಿನ ಹಿರಿಯರು, ಗ್ರಾಮಸ್ಥರು ಜಾತ್ರೆ ಆಯೋಜಿಸಿದ್ದಾರೆ ಎಂದು ಕಂದಾಯ ನಿರೀಕ್ಷಕ ಸಂಗಮೇಶ ಸಿಂಗಾಡಿ ಅವರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಶಿರಗುಂಪಿ ಪಿಡಿಒ ವೆಂಕಟೇಶ ಪವಾರ್ ದೂರು ನೀಡಿದ್ದರು.

ಇದರ ಆಧಾರದಲ್ಲಿ ಎಫ್‌ಐಆರ್ ದಾಖಲಿಸಿದ್ದ ಪೊಲೀಸರು ಪೂಜಾರಿ ರಮೇಶ ಪಡಿಯಪ್ಪ, ಉತ್ಸವದ ಮುಂದಾಳತ್ವ ವಹಿಸಿದ್ದ ಶೇಖರಪ್ಪ ಬದಾಮಿ, ದೇವಪ್ಪ ಕ್ಯಾದಗುಪ್ಪ, ದುರುಗಪ್ಪ ಗೋತಗಿ, ದೇವಪ್ಪ ರಕ್ಕಸಗಿ, ಚಂದನಗೌಡ ಮಾಲಿಪಾಟೀಲ ಮತ್ತು ಗುಂಡಪ್ಪ ಉಪ್ಪಾರ ಅವರನ್ನು ಬಂಧಿಸಿ ತಹಶೀಲ್ದಾರ್ ಮುಂದೆ ಹಾಜರುಪಡಿಸಿದರು. ಆರೋಪಿಗಳನ್ನು ನ್ಯಾಯಾಂಗ ಬಂಧನದಲ್ಲಿದ್ದಾರೆ. ಕೆಲವರು ಪರಾರಿಯಾಗಿದ್ದು, ಹುಡುಕಾಟ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನೀರಿನಲ್ಲಿ ಮುಳುಗಿ 6 ಸಾವು

ಮೈಸೂರು/ಮಂಡ್ಯ: ಈಜಲು ತೆರಳಿದ್ದ ನಾಲ್ವರು ಬಾಲಕರು ಸೇರಿದಂತೆ ಒಟ್ಟು ಆರು ಮಂದಿ ಗುರುವಾರ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಮೈಸೂರು ಜಿಲ್ಲೆ ತಿ.ನರಸೀಪುರ ತಾಲ್ಲೂಕಿನ ತಲಕಾಡು ಹೋಬಳಿಯ ಹೆಮ್ಮಿಗೆ-ಬಿ ಗ್ರಾಮದ ನಾಲ್ವರು ಬಾಲಕರು ಈಜಲು ಹೋಗಿದ್ದಾಗ ಕಾವೇರಿ ನದಿಯಲ್ಲಿ ಮುಳುಗಿದ್ದಾರೆ.

ಪ್ರೌಢಶಾಲಾ ವಿದ್ಯಾರ್ಥಿಗಳಾದ ಯಶವಂತ (15), ಮಹದೇವಪ್ರಸಾದ್ (14), ಪರಶಿವಮೂರ್ತಿ (15), ಕಿಶೋರ್ (13) ಮೃತಪಟ್ಟವರು.

ಯಶವಂತ, ಮಹದೇವಪ್ರಸಾದ್ ಶವ ಪತ್ತೆಯಾಗಿದ್ದು, ಮತ್ತಿಬ್ಬರ ಶವಕ್ಕಾಗಿ ಶೋಧ ಕಾರ್ಯ ನಡೆದಿದೆ ಎಂದು ತಲಕಾಡು ಪೊಲೀಸರು ತಿಳಿಸಿದ್ದಾರೆ. ನದಿ ದಡದಲ್ಲಿ ಪೋಷಕರು, ಸಂಬಂಧಿಕರ ಆಕ್ರಂದನ ಮುಗಿಲುಮುಟ್ಟಿತ್ತು.

ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಸಮೀಪ ನಾರ್ತ್‌ಬ್ಯಾಂಕ್ ಗ್ರಾಮದ ಕಾಳಮ್ಮನ ದೇವಾಲಯಕ್ಕೆ ಗುರುವಾರ ಪೂಜೆಗೆ ಬಂದಿದ್ದ ಹುಣಸೂರು ತಾಲ್ಲೂಕಿನ ಮಲ್ಲಿನಾಥಪುರ ಗ್ರಾಮದ ಬಸವೇಗೌಡ (26), ಸಣ್ಣೇಗೌಡ (34) ವಿಶ್ವೇಶ್ವರಯ್ಯ ನಾಲೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ದೇವರ ದರ್ಶನಕ್ಕೂ ಮುನ್ನ ನಾಲೆಯಲ್ಲಿ ಈಜಲು ಇಳಿದಿದ್ದಾರೆ. ವಿಶ್ವೇಶ್ವರಯ್ಯ ನಾಲೆಯಲ್ಲಿ 2,500 ಕ್ಯೂಸೆಕ್ ನೀರು ಹರಿಯುತ್ತಿದ್ದು, ನೀರಿನ ರಭಸಕ್ಕೆ ಸ್ವಲ್ಪ ದೂರ ಕೊಚ್ಚಿ ಹೋಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ
ಸಿನಿ ಸಿಪ್ ಚಪ್ಪರಿಸಿದಷ್ಟೂ ನೆನಪು..
‘ಕಸ್ತೂರಿ ನಿವಾಸ’ ಆದದ್ದು ಹೀಗೆ...

ಸಿನಿಮಾ ತೆರೆಮೇಲೆ ಕಾಣದ ಅಪರೂಪದ ನೆನಪು ಸಹೃದಯರಿಗೆ ಗುಟುಕಿನ ರೂಪದಲ್ಲಿ...
https://bit.ly/3ej3ABw

ಪ್ರಜಾವಾಣಿ facebook LIVE fb.com/prajavani.net
ದ್ವಿತೀಯ ಪಿಯು ವಿದ್ಯಾರ್ಥಿಗಳೇ, ಗಮನಿಸಿ!
ಭಯ ಬೇಡ, ಧೈರ್ಯದಿಂದ ಪರೀಕ್ಷೆ ಎದುರಿಸಿ

ಬೆಂಗಳೂರು ಸಾಯಿರಾಂ ಅಕಾಡೆಮಿಯ ಜಿ.ಶ್ರೀನಿವಾಸ್ ಇವರಿಂದ ಟಿಪ್ಸ್
ವಿಷಯ: ಭೌತಶಾಸ್ತ್ರ
ಸಂಯೋಜನೆ: AIDSO ಕರ್ನಾಟಕ ರಾಜ್ಯ ಸಮಿತಿ
ಇಂದು ಹಾಗೂ 26ರಂದು ಸಂಜೆ 4.30ರಿಂದ

ಕೋವಿಡ್: ಪತ್ರಕರ್ತ ಕಲಾದಗಿ ಸಾವು

ವಿಜಯಪುರ: ‘ವಿಜಯಪುರ ಮಿರರ್’ ಇಂಗ್ಲಿಷ್–ಉರ್ದು ಪತ್ರಿಕೆ ವರದಿಗಾರ ಜಾಫರ್ ಕಲಾದಗಿ (36) ಕೋವಿಡ್‌ನಿಂದ ಗುರುವಾರ ಸಾವಿಗೀಡಾದರು.

ಕೋವಿಡ್ ಪೀಡಿತರಾಗಿದ್ದ ಜಾಫರ್ ನಗರದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಸಾವಿಗೀಡಾದರು.

ಜಾಫರ್ ಕಲಾದಗಿ

ಅವರಿಗೆ ಪತ್ನಿ, ಪುತ್ರ, ಪುತ್ರಿ ಹಾಗೂ ತಂದೆ, ತಾಯಿ, ಇಬ್ಬರು ಸಹೋದರರು ಇದ್ದಾರೆ. ಶಾಸಕ ಎಂ.ಬಿ.ಪಾಟೀಲ್, ರಾಜ್ಯ ಸರ್ಕಾರ ಇವರನ್ನು ‘ಕೋವಿಡ್ ವಾರಿಯರ್’ ಎಂದು ಪರಿಗಣಿಸಿ, ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

‘ವೀಕ್ಷಣೆಗೆ ಯಾವುದೇ ಉಪಕರಣ ಬೇಡ’

ವಿವಿಧೆಡೆ ಶೂನ್ಯ ನೆರಳಿನ ಕೌತುಕ

ಪ್ರಜಾವಾಣಿ ವಾರ್ತೆ

ಉಡುಪಿ: ಶೂನ್ಯ ನೆರಳಿನ ದಿನದಂದು ಸೂರ್ಯ ನೆತ್ತಿಯ ಮೇಲಿನ ನಿಖರ ಬಿಂದು ತಲುಪಿದಾಗ ನೆರಳು ಗೋಚರಿಸುವುದಿಲ್ಲ. ಈ ವಿಸ್ಮಯವನ್ನು ಶೂನ್ಯ ನೆರಳು ಎನ್ನಲಾಗುತ್ತದೆ. ಏ.22ರಿಂದ ಮೇ 1ರವರೆಗೆ ರಾಜ್ಯದ ವಿವಿಧ ಭಾಗಗಳಲ್ಲಿ ಶೂನ್ಯ ನೆರಳಿನ ಕೌತುಕ ವೀಕ್ಷಿಸಬಹುದು ಎಂದು ಪೂರ್ಣಪ್ರಜ್ಞ ಹವ್ಯಾಸಿ ಖಗೋಳ ವೀಕ್ಷಕರ ಸಂಘ ತಿಳಿಸಿದೆ.

ಪ್ರತಿ ವರ್ಷ ಏಪ್ರಿಲ್ ಅಥವಾ ಮೇ ಹಾಗೂ ಆಗಸ್ಟ್‌ನಲ್ಲಿ ಶೂನ್ಯ ನೆರಳು ಗೋಚರಿಸುತ್ತದೆ. ಆಗಸ್ಟ್‌ನಲ್ಲಿ ಮಳೆಯ ಕಾರಣದಿಂದ ವೀಕ್ಷಣೆ ಸಾಧ್ಯತೆ ಕಡಿಮೆ.



ಶೂನ್ಯ ನೆರಳು

ಏಪ್ರಿಲ್‌ನಲ್ಲಿ ಬೇಸಿಗೆ ಇರುವುದರಿಂದ ವೀಕ್ಷಣೆ ಸಾಧ್ಯತೆ ಹೆಚ್ಚಿರುತ್ತದೆ. ಏ.24ರಂದು ಮಧ್ಯಾಹ್ನ 12.18ಕ್ಕೆ ಬೆಂಗಳೂರಿನಲ್ಲಿ, 12.28ಕ್ಕೆ ಮಂಗಳೂರಿನಲ್ಲಿ ಹಾಗೂ 25 ರಂದು ಮಧ್ಯಾಹ್ನ 12.29ಕ್ಕೆ ಉಡುಪಿಯಲ್ಲಿ ಶೂನ್ಯ ನೆರಳಿನ ವಿದ್ಯಮಾನ ನೋಡಬಹುದು.

23ರಂದು ಮಂಡ್ಯ, ಪುತ್ತೂರು, 24ರಂದು ಮಂಗಳೂರು, ಹಾಸನ, ಬೆಂಗಳೂರು, 25 ರಂದು ಉಡುಪಿ, ಚಿಕ್ಕಮಗಳೂರು, ತುಮಕೂರು, ಚಿಕ್ಕಬಳ್ಳಾಪುರ, 26ರಂದು ಕುಂದಾಪುರ, ತೀರ್ಥಹಳ್ಳಿ, ಗೌರಿಬಿದನೂರು, 27 ರಂದು ಭಟ್ಕಳ, ಶಿವಮೊಗ್ಗ, ಚನ್ನಗಿರಿ, 28 ರಂದು ಹೊನ್ನಾವರ, ಕುಮಟಾ, ಶಿಕಾರಿಪುರ, ಚಿತ್ರದುರ್ಗ, 29 ರಂದು ಗೋಕರ್ಣ, ಶಿರಸಿ, ರಾಣೆಬೆನ್ನೂರು, ದಾವಣಗೆರೆ, 30 ರಂದು ಕಾರವಾರ, ಹಾವೇರಿ, ಮೇ 1ರಂದು ಹುಬ್ಬಳ್ಳಿ, ಹೊಸಪೇಟೆ, ಬಳ್ಳಾರಿ, ಮೇ 2 ರಂದು ಧಾರವಾಡ, ಗದಗ, 3 ರಂದು ಬೆಳಗಾವಿ, ಸಿಂಧನೂರು, 4 ರಂದು ಗೋಕಾಕ, ಬಾಗಲಕೋಟೆ, ರಾಯಚೂರು, 6 ರಂದು ಯಾದಗಿರಿ, 7 ರಂದು ವಿಜಯಪುರ, 9 ರಂದು ಕಲಬುರಗಿ, 10 ರಂದು ಹುಮನಾಬಾದ್, 11 ರಂದು ಬೀದರ್‌ನಲ್ಲಿ ಶೂನ್ಯ ನೆರಳು ಕಾಣಬಹುದು.

ಮೇಲಿನ ಸ್ಥಳಗಳಲ್ಲಿ ಮಧ್ಯಾಹ್ನ 12.15ರಿಂದ 12.35ರ ನಡುವೆ ಶೂನ್ಯ ನೆರಳು ಕಾಣಬಹುದು. ಹೆಚ್ಚಿನ ಮಾಹಿತಿಗೆ https://paac.ppc.ac.in ಸಂಪರ್ಕಿಸಬಹುದು ಎಂದು ಸಂಘದ ಸಂಚಾಲಕ ಅತುಲ್ ಭಟ್ ತಿಳಿಸಿದ್ದಾರೆ.

‘ಇದರ ವೀಕ್ಷಣೆಗೆ ಯಾವುದೇ ಉಪಕರಣ ಬೇಡ. ಯಾವುದೇ ವಸ್ತುವನ್ನು ಬಿಸಿಲಿನಲ್ಲಿ ಲಂಬವಾಗಿ ಇಟ್ಟರೆ ಅದರ ನೆರಳು ಕಾಣುವುದಿಲ್ಲ’ ಎನ್ನುತ್ತಾರೆ ಅವರು.

ರಾತ್ರಿಯಿಡೀ ಶವಸಂಸ್ಕಾರ !

ಬೆಂಗಳೂರು: ನಗರದ ಚಿತಾಗಾರಗಳಲ್ಲಿ ಕೋವಿಡ್ ಶವಗಳ ಸಾಲು ದಿನೇ ದಿನೇ ಹೆಚ್ಚುತ್ತಿದ್ದು, ರಾತ್ರಿ ಇಡೀ ಸಂಸ್ಕಾರ ನಡೆಸಿದರೂ ಈ ಸಾಲು ಕರಗುತ್ತಿಲ್ಲ. ಇದರೊಂದಿಗೆ ಪ್ರಭಾವಿಗಳ ಸಂಬಂಧಿಕರು ಮತ್ತು ಪರಿಚಿತರ ಶವ ಸಂಸ್ಕಾರಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂಬ ಆರೋಪವೂ ಕೇಳಿ ಬಂದಿದೆ.

‘ಗುರುವಾರ ಬೆಳಿಗ್ಗೆ 7ರಿಂದಲೇ ನಾವು ಸುಮನಹಳ್ಳಿ ಚಿತಾಗಾರದ ಬಳಿ ಕಾಯುತ್ತಿದ್ದೆವು. 8.30ರಿಂದ ಶವಸಂಸ್ಕಾರ ಪ್ರಕ್ರಿಯೆ ಪ್ರಾರಂಭಿಸಿದರು. ಆದರೆ, ರಾಜಕಾರಣಿಯೊಬ್ಬರ ಪರಿಚಿತರ ಶವವೊಂದು ಬರುತ್ತಿದ್ದಂತೆ ಆ ಅಂಬುಲೆನ್ಸ್ ಅನ್ನು ಒಳಗೆ ಬಿಟ್ಟರು. ತುಂಬಾ ಬೇಸರವಾಯಿತು’ ಎಂದು ಕೋವಿಡ್‌ನಿಂದ ಸಾವಿಗೀಡಾಗಿದ್ದ ವ್ಯಕ್ತಿಯೊಬ್ಬರ ಸಂಬಂಧಿ ಹೇಳಿದರು.

‘ಆರೋಗ್ಯ ತುರ್ತು ಪರಿಸ್ಥಿತಿ ಘೋಷಿಸಿ’

ಬೆಂಗಳೂರು: ‘ಕೋವಿಡ್ ಎರಡನೇ ಅಲೆ ಮಾರಣಾಂತಿಕ ರೂಪ ಪಡೆದುಕೊಂಡಿದೆ. ಮಕ್ಕಳು, ವೃದ್ಧರು ಹಾಗೂ ಯುವಕರು ಪ್ರತಿನಿತ್ಯ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿ ಆರೋಗ್ಯ ತುರ್ತುಪರಿಸ್ಥಿತಿ ಘೋಷಿಸಿ’ ಎಂದು ವಿಧಾನಪರಿಷತ್ ಸದಸ್ಯ ವೈ.ಎ.ನಾರಾಯಣಸ್ವಾಮಿ ಹಾಗೂ ದೇವರಾಜ ಅರಸು ಅಭಿವೃದ್ಧಿ ನಿಗಮದ ಅಧ್ಯಕ್ಷ ಆರ್.ರಘು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಒತ್ತಾಯಿಸಿದ್ದಾರೆ.

‘ಕೋವಿಡ್ ತಡೆಗೆ ರಾಜ್ಯ ಸರ್ಕಾರದ ಕ್ರಮ ಪರಿಣಾಮಕಾರಿಯಾಗಿಲ್ಲ ಎಂಬ ಮಾತು ಕೇಳಿಬಂದಿದೆ. ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುವ ಸಾಧ್ಯತೆ ಇದೆ. ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಅಸಹಾಯಕರಾಗಿದ್ದಾರೆ. ಈ ಸ್ಥಿತಿಯಲ್ಲಿ ಆರೋಗ್ಯ ತುರ್ತುಪರಿಸ್ಥಿತಿ ಘೋಷಿಸಲು ಮುಂದಾಗಬೇಕು’ ಎಂದು ನಾರಾಯಣಸ್ವಾಮಿ ಹೇಳಿದ್ದಾರೆ.

‘ಖಾಸಗಿ ಆಸ್ಪತ್ರೆಗಳನ್ನು ತಾತ್ಕಾಲಿಕವಾಗಿ ಸರ್ಕಾರ ವಶಕ್ಕೆ ಪಡೆಯಬೇಕು. ಆಡಳಿತಾಧಿಕಾರಿ ನೇಮಿಸಬೇಕು. ಆಸ್ಪತ್ರೆಗಳ ನಿರ್ವಹಣೆ ವೆಚ್ಚಕ್ಕೆ ಅನುಗುಣವಾಗಿ ಚಿಕಿತ್ಸೆಯ ದರ ನಿಗದಿಪಡಿಸಬೇಕು. ಅಗತ್ಯವಿದ್ದರೆ ಸುಸಜ್ಜಿತ ಶಾಲಾ ಕಟ್ಟಡಗಳಲ್ಲಿ ತಾತ್ಕಾಲಿಕ ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳನ್ನು ಆರಂಭಿಸಬೇಕು’ ಎಂದು ರಘು ಸಲಹೆ ನೀಡಿದ್ದಾರೆ.

ಅಕ್ಕಿ ಕಡಿತ: ಶಾಸಕ ಎಚ್.ಕೆ. ಪಾಟೀಲ ವಿರೋಧ

ಬೆಂಗಳೂರು: ‘ಅನ್ನಭಾಗ್ಯ’ ಯೋಜನೆಯ ಅಕ್ಕಿ ಪ್ರಮಾಣ ಕಡಿತ ಮಾಡಿದ ರಾಜ್ಯ ಸರ್ಕಾರ ಕ್ರಮಕ್ಕೆ ಕಾಂಗ್ರೆಸ್ ಶಾಸಕ ಎಚ್.ಕೆ. ಪಾಟೀಲ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಪ್ರತಿ ಬಿಪಿಎಲ್ ಪಡಿತರ ಚೀಟಿಗೆ ಕೊಡುತ್ತಿದ್ದ 5 ಕಿಲೋ ಅಕ್ಕಿಯನ್ನು ರಾಜ್ಯ ಸರ್ಕಾರ ಮೂರು ಕಿಲೋಗೆ ಇಳಿಸಿದೆ. ಮೊದಲು ಏಳು ಕಿಲೋದಿಂದ 5 ಕಿಲೋಗೆ ಇಳಿಸಿದ್ದ ಸರ್ಕಾರ, ಈಗ ಮತ್ತೆ 2 ಕಿಲೋ ಕಡಿತ ಮಾಡಿದೆ. ಇದು ಅನ್ಯಾಯ’ ಎಂದು ಅವರು ಹೇಳಿದ್ದಾರೆ.

‘ಯಾವುದೇ ಕಾರಣಕ್ಕೂ ಅಕ್ಕಿ ಪ್ರಮಾಣ ಕಡಿತ ಮಾಡಬಾರದು. ಅದರ ಬದಲು, ಈಗಾಗಲೇ ಭರವಸೆ ನೀಡಿದಂತೆ 5 ಕಿಲೋ ಅಕ್ಕಿ ಜೊತೆಗೆ 3 ಕಿಲೋ ರಾಗಿ ಅಥವಾ ಜೋಳ ಹಂಚಿಕೆ ಮಾಡಬೇಕು. ಬಡವರ ವಿರೋಧಿ ನಿರ್ಣಯ ಕೈಗೊಂಡರೆ ಬಿಜೆಪಿ ಸರ್ಕಾರ ಅದರ ಪರಿಣಾಮ ಎದುರಿಸಬೇಕಾದೀತು’ ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ.

ರಾಜ್ಯ ಸರ್ಕಾರಗಳಿಗೆ ಕೇಂದ್ರ ಆರೋಗ್ಯ ಸಚಿವಾಲಯ ತಾಕೀತು ● ವಿಪತ್ತು ನಿರ್ವಹಣಾ ಕಾಯ್ದೆ ಜಾರಿ ● ಟ್ಯಾಂಕರ್ ಸಂಚಾರಕ್ಕೆ ರಾತ್ರಿ ಕರ್ಫ್ಯೂ ಅನ್ವಯ ಇಲ್ಲ

ಆಮ್ಲಜನಕ ಸಾಗಾಟದ ಟ್ಯಾಂಕರ್ ತಡೆಯುವಂತಿಲ್ಲ

ನವದೆಹಲಿ (ಪಿಟಿಐ): ದ್ರವೀಕೃತ ವೈದ್ಯಕೀಯ ಆಮ್ಲಜನಕವನ್ನು ಸಾಗಿಸುತ್ತಿರುವ ಟ್ಯಾಂಕರ್‌ಗಳು, ಆಮ್ಲಜನಕ ಸಿಲಿಂಡರ್‌ಗಳನ್ನು ಸಾಗಿಸುತ್ತಿರುವ ವಾಹನಗಳ ಸಂಚಾರಕ್ಕೆ ಯಾವುದೇ ಅಡಚಣೆಯಾಗದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ತಾಕೀತು ಮಾಡಿದೆ.

'ಪ್ರತಿರಾಜ್ಯಕ್ಕೆ ಪ್ರತಿದಿನ ಇಂತಿಷ್ಟು ಟನ್ ದ್ರವೀಕೃತ ವೈದ್ಯಕೀಯ ಆಮ್ಲ-ಜನಕವನ್ನು ಕೇಂದ್ರ ಸರ್ಕಾರ ಹಂಚಿಕೆ ಮಾಡಿದ್ದರೂ, ಅದು ಪೂರೈಕೆಯಾ-ಗುತ್ತಿಲ್ಲ. ನಮಗೆ ಹಂಚಿಕೆಯಾಗಿರುವ ಆಮ್ಲಜನಕವನ್ನು ಹರಿಯಾಣ ಮತ್ತು ಉತ್ತರ ಪ್ರದೇಶ ಪೂರೈಸುತ್ತಿಲ್ಲ' ಎಂದು ದೆಹಲಿ ಸರ್ಕಾರವು, ದೆಹಲಿ ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿತ್ತು.

ಇದನ್ನು ಗಂಭೀರವಾಗಿ ಪರಿಗಣಿಸಿದ ಹೈಕೋರ್ಟ್, 'ರಾಜ್ಯಗಳಿಗೆ ಹಂಚಿಕೆಯಾಗಿರುವ ಆಮ್ಲಜನಕವು ಸರಿಯಾಗಿ ಪೂರೈಕೆಯಾಗುವಂತೆ ನೋಡಿಕೊಳ್ಳಿ' ಎಂದು ಕೇಂದ್ರ ಸರ್ಕಾರಕ್ಕೆ ಗುರುವಾರ ಬೆಳಿಗ್ಗೆ ತಾಕೀತು ಮಾಡಿತ್ತು.

ಹರಿಯಾಣ ಮತ್ತು ಉತ್ತರ ಪ್ರದೇಶದ ಪೊಲೀಸರು ಹಾಗೂ ಅಧಿಕಾರಿಗಳು ದೆಹಲಿಗೆ ಬರುತ್ತಿರುವ ಆಮ್ಲಜನಕದ ಟ್ಯಾಂಕರ್‌ಗಳನ್ನು ತಡೆದು ನಿಲ್ಲಿಸುತ್ತಿದ್ದಾರೆ. ಆ ಟ್ಯಾಂಕರ್‌ಗಳು ದೆಹಲಿ ಆಸ್ಪತ್ರೆಯನ್ನು ತಲುಪುತ್ತಲೇ ಇಲ್ಲ. ಈ ಸಮಸ್ಯೆಯನ್ನು ಬಗೆಹರಿಸಿ ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು, ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ್ ಅವರಿಗೆ ಪತ್ರ ಬರೆದಿದ್ದಾರೆ.

ಇದರ ಬೆನ್ನಲ್ಲೇ ಕೇಂದ್ರ ಸರ್ಕಾರವು ವಿಪತ್ತು ನಿರ್ವಹಣಾ ಕಾಯ್ದೆಯನ್ನು ಜಾರಿ ಮಾಡಿ ಆದೇಶ ಹೊರಡಿಸಿದೆ. ಆಮ್ಲಜನಕದ ಟ್ಯಾಂಕರ್ ಮತ್ತು ಆಮ್ಲಜನಕದ ಸಿಲಿಂಡರ್ ಸಾಗಿಸುತ್ತಿರುವ ವಾಹನಗಳ ಓಡಾಟಕ್ಕೆ ಯಾವುದೇ ಅಡಚಣೆಯಾಗಬಾರದು ಎಂದು ಕೇಂದ್ರ ಗೃಹ ಸಚಿವಾಲಯವು ರಾಜ್ಯ ಸರ್ಕಾರಗಳಿಗೆ ತಾಕೀತು ಮಾಡಿದೆ.

'ಆಯಾ ರಾಜ್ಯಗಳಿಗೆ ಹಂಚಿಕೆಯಾಗಿರುವ ಆಮ್ಲಜನಕವನ್ನು ಆಯಾ ರಾಜ್ಯಗಳಿಗೇ ಪೂರೈಕೆ ಮಾಡಬೇಕು. ಆಮ್ಲಜನಕ ತಯಾರಿಕಾ ಘಟಕಗಳು ಇರುವ ರಾಜ್ಯಗಳಿಗೆ ಮಾತ್ರವೇ ಪೂರೈಕೆ ಮಾಡಿ ಬೇರೆ ರಾಜ್ಯಗಳಿಗೆ ಪೂರೈಕೆ ಕಡಿತ ಮಾಡುವ ಹಾಗಿಲ್ಲ' ಎಂದು ಆಮ್ಲಜನಕ ತಯಾರಿಕಾ ಘಟಕಗಳಿಗೆ ಕೇಂದ್ರ ಗೃಹ ಸಚಿವಾಲಯವು ತಾಕೀತು ಮಾಡಿದೆ.

'ಆಯಾ ರಾಜ್ಯಗಳಿಗೆ ಹಂಚಿಕೆಯಾಗಿರುವ ಆಮ್ಲಜನಕವನ್ನು ಕಡ್ಡಾಯವಾಗಿ ಪೂರೈಕೆ ಮಾಡಬೇಕು. ತಮ್ಮ ರಾಜ್ಯದಲ್ಲಿ ತಯಾರಾಗುವ ಆಮ್ಲ-ಜನಕವನ್ನು ಬೇರೆ ರಾಜ್ಯಗಳಿಗೆ ಪೂರೈಕೆ ಮಾಡಲು ರಾಜ್ಯ ಸರ್ಕಾರಗಳು ಅಡಚಣೆ ಉಂಟು ಮಾಡಬಾರದು. ಅಡಚಣೆ ಉಂಟಾಗದಂತೆ ನೋಡಿಕೊಳ್ಳುವ ಹೊಣೆ ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿ ಮತ್ತು ಸಂಬಂಧಿತ ಅಧಿಕಾರಿಗಳದ್ದು. ಅಡಚಣೆಯಾದರೆ ಈ ಅಧಿಕಾರಿ-ಗಳನ್ನೇ ಹೊಣೆ ಮಾಡಲಾಗುತ್ತದೆ' ಎಂದು ಕೇಂದ್ರ ಗೃಹ ಸಚಿವಾಲಯವು ಹೇಳಿದೆ.

ಕೇಂದ್ರದ ಕಟ್ಟುನಿಟ್ಟಿನ ಸೂಚನೆ

- ಆಮ್ಲಜನಕ ತಯಾರಕರು ಮತ್ತು ಪೂರೈಕೆದಾರರ ಮೇಲೆ ರಾಜ್ಯ ಸರ್ಕಾರಗಳು ಯಾವುದೇ ರೀತಿಯ ನಿರ್ಬಂಧ ಹೇರಬಾರದು
- ಏಪ್ರಿಲ್ 22ರಿಂದ ಅನ್ವಯವಾಗುವಂತೆ ಕೈಗಾರಿಕೆಗಳಿಗೆ ಆಮ್ಲಜನಕ ಪೂರೈಕೆ ನಿಷೇಧಿಸಲಾಗಿದೆ. ಮುಂದಿನ ಆದೇಶ ಜಾರಿಗೆ ಬರುವವರೆಗೂ ಈ ನಿಷೇಧ ಜಾರಿಯಲ್ಲಿರಲಿದೆ
- ಆಮ್ಲಜನಕವು ಅಗತ್ಯವಸ್ತುಗಳ ಪಟ್ಟಿಯಲ್ಲಿ ಬರುತ್ತದೆ. ಅದನ್ನು ಸಾಗಿಸುವ ಟ್ಯಾಂಕರ್ ಮತ್ತು ಆಮ್ಲಜನಕದ ಸಿಲಿಂಡರ್ ಸಾಗಿಸುವ ವಾಹನಗಳೂ ಇದೇ ಪಟ್ಟಿಗೆ ಬರುತ್ತವೆ. ಹೀಗಾಗಿ ಈ ವಾಹನಗಳ ಸಂಚಾರಕ್ಕೆ ಅಡಚಣೆ ಮಾಡಬಾರದು
- ರಾಜ್ಯಗಳಲ್ಲಿ ಎಂಥಹದ್ದೇ ನಿರ್ಬಂಧ, ಕರ್ಫ್ಯೂ ಜಾರಿಯಲ್ಲಿದ್ದರೂ ಈ ವಾಹನಗಳ ಸಂಚಾರಕ್ಕೆ ಯಾವುದೇ ಅಡಚಣೆ ಉಂಟಾಗಬಾರದು
- ಈ ನಿಯಮ ದಿನದ 24 ಗಂಟೆಯೂ ಅನ್ವಯವಾಗುತ್ತದೆ. ರಾತ್ರಿ ಕರ್ಫ್ಯೂ ಜಾರಿಯಲ್ಲಿದ್ದರೂ, ಈ ವಾಹನಗಳ ಸಂಚಾರಕ್ಕೆ ಅಡಚಣೆಯಾಗಬಾರದು

ದಿನದ ಬೆಳವಣಿಗೆಗಳು

- ದೆಹಲಿಯಲ್ಲಿನ ಹಲವು ಆಸ್ಪತ್ರೆಗಳು, ನೋಯ್ಡಾದ ಒಂದು ಆಸ್ಪತ್ರೆಯಲ್ಲಿ ಆಮ್ಲಜನಕ ಸಂಗ್ರಹ ಮುಗಿದಿದೆ
- ದೆಹಲಿಗೆ ಹಂಚಿಕೆಯಾಗಿರುವಷ್ಟು ಆಮ್ಲಜನಕವನ್ನು ಪ್ರತಿದಿನವೂ ಪೂರೈಕೆ ಮಾಡುತ್ತಿದ್ದೇವೆ ಎಂದು ಹರಿಯಾಣ ಸರ್ಕಾರ ಸ್ಪಷ್ಟನೆ ನೀಡಿದೆ
- ದೆಹಲಿಗೆ ಬರುವ ಆಮ್ಲಜನಕದ ಟ್ಯಾಂಕರ್ ಮತ್ತು ವಾಹನಗಳ ಪ್ರವೇಶ--ನಿರ್ಬಂಧ ದಾಖಲೆ ನಿರ್ವಹಣೆ ಮಾಡುತ್ತೇವೆ. ಆಗ ಎಷ್ಟು ಆಮ್ಲಜನಕ ಪೂರೈಕೆಯಾಗುತ್ತಿದೆ ಎಂಬುದರ ಲೆಕ್ಕ ಸಿಗುತ್ತದೆ ಎಂದು ದೆಹಲಿ ಸರ್ಕಾರ ಹೇಳಿದೆ
- ಒಡಿಶಾದಲ್ಲಿ ಹೆಚ್ಚು ಆಮ್ಲಜನಕ ತಯಾರಾಗುತ್ತಿದ್ದು, ಕೇಂದ್ರ ಸರ್ಕಾರವು ಸಹಕಾರ ನೀಡಿದರೆ ಹೆಚ್ಚುವರಿ ಆಮ್ಲಜನಕವನ್ನು ಬೇರೆ ರಾಜ್ಯಗಳಿಗೆ ಪೂರೈಕೆ ಮಾಡಲು ಸಿದ್ಧರಿದ್ದೇವೆ ಎಂದು ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಹೇಳಿದ್ದಾರೆ. ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರಿಗೂ ಪತ್ರ ಬರೆದಿದ್ದಾರೆ
- ಒಡಿಶಾದಿಂದ ಆಮ್ಲಜನಕವನ್ನು ಏರ್‌ಲಿಫ್ಟ್ ಮಾಡಲೂ ಸಿದ್ಧರಿದ್ದೇವೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ

ಕಾನ್ಪುರದ ಎಲ್‌ಎಲ್‌ಆರ್ ಆಸ್ಪತ್ರೆಯಲ್ಲಿ ಹಾಸಿಗೆಗಳ ಕೊರತೆ ಇದೆ. ಒಂದೇ ಹಾಸಿಗೆಯಲ್ಲಿ ಇಬ್ಬರು ರೋಗಿಗಳನ್ನು ಮಲಗಿಸಲಾಗಿದೆ ಪಿಟಿಐ ಚಿತ್ರ

ಉತ್ತರ ಪ್ರದೇಶ ಮತ್ತು ಹರಿಯಾಣದಿಂದ ದೆಹಲಿಗೆ ಹೊರಟ ಆಮ್ಲಜನಕದ ಟ್ಯಾಂಕರ್‌ಗಳು ದೆಹಲಿ ತಲುಪುತ್ತಿಲ್ಲ. ಅವನ್ನು ಅಲ್ಲಿನ ಅಧಿಕಾರಿಗಳು ತಡೆದು ನಿಲ್ಲಿಸುತ್ತಿದ್ದಾರೆ

ಮನೀಷ್ ಸಿಸೋಡಿಯಾ, ದೆಹಲಿ ಉಪಮುಖ್ಯಮಂತ್ರಿ

ಎಲ್ಲಾ ರಾಜ್ಯಗಳಿಗೆ ಆಮ್ಲಜನಕ ಪೂರೈಸುವುದು ಕೇಂದ್ರದ ಕೈಯಲ್ಲಿದೆ. ಕೇಂದ್ರ ಸರ್ಕಾರದ ಕಾಲಿಗೆ ಬೇಕಿದ್ದರೂ ಬೀಳುತ್ತೇನೆ, ಅಗತ್ಯವಿರುವಷ್ಟು ಆಮ್ಲಜನಕ ಪೂರೈಸಿ

ರಾಜೇಶ್ ಟೋಪೆ, ಮಹಾರಾಷ್ಟ್ರ ಆರೋಗ್ಯ ಸಚಿವ

ಟ್ಯಾಂಕರ್‌ಗಳ ಕೊರತೆ

ನವದೆಹಲಿ (ಪಿಟಿಐ): ನಮ್ಮ ಘಟಕಗಳಲ್ಲಿ ತಯಾರಿಸಲಾಗುತ್ತಿರುವ ದ್ರವೀಕೃತ ವೈದ್ಯಕೀಯ ಆಮ್ಲಜನಕವನ್ನು (ಎಲ್‌ಎಂಒ) ಪೂರೈಕೆ ಮಾಡುವಲ್ಲಿ ಟ್ಯಾಂಕರ್‌ಗಳ ಕೊರತೆ ಉಂಟಾಗಿದೆ ಎಂದು ಟಾಟಾ ಸ್ಟೀಲ್ ಮತ್ತು ಜೆಎಸ್‌ಪಿಎಲ್ ಕಂಪನಿಗಳು ಹೇಳಿವೆ.

'ನಾವು ಈಗ ಪ್ರತಿದಿನ ಉತ್ತರ ಪ್ರದೇಶ, ಮಧ್ಯಪ್ರದೇಶ, ಆಂಧ್ರಪ್ರದೇಶ, ಜಾರ್ಖಂಡ್, ಒಡಿಶಾ, ಬಿಹಾರ ಮತ್ತು ಪಶ್ಚಿಮ ಬಂಗಾಳಕ್ಕೆ 300 ಟನ್ ಆಮ್ಲಜನಕ ಪೂರೈಕೆ ಮಾಡುತ್ತಿದ್ದೇವೆ. ಪ್ರತಿದಿನ ಪೂರೈಸುವ ಆಮ್ಲಜನಕ ಪ್ರಮಾಣವನ್ನು ಹೆಚ್ಚಿಸುವ ಸಾಮರ್ಥ್ಯವಿದೆ. ಆದರೆ, ಸಂಗ್ರಹ ಮತ್ತು ಪೂರೈಕೆ ಮಾಡಲು ಅಗತ್ಯ ಪ್ರಮಾಣದಷ್ಟು ಟ್ಯಾಂಕರ್‌ಗಳ ಲಭ್ಯತೆ ಇಲ್ಲ. ಆಮ್ಲಜನಕ ಸಾಗಿಸುವ ಕಂಟೇನರ್ ಮತ್ತು ಟ್ರೇಲರ್‌ಗಳ ಕೊರತೆ ಇದೆ' ಎಂದು ಟಾಟಾ ಸ್ಟೀಲ್ ಹೇಳಿದೆ.

'ಟ್ಯಾಂಕರ್‌ಗಳ ಕೊರತೆ ಸಮಸ್ಯೆ ಶೀಘ್ರವೇ ಬಗೆಹರಿಯುತ್ತದೆ ಎಂದು ನಿರೀಕ್ಷಿಸಿದ್ದೇವೆ. ಪರ್ಯಾಯ ಮೂಲಗಳಿಂದಲೂ ಟ್ಯಾಂಕರ್‌ಗಳನ್ನು ಗೊತ್ತು ಮಾಡಲು ಯತ್ನಿಸುತ್ತಿದ್ದೇವೆ' ಎಂದು ಟಾಟಾ ಸ್ಟೀಲ್ ಹೇಳಿದೆ.

'ಟ್ಯಾಂಕರ್‌ಗಳ ಕೊರತೆ ಖಂಡಿತಾ ಇದೆ. ದೇಶದಲ್ಲಿರುವ ಎಲ್ಲಾ ಆಮ್ಲಜನಕ ಟ್ಯಾಂಕರ್‌ಗಳ ಸಂಖ್ಯೆಯನ್ನು ಒಂದೆಡೆ ಕಲೆಹಾಕಬೇಕು. ಟ್ಯಾಂಕರ್‌ಗಳನ್ನು ನಿಗದಿತ ರಾಜ್ಯಗಳಿಗೆ ನಿಯೋಜನೆ ಮಾಡಬೇಕು. ಈಗ ಪ್ರತಿದಿನ 100 ಟನ್ ಆಮ್ಲಜನಕ ಪೂರೈಕೆ ಮಾಡುತ್ತಿದ್ದೇವೆ. ಟ್ಯಾಂಕರ್‌ಗಳು ಲಭ್ಯವಾದರೆ, ಪ್ರತಿದಿನ 500 ಟನ್ ಆಮ್ಲಜನಕ ಪೂರೈಸುತ್ತೇವೆ' ಎಂದು ಜೆಎಸ್‌ಪಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ವಿ.ಆರ್.ಶರ್ಮಾ ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ತನ್ನ ಘಟಕಗಳಿಂದ ಪ್ರತಿದಿನ 600 ಟನ್ ಆಮ್ಲಜನಕ ಪೂರೈಕೆ ಮಾಡುತ್ತಿದೆ.

ಸ್ಟೆರ್‌ಲೈಟ್ ಘಟಕಕ್ಕೆ ಅವಕಾಶ: ವಿಚಾರಣೆಗೆ ಒಪ್ಪಿಗೆ

ತೂತ್ತುಕುಡಿಯಲ್ಲಿನ ಸ್ಟೆರ್‌ಲೈಟ್ ತಾಮ್ರ ಸಂಸ್ಕರಣ ಘಟಕದಲ್ಲಿ ಆಮ್ಲಜನಕ ತಯಾರಿಕೆಗೆ ಅನುಮತಿ ನೀಡಲು ತಮಿಳುನಾಡು ಸರ್ಕಾರವು ನಿರಾಕರಿಸಿದೆ. ಈ ವಿಚಾರದಲ್ಲಿ ತಮಿಳುನಾಡು ಸರ್ಕಾರವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. 'ದೇಶದಲ್ಲಿ ಈಗ ರಾಷ್ಟ್ರೀಯ ತುರ್ತು ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಬೇರೆ ಅಂಶಗಳನ್ನು ಬದಿಗೆ ಇರಿಸಿ, ಇಂತಹ ಕೆಲಸಗಳಿಗೆ ಆದ್ಯತೆ ನೀಡಬೇಕು' ಎಂದು ಹೇಳಿದೆ. ಆಮ್ಲಜನಕ ತಯಾರಿಕೆಗೆ ಅನುಮತಿ ಕೋರಿರುವ ಅರ್ಜಿಯನ್ನು ಶುಕ್ರವಾರ ವಿಚಾರಣೆಗೆ ಎತ್ತಿಕೊಳ್ಳು-ವುದಾಗಿ ಹೇಳಿದೆ.

ಕೇಂದ್ರ ಸರ್ಕಾರಕ್ಕೆ ಬಾಂಬೆ ಹೈಕೋರ್ಟ್ ಸೂಚನೆ

ಮನೆಯಲ್ಲೇ ಲಸಿಕೆ ನೀಡಿಕೆ ಇಲ್ಲ: ನೀತಿ ಮರುಪರಿಶೀಲಿಸಿ

ಮುಂಬೈ (ಪಿಟಿಐ): 'ಮನೆ-ಮನೆಗೆ ಹೋಗಿ ಲಸಿಕೆ ಹಾಕುವುದು ಕಾರ್ಯ-ಸಾಧುವಲ್ಲ ಎಂಬ ತನ್ನ ನಿಲುವನ್ನು ಕೇಂದ್ರ ಸರ್ಕಾರ ಪುನರ್‌ಪರಿಶೀಲಿಸ-ಬೇಕು' ಎಂದು ಬಾಂಬೆ ಹೈಕೋರ್ಟ್ ಗುರುವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ವಯಸ್ಸಾದವರು ಮತ್ತು ಅಂಗವಿಕಲರು ಪಡುತ್ತಿರುವ ಪಾಡನ್ನು ಸರ್ಕಾರ ಗಮನದಲ್ಲಿಟ್ಟು ಕೊಳ್ಳಬೇಕು ಎಂದು ನ್ಯಾಯಾಲಯ ಹೇಳಿದೆ.

ಸರ್ಕಾರವು, ವಯಸ್ಸಾದವರ-ನ್ನು ಸಾಯಲು ಬಿಡಬಾರದು ಎಂದು ಮುಖ್ಯ ನ್ಯಾಯಮೂರ್ತಿ ದೀಪಂಕರ ದತ್ತಾ ಮತ್ತು ನ್ಯಾಯಮೂರ್ತಿ ಜಿ.ಎಸ್. ಕುಲಕರ್ಣಿ ಅವರ ವಿಭಾಗೀಯ ಪೀಠ ಹೇಳಿತು.

'ಲಸಿಕೆ ಕಲುಷಿತವಾಗುವ ಮತ್ತು ಪೋಲಾಗುವ ಸಂಭವ ಸೇರಿದಂತೆ ವಿವಿಧ ಕಾರಣಗಳಿಂದ ಮನೆ-ಮನೆಗೆ ತೆರಳಿ ಲಸಿಕೆ ಹಾಕಲು ಸಾಧ್ಯವಾಗುವು-ದಿಲ್ಲ' ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ನ್ಯಾಯಾಲಯಕ್ಕೆ ಬುಧವಾರ ತಿಳಿಸಿತ್ತು. ವಕೀಲರಾದ ಧೃತಿ ಕಪಾಡಿಯಾ ಮತ್ತು ಕುನಾಲ್ ತಿವಾರಿ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಉತ್ತರವಾಗಿ ಕೇಂದ್ರ ಸರ್ಕಾರ ತನ್ನ ಅಭಿ-ಪ್ರಾಯವನ್ನು ಮುಂದಿಟ್ಟಿತ್ತು. 75 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಮತ್ತು ಅಂಗವಿಕಲರಿಗೆ, ದೀರ್ಘಕಾಲದಿಂದ ಹಾಸಿಗೆ ಹಿಡಿದವರಿಗೆ, ಗಾಲಿ ಕುರ್ಚಿಗಳನ್ನು ಅವಲಂಬಿಸಿರುವ ವ್ಯ-ಕ್ತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಮನೆ-ಮನೆಗೆ ತೆರಳಿ ಲಸಿಕೆ ಹಾಕಲು ಸೂಚಿಸಬೇಕು ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

'ಅನಾರೋಗ್ಯದ ಕಾರಣದಿಂದ ಎಷ್ಟೋ ಮಂದಿ ಹಿರಿ ವಯಸ್ಸಿನವರಿ-ಗೆ ಮನೆಯಿಂದ ಹೊರಬರಲು ಆಗದ ಸ್ಥಿತಿಯಿದೆ. ಪುಟ್ಟ ಮಕ್ಕಳು ಮತ್ತು ವೃದ್ಧಾಪ್ಯದಲ್ಲಿರುವವರು ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿರುವು-ದಿಲ್ಲ. ಅವರ ಬಗ್ಗೆ ನಾವು ಗಮನಕೊ-ಡಬೇಕಾಗಿದೆ. ಇದು ಸಾಧ್ಯವಿಲ್ಲ ಎಂದು ಹೇಳಿ ವಿಷಯವನ್ನು ಮುಗಿಸಬೇಡಿ. ಇದೇ ನೀತಿಯಾಗಬಾರದು. ವಯಸ್ಸಾದವರ ಪಡಿಪಾಟಲನ್ನು ಮನಸ್ಸಿನಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ಈ ಬಗ್ಗೆ ಮರುಚಿಂತನೆ ನಡೆಸಬೇಕು' ಎಂದು ನ್ಯಾಯಾಲಯ ಹೇಳಿತು.

'ವಯಸ್ಸಾದ ಹಲವರಿಗೆ ನಾನಾ ಕಾಯಿಲೆಗಳಿರುತ್ತವೆ. ಲಸಿಕೆ ನೀಡಿದ ನಂತರ ಅರ್ಧ ಗಂಟೆ ಅವರ ಆರೋಗ್ಯದ ಮೇಲೆ ಗಮನ ಇಡಬೇಕಾಗುತ್ತದೆ. ಇದರಿಂದ ಮನೆ-ಮನೆಗೆ ತೆರಳಿ ಲಸಿಕೆ ಹಾಕಲು ಸಾಧ್ಯವಾಗುವುದಿಲ್ಲ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಅನಿಲ್ ಸಿಂಗ್ ವಾದಿಸಿದರು.

'ಇದಕ್ಕೆ ಸೂಕ್ತವಾದ ಮಧ್ಯಮ ಮಾರ್ಗ ಕಂಡುಕೊಳ್ಳಬೇಕಾಗುತ್ತದೆ. ಇಂಥ ಅನಾರೋಗ್ಯ ಇರುವವರಿಗೆ ಲಸಿಕೆಯ ಅಗತ್ಯ ಎಲ್ಲರಿಗಿಂತ ಹೆಚ್ಚು ಇರುತ್ತದೆ' ಎಂದು ನ್ಯಾಯಾಲಯ ಹೇಳಿತು.

ದೆಹಲಿಯ ಎಲ್‌ಎನ್‌ಜೆಪಿ ಆಸ್ಪತ್ರೆಯಲ್ಲಿ ಹಾಸಿಗೆ ದೊರೆಯದ ಕಾರಣ ಕೋವಿಡ್ ರೋಗಿಯೊಬ್ಬರನ್ನು ಅವರ ಕುಟುಂಬದವರು ಹೊತ್ತು ಸಾಗಿದರು ಪಿಟಿಐ ಚಿತ್ರ

ನಿರಂಕುಶ ಲಸಿಕೆ ನೀತಿ–ಪ್ರಧಾನ ಮಂತ್ರಿ ಮಧ್ಯಪ್ರವೇಶಕ್ಕೆ ಸೋನಿಯಾ ಗಾಂಧಿ ಒತ್ತಾಯ

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹೊಸ ಕೋವಿಡ್ 19 ಲಸಿಕೆ ನೀತಿ ನಿರಂಕುಶವಾಗಿದ್ದು, ತಾರತಮ್ಯದಿಂದ ಕೂಡಿದೆ. ಇದನ್ನು ಸರಿಪಡಿಸಲು ತಕ್ಷಣ ಮಧ್ಯಪ್ರವೇಶಿ-ಸಬೇಕು ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಸೋನಿಯಾ ಗಾಂಧಿ

ಈ ಬಗ್ಗೆ ಗುರುವಾರ ಪ್ರಧಾನಿಗೆ ಪತ್ರ ಬರೆದಿರುವ ಅವರು, ಹೊಸ ಕೋವಿಡ್ ಲಸಿಕೆ ನೀತಿಯು 18 ವರ್ಷದಿಂದ 45 ವರ್ಷದೊಳಗಿರುವ ಎಲ್ಲ ನಾಗರಿಕರಿಗೆ ಉಚಿತವಾಗಿ ಲಸಿಕೆ ನೀಡುವ ಜವಾಬ್ದಾರಿಯಿಂದ ಕೇಂದ್ರ ಹಿಂದೆ ಸರಿದಿರುವುದನ್ನು ತೋರಿಸುತ್ತದೆ ಎಂದು ಆರೋಪಿಸಿದ್ದಾರೆ.

ಲಸಿಕೆಗೆ ಏಕರೂಪದ ಬೆಲೆ ನಿಗದಿ-ಯಾಗುವುದರಿಂದ ಎಲ್ಲರಿಗೂ ಅನು-ಕೂಲವಾಗುತ್ತದೆ. ಈ ಬಗ್ಗೆ ಎಲ್ಲರಿಗೂ ಅರಿವಿದೆ. ಪ್ರಧಾನಿ ಮೋದಿಯವರು ತಕ್ಷಣ ಮಧ್ಯಪ್ರವೇಶಿಸಿ, ಲಸಿಕೆ ನೀತಿಯಲ್ಲಿರುವ ತಾರತಮ್ಯವ-ನ್ನು ಸರಿಪಡಿಸುವಂತೆ ಅವರು ಒತ್ತಾಯಿ-ಸಿದ್ದಾರೆ.

ಮಮತಾ ವಾಗ್ದಾಳಿ: ಕೋಲ್ಕತ್ತ ವರದಿ: ಕೇಂದ್ರ, ರಾಜ್ಯ ಸರ್ಕಾರ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಮಾರಾಟ ಮಾಡುವ ಕೊರೊನಾ ಲಸಿಕೆಗೆ ದರ ನಿಗದಿಯಲ್ಲಾಗಿರುವ 'ಅಸಮಾನತೆ'ಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ಲಸಿಕೆಗೆ ಏಕರೂಪ ದರ ನಿಗದಿಪಡಿಸಬೇಕು' ಎಂದು ಒತ್ತಾಯಿಸಿದರು.

'ಯಾವಾಗಲೂ ಒಂದು ದೇಶ, ಒಂದು ಪಕ್ಷ, ಒಬ್ಬ ನಾಯಕ' ಎಂದು ಕೂಗಾಡುವ ಬಿಜೆಪಿ, ದೇಶದ ಜನರ ಜೀವ ಉಳಿಸುವ ಲಸಿಕೆಯ ವಿಚಾರದಲ್ಲಿ ಏಕೆ ಒಂದೇ ಬೆಲೆಯನ್ನು ನಿಗದಿಪಡಿಸು-ವುದಿಲ್ಲ' ಎಂದು ಮಮತಾ ಪ್ರಶ್ನಿಸಿದ್ದಾ-ರೆ. ಲಸಿಕೆಗೆ ದರ ನಿಗದಿ ವಿಚಾರದಲ್ಲಿ, ರಾಜ್ಯ, ಕೇಂದ್ರ, ವಯಸ್ಸು ಯಾವುದನ್ನೂ ನೋಡದೇ ಏಕರೂಪ ದರವನ್ನು ನಿಗ-ದಿಪಡಿಸಬೇಕು' ಎಂದು ಮಮತಾ ಟ್ವೀಟ್ ಮಾಡಿದ್ದಾರೆ.

ಕೋವಿಡ್: ಇಂದು ಪ್ರಧಾನಿ ಅಧ್ಯಕ್ಷತೆಯಲ್ಲಿ ಸರಣಿ ಸಭೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಅಂಗವಾಗಿ ಶುಕ್ರವಾರ (ಏ.23) ನಡೆಯಲಿರುವ ಚುನಾವಣಾ ಸಭೆಗಳನ್ನು ಪ್ರಧಾನಿ ನರೇಂದ್ರ ಮೋದಿ ರದ್ದುಗೊಳಿಸಿ-ದ್ದಾರೆ. ದೇಶದಲ್ಲಿನ ಕೋವಿಡ್–19 ಪರಿಸ್ಥಿತಿ ಕುರಿತು ಪರಿಶೀಲಿಸಲು ಅವರು ಸರಣಿ ಸಭೆಗಳನ್ನು ನಡೆಸುವರು.

'ಕೋವಿಡ್–19 ಪರಿಸ್ಥಿತಿ ಕುರಿತು ಚರ್ಚಿಸಲು ನಾಳೆ ನಡೆಯಲಿರುವ ಉನ್ನತ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸುತ್ತಿರುವೆ. ಹೀಗಾಗಿ ನಾನು ಪಶ್ಚಿಮ ಬಂಗಾಳಕ್ಕೆ ಹೋಗುತ್ತಿಲ್ಲ' ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ಬೆಳಿಗ್ಗೆ 9ಕ್ಕೆ ಕೇಂದ್ರ ಸಚಿವರು, ಅಧಿಕಾರಿಗಳೊಂದಿಗೆ ಸಭೆ ನಡೆಸುವರು. ನಂತರ, ಅಧಿಕ ಸಂಖ್ಯೆಯ ಕೋವಿಡ್–19 ಪ್ರಕರಣಗಳು ವರದಿಯಾಗಿರುವ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸುವರು ಎಂದು ಮೂಲಗಳು ಹೇಳಿವೆ.

ಆಮ್ಲಜನಕ ಉತ್ಪಾದಿಸುವ ದೇಶದ ಪ್ರಮುಖ ಕಂಪನಿಗಳ ಪ್ರತಿನಿಧಿಗ-ಳೊಂದಿಗೆ ಮಧ್ಯಾಹ್ನ 12.30ಕ್ಕೆ ಸಭೆ ನಡೆಸುವರು.

ಪಶ್ಚಿಮ ಬಂಗಾಳದಲ್ಲಿ ನಿಗದಿಯಾಗಿದ್ದ ಚುನಾವಣಾ ರ‍್ಯಾಲಿಗಳನ್ನು ರದ್ದುಗೊಳಿಸಿರುವುದ-ರಿಂದ, ವರ್ಚುವಲ್ ವ್ಯವಸ್ಥೆ ಮೂಲಕ ಮೋದಿ ಅವರು ಮತದಾರರನ್ನು ಉದ್ದೇಶಿಸಿ ಮಾತನಾಡುವರು ಎಂದು ಇವೇ ಮೂಲಗಳು ಹೇಳಿವೆ.

ಬಾಲಮಂದಿರದಲ್ಲಿನ ಮಕ್ಕಳಿಗೆ ಕೋವಿಡ್: ಮಾಹಿತಿಗೆ ಸೂಚನೆ

ನವದೆಹಲಿ (ಪಿಟಿಐ): ದೇಶದ ಬಾಲಮಂದಿರಗಳಲ್ಲಿರುವವರ ಪೈಕಿ ಎಷ್ಟು ಮಕ್ಕಳಲ್ಲಿ ಕಳೆದ ತಿಂಗಳು ಕೋವಿಡ್–19 ಕಾಣಿಸಿಕೊಂಡಿದೆ ಎಂಬ ಮಾಹಿತಿ ನೀಡುವಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಎಲ್ಲ ರಾಜ್ಯಗಳಿಗೆ ಸೂಚಿಸಿದೆ.

ಈ ಕುರಿತು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಹಾಗೂ ಕಾರ್ಯ-ದರ್ಶಿಗಳಿಗೆ ಆಯೋಗದ ಅಧ್ಯಕ್ಷ ಪ್ರಿಯಾಂಕ್ ಕನುಂಗೊ, ಕೋವಿಡ್–19 ಪಿಡುಗು ವ್ಯಾಪಕವಾಗುತ್ತಿರುವ ಈ ಸಮಯದಲ್ಲಿ ಬಾಲಮಂದಿರಗಳ-ಲ್ಲಿರುವ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಮುಖ್ಯ ಎಂದು ಹೇಳಿದ್ದಾರೆ.

ಬಾಲಮಂದಿರಗಳಲ್ಲಿರುವ ಮಕ್ಕಳಲ್ಲಿಯೂ ಕೋವಿಡ್–19 ಕಂಡುಬಂದಿದೆ ಎಂಬುದಾಗಿ ಮಾಧ್ಯಮಗಳ ವರದಿಗಳ ಹಿನ್ನೆಲೆಯಲ್ಲಿ ಈ ಮಾಹಿತಿ ಕೇಳಲಾಗಿದೆ ಎಂದು ಆಯೋಗ ತಿಳಿಸಿದೆ.

ಆರೈಕೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಲ್ಲಿ (ಸಿಎನ್‌ಸಿಪಿ) ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳಲ್ಲಿ (ಸಿಐಸಿಎಲ್) ಎಷ್ಟು ಮಕ್ಕಳಿಗೆ ಕೋವಿಡ್ ದೃಢಪಟ್ಟಿದೆ ಎಂಬ ಮಾಹಿತಿಯನ್ನು ನೀಡುವಂತೆಯೂ ಆಯೋಗ ತಿಳಿಸಿದೆ.

ದೆಹಲಿ: ಆಂಬುಲೆನ್ಸ್‌ಗಳಿಗೆ ಭಾರಿ ಬೇಡಿಕೆ

ನವದೆಹಲಿ (ಪಿಟಿಐ): ದೆಹಲಿ ನಗರದಲ್ಲಿ ಕೋವಿಡ್ ರೋಗಿಗಳನ್ನು ಆಸ್ಪತ್ರೆಗೆ ಸೇರಿಸುವ ಸಲುವಾಗಿ ಆಂಬು-ಲೆನ್ಸ್‌ಗಳಿಗೆ ಭಾರಿ ಬೇಡಿಕೆ ಸೃಷ್ಟಿಯಾಗಿದೆ. ಈ ಸಲುವಾಗಿ ಕಳೆದೊಂದು ವಾರದಿಂದ ನಿತ್ಯವೂ 2,550 ಕರೆಗಳು ಬಂದಿವೆ. ನಗರಾಡಳಿತವು ನೀಡಿರುವ ಈ ದತ್ತಾಂಶವನ್ನು ಗಮನಿಸಿದರೆ ದೆಹಲಿಯಲ್ಲಿ ಕೋವಿಡ್ ಅಲೆಯ ಹೊಡೆತ ಎಷ್ಟಿದೆ ಎಂದು ತಿಳಿಯುತ್ತದೆ.

ಒಟ್ಟಾರೆ ಒಂದು ವಾರದಲ್ಲಿ 17,924 ಕರೆಗಳು ಬಂದಿವೆ. ಹಿಂದಿನ ವಾರಗಳಿಗೆ ಹೋಲಿಸಿದರೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಏಪ್ರಿಲ್ ಮೊದಲ ವಾರದಲ್ಲಿ 1,900 ಕರೆಗಳು ಬಂದಿದ್ದವು.

ಏಪ್ರಿಲ್ 15 ಮತ್ತು 16ರಂದು 2,279, ಏಪ್ರಿಲ್ 20ರಂದು 2,861, ಏಪ್ರಿಲ್ 21ರಂದು 2,618 ಆಂಬು-ಲೆನ್ಸ್‌ಗಳನ್ನು ಬೇಡಿಕೆ ಮೇರೆಗೆ ಕಳು-ಹಿಸಿಕೊಡಲಾಗಿದೆ. ಈ ಅವಧಿಯಲ್ಲಿ ದೆಹಲಿಯಲ್ಲಿ 1,347 ಜನರು ಮೃತಪ-ಟ್ಟಿದ್ದಾರೆ.

ಸಾವಿನ ಸಂಖ್ಯೆಯಲ್ಲಿನ ಹೆಚ್ಚಳದಿಂದಾಗಿ, ಅಧಿಕಾರಿಗಳು ಈಗ ನೇರ ಮೇಲ್ವಿಚಾರಣಾ ವ್ಯವಸ್ಥೆ ಜಾರಿಗೊಳಿಸಿದ್ದಾರೆ. ಸ್ಮಶಾನಗಳ ನಿರ್ವಹಣೆಗೆ ನಿಯಂತ್ರಣ ಕೊಠಡಿ ಪ್ರಾರಂಭಿಸಿದ್ದಾರೆ.

ಮುಂಬೈನ ಪವನ ಧಾಮ್ ದೇವಾಲಯ ಟ್ರಸ್ಟ್ ತನ್ನ ಆವರಣದಲ್ಲಿ ಕೋವಿಡ್ ಕೇಂದ್ರವನ್ನು ಆರಂಭಿಸಿದೆ. ಟ್ರಸ್ಟ್‌ನ ನೌಕರರು ಗುರುವಾರ ಕೋವಿಡ್ ಕೇಂದ್ರದಲ್ಲಿ ಹಾಸಿಗೆಗಳ ಜೋಡಣೆಯನ್ನು ಅಂತಿಮಗೊಳಿಸಿದರು– ಪಿಟಿಐ ಚಿತ್ರ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029.
ದೂ.: 080–29753350 ಇ–ಮೇಲ್: karbuildworkerswelfare@gmail.com

ಸಂಖ್ಯೆ: KBOCWB/HSN/E.Kit/CR-01/2020-21 ದಿನಾಂಕ: 22.04.2021

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಈ ಅಧಿಸೂಚನೆಯಲ್ಲಿ ವಿವರಿಸಿದ ಉಲ್ಲೇಖದ ನಿಯಮಗಳ ಪ್ರಕಾರ ಎರಡು ಹಂತದ ಇ–ಟೆಂಡರ್‌ನ್ನು (ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಈ ಕೆಳಗಿನ ಸೇವೆಗಳಿಗೆ ಮತ್ತು ನಿಗದಿಪಡಿಸಿದ ಅವಧಿಗಾಗಿ ಅರ್ಹ ಏಜನ್ಸಿಗಳಿಂದ ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಸೇವೆಯ ವಿವರಗಳು	ಅವಧಿ	ಮುಂಗಡ ಠೇವಣಿ ಹಣ (ಇಎಂಡಿ)
KBOCWB/HSN/E.Kit/CR-01/2020-21	ಕ.ಕ&ಇ.ನಿ.ಕಾ.ಕ.ಮಂಡಳಿಯಿಂದ ಹಾಸನ ಪ್ರಾದೇಶಿಕ ವ್ಯಾಪ್ತಿಯಲ್ಲಿನ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಅವಶ್ಯಕತ ಕಿಟ್‌ಗಳನ್ನು ಪೂರೈಸಲು ಮತ್ತು ಸರಬರಾಜು ಮಾಡಲು ಸಂಸ್ಥೆಗಳನ್ನು ಆಯ್ಕೆ ಮಾಡುವ ಕುರಿತು.	90 ದಿನಗಳು	ಮುಂಗಡ ಠೇವಣಿ ಹಣದ ವಿನಾಯಿತಿ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 675 ಇಎಕ್ಸ್‌ಪಿ–12/2020, ದಿನಾಂಕ: 22–12–2020 ರನ್ವಯ ಇಎಂಡಿ ಘೋಷಣೆಯನ್ನು ಒದಗಿಸುವುದು.

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜನ್ಸಿಗಳು ಇ–ಪ್ರೊಕ್ಯೂರ್‌ಮೆಂಟ್ https://eproc.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **11.05.2021** ರಂದು **ಸಂಜೆ 5:00 ಗಂಟೆಯವರೆಗೆ** ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ **ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ. ಮಂಡಳಿ** ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಜಂಟಿ ಕಾರ್ಯದರ್ಶಿಗಳು, ಕ.ಕ.&ಇ.ನಿ.ಕಾ.ಕ. ಮಂಡಳಿ

ವಾಸಾಸಂಇ/ಉನಿನ/ಎಲ್‌ಸಿ/245/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ–585105
ದೂರವಾಣಿ ಸಂಖ್ಯೆ: 08472–278634/256944, E-mail: eerwssglb14@gmail.com

ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2021–22/97 ದಿನಾಂಕ: 19–04–2021

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ : **ಆಳಂದ ತಾಲೂಕಿನ–06 (Indent No-33382, 33385, 33387, 29289, 27849 & 27836), ಸೇಡಂ ತಾಲೂಕಿನ–02 (Indent No-31296 call-3 & 33035 call-3) ಚಿಂಚೋಳಿ ತಾಲೂಕಿನ–03 (Indent No-33365, 29297 & 29296),** 3) ಟೆಂಡರಿಗಿಟ್ಟ ಮೊತ್ತ : ಕನಿಷ್ಠ : 56,53,000/- ಗರಿಷ್ಠ : 92,20,000/-, 3) ಲೆಕ್ಕ ಶೀರ್ಷಿಕೆ : **Jal Jeevan Mission 2020-21,** 4) ಗುತ್ತಿಗೆದಾರರ ಅರ್ಹತೆ : 3ನೇ & 2ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ : **22–04–2021 ರಿಂದ 06–05–2021,** 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ :ಇ–ಪ್ರೊಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 06–05–2021 ಸಾಯಂಕಾಲ 4:00 ಗಂಟೆವರೆಗೆ, 8) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : 07–05–2021 ಸಾಯಂಕಾಲ 4:01 ಗಂಟೆವರೆಗೆ, 9) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : 10–05–2021 ಬೆ. 11.00 ಗಂಟೆಯ ನಂತರ, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 11) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/87/ಎಂ.ಸಿ&ಎ/2021–22

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ಫೋನ್ : 080–22265383
website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಡಿಪಿಆರ್–01/884/2021–22 ದಿನಾಂಕ: 20.04.2021

ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಯೋಜನೆಗೆ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸುವುದಕ್ಕಾಗಿ ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ದಾಖಲೆಯುಳ್ಳ ಮತ್ತು ಹೆಚ್ಚಿನ ಅನುಭವವಿರುವ, ಬೆಂಗಳೂರಿನಲ್ಲಿ ಕಛೇರಿಯುಳ್ಳ ಪ್ರತಿಷ್ಠಿತ ಅರ್ಹ ಸಮಾಲೋಚಕರು / ಸಂಸ್ಥೆಗಳಿಂದ ದ್ವಿ–ಲಕೋಟೆ ಬಿಡ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ.

ಕಾಮಗಾರಿಯ ಹೆಸರು: ರಾಮನಗರ ಜಿಲ್ಲೆ, ಬಿಡದಿ ಹೋಬಳಿ, ಹಾರೋಹಳ್ಳಿ 5ನೇ ಹಂತ ಕೈಗಾರಿಕಾ ಪ್ರದೇಶಗಳಿಗೆ ಪ್ರಸ್ತಾಪಿಸಿದ ರಚನೆಗಾಗಿ ಆರ್ಥಿಕ ವಿಶ್ಲೇಷಣೆ, ಸಮೀಕ್ಷೆ, ಬಡಾವಣೆ ನಕ್ಷೆ, ವಿನ್ಯಾಸ, ಅಂದಾಜು ಪಟ್ಟಿ, ಇತ್ಯಾದಿ ಒಳಗೊಂಡಂತೆ ವಿವರವಾದ ಯೋಜನಾ ವರದಿ (ಡಿಪಿಆರ್)ಯನ್ನು ಒಳಗೊಂಡಂತೆ ಸಲಹಾ ಸೇವೆಗಳನ್ನು ಒದಗಿಸುವುದು. (ವಿಸ್ತೀರ್ಣ 912ಎ–12½ ಗುಂ)

ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 12.05.2021, ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/DDU/R.O:227/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸುಭಾಷಿತ

ದೊಡ್ಡ ಮಟ್ಟದ ಗೆಲುವಿಗಾಗಿ ನೀವು ಕೆಲವೊಮ್ಮೆ ದೊಡ್ಡ ಮಟ್ಟದ ಅಪಾಯಕಾರಿ ಸವಾಲುಗಳನ್ನು ಸ್ವೀಕರಿಸಬೇಕಾಗುತ್ತದೆ.

-ಬಿಲ್ ಗೇಟ್ಸ್

ಎಲ್ಲರಿಗೂ ಕೋವಿಡ್ ಲಸಿಕೆ ಲಭ್ಯತೆಯನ್ನು ಸರ್ಕಾರ ಖಾತರಿಪಡಿಸಲಿ

ಕೋವಿಡ್-19 ಪಿಡುಗು ದೇಶವನ್ನು ಮತ್ತೆ ವಿಷಮ ಸ್ಥಿತಿಗೆ ತಳ್ಳಿದೆ. ಈ ರೋಗಕ್ಕೆ ಪರಿಣಾಮಕಾರಿ ಔಷಧ ಇಲ್ಲ. ಆದರೆ, ಅತ್ಯಂತ ತ್ವರಿತವಾಗಿ ಲಸಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ. ಕೋವಿಡ್‌ನಿಂದ ಸುರಕ್ಷಿತವಾಗಿ ಇರಲು ಲಸಿಕೆ ಹಾಕಿಸಿಕೊಳ್ಳುವುದೇ ಈಗ ಲಭ್ಯ ಇರುವ ಅತ್ಯಂತ ಪರಿಣಾಮಕಾರಿ ವಿಧಾನ. ಈವರೆಗೆ ಲಸಿಕೆ ಎಲ್ಲರಿಗೂ ದೊರಕುತ್ತಿರಲಿಲ್ಲ. 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಮೇ 1ರಿಂದ ಲಸಿಕೆ ಹಾಕಿಸಿಕೊಳ್ಳಲು ಅವಕಾಶ ಇದೆ ಎಂದು ಸರ್ಕಾರ ಮಾರ್ಗಸೂಚಿ ರೂಪಿಸಿದೆ. ಸಾಂಕ್ರಾಮಿಕದ ಸಂದರ್ಭದಲ್ಲಿ ಅದರಿಂದ ರಕ್ಷಿಸಿಕೊಳ್ಳುವುದು ಎಲ್ಲರ ಮೂಲಭೂತ ಹಕ್ಕು. ಲಸಿಕೆ ಬೇಕೆಂದು ಬಯಸುವ ಎಲ್ಲರಿಗೂ ಲಸಿಕೆ ನೀಡಲಾಗದು ಎಂದು ಇತ್ತೀಚೆಗಷ್ಟೇ ಹೇಳಿದ್ದ ಸರ್ಕಾರ, ಸಾರ್ವಜನಿಕರು ಮತ್ತು ಪರಿಣತರ ಒತ್ತಡಕ್ಕೆ ಮಣಿದು 18 ವರ್ಷ ಮೀರಿದ ಎಲ್ಲರಿಗೂ ಲಸಿಕೆ ಹಾಕಿಸಿಕೊಳ್ಳಲು ಅವಕಾಶ ಒದಗಿಸಿರುವುದು ಸ್ವಾಗತಾರ್ಹ ಕ್ರಮ. ಆದರೆ, ಅದಕ್ಕೆ ಬೇಕಾದ ಪೂರ್ವಸಿದ್ಧತೆ ಮಾಡಿಕೊಳ್ಳದೆ ಸರ್ಕಾರವು ವೈಫಲ್ಯ ಮೆರೆದಿದೆ. ಈ ಸಂಕಷ್ಟದ ಸನ್ನಿವೇಶದಲ್ಲಿ ಜೀವ ರಕ್ಷಣೆಗಾಗಿ ಇರುವ ಲಸಿಕೆಯ ವಿಚಾರದಲ್ಲಿ ಹತ್ತಾರು ಗೊಂದಲಗಳನ್ನು ಸೃಷ್ಟಿಸಿರುವುದು ಸರಿಯಲ್ಲ. ಜನವರಿ 16ರಿಂದ ಆರಂಭವಾದ ಲಸಿಕೆ ಅಭಿಯಾನ ಕುಂಟುತ್ತಲೇ ಸಾಗಿದೆ. ಗುರುವಾರದವರೆಗೆ 13.23 ಕೋಟಿ ಜನರಿಗೆ ಮಾತ್ರ ಲಸಿಕೆ ನೀಡಲಾಗಿದೆ ಎಂಬ ಮಾಹಿತಿ ಕೇಂದ್ರ ಆರೋಗ್ಯ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಇದೆ. ನಾಲ್ಕು ದಿನಗಳ 'ಲಸಿಕೆ ಉತ್ಸವ' ನಡೆಸಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವಾರ ಕರೆ ನೀಡಿದ್ದರು. ಆದರೆ, ಈ ಅವಧಿಯಲ್ಲಿ ಲಸಿಕೆ ನೀಡಿಕೆಗೆ ಇನ್ನಷ್ಟು ಹಿನ್ನಡೆ ಆಯಿತು ಎಂಬುದು ವರ್ತಮಾನದ ಸ್ಥಿತಿಗೆ ಕನ್ನಡಿ ಹಿಡಿಯುತ್ತದೆ. ಕೋವಿಶೀಲ್ಡ್ ಲಸಿಕೆ ತಯಾರಿಸುವ ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ತಿಂಗಳಿಗೆ 7 ಕೋಟಿಯಿಂದ 10 ಕೋಟಿ ಡೋಸ್ ಮತ್ತು ಕೋವ್ಯಾಕ್ಸಿನ್ ತಯಾರಿಸುವ ಹೈದರಾಬಾದ್‌ನ ಭಾರತ್ ಬಯೋಟೆಕ್ ಸಂಸ್ಥೆಯು 1.2 ಕೋಟಿ ಡೋಸ್ ಲಸಿಕೆ ತಯಾರಿಸುವ ಸಾಮರ್ಥ್ಯ ಹೊಂದಿವೆ. ಈ ಪ್ರಮಾಣದ ಉತ್ಪಾದನೆಯಲ್ಲಿ ಈ ವರ್ಷದ ಡಿಸೆಂಬರ್ ಕೊನೆಯ ಹೊತ್ತಿಗಷ್ಟೇ ಶೇ 70ರಷ್ಟು ಜನರಿಗೆ ಲಸಿಕೆ ಹಾಕಿಸಲು ಸಾಧ್ಯ. ರಷ್ಯಾದ ಸ್ಪುಟ್ನಿಕ್-ವಿ ಲಸಿಕೆಯ ಬಳಕೆಗೆ ಅನುಮೋದನೆ ನೀಡಲಾಗಿದೆ. ಆದರೆ, ಎಷ್ಟು ಸಂಖ್ಯೆಯಲ್ಲಿ ಇದನ್ನು ತಯಾರಿಸಲು ಸಾಧ್ಯ ಎಂಬುದು ತಿಳಿದಿಲ್ಲ. ಫೈಝರ್ ಮತ್ತು ಮೊಡೆರ್ನಾ ಲಸಿಕೆಗಳ ಬಳಕೆಗೆ ಅವಕಾಶ ಕೊಟ್ಟರೂ ಈ ಲಸಿಕೆ ತಯಾರಿಸುವ ಕಂಪನಿಗಳು ಈಗಾಗಲೇ ಮಾಡಿಕೊಂಡಿರುವ ಪೂರೈಕೆ ಒಪ್ಪಂದಗಳಿಂದಾಗಿ ಭಾರತದ ಬೇಡಿಕೆ ಪೂರೈಸಲು ಸಾಧ್ಯವಿಲ್ಲ. ಜನರಲ್ಲಿ ಹಿಂಜರಿಕೆ ಇದ್ದರೂ ಲಸಿಕೆ ಅಭಿಯಾನ ಕುಂಟುತ್ತಾ ಸಾಗಲು ಮುಖ್ಯ ಕಾರಣ ಲಸಿಕೆಯ ಕೊರತೆಯೇ.

ಜನರಲ್ಲಿ ಹಿಂಜರಿಕೆ ಇದ್ದರೂ ಲಸಿಕೆ ಅಭಿಯಾನ ಕುಂಟುತ್ತಾ ಸಾಗಲು ಮುಖ್ಯ ಕಾರಣ ಲಸಿಕೆಯ ಕೊರತೆಯೇ

ಇಷ್ಟೊಂದು ಕೊರತೆಯ ನಡುವೆಯೂ ಬೇರೆ ದೇಶಗಳಿಗೆ ಲಸಿಕೆ ರಫ್ತು ಮಾಡಿದ್ದು ಸಮರ್ಪಕವಾದ ನಡೆ ಅಲ್ಲ. ಈಗ, ಲಸಿಕೆಯ ಕೊರತೆಯನ್ನು ನೀಗಿಸದೆಯೇ 18ರ ಮೇಲಿನ ಎಲ್ಲರಿಗೂ ಲಸಿಕೆ ಹಾಕಿಸಿಕೊಳ್ಳುವ ಅವಕಾಶ ಕೊಡಲಾಗಿದೆ. ಬುಧವಾರ ಒಂದೇ ದಿನ 3.15 ಲಕ್ಷ ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಜನರಲ್ಲಿ ಆತಂಕ ಹೆಚ್ಚಿದೆ. ಹೀಗಾಗಿ ಲಸಿಕೆಗೆ ಬೇಡಿಕೆ ಹೆಚ್ಚುವ ಸಾಧ್ಯತೆ ಇದೆ. ರಾಜ್ಯಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ಖರೀದಿಸಲು ಅವಕಾಶ ಕೊಡಲಾಗಿದೆ. ಕೇಂದ್ರ ಸರ್ಕಾರವು ಈಗ ಕೋವಿಶೀಲ್ಡ್ ಲಸಿಕೆಯ ಪ್ರತೀ ಡೋಸ್‌ಗೆ ₹150 ಪಾವತಿಸುತ್ತಿದೆ. ರಾಜ್ಯಗಳಿಗೆ ₹400 ಮತ್ತು ಖಾಸಗಿ ಆಸ್ಪತ್ರೆಗಳಿಗೆ ₹600 ದರ ನಿಗದಿ ಮಾಡಲಾಗಿದೆ. ಈ ದರ ವ್ಯತ್ಯಾಸದ ಹಿಂದಿನ ತರ್ಕವೇನು ಎಂಬುದು ಅರ್ಥವಾಗುತ್ತಿಲ್ಲ. ₹600 ಕೊಟ್ಟು ಲಸಿಕೆ ಖರೀದಿಸಿದ ಖಾಸಗಿ ಆಸ್ಪತ್ರೆಗಳು ಅದನ್ನು ಜನರಿಗೆ ಯಾವ ಮೊತ್ತಕ್ಕೆ ನೀಡಬೇಕು ಎಂಬುದು ಸ್ಪಷ್ಟವಿಲ್ಲ. ಜಿಎಸ್‌ಟಿ ಸಂಗ್ರಹದಲ್ಲಿ ಕೊರತೆ, ಇತರ ಗೊಂದಲಗಳು ಮತ್ತು ಕೋವಿಡ್‌ನಿಂದಾದ ಆರ್ಥಿಕ ಹಿನ್ನಡೆಯಿಂದಾಗಿ ರಾಜ್ಯಗಳು ಲಸಿಕೆ ಖರೀದಿಸುವ ಅಥವಾ ಲಸಿಕೆಗೆ ಸಹಾಯಧನ ನೀಡುವ ಸ್ಥಿತಿಯಲ್ಲಿ ಇಲ್ಲ. ರಾಜ್ಯಗಳಿಗೆ ಕೇಂದ್ರವು ಆರ್ಥಿಕ ನೆರವು ನೀಡಲಿದೆಯೇ ಎಂಬ ಪ್ರಶ್ನೆಗೂ ಉತ್ತರ ಸಿಕ್ಕಿಲ್ಲ. ರಾಜ್ಯಗಳಿಗೆ ಕೇಂದ್ರವೇ ಲಸಿಕೆ ಹಂಚಿಕೆ ಮಾಡಲಿದೆಯೇ, ಇಲ್ಲ ತಯಾರಕರಿಂದ ರಾಜ್ಯಗಳೇ ಖರೀದಿಸಬೇಕೇ ಎಂಬುದೂ ಸ್ಪಷ್ಟವಿಲ್ಲ. ವೈದ್ಯಕೀಯ ಆಮ್ಲಜನಕ ಹಂಚಿಕೆಯಲ್ಲಿ ಭಾರಿ ತಾರತಮ್ಯ ಆಗುತ್ತಿದೆ ಎಂದು ಬಿಜೆಪಿಯೇತರ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳು ಆರೋಪ ಮಾಡಿವೆ. ಲಸಿಕೆಯ ವಿಚಾರದಲ್ಲಿ ಇಂತಹ ಆರೋಪ ಕೇಳಿಬರದಂತೆ ಕೇಂದ್ರ ನೋಡಿಕೊಳ್ಳಬೇಕಿದೆ. 45 ವರ್ಷಕ್ಕಿಂತ ಒಳಗಿನವರು ಹಣ ಪಾವತಿಸಿಯೇ ಲಸಿಕೆ ಹಾಕಿಸಿಕೊಳ್ಳಬೇಕಾಗುತ್ತದೆ. ಹಾಗಾಗಿ, ಜನಸಂಖ್ಯೆಯ ಒಂದು ವರ್ಗವು ಲಸಿಕೆಯಿಂದ ವಂಚಿತವಾಗಬಹುದು ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕಾದುದು ಸರ್ಕಾರದ ಹೊಣೆ. ಖಾಸಗಿ ಆಸ್ಪತ್ರೆಯಲ್ಲಿ ಲಸಿಕೆ ದೊರೆಯುವಂತಾದರೂ ಅದು ಹಣ, ಪ್ರಭಾವ ಇದ್ದವರಿಗಷ್ಟೇ ಸಿಗಬಹುದು. ಲಸಿಕೆಯಂತಹ ಜೀವರಕ್ಷಕ ಸಾಧನವು ಸಿಕ್ಕವರಿಗೆ ಸೀರುಂಡೆ ರೀತಿಯಲ್ಲಿ ಆಗದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ.

ದಿನದ ಟ್ವೀಟ್

ಎಲ್ಲೆಡೆ ಲಸಿಕೆ ಲಭ್ಯವಾಗಲಿ

ಲಸಿಕೆಗಳನ್ನು ತ್ವರಿತವಾಗಿ ಬಳಕೆಗೆ ಲಭ್ಯವಾಗಿಸಿರುವ ದೇಶಗಳ ಸ್ಥಿತಿ ಗಮನಿಸಿದರೆ, ಲಸಿಕೆಗಳು ಪರಿಣಾಮಕಾರಿಯಾಗಿವೆ ಎಂಬುದು ದೃಢಪಡುತ್ತದೆ. ಲಸಿಕೆ ಹಾಕಿಸಿಕೊಂಡಿರುವವರಲ್ಲಿ ಆಸ್ಪತ್ರೆಗೆ ಸೇರುತ್ತಿರುವವರ ಹಾಗೂ ಸಾವಿಗೀಡಾಗುತ್ತಿರುವವರ ಪ್ರಮಾಣ ಕಡಿಮೆಯಾಗುತ್ತಿದೆ. ಈಗ ನಾವು ಮಾಡಬೇಕಾದ ಕೆಲಸವೆಂದರೆ, ಲಸಿಕೆ ಪೂರೈಕೆಯನ್ನು ಹೆಚ್ಚಿಸಿ ಅವು ಸೂಕ್ತ ಡೋಸೇಜ್‌ಗಳಲ್ಲಿ ಎಲ್ಲ ದೇಶಗಳಲ್ಲೂ ಲಭ್ಯವಾಗುವಂತೆ ವಿತರಿಸುವುದು.

ಸೌಮ್ಯ ಸ್ವಾಮಿನಾಥನ್
ಚೀಫ್ ಸೈಂಟಿಸ್ಟ್, ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ)

25 ವರ್ಷಗಳ ಹಿಂದೆ

ಮಂಗಳವಾರ, 23-4-1996

- **ಭಟ್ಕಳ: ಮತದಾನದ ನಂತರ ಗುರುತಿನ ಚೀಟಿ ಕಡ್ಡಾಯ**

ಕಾರವಾರ, ಏ. 22– ಭಟ್ಕಳದಲ್ಲಿ ಪರಿಸ್ಥಿತಿ ಶಾಂತವಾಗಿದೆ. ಆದರೂ ಲೋಕಸಭಾ ಚುನಾವಣೆಯಲ್ಲಿ ಮುಕ್ತ ಮತ್ತು ಶಾಂತಿಯುತ ಮತದಾನ ನಡೆಯುವಂತೆ ನೋಡಿಕೊಳ್ಳಲು ಹಾಗೂ ಭಟ್ಕಳ ನಗರ, ಗ್ರಾಮೀಣ ಪ್ರದೇಶ ಮತ್ತು ಶಿರಸಿಯಲ್ಲಿ ಯಾವುದೇ ದುಷ್ಕೃತ್ಯ ತಡೆಗಟ್ಟಲು ಹಲವಾರು ಉಗ್ರ ಕ್ರಮ ತೆಗೆದುಕೊಳ್ಳಲಾಗಿದೆ. ಮತದಾನದ ನಂತರ ಭಟ್ಕಳ ಪ್ರವೇಶಿಸುವವರು ಮತ್ತು ಹೊರಹೋಗುವವರು ಕಡ್ಡಾಯವಾಗಿ ಗುರುತಿನ ಚೀಟಿ ಇಟ್ಟುಕೊಳ್ಳುವಂತೆ ಸೂಚಿಸಲಾಗಿದೆ.

ಭಯದ ವಾತಾವರಣವಿಲ್ಲದೇ ಶಾಂತ ಮತದಾನಕ್ಕೆ ಅನುವಾಗಿಸಲು ಮತ್ತು ಸಮಾಜ ವಿರೋಧಿ ಶಕ್ತಿಗಳನ್ನು ನಿಯಂತ್ರಿಸಲು ಈ ಉಗ್ರ ಕ್ರಮ ಅನಿವಾರ್ಯವಾಗಿದೆ ಎಂದು ಜಿಲ್ಲಾ ಪೊಲೀಸ್ ಮುಖ್ಯಸ್ಥ ಡಾ. ಆರ್.ಪಿ.ಶರ್ಮಾ ತಿಳಿಸಿದರು.

- **ಆಯೋಗ ಹಸ್ತಕ್ಷೇಪ ಇಲ್ಲ**

ನವದೆಹಲಿ, ಏ. 22 (ಪಿಟಿಐ)– ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಯ ಕುರಿತು ತಾನು ಹಸ್ತಕ್ಷೇಪ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸುವ ಮೂಲಕ ಚುನಾವಣಾ ಆಯೋಗ ತನ್ನ ಮೊದಲಿನ ನಿಲುವಿನಿಂದ ಹಿಂದೆ ಸರಿದಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 23-4-1971

- **ಜೂನಿಯರ್ ಕಾಲೇಜುಗಳಲ್ಲಿ ಶಿಕ್ಷಣ ಶುಲ್ಕ, ಶಿಕ್ಷಕ ವ್ಯವಸ್ಥೆ: ಸ್ವರೂಪ ನಿರ್ಧಾರಕ್ಕೆ ಸಮಿತಿ**

ಬೆಂಗಳೂರು, ಏ. 22– ಈ ಶೈಕ್ಷಣಿಕ ವರ್ಷದಿಂದ ರಾಜ್ಯದಲ್ಲಿ ಆರಂಭವಾಗಲಿರುವ ಎರಡು ವರ್ಷಗಳ ಪಿಯುಸಿ ವ್ಯವಸ್ಥೆಯ ಶಿಕ್ಷಕವರ್ಗ, ವೇತನಶ್ರೇಣಿ, ಶಿಕ್ಷಣಶುಲ್ಕ ಮುಂತಾದ ವಿಷಯಗಳ ಸ್ವರೂಪ ನಿರ್ಧರಿಸಲು ಉಪಕುಲಪತಿ ಶ್ರೀ ಟಿ.ಕೆ.ತುಕೋಳ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ.

1971–72ರಿಂದ ಹೈಸ್ಕೂಲುಗಳನ್ನು ಹೈಯರ್ ಸೆಕೆಂಡರಿ ಶಾಲೆಗಳಾಗಿ ಪರಿವರ್ತಿಸಲು ಅನುಮತಿ ಕೊಡಲಾಗುವುದಿಲ್ಲ. ಆದರೆ ಈಗಿರುವ ಹೈಯರ್ ಸೆಕೆಂಡರಿ ಶಾಲೆಗಳಿಗೆ ತಾತ್ಕಾಲಿಕ ವ್ಯವಸ್ಥೆಯ ರೂಪದಲ್ಲಿ 1971–72ರ ಅವಧಿಯಲ್ಲಿ ಪ್ರಿ-ಯೂನಿವರ್ಸಿಟಿ ಕೋರ್ಸಿನ ಮೊದಲ ವರ್ಷದ ಶಿಕ್ಷಣ ಆರಂಭಿಸಲು ಅನುಮತಿ ನೀಡಲಾಗುವುದು.

- **ಐ.ಎ.ಎಸ್. ಅಧಿಕಾರಿಗಳ ಅಜ್ಞಾನ**

ಅಲಹಾಬಾದ್, ಏ. 22– ಐಎಎಸ್‌ಗೆ (ಇಂಡಿಯನ್ ಅಡ್ಮಿನಿಸ್ಟ್ರೇಷನ್ ಸರ್ವಿಸ್) ಆಯ್ಕೆಯಾಗಿರುವ ಬಹುತೇಕ ಎಲ್ಲ ಅಧಿಕಾರಿಗಳೂ ಸಾಮಾನ್ಯ ಪರಿಜ್ಞಾನ ಪರೀಕ್ಷೆಯಲ್ಲಿ ತೀರ ಕಡಿಮೆ ಅಂಕಿಗಳನ್ನು ಪಡೆದವರು. ಅಷ್ಟು ಅಜ್ಞಾನಿಗಳು ಅವರು.

ಅಲಹಾಬಾದ್ ವಿಶ್ವವಿದ್ಯಾಲಯ ನೌಕರಿ ಮಾಹಿತಿ ಮತ್ತು ಮಾರ್ಗದರ್ಶನದ ಬ್ಯೂರೊ ನಡೆಸಿರುವ ಸಮೀಕ್ಷೆಯಿಂದ ಇದು ವೇದ್ಯ.

ಪಿಂಚಣಿ ಯೋಜನೆಗಳ ವ್ಯಾಪ್ತಿಗೆ ಹೆಚ್ಚು ಜನ ಬರುವುದು, ದೇಶದ ಪಾಲಿಗೆ ಬಹುದೊಡ್ಡ ವರ

ಪಿಂಚಣಿ ಸಮಸ್ಯೆಗೆ ಎಫ್‌ಡಿಐ ಮದ್ದು

ವಿಶ್ಲೇಷಣೆ

ಅನುಪಮ್ ಮಣೂರ್

ದೇಶದ ಪಿಂಚಣಿ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಪ್ರಮಾಣವನ್ನು ಕೇಂದ್ರ ಸರ್ಕಾರವು ಶೇಕಡ 74ಕ್ಕೆ ಹೆಚ್ಚಿಸುವ ಸಾಧ್ಯತೆ ಇದೆ. ಈಗಿರುವ ನಿಯಮಗಳ ಪ್ರಕಾರ ವಿದೇಶಿ ಕಂಪನಿಗಳು ದೇಶದ ಪಿಂಚಣಿ ನಿಧಿಗಳಲ್ಲಿ ಗರಿಷ್ಠ ಶೇ 49ರಷ್ಟು ಮಾತ್ರ ಹೂಡಿಕೆ ಮಾಡಲು ಅವಕಾಶವಿದೆ. ಹೂಡಿಕೆ ಹೆಚ್ಚಿಸಲು ಅವಕಾಶ ಕಲ್ಪಿಸುವ ಮಸೂದೆಯನ್ನು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇದೆ. ವಿಮಾ ಕ್ಷೇತ್ರದಲ್ಲಿ ಎಫ್‌ಡಿಐ ಪ್ರಮಾಣವನ್ನು ಶೇ 74ಕ್ಕೆ ಹೆಚ್ಚಿಸುವ ಮಸೂದೆಗೆ ಸಂಸತ್ತು ಈಚೆಗೆ ಅನುಮೋದನೆ ನೀಡಿದೆ. ಪಿಂಚಣಿ ನಿಧಿಗಳಲ್ಲಿ ಎಫ್‌ಡಿಐ ಪ್ರಮಾಣ ಹೆಚ್ಚಿಸುವುದರ ಪರಿಣಾಮ ಅರ್ಥ ಮಾಡಿಕೊಳ್ಳಬೇಕು ಎಂದಾದರೆ ನಾವು ದೇಶದ ಪಿಂಚಣಿ ನಿಧಿಗಳ ಬಗ್ಗೆ ಒಂದಿಷ್ಟು ತಿಳಿದುಕೊಳ್ಳಬೇಕು.

ದೇಶದ ಜನಸಂಖ್ಯೆಯಲ್ಲಿ ಈಗ ಯುವಕರು, ದುಡಿಯುವ ವಯಸ್ಸಿನವರ ಪ್ರಮಾಣ ಹೆಚ್ಚಿದೆ. ಇದರ ಪ್ರಯೋಜನವನ್ನು ದೇಶ ಪಡೆಯುತ್ತಿದೆ. ಆದರೆ ಕಾಲ ಸರಿದಂತೆಲ್ಲ ಈ ಪರಿಸ್ಥಿತಿ ಬದಲಾಗುತ್ತದೆ. 2030ರ ವೇಳೆಗೆ ದೇಶದಲ್ಲಿ 20 ಕೋಟಿ ಜನ 60 ವರ್ಷಕ್ಕಿಂತ ಹೆಚ್ಚು ವಯಸ್ಸಾದವರಾಗಿರುತ್ತಾರೆ ಎಂದು ಅಂದಾಜಿಸಲಾಗಿದೆ. ದೇಶದಲ್ಲಿ ಹಿರಿಯ ನಾಗರಿಕರಿಗೆಲ್ಲರಿಗೂ ಅನ್ವಯವಾಗುವ, ಸರ್ಕಾರದ ಬೆಂಬಲ ಇರುವ ಸಾಮಾಜಿಕ ಭದ್ರತಾ ಯೋಜನೆ ಇಲ್ಲ. ಹಾಗಾಗಿ, ಜನ ನಿವೃತ್ತಿ ನಂತರದ ಜೀವನಕ್ಕಾಗಿ ಪಿಂಚಣಿ ನಿಧಿಗಳಲ್ಲಿ ಉಳಿತಾಯ ಮಾಡಬೇಕಿರುವುದು ಅನಿವಾರ್ಯ. ಅಲ್ಲದೆ, ಅನಿರೀಕ್ಷಿತವಾಗಿ ಎದುರಾಗುವ ಕೆಲವು ವೆಚ್ಚಗಳನ್ನು ನಿಭಾಯಿಸಲು ವಿಮೆಗಳಲ್ಲಿ ಹೂಡಿಕೆ ಕೂಡ ಮಾಡಬೇಕು.

2000ನೆಯ ಇಸವಿಯಿಂದ ದೇಶದ ಪಿಂಚಣಿ ವಲಯ ಹಂತ ಹಂತವಾಗಿ ವಿಕಾಸ ಹೊಂದುತ್ತ ಬಂದಿದೆ. ಆ ಕಾಲಘಟ್ಟಕ್ಕೂ ಮೊದಲು ದೇಶದಲ್ಲಿ ನಿವೃತ್ತಿ ನಂತರದ ಜೀವನಕ್ಕೆ ಉಳಿತಾಯ ಮಾಡಬಯಸುವವರಿಗೆ ಹೆಚ್ಚು ಆಯ್ಕೆಗಳು ಇರಲಿಲ್ಲ. ಆರಂಭದಲ್ಲಿ ಪಿಂಚಣಿ ಇದ್ದಿದ್ದು ಸರ್ಕಾರಿ ನೌಕರರಿಗೆ ಮಾತ್ರವೇ ಎನ್ನಬಹುದು. ನಂತರದಲ್ಲಿ ಕೆಲವು ದೊಡ್ಡ ಕಂಪನಿಗಳ ನೌಕರರಿಗೂ ಪಿಂಚಣಿಯನ್ನು ಕಡ್ಡಾಯಗೊಳಿಸಲಾಯಿತು. ನೌಕರರು ಐಚ್ಛಿಕವಾಗಿ ಕೊಡುಗೆ ನೀಡಬಹುದಾದ ಎನ್‌ಪಿಎಸ್ (ರಾಷ್ಟ್ರೀಯ ಪಿಂಚಣಿ ಯೋಜನೆ) ವ್ಯವಸ್ಥೆಯನ್ನು 2004ರಲ್ಲಿ ಮೊದಲಿಗೆ ಸರ್ಕಾರಿ ನೌಕರರಿಗೆ ಜಾರಿಗೆ ತರಲಾಯಿತು. ನಂತರ 2009ರಲ್ಲಿ ಭಾರತದ ಎಲ್ಲರಿಗೂ ಇದನ್ನು ಹಂತ ಹಂತವಾಗಿ ಮುಕ್ತಗೊಳಿಸಲಾಯಿತು. ಅಲ್ಲಿಂದ ನಂತರ ಈ ಯೋಜನೆಯು ಸ್ಥಿರ ಬೆಳವಣಿಗೆ ಕಾಣುತ್ತಿದೆ.

ಇಷ್ಟೆಲ್ಲ ಆದ ನಂತರದಲ್ಲಿಯೂ ಭಾರತದಲ್ಲಿ ಪಿಂಚಣಿ ಯೋಜನೆಗಳ ವ್ಯಾಪ್ತಿಗೆ ಬಂದ ಜನರ ಸಂಖ್ಯೆ ತೀರಾ ಸೀಮಿತ. ಒಂದಲ್ಲ ಒಂದು ಪಿಂಚಣಿ ಯೋಜನೆಯ ವ್ಯಾಪ್ತಿಗೆ ಬಂದಿರುವ ಭಾರತೀಯರ ಪ್ರಮಾಣ ಗರಿಷ್ಠ ಶೇಕಡ 25ರಷ್ಟು ಮಾತ್ರ. ಜಪಾನ್‌ನಲ್ಲಿ ಇದು ಶೇ 80ರಷ್ಟಿದೆ, ದಕ್ಷಿಣ ಕೊರಿಯಾದಲ್ಲಿ ಶೇ 78ರಷ್ಟಿದೆ, ಚೀನಾದಲ್ಲಿ ಶೇ 74ರಷ್ಟಿದೆ. ಈ ವಿಚಾರದಲ್ಲಿ ಬಾಂಗ್ಲಾದೇಶದ ಸ್ಥಿತಿ ಕೂಡ ಭಾರತಕ್ಕಿಂತ ಉತ್ತಮವಾಗಿದೆ. ಭಾರತದಲ್ಲಿ ಪಿಂಚಣಿ ವ್ಯವಸ್ಥೆಯಡಿ ಬಂದವರಲ್ಲಿ ಹೆಚ್ಚಿನವರು ಸರ್ಕಾರಿ ನೌಕರರು ಹಾಗೂ ಸಂಘಟಿತ ವಲಯದಲ್ಲಿ ಕೆಲಸ ಮಾಡಿದವರು. ಅಸಂಘಟಿತ ವಲಯದ ಬಹುತೇಕ ಮಂದಿ ಯಾವ ಪಿಂಚಣಿ ಯೋಜನೆಯ ಪ್ರಯೋಜನವನ್ನೂ ಪಡೆದವರಲ್ಲ. ಎನ್‌ಪಿಎಸ್ ಎಲ್ಲರಿಗೂ ಮುಕ್ತವಾಗಿದೆಯಾದರೂ, ಪಿಂಚಣಿ ಪ್ರಯೋಜನ ಹೆಚ್ಚಿನವರಿಗೆ ಸಿಗಬೇಕು ಎಂದಾದರೆ ಎಲ್ಲರಿಗೂ ಲಭ್ಯವಾಗುವ ಹಾಗೂ ಹೆಚ್ಚು ಜನರಿಗೆ ತಲುಪುವ ಯೋಜನೆಯೊಂದು ಬೇಕು.

ಎಫ್‌ಡಿಐ ಮೂಲಕ ಹೊಸ ಕಂಪನಿಗಳ ಪ್ರವೇಶ ಆದರೆ ಇದು ಸಾಧ್ಯವಾಗಬಹುದು. ವಿದೇಶಿ ಕಂಪನಿಗಳು ನಮ್ಮ ದೇಶಕ್ಕೆ ಪಿಂಚಣಿ ನಿಧಿ ನಿರ್ವಹಣೆ ವಿಚಾರದಲ್ಲಿ ಪರಿಣತಿಯನ್ನೂ, ಸಮಾಜದ ಬೇರೆ ಬೇರೆ ವರ್ಗಗಳಿಗೆ ಆಕರ್ಷಕವಾಗುವ ಹೊಸ ಪಿಂಚಣಿ ಉತ್ಪನ್ನಗಳನ್ನೂ ತರಬಲ್ಲವು. ಎಫ್‌ಡಿಐ ಪ್ರಮಾಣ ಜಾಸ್ತಿ ಮಾಡುವುದರಿಂದ ಪಿಂಚಣಿ ಯೋಜನೆಗಳ ಚಂದಾದಾರರಿಗೆ ತಮ್ಮ ಹಣಕ್ಕೆ ಹೆಚ್ಚಿನ ಲಾಭ ಸಿಗುವ ಸಾಧ್ಯತೆಯೂ ಇದೆ. ನೌಕರರ ಭವಿಷ್ಯನಿಧಿ (ಇಪಿಎಫ್) ಹಾಗೂ ಸಾರ್ವಜನಿಕ ಭವಿಷ್ಯನಿಧಿ (ಪಿಪಿಎಫ್) ಯೋಜನೆಗಳಲ್ಲಿ ಸಿಗುವ ಬಡ್ಡಿ ತೀರಾ ಕಡಿಮೆ. ಎನ್‌ಪಿಎಸ್‌ನಲ್ಲಿ ಸಿಗುವ ಲಾಭದ ಪ್ರಮಾಣ ಉತ್ತಮವಾಗಿದೆಯಾದರೂ ಇದು ಬೇರೆ ದೇಶಗಳಲ್ಲಿನ ಪಿಂಚಣಿ ನಿಧಿಗಳ ಜೊತೆ ಹೋಲಿಸಿದರೆ ಕಡಿಮೆಯೇ. ಬಡ್ಡಿ, ಲಾಭ ಕಡಿಮೆಯಾಗಿರಲು ಮುಖ್ಯ ಕಾರಣ ಈ ನಿಧಿಗಳಲ್ಲಿನ ಹಣದಲ್ಲಿ ಹೆಚ್ಚಿನ ಪಾಲನ್ನು ಸಾಲಪತ್ರಗಳ ಮೇಲೆ ಹೂಡಿಕೆ ಮಾಡುತ್ತಿರುವುದು. ವೃತ್ತಿಪರವಾಗಿ ನಿಭಾಯಿಸಲಾಗುವ ಪಿಂಚಣಿ ನಿಧಿಗಳಲ್ಲಿನ ಹಣವನ್ನು ಈಕ್ವಿಟಿ ಮಾರುಕಟ್ಟೆಗಳಲ್ಲಿ ಹೂಡಿಕೆ ಮಾಡಿ ಹೆಚ್ಚಿನ ಲಾಭ ತಂದುಕೊಡಬಹುದು. 30ರ ಹರೆಯದಲ್ಲಿನ ವ್ಯಕ್ತಿಯೊಬ್ಬ 50ರ ವಯಸ್ಸಿನ ವ್ಯಕ್ತಿಗಿಂತಲೂ ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಸಿದ್ಧನಿರುತ್ತಾನೆ. ಹಾಗಾಗಿ, ಪಿಂಚಣಿ ವಲಯವನ್ನು ಹೆಚ್ಚಿನ ಸ್ಪರ್ಧೆಗೆ ತೆರೆಯುವುದರಿಂದ ಬೇರೆ ಬೇರೆ ವಯೋಮಾನ, ಹಿನ್ನೆಲೆಗಳ ಜನರಿಗೆ ಹೆಚ್ಚಿನ ಆಯ್ಕೆಗಳು ಸಿಗುವಂತೆ ಆಗುತ್ತದೆ.

ದೇಶದಲ್ಲಿ ಈಗ ಇರುವ ಪಿಂಚಣಿ ಯೋಜನೆಗಳಲ್ಲಿ ನಿರ್ಬಂಧಗಳೇ ಹೆಚ್ಚು. ನಿವೃತ್ತಿಯ ವಯಸ್ಸಿನಲ್ಲಿ ಪಿಂಚಣಿ ನಿಧಿಯಲ್ಲಿರುವ ಶೇಕಡ 60ರಷ್ಟು ಹಣವನ್ನು ಏಕಕಂತಿನಲ್ಲಿ ಹಿಂದಕ್ಕೆ ಪಡೆಯಬಹುದು. ಇನ್ನುಳಿದ ಶೇ 40ರಷ್ಟು ಮೊತ್ತವನ್ನು ಕಾಲಕಾಲಕ್ಕೆ ಆದಾಯ ನೀಡುವ ಯೋಜನೆಗಳಲ್ಲಿ ಕಡ್ಡಾಯವಾಗಿ ವಿನಿಯೋಗಿಸಬೇಕು. ಅಲ್ಲದೆ, ನಿವೃತ್ತಿಗೆ ಮೊದಲೇ ಹಣ ಹಿಂಪಡೆಯಬೇಕು ಎಂದಾದರೆ ದಂಡ ವಿಧಿಸಲಾಗುತ್ತದೆ. ಇಂತಹ ನಿಯಮಗಳನ್ನು ಸಡಿಲಿಸಿದರೆ ಹೆಚ್ಚು ಜನ ಪಿಂಚಣಿ ಯೋಜನೆಗಳ ಚಂದಾದಾರರಾಗಬಹುದು.

ದೇಶದಲ್ಲಿ ಈಗ ಮೂರು ಸರ್ಕಾರಿ ಪಿಂಚಣಿ ನಿಧಿಗಳು, ಐದು ಖಾಸಗಿ ಪಿಂಚಣಿ ನಿಧಿಗಳು ಇವೆ. ಈ ನಿಧಿಗಳು ಎನ್‌ಪಿಎಸ್ ಯೋಜನೆಯ ಅಡಿಯಲ್ಲಿ ಸಂಗ್ರಹವಾಗುವ ಮೊತ್ತವನ್ನು ನಿಭಾಯಿಸುತ್ತಿವೆ. ಇವಲ್ಲದೆ, ಮ್ಯೂಚುವಲ್ ಫಂಡ್ ಕಂಪನಿಗಳು, ವಿಮಾ ಕಂಪನಿಗಳು ರೂಪಿಸಿರುವ ಪಿಂಚಣಿ ಯೋಜನೆಗಳೂ ಇವೆ. ದೇಶದ ವಿಮಾ ವಲಯದಲ್ಲಿ ಸುಮಾರು 60 ಕಂಪನಿಗಳು ಇವೆ. ವಿಮಾ ವಲಯಕ್ಕೆ ಹೋಲಿಸಿದರೆ ಪಿಂಚಣಿ ವಲಯದಲ್ಲಿರುವ ಕಂಪನಿಗಳ ಸಂಖ್ಯೆ ಕಡಿಮೆ. ಪಿಂಚಣಿ ವಲಯದಲ್ಲಿ ಎಫ್‌ಡಿಐ ಪ್ರಮಾಣ ಹೆಚ್ಚಿಸುವುದಕ್ಕೆ ಅವಕಾಶ ಕೊಡುವುದರಿಂದ ಎರಡು ಪರಿಣಾಮಗಳು ಆಗಲಿವೆ. ವಿದೇಶಿ ಕಂಪನಿಗಳು ದೇಶಿ ಮಾರುಕಟ್ಟೆ ಪ್ರವೇಶಿಸುತ್ತವೆ. ದೇಶಿ ಕಂಪನಿಗಳು ವಿದೇಶಿ ಬಂಡವಾಳದ ನೆರವು ಪಡೆದು ತಮ್ಮ ಬೆಳವಣಿಗೆಗೆ ಅದನ್ನು ಬಳಸಿಕೊಳ್ಳುತ್ತವೆ. ಪಿಂಚಣಿ ವಲಯವು ದೊಡ್ಡ ಪ್ರಮಾಣದ ಬಂಡವಾಳ ಕೇಳುತ್ತದೆ, ಹೂಡಿಕೆ ಕಾಲಾವಧಿ ಇಲ್ಲಿ ಬಹಳ ದೀರ್ಘ. ಈ ವಲಯ ದೇಶದಲ್ಲಿ ವಿಸ್ತಾರಗೊಳ್ಳಬೇಕು ಎಂದಾದರೆ ಇಲ್ಲಿ ಬಂಡವಾಳದ ಖಚಿತ ಹರಿವು ಇರಬೇಕು. ಎಫ್‌ಡಿಐ ಹೆಚ್ಚಳದಿಂದ ಪಿಂಚಣಿ ವಲಯದ ಕಂಪನಿಗಳ ಭಾರತದ ಕೆಲವು ಪ್ರವರ್ತಕರಿಗೆ ತಮ್ಮ ಷೇರು ಮಾರಾಟ ಮಾಡುವ ಅವಕಾಶವೂ ಸಿಗಲಿದೆ.

ಭಾರತದಲ್ಲಿ ಪಿಂಚಣಿ ಯೋಜನೆಗಳ ವ್ಯಾಪ್ತಿಗೆ ಹೆಚ್ಚು ಜನ ಬರುವಂತೆ ಮಾಡಲು ವಿದೇಶಿ ಕಂಪನಿಗಳಿಗೆ ಸಾಧ್ಯವಾದರೆ ಅದು ದೇಶದ ಪಾಲಿಗೆ ಬಹುದೊಡ್ಡ ವರವಾಗಲಿದೆ. ಕಳೆದ ಒಂದು ದಶಕದಿಂದ ದೇಶದಲ್ಲಿ ಉಳಿತಾಯದ ಒಟ್ಟು ಪ್ರಮಾಣವು ಕಡಿಮೆ ಆಗುತ್ತಿದೆ. ಈಗ ಅದು ಒಟ್ಟು ಜಿಡಿಪಿಯ ಶೇ 31ರಷ್ಟಿದೆ. ಸಮಸ್ಯೆಯೆಂದರೆ ಉಳಿತಾಯದಲ್ಲಿ ದೊಡ್ಡ ಪ್ರಮಾಣವು ರಿಯಲ್ ಎಸ್ಟೇಟ್ ಹಾಗೂ ಚಿನ್ನದ ರೂಪದಲ್ಲಿದೆ. ಈ ಹಣ ಅರ್ಥವ್ಯವಸ್ಥೆಯಲ್ಲಿ ಉತ್ಪಾದಕ ಹೂಡಿಕೆಯ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ಆದರೆ ಪಿಂಚಣಿ, ವಿಮೆ ಮತ್ತು ಮ್ಯೂಚುವಲ್ ಫಂಡ್ ನಿಧಿಗಳು ಕೌಟುಂಬಿಕ ಉಳಿತಾಯವನ್ನು ದೊಡ್ಡ ಮಟ್ಟದಲ್ಲಿ ಮೂಲಸೌಕರ್ಯದಂತಹ ವಲಯಗಳಲ್ಲಿ ಹೂಡಿಕೆ ಮಾಡಬಲ್ಲವು.

ಪಿಂಚಣಿ ವಲಯವು ಬಲಿಷ್ಠವಾಗಿ ಬೆಳೆದರೆ ಸರ್ಕಾರದ ಮೇಲಿನ ಹಣಕಾಸಿನ ಹೊರೆ ತಗ್ಗುತ್ತದೆ. ಈಗ ಸರ್ಕಾರವು ದೊಡ್ಡ ಮೊತ್ತವನ್ನು ಪಿಂಚಣಿಗಳಿಗಾಗಿ ವಿನಿಯೋಗಿಸುತ್ತಿದೆ. ಸೂಕ್ತ ಕಾನೂನು ಇರುವ, ವಿದೇಶಗಳಿಂದ ಬಂಡವಾಳ ಆಕರ್ಷಿಸಬಲ್ಲ ಪಿಂಚಣಿ ವಲಯವು ಸಾರ್ವಜನಿಕರಿಗೆ, ಪಿಂಚಣಿ ಕಂಪನಿಗಳಿಗೆ ಹಾಗೂ ಇಡೀ ಅರ್ಥ ವ್ಯವಸ್ಥೆಗೆ ಪ್ರಯೋಜನಕಾರಿ ಆಗಬಲ್ಲದು.

ಲೇಖಕ: ಬೆಂಗಳೂರಿನ ತಕ್ಷಶಿಲಾ ಇನ್‌ಸ್ಟಿಟ್ಯೂಷನ್‌ನಲ್ಲಿ ಅರ್ಥಶಾಸ್ತ್ರದ ಸಹಾಯಕ ಪ್ರಾಧ್ಯಾಪಕ

ಚುರುಮುರಿ

ಶೀಲ್ಡ್ ಯಾರದು?

• ಸುಧೀಂದ್ರ

ಸೆಕೆಂಡ್ ರೌಂಡ್ ಕೊರೊನಾ ವ್ಯಾಕ್ಸಿನ್‌ಗೆಂದು ಹೋದವನಿಗೆ ಅದೆಲ್ಲೂ ಸಿಗದೆ ಸುಸ್ತಾಗಿ ಬಂದು ಮನೇಲಿ ಮಲಗಿದ್ದೆ. 'ಕೊರೊನಾ ವ್ಯಾಕ್ಸಿನ್ ಮಾಡಿದ್ದು ನಮ್ಮ ಕೋಡಿಹಳ್ಳಿಯವರು ಅನ್ನೋದು ನಿನಗೆ ಗೊತ್ತಾ?' ಅಂತ ಗೆಳೆಯ ವರದಪ್ಪ ಒಳಗೆ ಬಂದ.

'ವ್ಯಾಕ್ಸಿನ್- ಗೀಕ್ಸಿನ್ ಅವರು ಮಾಡಿರೋಲ್ಲ, ಅದರ ಬೆಲೆ ಇಳಿಸಿ ಅಂತೇನಾದ್ರೂ ಚಳವಳೀನ ಅವರು ಮಾಡಿರಬಹುದು' ಅಂದೆ. 'ನಿನ್ನ ತಲೆ. ಬೆಳಗ್ಗೆಯಿಂದ ವಾಟ್ಸಪ್ನಲ್ಲಿ ವೈರಲ್ ಆಗಿರೋ ಮೆಸೇಜ್ ನೀನಿನ್ನೂ ಓದೇ ಇಲ್ವಾ?' ಎಂದು ಬೇಸರಿಸಿಕೊಂಡ.

ಮೊಬೈಲ್ ನೋಡಿದರೆ ವರದಪ್ಪನಂತೆ ಇನ್ನೂ ಎಂಟು ಜನ ಅದೇ ಮೆಸೇಜ್ ಫಾರ್ವರ್ಡ್ ಮಾಡಿದ್ದರು. 'ಕೋಡಿಹಳ್ಳಿ ವಿನಾಯಕ್ ಶೀಲವಂತ್ ಅನ್ನೋ ನಮ್ಮ ಇಂಡಿಯನ್ ಸೈಂಟಿಸ್ಟ್, ಆಕ್ಸ್‌ಫರ್ಡ್‌ನಲ್ಲಿ ರಿಸರ್ಚ್ ಮಾಡ್ತಿದ್ದಾರೆ. ಕೊರೊನಾ ಲಸಿಕೆ ಮಾಡೋವಾಗ ಅವ್ರ ಕಾಂಟ್ರಿಬ್ಯೂಶನ್ ಜಾಸ್ತಿ ಇದೇಂತ ಗೊತ್ತಾಗಿ, ಯೂನಿವರ್ಸಿಟಿಯವರು ಅದಕ್ಕೆ ಕೋವಿಶೀಲ್ಡ್ ಅನ್ನೋ ಹೆಸರು ಇಟ್ಟಿದ್ದಾರೆ' ಎಂದು ಬರೆದಿತ್ತು.

ಓದುತ್ತಾ ಹೋದಂತೆ ಅವರ ಬಡತನದ ಬಾಲ್ಯ, ಕಾಲೇಜಿನ ಹೋರಾಟ, ಬ್ಯಾಂಕ್ ಸಾಲದಿಂದ ಬ್ರಿಟನ್ನಿಗೆ ಪಯಣ, ದೊಡ್ಡ ವಿಜ್ಞಾನಿಗಳು ಅವರ ರಿಸರ್ಚನ್ನು ಮೊದಲು ತಳ್ಳಿಹಾಕಿದ್ದು, ಕೊನೆಗೊಂದು ದಿನ ಕೊರೊನಾ ಅವರ ವ್ಯಾಕ್ಸಿನ್ನಿಗೆ ಮಣಿದಿದ್ದು... ಸಿನಿಮಾ ಕ್ಲೈಮ್ಯಾಕ್ಸ್ ಸೀನ್‌ಗಳನ್ನು ಸಾಲಾಗಿ ಜೋಡಿಸಿಡಲಾಗಿತ್ತು. ಖುಷಿಯಾಗಿ, ವರದಪ್ಪನಿಗೆ ಇಷ್ಟವಾದ ವೀಣಾ ಸ್ಟೋರ್ಸ್ ವಡೆಯನ್ನು ಸ್ವಿಗ್ಗಿಯಿಂದ ಆರ್ಡರ್ ಮಾಡಿದೆ.

ಸಂಜೆ ಫೇಸ್‌ಬುಕ್ ತೆಗೆದರೆ ಅದೇ ಮೆಸೇಜನ್ನು ಹತ್ತು ಜನ ಹಂಚಿಕೊಂಡಿದ್ದರು. ಅದರಲ್ಲಿ ಕತೆಯ ಕ್ಲೈಮ್ಯಾಕ್ಸ್ ಬದಲಾಗಿತ್ತು, ಸೈಂಟಿಸ್ಟ್ ಹೆಸರು ಕೋವೈ ವಿನಾಯಗರ್ ಶೀನಪ್ಪನ್ ಎಂದಿತ್ತು. ಉಳಿದೆಲ್ಲಾ ಕತೆ ರಿಪೀಟಾಗಿತ್ತು.

ಕೋವಿಶೀಲ್ಡ್ ಇನ್ವೆಂಟರ್ ಯಾರು ಅಂತ ಯೋಚಿಸ್ತಿದ್ದ ಹಾಗೆ ವಾಟ್ಸ್‌ಆ್ಯಪ್ ಮೆಸೇಜ್ ಬಂತು. 'ಕೋವಿಶೀಲ್ಡ್‌ಗೆ ಹೆಸರು ತಂದುಕೊಟ್ಟವರು ಕೋಟುವಾಡ ವಿಜಯಾನಂದ ಶೀಬಯ್ಯ' ಎಂದಿತ್ತು. ಅವರು ಆಂಧ್ರದವರೋ, ತೆಲಂಗಾಣದವರೋ ತಿಳಿಸಿ ಎಂದು ಕಳುಹಿಸಿದವರಿಗೆ ರಿಪ್ಲೈ ಮಾಡಿದೆ.

ಸಂಗತ

ಕನ್ನಡದ ಭವಿಷ್ಯ: ಇಂಗ್ಲಿಷ್‌ನ ಅಗತ್ಯ

ಯಾವುದೇ ಭಾಷೆಗೆ ಹೊಸ ತೊರೆ ಯಾವುದೆಂದರೆ, ಅನುವಾದದ ಮೂಲಕ ಬೇರೆ ಭಾಷೆಗಳಿಂದ ಹರಿದು ಬರುವ ಹೊಸ ಅರಿವು ಅಥವಾ ಚಿಂತನೆ

• ಡಾ. ಜ್ಯೋತಿ

ಏಪ್ರಿಲ್ 23 ಅನ್ನು ವಿಶ್ವ ಇಂಗ್ಲಿಷ್ ಭಾಷಾ ದಿನವನ್ನಾಗಿ ಆಚರಿಸಲಾಗುತ್ತದೆ. ಈ ದಿನ, ಇಂಗ್ಲಿಷ್ ಭಾಷೆಯ ಹೆಸರಾಂತ ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್ ಅವರ ಜನ್ಮದಿನ ಮತ್ತು ಸಾವಿನ ದಿನ ಕೂಡ ಹೌದು. ಪ್ರಪಂಚದಾದ್ಯಂತ ನಾಟಕಕಾರರಿಗೆ ಪ್ರೇರಣೆಯಾದ ಷೇಕ್ಸ್‌ಪಿಯರ್‌ಗೆ ಈ ಮೂಲಕ ಒಂದು ಅರ್ಥಪೂರ್ಣ ಮತ್ತು ಸಾಂದರ್ಭಿಕ ನುಡಿನಮನ. ವಿಶ್ವಸಂಸ್ಥೆಯು 2010ರಿಂದ ಆರಂಭಿಸಿದ ಈ ದಿನಾಚರಣೆಯ ಮೂಲ ಉದ್ದೇಶ, ಪ್ರಪಂಚದಲ್ಲಿ ಬಹುಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯವನ್ನು ಉತ್ತೇಜಿಸುವುದಾಗಿದೆ.

ಪ್ರಸ್ತುತ, ಪ್ರಪಂಚದಾದ್ಯಂತ ಸುಮಾರು 135 ಕೋಟಿ ಜನ ಇಂಗ್ಲಿಷ್ ಮಾತನಾಡಬಲ್ಲರು. ಇವರಲ್ಲಿ ಹೆಚ್ಚಿನವರಿಗೆ ಇಂಗ್ಲಿಷ್ ಮಾತೃಭಾಷೆಯಲ್ಲದಿದ್ದರೂ ಎರಡನೇ ಭಾಷೆಯಾಗಿ ಪ್ರಸಕ್ತ ಪ್ರಪಂಚದಾದ್ಯಂತ ಅತಿ ಹೆಚ್ಚು ಜನ ಕಲಿಯುತ್ತಿರುವ ಭಾಷೆಯಾಗಿದೆ. ಇದಕ್ಕೆ ಮುಖ್ಯ ಕಾರಣ, ಇಂಗ್ಲಿಷ್ ಇಂದು ಇಂಟರ್ನೆಟ್, ವಿಜ್ಞಾನ, ತಂತ್ರಜ್ಞಾನ ಹಾಗೂ ಅಂತರರಾಷ್ಟ್ರೀಯ ವ್ಯವಹಾರಗಳ ಮುಖ್ಯಭಾಷೆಯಾಗಿ, ಜೊತೆಗೆ ದೇಶಗಳ ನಡುವೆ ಸಂವಹನ ಸೇತುವೆಯಾಗಿ ಕೆಲಸ ಮಾಡುತ್ತಿರುವುದು.

ಕೆಲವೊಮ್ಮೆ ಇಂಗ್ಲಿಷ್‌ಗೆ ಅನಗತ್ಯ ಮಹತ್ವ ಕೊಡುತ್ತಿದ್ದೇವೆ ಎಂದು ಅನ್ನಿಸುವುದು ಸಹಜ. ಈ ಪ್ರಸ್ತುತತೆಯಲ್ಲಿ, ಕನ್ನಡಿಗರು ಇಂಗ್ಲಿಷ್ ಕಲಿಯಬೇಕಾದ ಅಗತ್ಯವಿದೆಯೇ, ಒಂದುವೇಳೆ ಅವಶ್ಯವಿದ್ದಲ್ಲಿ ನಾವು ಸರಿಯಾದ ದಾರಿಯಲ್ಲಿ ನಡೆಯುತ್ತಿದ್ದೇವೆಯೇ ಎನ್ನುವುದನ್ನು ಪುನರ್ ವಿಮರ್ಶಿಸುವ ಅಗತ್ಯವಿದೆ.

ಇಂದು, ಇಂಗ್ಲಿಷ್ ಕಲಿಯುವ ಅಗತ್ಯಕ್ಕೆ ಸಾರ್ವಜನಿಕ ಮನ್ನಣೆಯಿದೆ ಎನ್ನುವುದರ ಕುರುಹಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ಅಣಬೆಗಳಂತೆ ಕಾಣಿಸಿಕೊಳ್ಳುತ್ತಿವೆ. ವ್ಯವಹಾರಕ್ಕೆ ಅಥವಾ ಉದ್ಯೋಗಕ್ಕೆ ಅಗತ್ಯ ಎಂದು ಪರಿಗಣಿಸಲಾದ ಭಾಷೆಯನ್ನು ಕಲಿಕಾ ಮಾಧ್ಯಮದ ಸ್ಥಾನಕ್ಕೆ ಏರಿಸಿ ಹಾಗೂ ಅದಕ್ಕಾಗಿ ಮಾತೃಭಾಷೆಯನ್ನು ಅಸ್ಪೃಶ್ಯಗೊಳಿಸಬೇಕಾದ ಅಗತ್ಯ ಇದೆಯೇ ಎನ್ನುವ ಪ್ರಶ್ನೆಗೆ, ಖಂಡಿತವಾಗಿಯೂ ಇಲ್ಲ ಎನ್ನಬಹುದು. ಯಾಕೆಂದರೆ, ಮಾತೃಭಾಷೆಯಲ್ಲಿ ಕಲಿತ ವಿಷಯ ಹೆಚ್ಚು ಅಂತರ್ಗತವಾಗುತ್ತದೆ ಎಂದು ವಿವಿಧ ಅಧ್ಯಯನಗಳು ಹೇಳುತ್ತವೆ. ಆದರೆ, ಕನ್ನಡದ ಸದೃಢ ಭವಿಷ್ಯಕ್ಕಾಗಿ ಇಂಗ್ಲಿಷ್ ಭಾಷೆಯ ಅರಿವು ಕೂಡ ಅಷ್ಟೇ ಅತ್ಯಗತ್ಯ.

ಮೂಲತಃ, ಯಾವುದೇ ಭಾಷೆಯೆನ್ನುವುದು ಹರಿಯುವ ನದಿಯಂತೆ. ಹೊಸ ತೊರೆಗಳು ಸೇರಿಕೊಳ್ಳುತ್ತಾ ನದಿಯನ್ನು ವಿಶಾಲವಾಗಿಸುವಂತೆ, ಬೇರೆ ಭಾಷೆಗಳ ಜ್ಞಾನದ ಸೇರ್ಪಡೆ ನಮ್ಮ ಭಾಷೆಯನ್ನು ಸಮೃದ್ಧಗೊಳಿಸುತ್ತದೆ. ತದ್ವಿರುದ್ಧವಾಗಿ, ಭಾಷೆ ನಿಂತ ನೀರಾದಾಗ ಅದರ ಅಂತ್ಯ ಆರಂಭವಾಗುತ್ತದೆ. ಈ ದಿಸೆಯಲ್ಲಿ, ಭಾಷೆಗೆ ಹೊಸ ತೊರೆ ಯಾವುದೆಂದರೆ, ಅನುವಾದದ ಮೂಲಕ ಬೇರೆ ಭಾಷೆಗಳಿಂದ ಹರಿದು ಬರುವ ಹೊಸ ಅರಿವು ಅಥವಾ ಚಿಂತನೆ. ಅದರಂತೆಯೇ, ಕನ್ನಡಿಗರಿಗೆ ವಿವಿಧ ಭಾಷೆಗಳ ಮುಖ್ಯ ಕೊಂಡಿ ಇಂಗ್ಲಿಷ್. ಈ ರೀತಿ, ಸದ್ಯ ಪ್ರಪಂಚದ ಜ್ಞಾನ ಭಂಡಾರದ ಕೀಲಿಕೈ ಇಂಗ್ಲಿಷಿನಲ್ಲಿದೆ. ಆದ್ದರಿಂದ, ಜ್ಞಾನಾರ್ಜನೆಗೆ ಇಂಗ್ಲಿಷ್ ಕಲಿಕೆ ಇಂದು ನಮಗೆ ಬಹಳ ಮಹತ್ವವೆನಿಸುತ್ತದೆ.

ಕಲಿಯಲು ಇಂಗ್ಲಿಷ್ ಅಂತಹ ಕಷ್ಟದ ಭಾಷೆಯೇನಲ್ಲ. ಇದು ಬಹಳ ಸರಳವಾದ ವ್ಯಾಕರಣ ಮತ್ತು ವಾಕ್ಯ ರಚನೆ ಹೊಂದಿದೆ. ಜೊತೆಗೆ, ನಮಗೇನೂ ಬ್ರಿಟಿಷ್, ಅಮೆರಿಕನ್ ಅಥವಾ ಆಸ್ಟ್ರೇಲಿಯನ್ ಉಚ್ಚಾರಣೆ ಕಲಿಯುವ ಅಗತ್ಯವಿಲ್ಲ. ಸ್ಪಷ್ಟ ಉಚ್ಚಾರಣೆಯ ಗೋಳು ಮೂಲ ಭಾಷಿಕರಿಗಿರಲಿ. ನಾವು ಇಂಗ್ಲಿಷ್ ಅನ್ನು ಭಾರತೀಯ ಭಾಷೆಯ ಧಾಟಿಯಲ್ಲಿ ಮಾತನಾಡಿದರೆ ತಪ್ಪೇನಿಲ್ಲ. ಇಲ್ಲಿ ನಮ್ಮ ಮುಖ್ಯ ಗುರಿ, ಆ ಭಾಷೆಯಲ್ಲಿರುವ ಜ್ಞಾನವನ್ನು ಕನ್ನಡೀಕರಿಸಿ ನಮ್ಮದಾಗಿಸಿಕೊಳ್ಳುವುದು.

ಈ ವಿಷಯದಲ್ಲಿ ನಾವಿನ್ನೂ ಬಹಳ ಹಿಂದುಳಿದಿದ್ದೇವೆ. ಉದಾಹರಣೆಗೆ, ಫ್ರೆಂಚ್, ಜರ್ಮನ್, ಚೈನೀಸ್ ಅಥವಾ ಜಪಾನೀಸ್ ಭಾಷೆಗಳ ವರ್ತಮಾನದ ಸ್ಥಿತಿಯನ್ನು ಗಮನಿಸಿದರೆ, ಬೇರೆ ಭಾಷೆಯಲ್ಲಿ ಲಭ್ಯವಿರುವ ಜ್ಞಾನವು ತಕ್ಷಣ ಅನುವಾದದ ಮೂಲಕ ಆಯಾ ಭಾಷಿಕರಿಗೆ ಲಭಿಸುತ್ತದೆ. ಹೀಗೆ, ಈ ಭಾಷೆಗಳು ವಿವಿಧ ಜ್ಞಾನಶಾಖೆಯ ಮಾಹಿತಿಯ ವಿಷಯದಲ್ಲಿ ಸದಾ ನವೀಕರಣಗೊಳ್ಳುತ್ತಿವೆ.

ಅದೇ ಮಾದರಿಯಲ್ಲಿ ಕನ್ನಡದಲ್ಲೂ ಸಮರ್ಥ ವಿದ್ವಾಂಸರು ಈ ಅನುವಾದದ ಕೆಲಸದಲ್ಲಿ ಹೆಚ್ಚಾಗಿ ತಮ್ಮನ್ನು ತೊಡಗಿಸಿಕೊಳ್ಳುವ ಅಗತ್ಯವಿದೆ. ಆದರೆ, ದುರದೃಷ್ಟವಶಾತ್ ನಮ್ಮಲ್ಲಿನ್ನೂ ಸಾಹಿತಿಗಳಿಗಿರುವ ಮನ್ನಣೆ ಅನುವಾದಕರಿಗೆ ಸಿಗುತ್ತಿಲ್ಲ. ಒಂದು ಕೃತಿಯ ಉತ್ತಮ ಅನುವಾದವು ಸಾಹಿತ್ಯ ಸೃಷ್ಟಿಯಷ್ಟೇ ಕ್ಲಿಷ್ಟಕರ ಕೆಲಸ ಹಾಗೂ ಗಂಭೀರವಾಗಿ ಪರಿಗಣಿಸಬೇಕಾದ ಬರಹ. ಯಾಕೆಂದರೆ, ಅನುವಾದಕ ಮೂಲ ಬರಹದ ಆಶಯವನ್ನು ತನ್ನದಾಗಿಸಿಕೊಳ್ಳದಿದ್ದರೆ, ಅನುವಾದ ಅಷ್ಟು ಪರಿಣಾಮಕಾರಿಯಾಗಲಾರದು.

ಅದೇ ರೀತಿ, ಕನ್ನಡದ ಬರಹ ಕೃಷಿಯಲ್ಲಿ ತೊಡಗಿಸಿಕೊಳ್ಳುವವರು ಕೂಡ ಇಂಗ್ಲಿಷ್ ಭಾಷೆಯನ್ನು ಕಲಿಯುವುದು ಬಹಳ ಮುಖ್ಯ. ಕನ್ನಡದ ಐತಿಹಾಸಿಕ ಸಾಹಿತ್ಯ ಪರಂಪರೆಯೊಂದಿಗೆ, ಇಂಗ್ಲಿಷಿನಲ್ಲಿ ಲಭ್ಯವಿರುವ ಬೇರೆ ಬೇರೆ ಭಾಷೆಗಳ ಸಾಹಿತ್ಯ, ಬರವಣಿಗೆ ಶೈಲಿ, ಆಲೋಚಿಸುವ ಕ್ರಮಗಳ ವೈಶಿಷ್ಟ್ಯವನ್ನು ಗುರುತಿಸಿಕೊಂಡು, ಇವುಗಳ ನಡುವೆ ತನ್ನತನವನ್ನು ರೂಪಿಸಿಕೊಳ್ಳುವುದು ಒಳ್ಳೆಯ ಕ್ರಮ.

ಹಾಗಾಗಿ, ಇಂಗ್ಲಿಷ್ ಅನ್ನು ಕಲಿಯೋಣ. ಆ ಮೂಲಕ ಅಲ್ಲಿರುವ ಜ್ಞಾನವನ್ನು ನಮ್ಮದಾಗಿಸಿಕೊಂಡು, ಕನ್ನಡವನ್ನು ಇನ್ನಷ್ಟು ಸಮೃದ್ಧವಾಗಿ ಬೆಳೆಸೋಣ ಎನ್ನುವುದು ವಿಶ್ವ ಇಂಗ್ಲಿಷ್ ಭಾಷಾ ದಿನಾಚರಣೆಯ ಆಶಯ.

ವಾಚಕರ ವಾಣಿ

ಕಸಾಪ ಚುನಾವಣೆ ಮುಂದೂಡದಿರಿ

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷ ಸ್ಥಾನಗಳಿಗೆ ಮೇ 9ರಂದು ನಡೆಯಲಿರುವ ಚುನಾವಣೆಯನ್ನು ಮುಂದೂಡುವ ಅಗತ್ಯವಿಲ್ಲ. ಈ ಚುನಾವಣೆ ದಿನಾಂಕದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಪರಿಷತ್ತಿನ ಕೇಂದ್ರ ಚುನಾವಣಾಧಿಕಾರಿ ಸ್ಪಷ್ಟಪಡಿಸಿರುವುದು ಸ್ವಾಗತಾರ್ಹ. ಆದರೂ ಕೆಲವರು ಕೋವಿಡ್ ಕಾರಣ ನೀಡಿ ಚುನಾವಣೆಯನ್ನು ಮುಂದೂಡಬೇಕೆಂಬ ಬೇಡಿಕೆ ಇಡುತ್ತಿರುವುದು ಸಕಾರಣವಾಗಲಾರದು.

ಕೋವಿಡ್ ಜೊತೆಗೆ ಹೇಗೆ ಬದುಕಬೇಕೆಂಬುದನ್ನು ನಾವು ಕಲಿಯಬೇಕು ಎಂಬ ತಜ್ಞ ವೈದ್ಯರ ಮಾತು ನೂರಕ್ಕೆ ನೂರು ಸತ್ಯ. ಕೋವಿಡ್‌ನಿಂದ ನೋವು-ನಷ್ಟಗಳಿವೆ. ಆದರೆ ಲಾಕ್‌ಡೌನ್ ಮತ್ತು ಕರ್ಫ್ಯೂ ಬಹಳ ದಿನಗಳವರೆಗೆ ಮುಂದುವರಿದರೆ ನಾವು ಉಳಿಯುತ್ತೇವಾದರೂ ನಮ್ಮ ಬದುಕನ್ನೇ ಕಳೆದುಕೊಳ್ಳುವ ಭಯಾನಕ ಸತ್ಯದ ಸೂಚನೆ ಈಗಾಗಲೇ ನಮಗೆ ಸಿಕ್ಕಿದೆ. ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ನಮ್ಮ ಎಂದಿನ ಬದುಕಿಗೆ ತೆರೆದುಕೊಳ್ಳುವಂತೆ ಆಗಬೇಕು. ಲಾಕ್‌ಡೌನ್ ಸಂದರ್ಭದಲ್ಲಿ ಎಷ್ಟೋ ಬಡಜನರು ನರಕ ಅನುಭವಿಸಿದ್ದು ಎಲ್ಲರ ಅನುಭವಕ್ಕೆ ಬಂದಿದೆ. ಹೀಗಾಗಿ, ಪರಿಷತ್ತಿನ ಮತದಾರರನ್ನು ಕೋವಿಡ್ ನಿಯಮಪಾಲನೆಗೆ ಒಳಪಡಿಸಿ ಚುನಾವಣೆ ನಡೆಸುವುದು ಒಳ್ಳೆಯದು.

ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

ಜಾತಿ ವ್ಯವಸ್ಥೆ: ಅವರವರ ಇಷ್ಟಕ್ಕೆ ಇರಲಿ

ಭಾರತದಲ್ಲಿರುವ ಜಾತಿ ವ್ಯವಸ್ಥೆಯ ಬಗ್ಗೆ ಡಾ. ಸಬಿತಾ ಬನ್ನಾಡಿ ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ಏ. 22) ಆಕ್ಷೇಪಣಾ ರೀತಿಯಲ್ಲಿ ಬರೆದಿದ್ದಾರೆ. ಜಾತಿ ವ್ಯವಸ್ಥೆಯನ್ನು ಪಾಲಿಸುವವರು ಆಧುನಿಕತೆಗೆ ವಿರುದ್ಧವಾದವರು ಎಂದು ಬಿಂಬಿಸಿದ್ದಾರೆ. ನನ್ನ ಪ್ರಕಾರ, ಜಾತಿ ವ್ಯವಸ್ಥೆ ಪಾಲನೆಗೂ ಆಧುನಿಕ ಚಿಂತನೆಗೂ ಒಂದಕ್ಕೊಂದು ಸಂಬಂಧ ಇಲ್ಲ. ಜಾತಿ ವ್ಯವಸ್ಥೆ ಪಾಲಿಸುವುದು ಒಂದು ಪಾಪವೇ? ಪಾಶ್ಚಾತ್ಯ ದೇಶಗಳು ಹಾಗೂ ಕಮ್ಯುನಿಸ್ಟ್ ಬುದ್ಧಿಜೀವಿಗಳು ಜಾತಿ ವ್ಯವಸ್ಥೆಯನ್ನು ವಿರೋಧಿಸುವ ಅಭಿಪ್ರಾಯವನ್ನು ನಮ್ಮ ಮೇಲೆ ಹೇರಿದ್ದಾರೆ ಅನಿಸುತ್ತದೆ. ಇಂದಿನ ಯುವಪೀಳಿಗೆಯು ಜಾತಿ ವ್ಯವಸ್ಥೆಯ ಬಗ್ಗೆ ಮಾತನಾಡುವವರನ್ನೂ ಒಬ್ಬ ಅಪರಾಧಿಯಂತೆ ನೋಡುತ್ತದೆ. ಜಾತಿ ವ್ಯವಸ್ಥೆಯನ್ನು ನಂಬಿ, ಅದನ್ನು ಸಾಧ್ಯವಾದಷ್ಟು ಅವರವರ ಅನುಕೂಲಕ್ಕಾಗಿ ಪಾಲಿಸಿಕೊಂಡು ಬಂದರೆ ಇತರರಿಗೆ ಆಗುವ ತೊಂದರೆಯಾದರೂ ಏನು? ಅದನ್ನು ಅವರವರ ಇಷ್ಟಕ್ಕೆ ಬಿಟ್ಟರೆ ತಪ್ಪೇನು?

ಮೇಲ್ಜಾತಿ ಮತ್ತು ಕೆಳಜಾತಿ ಎಂಬುದೆಲ್ಲಾ ಅವರವರ ಸಂಕುಚಿತ ಮನೋಭಾವದ ಪರಿಣಾಮದಿಂದ ಬಂದಿರುವಂಥದ್ದು. ಎಲ್ಲರೂ ಅವರವರ ಜಾತಿಯೇ ಅತ್ಯಂತ ಉಚ್ಚ ಮಟ್ಟದ್ದು, ಇತರ ಜಾತಿಗಳು ಅವರದಕ್ಕಿಂತ ಕೀಳು ಎಂದೇ ಭಾವಿಸುತ್ತಾರೆ. ನಮ್ಮ ಕಾನೂನುಗಳನ್ನು ಮಾತ್ರ ಎಲ್ಲ ಜಾತಿ, ಮತ, ಪಂಗಡಗಳಿಗೂ ಒಂದೇ ರೀತಿ ಅನ್ವಯಿಸುವಂತೆ ಮಾಡಿರುವುದು ಸರಿಯಾಗಿಯೇ ಇದೆ. ಇಲ್ಲದಿದ್ದಲ್ಲಿ ಬಹುಸಂಖ್ಯಾ ಜಾತಿಯವರು ಅಲ್ಪಸಂಖ್ಯಾ ಜಾತಿಯವರ ಮೇಲೆ ದಬ್ಬಾಳಿಕೆ ಮಾಡುವ ಅವಕಾಶ ಇರುತ್ತಿತ್ತು. ಆದ್ದರಿಂದ ಇಂದಿನ ಸಮಾಜದಲ್ಲಿ ಜನರು ಅವರವರ ಇಷ್ಟದಂತೆ ಇರಲು ಬಿಡಬೇಕು. ಜಾತಿ ವ್ಯವಸ್ಥೆ ಪಾಲಿಸುವವರನ್ನು ಹೀಯಾಳಿಸುವುದು ನಿಲ್ಲಬೇಕು. ಯಾರಾದರೂ ಅಂತರ್ಜಾತಿ ವಿವಾಹವಾದರೆ ಅವರನ್ನು ತುಚ್ಛೀಕರಿಸುವುದು ಅಥವಾ ವೈಭವೀಕರಿಸುವುದು ನಿಲ್ಲಬೇಕು.

ಸತೀಶ ಎಂ.ಎಸ್. ಭಟ್ಟ, ಬೆಂಗಳೂರು

ಕೊರೊನಾ ಹೇಳಿತು...

ಅಂಗೈಯಲ್ಲಿ ಬಾಂಬ್
ಇಟ್ಟುಕೊಂಡು
ಜೀವ ಜಗತ್ತಿನಲ್ಲಿ
ನಾನೇ ಶ್ರೇಷ್ಠನೆಂದು
ಮೆರೆಯುತ್ತಿದ್ದ ಮಾನವನಿಗೆ
ನೀನಲ್ಲವೆಂದು ಮೌನದಲ್ಲಿ
ತಣ್ಣನೆ ನುಡಿಯಿತು ಕೊರೊನಾ
ಮನುಷ್ಯನ ನಡುಗಿಸಿ.

ನಂಜನಹಳ್ಳಿ ನಾರಾಯಣ
ಬೆಂಗಳೂರು

ಗಿಡ ನೆಡದವರಿಗೆ ನೆರಳಿನ ಚಿಂತೆ!

ಖಾಸಗಿ ವಲಯದಲ್ಲಿ ಕೆಲಸ ಮಾಡುತ್ತಿರುವ ಗೆಳೆಯನೊಬ್ಬ ಬೇಸಿಗೆ ಆರಂಭವಾದಾಗಿನಿಂದ ಭೇಟಿಯಾಗುವುದನ್ನೇ ಕಡಿಮೆ ಮಾಡಿದ್ದ. ಬಹುಶಃ ಬಿಸಿಲಿಗೆ ಹೆದರಿರಬೇಕು ಇಲ್ಲವೇ ಅತಿಯಾದ ಕೆಲಸದ ಒತ್ತಡದಲ್ಲಿರಬೇಕೆಂದು ಭಾವಿಸಿದ್ದೆ. ಈಚೆಗೆ ಭೇಟಿಯಾದ ಅವನನ್ನು ಈ ಬಗ್ಗೆ ವಿಚಾರಿಸಿದಾಗ, 'ಬಿಸಿಲಿನ ಭಯ ನನಗಲ್ಲ ನನ್ನ ಗಾಡಿಗೆ. ನಮ್ಮ ಆಫೀಸಿನ ಮುಂದೆ ಎರಡೇ ಗಿಡಗಳಿವೆ. ಅವುಗಳ ನೆರಳಿನಲ್ಲಿ ಗಾಡಿ ಬಿಡಲು ಎಲ್ಲರಿಗೂ ಪೈಪೋಟಿ ಇದೆ. ಹಾಗಾಗಿ ಬೆಳಿಗ್ಗೆ ಬೇಗ ಹೋದವರು ಮಾತ್ರ ನೆರಳಿನಲ್ಲಿ ಗಾಡಿ ನಿಲ್ಲಿಸಬಹುದು, ತಡವಾದರೆ ಗಾಡಿಯನ್ನು ಬಿಸಿಲಿನಲ್ಲಿ ಒಣಗಿಸಬೇಕಾಗುತ್ತದೆ. ಇದರಿಂದ ಗಾಡಿಯ ಸೀಟ್, ಟೈರ್‌ಗಳು ಹಾಳಾಗುತ್ತವೆ' ಎಂದ. 'ಆಫೀಸಿನ ಮುಂದೆ ಇನ್ನೂ ನಾಲ್ಕಾರು ಗಿಡಗಳನ್ನು ಬೆಳೆಸಲು ಸಾಕಾಗುವಷ್ಟು ಸ್ಥಳಾವಕಾಶವಿದೆಯಲ್ಲ, ಒಂದೆರಡು ಸಸಿಗಳನ್ನು ನೆಟ್ಟು ಬೆಳೆಸಿ' ಎಂದು ಸಲಹೆ ನೀಡಿದೆ. ನನ್ನ ಮಾತಿಗೆ ಅವನ ಉದಾಸೀನ ಉತ್ತರ ಕೊಟ್ಟಿತು. ಜೊತೆಗೆ ಮನುಷ್ಯ ಸ್ವಭಾವದ ಕುರಿತು ಮರುಕ ಹುಟ್ಟುವಂತೆ ಮಾಡಿತು.

ಬೇರೆ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ಮಾತ್ರ ಗಿಡಮರಗಳ ಕುರಿತಾದ ಕಾಳಜಿ ಅತೀ ಕಡಿಮೆ. ಯಾರಾದರೂ ಗಿಡಮರಗಳನ್ನು ನೆಟ್ಟು ಬೆಳೆಸಲಿ, ಆದರೆ ಅದರ ನೆರಳು ಮಾತ್ರ ನಮಗಿರಲಿ ಎನ್ನುವ ಧೋರಣೆಯೇ ಎಲ್ಲೆಡೆ ತುಂಬಿದೆ. ಬೇಸಿಗೆಯಲ್ಲಿ ವಾಹನಗಳ ನಿಲುಗಡೆಗೆ ತಂಪಾದ ಮರಗಳ ನೆರಳು ಹುಡುಕುವ ನಾವು, ಅವೇ ಮರಗಳನ್ನು ಉಳಿದ ದಿನಗಳಲ್ಲಿ ಉಳಿಸಿಕೊಳ್ಳಲು ಪ್ರಯತ್ನಿಸುವುದಿಲ್ಲ. ಜೀವನದಲ್ಲಿ ಒಂದೇ ಒಂದು ಗಿಡವನ್ನೂ ನೆಟ್ಟು ಬೆಳೆಸದ, ಈಗಾಗಲೇ ಯಾರೋ ನೆಟ್ಟಿರುವ ಸಸಿಗಳಿಗೆ ನೀರುಣಿಸದ, ಅನವಶ್ಯಕವಾಗಿ ಮರಗಳನ್ನು ಕತ್ತರಿಸುವುದನ್ನು ಪ್ರತಿಭಟಿಸದ ನಾವುಗಳು ನಮ್ಮ ವಾಹನಗಳನ್ನು ಮಾತ್ರ ನೆರಳಿನಲ್ಲಿ ನಿಲ್ಲಿಸಲು ಹೆಣಗಾಡುವುದು ವ್ಯಂಗ್ಯವಲ್ಲವೇ? ಪ್ರತೀ ಕುಟುಂಬವು ಇಂತಿಷ್ಟು ಗಿಡಮರಗಳನ್ನು ನೆಟ್ಟು ಬೆಳೆಸಿದರೆ ಮಾತ್ರ ಅವರಿಗೆ ಸರ್ಕಾರದ ಉಚಿತ ಸೌಕರ್ಯಗಳನ್ನು ನೀಡಲಾಗುತ್ತದೆ ಎಂಬ ಕಾನೂನು ಜಾರಿಯಾಗಬೇಕು. ಈ ದಿಸೆಯಲ್ಲಿ ಸಮುದಾಯ ಅರಣ್ಯವಾದರೂ ಬೆಳೆದರೆ ಅದರಿಂದ ಎಷ್ಟೋ ಶುದ್ಧ ಗಾಳಿ, ನೆರಳು ದೊರಕಿದಂತಾಗುತ್ತದೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

2004ರಿಂದಲೂ ವಾದ, ಪ್ರತಿವಾದಗಳಿಂದ ರಾಜ್ಯದ ಗಮನ ಸೆಳೆದಿದ್ದ ದೇಗುಲ ಹಸ್ತಾಂತರ ವಿಚಾರ

ಮಹಾಬಲೇಶ್ವರ ದೇಗುಲ ನಿರ್ವಹಣೆ ಯಾರಿಗೆ ಸಲ್ಲಬೇಕು?

'ದಕ್ಷಿಣದ ಕಾಶಿ' ಎಂದೇ ಪ್ರಸಿದ್ಧವಾಗಿರುವ ಗೋಕರ್ಣದ ಮಹಾಬಲೇಶ್ವರ ದೇಗುಲದ ಹಸ್ತಾಂತರ ವಿವಾದಕ್ಕೆ ಸುಪ್ರೀಂ ಕೋರ್ಟ್ ತಾತ್ಕಾಲಿಕ ತೆರೆ ಎಳೆದಿದೆ. ಹೊಸನಗರದ ರಾಮಚಂದ್ರಾಪುರ ಮಠದ ಸುಪರ್ದಿಗೆ ದೇವಸ್ಥಾನವನ್ನು ನೀಡಿದ್ದ ಕ್ರಮವನ್ನು ರದ್ದುಪಡಿಸಿ ಮಧ್ಯಂತರ ಆದೇಶ ಹೊರಡಿಸಿದೆ. 2008ರಿಂದ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದ ಈ ಪ್ರಕರಣದಲ್ಲಿ ಏನೇನಾಯಿತು ಎಂಬ ವಿಸ್ತೃತವಾದ ಮಾಹಿತಿ ಇಲ್ಲಿದೆ


ಗೋಕರ್ಣದ ಮಹಾಬಲೇಶ್ವರ ದೇವಸ್ಥಾನ

• ಸದಾಶಿವ ಎಂ.ಎಸ್

ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದೊಂದಿಗೆ ಶಂಕರಾಚಾರ್ಯರ ಕಾಲದಿಂದಲೂ ರಾಮಚಂದ್ರಾಪುರ ಮಠಕ್ಕೆ ಪಾರಂಪರಿಕ ಸಂಬಂಧವಿದೆ. ಆದಿ ಶಂಕರರು 1,300 ವರ್ಷಗಳ ಹಿಂದೆ ರಾಮಚಂದ್ರಾಪುರ ಮಠಕ್ಕೆ ಶ್ರೀಕಾರ ಹಾಕಿದ್ದರು. ಆಗ ದೇವಸ್ಥಾನದ ನಿರ್ವಹಣೆಯ ಹೊಣೆಯನ್ನು ಮಠಕ್ಕೆ ನೀಡಿದ್ದರು. ಅಂದಿನಿಂದಲೂ ನಡೆದುಕೊಂಡು ಬಂದಿದ್ದ ಪರಂಪರೆಯು ಕಣ್ತಪ್ಪಿನಿಂದಾಗಿ ಮುಜರಾಯಿ ಇಲಾಖೆಗೆ ಸೇರಿತ್ತು ಎಂಬುದು ಮಠದ ವಾದವಾಗಿತ್ತು. ಈಗಲೂ ಇದೇ ಅಭಿಪ್ರಾಯವಿದೆ.

2004ರಲ್ಲಿ ಮುಜರಾಯಿ ಇಲಾಖೆಯ ಆಡಳಿತವಿದ್ದಾಗ ಆಗಿನ ಟ್ರಸ್ಟಿ ವಿ.ಡಿ.ದೀಕ್ಷಿತ್ ನಿಧನರಾದರು. 2004ರಿಂದ 2008ರ ಆ.14ರವರೆಗೆ ಅವರ ಪುತ್ರ ಬಾಲಚಂದ್ರ ದೀಕ್ಷಿತ್ ಉಸ್ತುವಾರಿ ಆಡಳಿತ ನಡೆಸಿದ್ದರು. ಆದರೆ, ಟ್ರಸ್ಟಿಗಳ ಹುದ್ದೆ ಖಾಲಿ ಇದ್ದ ಕಾರಣ ದೇಗುಲದ ನಿರ್ವಹಣೆ ಜವಾಬ್ದಾರಿಯನ್ನು ತಮಗೆ ವಹಿಸುವಂತೆ 2008ರ ಮೇ ತಿಂಗಳಿನಲ್ಲಿ ರಾಮಚಂದ್ರಾಪುರದ ಮಠದವರು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದರು. ಆಗ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತವಿತ್ತು. ಅಧಿಕಾರಿಗಳು ನೀಡಿದ್ದ ಮಾಹಿತಿಗಳನ್ನು ಪರಾಮರ್ಶಿಸಿದ ರಾಜ್ಯಪಾಲರ ಅಧೀನ ಕಾರ್ಯದರ್ಶಿ, ಈ ಮನವಿಯನ್ನು ಪುರಸ್ಕರಿಸಲಿಲ್ಲ.

ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ 2008ರ ಆಗಸ್ಟ್‌ನಲ್ಲಿ ಸರ್ಕಾರಕ್ಕೆ ಮಠದಿಂದ ಪುನಃ ಮನವಿ ಸಲ್ಲಿಸಲಾಯಿತು. ಅದರಂತೆ 2008ರ ಆ.14ರಂದು ಸೂಚಿತ ಪಟ್ಟಿಯಿಂದ ದೇವಾಲಯವನ್ನು ರದ್ದುಪಡಿಸಿ, ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರ ಮಾಡಲಾಯಿತು. ಹೀಗೆ ಹಿಂದೆ ಆಗಿದ್ದ ತಪ್ಪನ್ನು ಸರಿ ಪಡಿಸಲಾಯಿತು ಎಂಬುದು ರಾಮಚಂದ್ರಾಪುರ ಮಠದವರ ವಾದವಾಗಿದೆ.

ದೇಗುಲ ಉಸ್ತುವಾರಿ ಸಮಿತಿ ರಚನೆಯ ಪ್ರಕ್ರಿಯೆ ಜಾರಿಯಲ್ಲಿದ್ದು, ಇನ್ನೊಂದೆರಡು ದಿನಗಳಲ್ಲಿ ಪೂರ್ಣಗೊಳ್ಳಲಿದೆ. ದೇಗುಲದ ದೈನಂದಿನ ನಿರ್ವಹಣೆಯನ್ನು ಸಮಿತಿ ನೋಡಿಕೊಳ್ಳಲಿದೆ.

ಅಜಿತ್, ಕುಮಟಾ ಉಪ ವಿಭಾಗಾಧಿಕಾರಿ

ನ್ಯಾಯಾಲಯ ಹೇಳಿದ್ದೇನು?

ಗೋಕರ್ಣ ಮಹಾಬಲೇಶ್ವರ ದೇಗುಲದ ನಿರ್ವಹಣೆಯನ್ನು ನಿವೃತ್ತ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ನೇತೃತ್ವದ ಸಮಿತಿಗೆ ಒಪ್ಪಿಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಮುಖ್ಯ ನ್ಯಾಯಮೂರ್ತಿ ಎಸ್.ವಿ.ಬೊಬಡೆ ನೇತೃತ್ವದ ಮೂವರು ಸದಸ್ಯರ ಪೀಠವು ಈ ಮಧ್ಯಂತರ ಆದೇಶ ನೀಡಿದೆ.

ಸಮಿತಿಯಲ್ಲಿ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ, ಉಪ ವಿಭಾಗಾಧಿಕಾರಿ, ಇಬ್ಬರು ತಜ್ಞರು ಹಾಗೂ ರಾಜ್ಯ ಸರ್ಕಾರ ನೇಮಿಸುವ ಇಬ್ಬರು ಉಪಾಧಿವಂತರು ಇರಲಿದ್ದಾರೆ. ಸಮಿತಿ ರಚನೆ ಪ್ರಕ್ರಿಯೆಯನ್ನು 15 ದಿನಗಳಲ್ಲಿ ಪೂರ್ಣಗೊಳಿಸಬೇಕು ಎಂದು ನ್ಯಾಯಾಲಯ ಏ.19ರಂದು ನೀಡಿದ ಆದೇಶದಲ್ಲಿ ಹೇಳಿತ್ತು.

'ಮತ್ತೆ ಪಡೆಯುತ್ತೇವೆ ಎನ್ನುವುದರ ಔಚಿತ್ಯವೇನು?'

ಗಣಪತಿ ಹಿರೇ

'ರಾಮಚಂದ್ರಾಪುರ ಮಠವು ಮಹಾಬಲೇಶ್ವರ ದೇವಸ್ಥಾನದ ಉಸ್ತುವಾರಿ ಜವಾಬ್ದಾರಿಯನ್ನು ಉಪ ವಿಭಾಗಾಧಿಕಾರಿಗೆ (ಕುಮಟಾ) ತಕ್ಷಣವೇ ಹಸ್ತಾಂತರಿಸಬೇಕು. ಅವರೇ ಉಸ್ತುವಾರಿ ಸಮಿತಿಗೆ ಕಾರ್ಯದರ್ಶಿಯಾಗಿರುತ್ತಾರೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಹಾಗಿದ್ದಾಗ ಮಠದ ಜವಾಬ್ದಾರಿ ಏನು ಎಂದು ಈ ಆದೇಶದಲ್ಲಿ ಸ್ಪಷ್ಟವಾಗಿದೆ' ಎನ್ನುತ್ತಾರೆ ಶ್ರೀ ಕ್ಷೇತ್ರ ಗೋಕರ್ಣ ರಕ್ಷಣಾ ಸಮಿತಿಯ ಅಧ್ಯಕ್ಷ ಗಣಪತಿ ಹಿರೇ.

'ನ್ಯಾಯಾಲಯದ ಆದೇಶ ಪಾಲಿಸುವ ಇಚ್ಛೆ ವ್ಯಕ್ತಪಡಿಸದೇ ಕಾನೂನು ಹೋರಾಟ ಮುಂದುವರಿಯುತ್ತದೆ ಎಂದು ಪೀಠಾಧಿಪತಿ ರಾಘವೇಶ್ವರ ಅವರ ಹೇಳಿಕೆ ನಿಜಕ್ಕೂ ಹಾಸ್ಯವೆನಿಸುತ್ತದೆ. ನಮಗೆ ಯಾವುದರಲ್ಲೂ ಆಸೆಯಿಲ್ಲ. ನಾವು ಸೇವೆಗೆ ಮಾತ್ರ ಮಹಾಬಲೇಶ್ವರ ದೇವಸ್ಥಾನ ತೆಗೆದುಕೊಂಡಿದ್ದು ಎಂದು ಹೇಳಿದವರು, ಈಗ ದೇವಸ್ಥಾನವನ್ನು ಮತ್ತೆ ತಿರುಗಿ ಪಡೆಯುತ್ತೇವೆ ಎನ್ನುವ ಹೇಳಿಕೆಯ ಔಚಿತ್ಯವೇನು' ಎಂದು ಪ್ರಶ್ನಿಸುತ್ತಾರೆ.

'ಮೂಲ ಉಪಾಧಿವಂತರಿಗೆ ಪೂಜೆಗೆ ಅವಕಾಶ ನೀಡುವ ಪ್ರಕರಣದಲ್ಲಿ ಸ್ವಯಂಪ್ರೇರಿತ ನ್ಯಾಯಾಂಗ ನಿಂದನೆ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಂದಿದೆ. ಆ ಪ್ರಕರಣದಲ್ಲಿ ನ್ಯಾಯಾಲಯದ ಆಜ್ಞೆಯನ್ನು ಅನುಷ್ಠಾನ ಮಾಡಿದರಷ್ಟೇ ಮುಂದಿನ ವಿಚಾರಣೆಗೆ ಅರ್ಜಿದಾರರು ಅರ್ಹತೆ ಗಿಟ್ಟಿಸುತ್ತಾರೆ ಎಂದು ನ್ಯಾಯಾಲಯ ಹೇಳಿದೆ' ಎಂದೂ ಅವರು ಹೇಳುತ್ತಾರೆ.

'ಕ್ಷೇತ್ರದಲ್ಲಿ ಅಭಿವೃದ್ಧಿಯ ಮಹಾಪರ್ವ'

ರಾಘವೇಶ್ವರ ಭಾರತಿ ಸ್ವಾಮೀಜಿ

'ಗೋಕರ್ಣದ ಮಹಾಬಲೇಶ್ವರ ದೇಗುಲವನ್ನು ಎಂದಿಗೂ ಆದಾಯದ ಮೂಲ ಎಂದು ರಾಮಚಂದ್ರಾಪುರ ಮಠ ಕಂಡಿಲ್ಲ. ಇದನ್ನು ಸೇವೆಯ ಸಾಧನವಾಗಿ ಪರಿಗಣಿಸಿದ್ದೆವು. ಪರಂಪರೆಯ ಸಂಬಂಧ ಇರುವುದರಿಂದ ಮತ್ತು ಸಮಾಜ ಹಿತಕ್ಕಾಗಿ ಶ್ರೀಮಠವು ಗೋಕರ್ಣ ದೇವಾಲಯದ ಕಾನೂನು ಹೋರಾಟ ಕೈಗೆತ್ತಿಕೊಂಡಿತ್ತು. ಇದನ್ನು ಮುಂದುವರಿಸಲಿದೆ' ಎಂದು ರಾಮಚಂದ್ರಾಪುರ ಮಠದ ಪೀಠಾಧಿಪತಿ ರಾಘವೇಶ್ವರ ಭಾರತಿ ಸ್ವಾಮೀಜಿ ಅವರು ಸುಪ್ರೀಂ ಕೋರ್ಟ್ ತೀರ್ಪು ಪ್ರಕಟವಾದ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ್ದರು.

'2008ರಲ್ಲಿ ದೇವಾಲಯವು ಮಠಕ್ಕೆ ಪುನಃ ಹಸ್ತಾಂತರವಾದ ನಂತರ ಶ್ರೀಕ್ಷೇತ್ರದಲ್ಲಿ ಸಮಗ್ರ ಅಭಿವೃದ್ಧಿಯ ಮಹಾಪರ್ವವೇ ನಡೆದಿದೆ. ನಾಲ್ಕು ವರ್ಷಗಳ ಹಿಂದೆ ದೇವಾಲಯದ ಸುವ್ಯವಸ್ಥಿತ ಆಡಳಿತ, ಸಮರ್ಥ ನಿರ್ವಹಣೆ ಹಾಗೂ ಪಾರದರ್ಶಕತೆಯನ್ನು ಪ್ರಮಾಣೀಕರಿಸುವ ಐ.ಎಸ್.ಒ ಪ್ರಮಾಣಪತ್ರ ಸಿಕ್ಕಿದೆ. ಇದು ಮಠದ ಮಾದರಿ ಆಡಳಿತಕ್ಕೆ ಸಾಕ್ಷಿಯಾಗಿದೆ' ಎಂದೂ ಅವರು ಹೇಳಿದ್ದರು.

'2008ಕ್ಕೂ ಮೊದಲು ಲೆಕ್ಕ ಪತ್ರಗಳೇ ಇಲ್ಲದ ಸ್ಥಿತಿ ಇತ್ತು. ಮಠದ ಆಡಳಿತದಲ್ಲಿ ಪ್ರತಿ ರೂಪಾಯಿಗೂ ಪರಿಶೋಧನಾ ಲೆಕ್ಕ ಪತ್ರ ಇದೆ. ಹಿಂದೆ ಭಕ್ತರ ಸುಲಿಗೆ ನಡೆಯುತ್ತಿದ್ದ ಕ್ಷೇತ್ರದಲ್ಲಿ ಈಗ ಬರುವ ಎಲ್ಲ ಭಕ್ತರಿಗೆ ಎರಡು ಹೊತ್ತು ಪ್ರಸಾದ ಭೋಜನ ವ್ಯವಸ್ಥೆ ಕಲ್ಪಿಸಲಾಗಿದೆ. ಸ್ವಚ್ಛತೆ, ಸೌಕರ್ಯಗಳ ಬಗ್ಗೆ ಸರ್ಕಾರ ನೇಮಕ ಮಾಡಿದ ಸಮಿತಿಯೇ ಮೆಚ್ಚುಗೆ ವ್ಯಕ್ತಪಡಿಸಿದೆ' ಎಂದು ವಿವರಿಸಿದ್ದರು.

ಯಾವಾಗ ಏನಾಯಿತು?

- **2004**ರಲ್ಲಿ ಟ್ರಸ್ಟಿ ವಿ.ಡಿ.ದೀಕ್ಷಿತ್ ನಿಧನ
- ಅಂದಿನಿಂದ **2008**ರ ಆ.**14**ರವರೆಗೆ ಪುತ್ರ ಬಾಲಚಂದ್ರ ದೀಕ್ಷಿತ್ ಉಸ್ತುವಾರಿ ಆಡಳಿತ
- 2008ರ ಮೇನಲ್ಲಿ ರಾಮಚಂದ್ರಾಪುರ ಮಠಕ್ಕೆ ದೇಗುಲ ಹಸ್ತಾಂತರಿಸುವಂತೆ ಅರ್ಜಿ
- **2008**ರ ಆಗಸ್ಟ್ **14**ರಂದು ಸೂಚಿತ ಪಟ್ಟಿಯಿಂದ ದೇಗುಲ ಹೊರಗಿಟ್ಟು ಸರ್ಕಾರದ ಆದೇಶ
- ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋದ ಬಾಲಚಂದ್ರ ದೀಕ್ಷಿತ ಹಾಗೂ ಇತರರು
- **2018** ಆಗಸ್ಟ್ **10**ರಂದು ಹೈಕೋರ್ಟ್ ವಿಭಾಗೀಯ ಪೀಠದಿಂದ ಆದೇಶ
- ದೇಗುಲ ಹಸ್ತಾಂತರವನ್ನು ರದ್ದುಗೊಳಿಸಿದ ಹೈಕೋರ್ಟ್
- **2018**ರ ಸೆಪ್ಟೆಂಬರ್ 8ರಂದು ಮಠದಿಂದ ಸುಪ್ರೀಂ ಕೋರ್ಟಿಗೆ ಮೇಲ್ಮನವಿ
- **2018** ಸೆಪ್ಟೆಂಬರ್ **18**ರಂದು ಉಸ್ತುವಾರಿ ವಹಿಸಿಕೊಂಡ ಜಿಲ್ಲಾಧಿಕಾರಿ
- ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ **2018**ರ ಆಗಸ್ಟ್ **10**ರಂದು ಹೈಕೋರ್ಟ್ ಆದೇಶ
- **2018** ಅಕ್ಟೋಬರ್ **9**ರಂದು ಹಸ್ತಾಂತರ ಪ್ರಕ್ರಿಯೆ ಮೊಟಕು
- ಅಡ್ವೊಕೇಟ್ ಜನರಲ್ ಅಭಿಪ್ರಾಯ ಕೇಳಲು ಸರ್ಕಾರದ ನಿರ್ಧಾರ
- ಹಸ್ತಾಂತರ ರದ್ದುಗೊಳಿಸಿ, ಸಮಿತಿ ರಚಿಸಲು ಏಪ್ರಿಲ್ **19**ರಂದು ಮಧ್ಯಂತರ ಆದೇಶ

ಪೂರಕ ಮಾಹಿತಿ: ರವಿ ಸೂರಿ

ಗೋಕರ್ಣದ ಪುರಾಣ ಪ್ರಸಿದ್ಧ ಶಿವನ ಆತ್ಮಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ಭಕ್ತರು (ಸಂಗ್ರಹ ಚಿತ್ರ)

ಹಸ್ತಾಂತರ ಪ್ರಶ್ನಿಸಿ ಅರ್ಜಿ

ರಾಮಚಂದ್ರಾಪುರ ಮಠದ ಈ ಪ್ರತಿಪಾದನೆಯನ್ನು ಗೋಕರ್ಣದ ಮೂಲ ಉಪಾಧಿವಂತರು ಒಪ್ಪಲಿಲ್ಲ. ದೇವಸ್ಥಾನವು ಸರ್ಕಾರದ ಆಡಳಿತದಲ್ಲೇ ಇದ್ದ ಕಾರಣ ಅದನ್ನು ಯಥಾಸ್ಥಿತಿಯಲ್ಲೇ ಮುಂದುವರಿಸಬೇಕು ಎಂದು ಆಗ್ರಹಿಸಿದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೇಂದ್ರ ಸ್ಥಾನವಿಲ್ಲದ ಮಠಕ್ಕೆ ದೇವಸ್ಥಾನವನ್ನು ಹಸ್ತಾಂತರಿಸುವುದು ಸರಿಯಲ್ಲ ಎಂದು ನ್ಯಾಯಾಲಯದ ಮೊರೆ ಹೋದರು.

ಟ್ರಸ್ಟಿಯಾಗಿದ್ದ ವಿ.ಡಿ.ದೀಕ್ಷಿತ್ ಅವರು, ರಾಜ್ಯ ಸರ್ಕಾರ 2003ರಲ್ಲಿ ಜಾರಿಗೆ ತಂದ 'ಏಕರೂಪ ಶಾಸನ'ದ ವಿರುದ್ಧ ಕೋರ್ಟಿನಲ್ಲಿ ದಾವೆ ಹೂಡಿದ್ದರು. ಅಷ್ಟರಲ್ಲಿ ಅವರು ನಿಧನರಾದ ಕಾರಣ ಪುತ್ರ ಬಾಲಚಂದ್ರ ದೀಕ್ಷಿತ್, ನ್ಯಾಯಾಲಯದಲ್ಲಿ ಹೋರಾಟ ಮುಂದುವರಿಸಿದರು. ತಂದೆಯ ಅರ್ಜಿಯನ್ನು ಆಧರಿಸಿ ನ್ಯಾಯಾಲಯದಿಂದ ಯಥಾಸ್ಥಿತಿ ಕಾಪಾಡುವಂತೆ ಆದೇಶವನ್ನೂ ಪಡೆದುಕೊಂಡರು.

ಆದರೆ, ಸರ್ಕಾರವು 2008ರಲ್ಲಿ ದೇಗುಲ ಹಸ್ತಾಂತರಿಸಿದ ಕ್ರಮವು ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ಅರ್ಜಿ ಸಲ್ಲಿಸಿದರು. ಜೊತೆಗೇ ದೇಗುಲವು ಮಠಕ್ಕೆ ಸಂಬಂಧಿಸಿದ್ದಲ್ಲ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನೂ ಸಲ್ಲಿಸಿದರು. ಇದರ ವಿಚಾರಣೆಯು 10 ವರ್ಷ ನಡೆಯಿತು. 2018ರ ಆಗಸ್ಟ್ 10ರಂದು ಹೈಕೋರ್ಟ್ ವಿಭಾಗೀಯ ಪೀಠದ ತೀರ್ಪು ರಾಮಚಂದ್ರಾಪುರ ಮಠದ ವಿರುದ್ಧವಾಗಿ ಬಂತು. ಹಸ್ತಾಂತರವನ್ನು ರದ್ದುಗೊಳಿಸಿ, ಇದು ಸಾರ್ವಜನಿಕ ದೇವಸ್ಥಾನ ಎಂದು ತೀರ್ಪು ನೀಡಿತು.

ಇದರೊಂದಿಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶ್ರೀಕೃಷ್ಣ ಅವರನ್ನು ಸಲಹೆಗಾರರನ್ನಾಗಿ ನೇಮಿಸಿತು. ದೇವಸ್ಥಾನದ ನಿರ್ವಹಣೆಯನ್ನು ನೋಡಿಕೊಳ್ಳಲು ಸಮಿತಿ ರಚಿಸುವಂತೆಯೂ ಸರ್ಕಾರಕ್ಕೆ ಸೂಚನೆ ನೀಡಿತು. ಇದರ ವಿರುದ್ಧ ರಾಮಚಂದ್ರಾಪುರ ಮಠವು 2018ರ ಸೆಪ್ಟೆಂಬರ್ 8ರಂದು ಸುಪ್ರೀಂ ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿತು. ಅದರಂತೆ ನ್ಯಾಯಾಲಯವು ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ, 2018ರ ಆಗಸ್ಟ್ 10ರ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ತಿಳಿಸಿತು.

ಬಳಿಕ ಸುಪ್ರೀಂ ಕೋರ್ಟ್‌ನಲ್ಲಿ ವಾದ, ಪ್ರತಿವಾದಗಳು ನಡೆಯುತ್ತಲೇ ಇದ್ದವು. ಹಲವು ಬಾರಿ ವಿಚಾರಣೆ ಮುಂದೂಡಲಾಗಿತ್ತು. ಈ ವರ್ಷ ಏ.19ರಂದು ಮಧ್ಯಂತರ ತೀರ್ಪು ಪ್ರಕಟಿಸಿದ ಸುಪ್ರೀಂ ಕೋರ್ಟ್, ಹೈಕೋರ್ಟ್ ಆದೇಶವನ್ನೇ ಎತ್ತಿ ಹಿಡಿಯಿತು. ಅಲ್ಲದೇ ಸಲಹೆಗಾರರಾಗಿ ನೇಮಕವಾಗಿದ್ದ ನಿವೃತ್ತ ನ್ಯಾಯಮೂರ್ತಿ ಶ್ರೀಕೃಷ್ಣ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿ ಆದೇಶಿಸಿತು.

ಬುರ್ದ್ವಾನ್‌ನಲ್ಲಿ ಮತದಾನಕ್ಕೆ ಸಾಲುಗಟ್ಟಿ ನಿಂತಿದ್ದ ಮತದಾರರು –ಪಿಟಿಐ ಚಿತ್ರ

6ನೇ ಹಂತದಲ್ಲಿ ಶೇ 79 ಮತದಾನ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಕೆಲವು ಹಿಂಸಾಚಾರದ ಘಟನೆಗಳ ನಡುವೆಯೇ ಪಶ್ಚಿಮ ಬಂಗಾಳ ವಿಧಾನಸಭೆಗೆ ಗುರುವಾರ ಆರನೇ ಹಂತದ ಮತದಾನ ನಡೆಯಿತು. ಸಂಜೆ 5 ಗಂಟೆವರೆಗಿನ ಮಾಹಿತಿ ಪ್ರಕಾರ, ಶೇ 79.09ರಷ್ಟು ಜನರು ಹಕ್ಕು ಚಲಾಯಿಸಿದ್ದಾರೆ.

ಬಾರಕ್‌ಪುರ ಕ್ಷೇತ್ರದ ಟಿಟಾಗಢ ಎಂಬಲ್ಲಿ ಟಿಎಂಸಿ ಕಾರ್ಯಕರ್ತರು ಕಚ್ಚಾಬಾಂಬ್ ಎಸೆದಿದ್ದಾರೆ ಎಂದು ಬಿಜೆಪಿ ಕಾರ್ಯಕರ್ತರು ಆರೋಪಿಸಿದ್ದಾರೆ. ಘಟನೆಯಲ್ಲಿ ಮಗು ಸೇರಿ ಆರು ಮಂದಿ ಗಾಯಗೊಂಡಿದ್ದಾರೆ. ಒಬ್ಬ ಮೃತಪಟ್ಟಿದ್ದಾನೆ. ಟಿಎಂಸಿ ಬೆಂಬಲಿತ ಗೂಂಡಾಗಳೂ ತಮ್ಮ ಕಚೇರಿಯನ್ನು ಧ್ವಂಸ ಮಾಡಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಉತ್ತರ 24 ಪರಗಣ ಜಿಲ್ಲೆಯ ಬಾಗ್ದಾ ಕ್ಷೇತ್ರದಲ್ಲಿ ರಾಜ್ಯ ಪೊಲೀಸರು ಗುಂಡು ಹಾರಿಸಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಘಟನೆಯಲ್ಲಿ ಇಬ್ಬರು ಪೊಲೀಸ್ ಸಿಬ್ಬಂದಿ ಸೇರಿದಂತೆ ಮೂವರು ಗಾಯಗೊಂಡಿದ್ದಾರೆ ಎಂದು ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ.

ಅಶೋಕ್‌ನಗರ ಕ್ಷೇತ್ರದಲ್ಲಿ ಕೇಂದ್ರ ಪಡೆಗಳು ತಮ್ಮ ಕಾರ್ಯಕರ್ತರ ಮೇಲೆ ಗುಂಡು ಹಾರಿಸಿದ್ದು, ಇಬ್ಬರು ಗಾಯಗೊಂಡಿದ್ದಾರೆ ಎಂದು ಟಿಎಂಸಿ ಆರೋಪಿಸಿದೆ. ಆದರೆ ಯಾವುದೇ ಗುಂಡಿನ ದಾಳಿ ನಡೆದಿಲ್ಲ ಎಂದಿರುವ ಆಯೋಗ, ಆರೋಪವನ್ನು ತಳ್ಳಿಹಾಕಿದೆ.

ರೋಡ್ ಶೋಗೆ ನಿಷೇಧ: ಪಶ್ಚಿಮ ಬಂಗಾಳ ಚುನಾವಣಾ ಪ್ರಚಾರದಲ್ಲಿ ಕೋವಿಡ್ ತಡೆ ಮಾರ್ಗಸೂಚಿಗಳನ್ನು ಉಲ್ಲಂಘಿಸಲಾಗಿದೆ ಎಂಬ ಕಾರಣಕ್ಕೆ ರೋಡ್ ಶೋ ಮತ್ತು ವಾಹನ ಜಾಥಾಗಳನ್ನು ಚುನಾವಣಾ ಆಯೋಗವು ನಿಷೇಧಿಸಿದೆ. ಸಾರ್ವಜನಿಕ ಸಮಾರಂಭಗಳಲ್ಲಿ 500ಕ್ಕಿಂತ ಹೆಚ್ಚು ಜನರು ಸೇರುವಂತಿಲ್ಲ ಎಂದು ಹೇಳಲಾಗಿದೆ. ಗುರುವಾರ ಸಂಜೆಯಿಂದಲೇ ಇದು ಜಾರಿಗೆ ಬಂದಿದೆ.

ಜನತಂತ್ರದ ಹಬ್ಬ 2021

ರೆಸಾರ್ಟ್‌ನಲ್ಲಿ ಅಭ್ಯರ್ಥಿಗಳು

ಗುವಾಹಟಿ: ಬಿಜೆಪಿಯು ಶಾಸಕರ ಖರೀದಿಯಲ್ಲಿ ತೊಡಗಿದಲ್ಲಿ, ಆ ಪ್ರಯತ್ನವನ್ನು ವಿಫಲಗೊಳಿಸುವ ಉದ್ದೇಶದಿಂದ ಅಸ್ಸಾಂನ ಕಾಂಗ್ರೆಸ್ ಘಟಕವು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ 93 ಅಭ್ಯರ್ಥಿಗಳನ್ನು ಗುವಾಹಟಿಯ ಹೊರವಲಯದಲ್ಲಿರುವ ಖಾಸಗಿ ರೆಸಾರ್ಟ್‌ಗೆ ಸ್ಥಳಾಂತರಿಸಿದೆ.

ಕಾಂಗ್ರೆಸ್ ಅಭ್ಯರ್ಥಿಗಳು ಗುರುವಾರ ಬೆಳಿಗ್ಗೆಯಿಂದ ಸೋನಾಪುರದ ರೆಸಾರ್ಟ್ ತಲುಪಲು ಶುರು ಮಾಡಿದರು. ಭಯವು ಎಷ್ಟು ಪ್ರಬಲವಾಗಿದೆ ಎಂದರೆ, ಕಾಂಗ್ರೆಸ್ ಪಕ್ಷದ ಕನಿಷ್ಠ 40 ವಿಶ್ವಾಸಾರ್ಹ ಸ್ವಯಂಸೇವಕರನ್ನು ರೆಸಾರ್ಟ್ ಕೆಲಸದ ಹುಡುಗರ ಬದಲಿಗೆ ನಿಯೋಜಿಸಲಾಗಿದೆ. ಅಭ್ಯರ್ಥಿಗಳನ್ನು ಬಿಜೆಪಿ ಕಡೆಯವರು ಸಂಪರ್ಕಿಸದಂತೆ ತಡೆಯಲು ಈ ರೀತಿ ಮಾಡಲಾಗಿದೆ.

ಮತಯಂತ್ರಗಳಿಗೆ ಕಾರ್ಯಕರ್ತರ ಕಾವಲು

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಯ ಫಲಿತಾಂಶಕ್ಕಾಗಿ ಇಡೀ ರಾಜ್ಯ ಕಾಯುತ್ತಿದೆ. ರಾಜಕೀಯ ಪಕ್ಷಗಳು ಹಾಗೂ ಕಾರ್ಯಕರ್ತರಿಗೆ ಫಲಿತಾಂಶದ ಮೇಲೆ ಭಾರಿ ಕುತೂಹಲವಿದೆ. ರಾಜಕಾರಣಿಗಳ ಭವಿಷ್ಯ ಭದ್ರವಾಗಿರುವ ಮತಯಂತ್ರಗಳನ್ನು ರಾಜ್ಯದ 78 ಕೇಂದ್ರಗಳಲ್ಲಿ ಸುಭದ್ರವಾಗಿ ಇರಿಸಲಾಗಿದೆ. ಮತಯಂತ್ರ ಇರಿಸಿರುವ ಈ ಕೇಂದ್ರಗಳ ಸುತ್ತ ಡಿಎಂಕೆ ಹಾಗೂ ಎಐಎಡಿಎಂಕೆ ಪಕ್ಷಗಳ ಕಾರ್ಯಕರ್ತರು ದಿನದ 24 ಗಂಟೆ ಕಾವಲು ಕಾಯುತ್ತಿದ್ದಾರೆ.

ಪ್ರತಿಯೊಂದು ಕೊಠಡಿ ಬಳಿಯೂ ಪಕ್ಷಗಳ ಸುಮಾರು 20 ಜನರು ಹಗಲು ರಾತ್ರಿ ಎನ್ನದೆ ಕಾವಲಾಗಿದ್ದಾರೆ. ಮತಯಂತ್ರ ಹಾಗೂ ಅವುಗಳನ್ನು ಇರಿಸಿರುವ ಕೋಣೆಗಳನ್ನು ಭದ್ರಪಡಿಸಲಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಸತ್ಯವ್ರತ ಸಾಹೂ ಅವರು ಸ್ಪಷ್ಟನೆ ನೀಡಿದ್ದರೂ ಪಕ್ಷಗಳು ಭದ್ರತೆಗೆ ಕಾರ್ಯಕರ್ತರನ್ನು ನಿಯೋಜಿಸಿವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೇಶದ ಉದ್ದಗಲಕ್ಕೂ ಕೊರೊನಾ ಸೋಂಕಿನ ಎರಡನೇ ಅಲೆ ಅಪ್ಪಳಿಸಿ ಜನರಲ್ಲಿ ಭೀತಿ ಮೂಡಿಸಿದೆ. ಆಸ್ಪತ್ರೆಗಳಲ್ಲಿ ಹಾಸಿಗೆಗಳು, ಆಮ್ಲಜನಕ ಸಿಗದೆ ರೋಗಿಗಳು ಒದ್ದಾಡುತ್ತಿದ್ದಾರೆ. ಸೋಂಕು ಬರುವುದಕ್ಕಿಂತ ಮುನ್ನ ಅದನ್ನು ತಡೆಯುವುದು ಅತಿಮುಖ್ಯ. ಹೇಗೆಲ್ಲಾ ಸೋಂಕು ತಡೆಯಬಹುದು ಎಂಬ ಕುರಿತ ಸಂದೇಶಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಬಿಸಿನೀರಿನಲ್ಲಿ ನಿಂಬೆಯ ಹೋಳುಗಳು ಹಾಗೂ ಬೇಕಿಂಗ್ ಸೋಡಾ ಸೇರಿಸಿ ಕುಡಿಯುವುದರಿಂದ ವೈರಾಣು ಸಾಯುತ್ತದೆ ಎಂಬ ಸಂದೇಶವೊಂದು ಎಲ್ಲೆಡೆ ಹರಿದಾಡುತ್ತಿದೆ.

ಈ ಸಂದೇಶದ ಸತ್ಯಾಸತ್ಯತೆಯನ್ನು ಪಿಐಬಿ ಫ್ಯಾಕ್ಟ್ ಚೆಕ್ ವೇದಿಕೆ ಪರಿಶೀಲಿಸಿದೆ. ಬಿಸಿನೀರಿಗೆ ನಿಂಬೆ ಹೋಳು ಹಾಗೂ ಬೇಕಿಂಗ್ ಸೋಡಾ ಸೇರಿಸಿ ಕುಡಿದರೆ ವೈರಾಣು ಸಾಯುತ್ತದೆ ಎಂಬುದು ವೈಜ್ಞಾನಿಕವಾಗಿ ದೃಢಪಟ್ಟಿಲ್ಲ. ಇದಕ್ಕೆ ಸ್ಪಷ್ಟ ಪುರಾವೆಗಳು ಲಭ್ಯವಿಲ್ಲ ಎಂದು ತಿಳಿಸಿದೆ.

ಗುಂಡಣ್ಣ

ದಿನ ಭವಿಷ್ಯ

ಶುಕ್ರವಾರ 23 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಅಶ್ವಿನೀ ಏಕಾದಶೀ ಗಂ. 27-39 (ಸಾ. 5-13) ಶುಕ್ರವಾರ ನಿತ್ಯ ನಕ್ಷತ್ರ ಪೂರ್ವಫಲ್ಗುಣಿ ಗಂ. 51-8 (ರಾ. 2-37) ವೃದ್ಧಿ ನಾಮ ಯೋಗ ಗಂ 11-34 ಭದ್ರೆ ಕರಣ ಗಂ. 27-39 ವಿಷ ಗಂ. 11-48 ಅಮೃತ ಗಂ. 35-9: ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-07 ಸೂರ್ಯಾಸ್ತ: 6-29 ಅದೃಷ್ಟ ಸಂಖ್ಯೆ 2 8

ಮೇಷ: ಸರ್ಕಾರಿ ಕೆಲಸದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳಿಂದಾಗಿ ಗೃಹ ಕಲಹಗಳಿಗೆ ದಾರಿಯಾದೀತು. ಮನೆಯವರ ಪ್ರಯಾಣಕ್ಕಾಗಿ ವಿಶೇಷ ವೆಚ್ಚ. ಬಂಧುಗಳ ಮನೆಯ ಕಾರ್ಯಕ್ರಮಗಳಲ್ಲಿ ಭಾಗಿ.

ವೃಷಭ: ಉನ್ನತಾಧಿಕಾರಿಗಳ ಅನುಗ್ರಹದಿಂದಾಗಿ ನೌಕರಿಯಲ್ಲಿ ಅನುಕೂಲತೆಯನ್ನು ಕಂಡುಕೊಳ್ಳುವಿರಿ. ಸಾಮಾಜಿಕ ಸೇವೆಯಲ್ಲಿ ದಿನವಿಡೀ ತೊಡಗಿಕೊಂಡು ಸಂತೋಷವನ್ನು ಅನುಭವಿಸಲಿದ್ದೀರಿ. ಮಕ್ಕಳಿಂದ ಆರ್ಥಿಕ ಸಹಕಾರ.

ಮಿಥುನ: ಉದ್ಯೋಗಾವಕಾಶಗಳು ತೆರೆದುಕೊಳ್ಳುವ ಸಾಧ್ಯತೆ. ನ್ಯಾಯಾಲಯದಲ್ಲಿನ ಕಟ್ಲೆಗಳಿಗೆ ಚಾಲನೆ. ಖರೀದಿ ಮಾರಾಟ ವ್ಯವಹಾರಗಳಲ್ಲಿ ಉತ್ತಮ ಲಾಭ. ಸಾಹಿತಿ, ಕವಿಗಳು, ಬರಹಗಾರರಿಗೆ ಗೌರವ ಪ್ರಾಪ್ತಿ.

ಕರ್ಕಾಟಕ: ಆರ್ಥಿಕವಾಗಿ ನಾನಾ ರೀತಿಯಲ್ಲಿ ಧನ ಸಂಗ್ರಹವಾಗಿ ಹಮ್ಮಿಕೊಂಡಿರುವ ಯೋಜನೆಗಳನ್ನು ಪೂರೈಸಲು ಅನುಕೂಲತೆ. ಕೃಷಿ ಕೈಗಾರಿಕಾ ಕ್ಷೇತ್ರದಲ್ಲಿ ಲಾಭ ಹೆಚ್ಚಳ.

ಸಿಂಹ: ಉದ್ಯೋಗಾಕಾಂಕ್ಷಿಗಳಿಗೆ ಅನಿರೀಕ್ಷಿತ ಉದ್ಯೋಗಾವಕಾಶ. ದೂರದ ವ್ಯವಹಾರಸ್ಥರೊಂದಿಗಿನ ಸಂಪರ್ಕದಿಂದಾಗಿ ವ್ಯವಹಾರಕ್ಕೊಂದು ತಿರುವು. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಗತಿ. ಅತಿಯಾದ ಆಯಾಸ.

ಕನ್ಯಾ: ಕೆಲಸ ಕಾರ್ಯಗಳಲ್ಲಿ ಅನುಕೂಲ. ಉದ್ಯೋಗ ಕ್ಷೇತ್ರದಲ್ಲಿ ಮೇಲಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ವಿಶ್ವಾಸದಿಂದ ಉದ್ಯೋಗ ವ್ಯಾಪಾರಗಳಲ್ಲಿ ತೊಡಗಿಕೊಳ್ಳುವುದರಿಂದ ಹೆಚ್ಚಿನ ಲಾಭ.

ತುಲಾ: ದೇವತಾನುಗ್ರಹದಿಂದ ಶುಭ ಕಾರ್ಯಗಳು ನಿಮ್ಮ ಮನದಿಚ್ಛೆಯಂತೆ ನೆರವೇರುವುದರಿಂದ ನೆಮ್ಮದಿ. ಧೈರ್ಯ ಆತ್ಮವಿಶ್ವಾಸ ಮತ್ತು ಪ್ರಯತ್ನ ಬಲದಿಂದಾಗಿ ಕಾರ್ಯಾನುಕೂಲ. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ.

ವೃಶ್ಚಿಕ: ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಬದಲಾವಣೆಯ ಸಾಧ್ಯತೆ. ನೌಕರ ವರ್ಗಕ್ಕೆ ಕೆಲಸಗಳಿಂದ ವಿರಾಮ ದೊರೆತು ದೂರದೂರಿನ ಪ್ರಯಾಣ ಸಾಧ್ಯತೆ. ಆರೋಗ್ಯದ ಬಗ್ಗೆ ವಿಶೇಷ ಗಮನ ಹರಿಸುವುದು ಒಳ್ಳೆಯದು.

ಧನು: ಉನ್ನತ ಅಧ್ಯಯನಕ್ಕೆ ಉತ್ತೇಜನ ದೊರೆತು ಉತ್ತಮ ಸಾಧನೆ. ಸಾರಾಸಾರ ವಿವೇಚನೆಯಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ವಿಶೇಷ ಭೋಜನ ಕೂಟದಲ್ಲಿ ಭಾಗಿ.

ಮಕರ: ನಿಮ್ಮ ಒಳ್ಳೆಯತನದ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸುವುದು ಒಳ್ಳೆಯದು. ಅವಶ್ಯಕತೆಗಿಂತ ಹೆಚ್ಚಾಗಿ ಹಣಕಾಸಿನ ನೆರವು ದೊರೆಯಲಿದೆ. ಶೀಘ್ರದಲ್ಲೇ ಸಂತೋಷಕರ ಸುದ್ದಿಯೊಂದನ್ನು ಆಲಿಸಲಿದ್ದೀರಿ.

ಕುಂಭ: ಗೃಹ ಖರೀದಿ ಅಥವಾ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಉತ್ತಮ ಕಾಲ. ಮನಸ್ಸಿಟ್ಟು ಕೆಲಸವನ್ನು ಮಾಡಿದಲ್ಲಿ ವಿದೇಶಿ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಭೂ ಖರೀದಿ ವ್ಯವಹಾರವನ್ನು ಮಾಡಲು ಸಕಾಲ.

ಮೀನ: ಆರ್ಥಿಕ ಅಡಚಣೆಗಳು ಹಂತ ಹಂತವಾಗಿ ನಿವಾರಣೆ. ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ. ಶಾರೀರಿಕ ಆಯಾಸ ತೋರಿಬಂದರೂ ದಿನದ ಅಂತ್ಯದಲ್ಲಿ ಕೆಲಸಗಳಲ್ಲಿ ಪ್ರಗತಿ ಕಂಡುಬರಲಿದೆ.

ನಿಮ್ಮ ಜನ್ಮದಿನ 23-ಏಪ್ರಿಲ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಸ್ವತಂತ್ರ ವ್ಯಕ್ತಿತ್ವಕ್ಕಾಗಿ ನಡೆಸುವ ಹೋರಾಟದಲ್ಲಿ ನೀವು ಸಫಲರಾಗುವಿರಿ. ನಿಮ್ಮತನಕ್ಕಾಗಿ ನೀವು ಹತ್ತಿರದವರನ್ನು ದೂರ ಮಾಡಿಕೊಳ್ಳಬೇಕಾದೀತು. ಮಿತ ಭಾಷಿಯಾದ ನೀವು ಉತ್ತಮ ಸಾಂಸಾರಿಕ ಜೀವನವನ್ನು ನಡೆಸಲಿದ್ದೀರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪರಿಪೂರ್ಣ ಯುದ್ಧಸಿದ್ಧತೆ

ಬ್ರಹ್ಮದತ್ತನ ಸೈನ್ಯ ಮಿಥಿಲೆಯ ಕಡೆಗೆ ಹೊರಟಿತು. ಮಹೋಷಧಕುಮಾರನ ಗುಪ್ತಚರರು, ಯಾವ ಸಮಯಕ್ಕೆ ಸೈನ್ಯ ಯಾವ ನಗರಕ್ಕೆ ಬಂದಿತು ಎಂಬುದನ್ನು ಕ್ಷಣಕ್ಷಣದ ವರದಿಯಂತೆ ಒಪ್ಪಿಸುತ್ತಿದ್ದರು. ಈ ವಿಷಯ ರಾಜ ವಿದೇಹನಿಗೂ ತಿಳಿಯಿತು. ಬ್ರಹ್ಮದತ್ತ ರಾತ್ರಿಯ ಮೊದಲ ಜಾವದಲ್ಲಿಯೇ ಮಿಥಿಲಾನಗರಕ್ಕೆ ಮುತ್ತಿಗೆ ಹಾಕಿದ. ಸೇನಾಪತಿ ಆನೆಗಳ ಪ್ರಾಕಾರ, ಕುದುರೆಗಳ ಪ್ರಾಕಾರ, ರಥಗಳ ಪ್ರಾಕಾರಗಳನ್ನು ರಚಿಸಿ ಸೈನಿಕರನ್ನು ಆಯಕಟ್ಟಿನ ಸ್ಥಳಗಳಲ್ಲಿ ನಿಲ್ಲಿಸಿದ. ಈ ಸೈನ್ಯದ ಗಲಾಟೆ ಆಕಾಶವನ್ನು ಮುಟ್ಟಿತು. ರಾಜ ವಿದೇಹ ಈ ಗಲಾಟೆಯನ್ನು ಕೇಳಿ, ಕಿಟಕಿಯಿಂದ ಸೈನ್ಯದ ಸಾಗರವನ್ನು ನೋಡಿ ಭಯಭೀತನಾದ. ಬೋಧಿಸತ್ವನಾದ ಮಹೋಷಧಕುಮಾರ, ಈ ರಾಜ ಸಾವಿಗೆ ಹೆದರಿದ್ದಾನೆ, ನಾನೇ ಇವನ ಭಯವನ್ನು ದೂರ ಮಾಡ ಬೇಕೆಂದುಕೊಂಡು, 'ರಾಜಾ, ಯಾವ ಭಯವೂ ಬೇಡ. ಸೈನ್ಯದ ಸಂಖ್ಯೆ ಮುಖ್ಯವಲ್ಲ, ಅದನ್ನು ನಡೆಸುವ ಬುದ್ಧಿ ಮುಖ್ಯ. ನಾವೇ ಯುದ್ಧವನ್ನು ಗೆಲ್ಲುತ್ತೇವೆ. ನೀವು ವಿರಾಮವಾಗಿ ಕಾಮಭೋಗಗಳಲ್ಲಿ ವಿರಮಿಸಿ' ಎಂದ.

ಕುಮಾರ ನಗರ ಮಧ್ಯಕ್ಕೆ ಬಂದು ನಾಗರಿಕರಿಗೆ ಹೇಳಿದ, 'ನೀವೆಲ್ಲ ಸಂಭ್ರಮ ಪಡಿ. ಒಂದು ವಾರ ಇದು ವಿಶೇಷ ಹಬ್ಬ. ಗಂಧ, ಮಾಲೆ, ವಿಲೇಪನ ಹಾಗೂ ಪಾನ, ಭೋಜನಾದಿಗಳ ಖರ್ಚು ರಾಜರದ್ದು. ನೀವು ನೃತ್ಯ, ಸಂಗೀತಗಳಲ್ಲಿ ತನ್ಮಯರಾಗಿ'. ಜನ ಸಂತೋಷದಿಂದ ಕುಣಿದು ಕುಪ್ಪಳಿಸಿ, ಹಾಡಿ, ಕುಣಿದು ಉತ್ಸವವನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ಇದನ್ನು ಹೊರಗಿನಿಂದ ಕಂಡ ಬ್ರಹ್ಮದತ್ತ ಆಶ್ಚರ್ಯಪಟ್ಟ. ಹೊರಗೆ ಸೈನ್ಯ ಮುತ್ತಿಗೆ ಹಾಕಿದ್ದರೆ ಇವರು ಒಳಗೆ ಉತ್ಸವ ಮಾಡುತ್ತಿದ್ದಾರಲ್ಲ. ಏನು ವಿಶೇಷವಿದ್ದಿರಬೇಕು? ಒಂದಿಬ್ಬರು ಗುಪ್ತಚರರು ನುಸುಳು ದಾರಿಯಲ್ಲಿ ಒಳಗೆ ಹೋಗಿ ನೋಡಿಕೊಂಡು ಬಂದು ಹೇಳಿದರು, 'ರಾಜಾ, ಈ ಜನರಿಗೆ ಯುದ್ಧಭಯವೇ ಇಲ್ಲ. ಅವರು ಸಂತೋಷದಿಂದ ಕುಣಿದಾಡುತ್ತಿದ್ದಾರೆ'. ರಾಜನಿಗೆ ಮತ್ತಷ್ಟು ಕೋಪ ಬಂದಿತು. 'ಸೈನಿಕರೇ ಈಗಲೇ ನುಗ್ಗಿಬಿಡಿ, ಸೈನಿಕರನ್ನು ಕೊಂದು, ರಾಜನ ತಲೆಯನ್ನು ಕತ್ತರಿಸಿ ತನ್ನಿ' ಎಂದು ಆಜ್ಞೆ ಮಾಡಿದ. ಅವರು ಕಂದಕಗಳಿಗೆ ಹಾರಿದರು. ಕುಮಾರ ಮೊದಲೇ ಮಾಡಿಸಿಟ್ಟ ನೀರಿನ ಕಂದಕ, ಕೆಸರಿನ ಕಂದಕ, ಮರಳಿನ ಕಂದಕಗಳನ್ನು ಪಾರಾಗುವುದು ಅಸಾಧ್ಯವೆನ್ನಿಸಿತು. ಅದೇ ಸಮಯದಲ್ಲಿ ಕೋಟೆಯ ಮೇಲಿದ್ದ ಸೈನಿಕರು ಇವರ ಮೇಲೆ ಬಾಣ ಮತ್ತು ಬೆಂಕಿಯ ಮಳೆಗರೆಯುತ್ತಿದ್ದರು. ಬ್ರಹ್ಮದತ್ತನ ಸೈನಿಕರಿಗೆ ಜೀವ ಉಳಿಸಿಕೊಂಡು ಹೋದರೆ ಸಾಕಂತಾಯಿತು. ಒಂದು ವಾರವಾದರೂ ಸೈನಿಕರಿಗೆ ಕೋಟೆಯನ್ನು ಮುಟ್ಟುವುದು ಅಸಾಧ್ಯವಾಯಿತು.

ಕೇವಟ್ಟನ ಸಲಹೆಯಂತೆ ರಾಜ ನಗರಕ್ಕೆ ಹೊರಗಿನಿಂದ ನೀರಿನ ಸರಬರಾಜನ್ನು ಬಂದು ಮಾಡಿದ. ಹೊರಗಿನಿಂದ ಯಾವ ಧಾನ್ಯವೂ ಕೋಟೆಯ ಒಳಗೆ ಹೋಗದಂತೆ ನೋಡಿದ. ನೀರು-ಧಾನ್ಯಗಳಿಲ್ಲದೆ ಅವರು ಶರಣಾಗತರಾಗುತ್ತಾರೆ ಎಂಬ ಉಪಾಯ ಅವನದು. ಆದರೆ ಮಹೋಷಧಕುಮಾರ ನಗರದ ಕೆರೆಗಳನ್ನು ತುಂಬಿಸಿಕೊಂಡು, ಗೋದಾಮುಗಳನ್ನು ಧಾನ್ಯಗಳಿಂದ ಭರ್ತಿಮಾಡಿಕೊಂಡು ನಿಶ್ಚಿಂತನಾಗಿದ್ದ. ಜನರಿಗೆ ಯಾವ ತೊಂದರೆಯೂ ಇರಲಿಲ್ಲ. ಆದರೆ ಹೊರಗೆ ಬ್ರಹ್ಮದತ್ತನಿಗೆ ತನ್ನ ದೊಡ್ಡ ಸೈನ್ಯವನ್ನು ಸಾಕುವುದು ದೊಡ್ಡ ಹೊರೆಯಾಯಿತು. ಇದು ಮುಗಿಯುವ ಯುದ್ಧವಲ್ಲ ಎನ್ನಿಸಿ ಚಿಂತಾಕ್ರಾಂತನಾದಾಗ ಮಂತ್ರಿ ಕೇವಟ್ಟ ಹೊಸ ಉಪಾಯವನ್ನು ನೀಡಿದ. ❖

ಪದಬಂಧ 4575 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದಾಯಾದಿಗಳಲ್ಲಿನ ಜಗಳ (5)
3.ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)
5.ಕಲೆಯನ್ನು ಆರಾಧಿಸುವುದು (5)
7.ಹತ್ತು ನೂರಿದು (3)
8.ಮಣೆ ಹಾಕಿದವನ ಹುಚ್ಚು (5)
10.ಸತ್ಯಾಗ್ರಹ ಅಥವಾ ಸಂಪು (3)
11.ದಾರ ಹಿಡಿದಿರುವ ಬಾಧ್ಯಸ್ಥ! (5)
14.ಕಮ್ಮಾರನ ಒಲೆ (3)
15.ತರ್ಜುಮೆ ಮಾಡುವವನು (5)

ಮೇಲಿಂದ ಕೆಳಕ್ಕೆ
1.ಪಕ ಪಕ ನಕ್ಕಾಗ ಬಂದ ನೆನೆಪು! (3)
2.ಪಾಕದಲ್ಲಿನ ದೋಷ ಉಲ್ಟಾ ಕಾಣುತ್ತಿದೆಯಲ್ಲಾ? (3)
4.ಹೆಂಡತಿಯನ್ನು ಕಳೆದುಕೊಂಡವನು (3)
6.ಸತಿ ನೀಡಿದ ಒಪ್ಪಿಗೆ (3)
7.ನೆಲವನ್ನು ಗೋಮಯದಿಂದ ಸಾರಿಸುವುದು (3)
8.ಕನ್ನಡಿಗನ ಹತ್ತಿರವಿರುವ ಲೆನ್ಸ್ (3)
9.ಮರದಲ್ಲಿರುವ ಕೇಕಿ (3)
10.ಪ್ರಸವ ವೇದನೆಯನ್ನು ಅನುಭವಿಸುವಿಕೆ (3)
12.ತಿರುಗಿ ನಿಂತು ಈ ರೀತಿ ಚರ್ಚಿಸು (3)
13.ರಸಸ್ವಾದನೆ ಬಲ್ಲವನೀತ (3)

1		2			■	3		4
	■		■	■	■	■	■	
5			6		■	7		
■	■	■		■	■		■	■
■	■	8			9		■	■
■	■		■	■		■	■	■
10			■	11		12		13
	■	■	■	■	■		■	
14			■	15				

4574ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಜರಾಯು 4.ಪ್ರಧಾನ 5.ಜಪಾಪುಷ್ಪ 6.ನಾಮಧೇಯ 8.ಕರ 9.ರಿಪು 13.ದಾರಿಹೋಕ 14.ಉಪಕಾರಿ 15.ಕೀಚಕ 16.ಕರಟ

ಮೇಲಿಂದ ಕೆಳಕ್ಕೆ: 1.ಅಪ್ರಸ್ತುತ 2.ಜನನಾಯಕ 3.ಸಂಪುಟ 5.ಜಯಭೇರಿ 8.ರಹದಾರಿ 10.ಪುಸ್ತಕಕೀಟ 11.ಮಧುಕರಿ 12.ಮಂಪರು

ಸುಡೊಕು 4961

			4		3		6	
					2			5
		3	5		8	7	2	
		9		3				7
	3				6		5	
8		6		4		2		3
		5		2				4
3						5		
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4960 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಕೋವಿಡ್ ಲಸಿಕಾ ಅಭಿಯಾನದಿಂದ ಖಾಸಗಿ ಕಂಪನಿಗಳಿಗೆ ಲಾಭ

ನವದೆಹಲಿ (ಪಿಟಿಐ): 'ಕೋವಿಡ್ ಲಸಿಕೆಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ನೀಡುವ ಮೂಲಕ ಕೇಂದ್ರ ಸರ್ಕಾರ ಸಾರ್ವಜನಿಕರ ಅನುಕೂಲಕ್ಕಾಗಿ ರೂಪಿಸಿದ್ದ ಕೋವಿಡ್ ಲಸಿಕಾ ಅಭಿಯಾನವನ್ನು ಖಾಸಗಿ ಕಂಪನಿಗಳಿಗೆ ಆದಾಯ ತಂದಕೊಡುವಂತಹ ಯೋಜನೆಯನ್ನಾಗಿಸುತ್ತಿದೆ' ಎಂದು ಪ್ರಗತಿಪರ ವೈದ್ಯರು ಮತ್ತು ವಿಜ್ಞಾನಿಗಳ ವೇದಿಕೆಯೊಂದು ಆರೋಪಿಸಿದೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಪ್ರೊಗ್ರೆಸ್ಸಿವ್ ಮೆಡಿಕೋಸ್ ಆ್ಯಂಡ್ ಸೈಂಟಿಸ್ಟ್ ಫೋರಂ, 'ಕೇಂದ್ರ ಸರ್ಕಾರದ ಈ ನಡೆಯಿಂದ ಖಾಸಗಿ ಕಂಪನಿಗಳು ಮಾರುಕಟ್ಟೆಯಲ್ಲಿ ಕೋವಿಡ್ ಲಸಿಕೆಯ ದರವನ್ನು ನಿಯಂತ್ರಿಸುತ್ತಾ, ಕಂಪನಿಗಳ ಆದಾಯ ಹೆಚ್ಚಿಸಿಕೊಳ್ಳುವಂತೆ ಮಾಡಿದೆ' ಎಂದು ದೂರಿದೆ.

'ಶೇ 50 ರಷ್ಟು ಡೋಸ್‌ಗಳಷ್ಟು ಲಸಿಕೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸುವ ಮೂಲಕ ಕೇಂದ್ರ ಸರ್ಕಾರ ಸಾರ್ವಜನಿಕ ಲಸಿಕಾ ಅಭಿಯಾನವನ್ನೂ ಖಾಸಗಿಯವರಿಗೆ ಆದಾಯ ಮೂಲವನ್ನಾಗಿ ಮಾಡಿಕೊಟ್ಟಿದೆ' ಎಂದು ಈ ವೇದಿಕೆ ಟೀಕಿಸಿದೆ.

'ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ನೀಡಿದ ಉಚಿತ ಲಸಿಕೆಯ ಭರವಸೆ ಕೇವಲ ಚುನಾವಣೆ ಗೆಲ್ಲುವ ವರೆಗೆ ಮಾತ್ರ ಎಂಬುದು ಕೇಂದ್ರದ ಈ ನಡೆಯಿಂದ ಖಚಿತವಾಗಿದೆ' ಎಂದು ಸಂಘಟನೆ ಹೇಳಿದೆ.

ಅಮರನಾಥ ಯಾತ್ರೆ: ನೋಂದಣಿ ಸ್ಥಗಿತ

ಜಮ್ಮು: ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಅಮರನಾಥ ಯಾತ್ರೆಯ ಪ್ರಸಕ್ತ ವರ್ಷದ ನೋಂದಣಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಗುರುವಾರ ಅಧಿಕಾರಿಗಳು ತಿಳಿಸಿದರು.

'ಕೋವಿಡ್ ಪರಿಸ್ಥಿತಿಯಿಂದಾಗಿ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಶ್ರೀ ಅಮರನಾಥ ದೇಗುಲ ಮಂಡಳಿ (ಎಸ್‌ಎಎಸ್‌ಬಿ) ಟ್ವೀಟ್ ಮಾಡಿದೆ.

'ಪರಿಸ್ಥಿತಿ ಸುಧಾರಿಸಿದ ನಂತರ ನೋಂದಣಿ ಪ್ರಕ್ರಿಯೆಯನ್ನು ಆರಂಭಿಸಲಾಗುವುದು' ಎಂದು ತಿಳಿಸಲಾಗಿದೆ.

ಅಮರನಾಥ ಯಾತ್ರೆಯ ಆನ್‌ಲೈನ್ ನೋಂದಣಿ ಪ್ರಕ್ರಿಯೆಯನ್ನು ಇದೇ 15ರಿಂದ ಪ್ರಾರಂಭಿಸಲಾಗಿತ್ತು. ದಕ್ಷಿಣ ಕಾಶ್ಮೀರ ಹಿಮಾಲಯದಲ್ಲಿ 3,888 ಮೀ. ಎತ್ತರದ ಅಮರನಾಥ ಗುಹೆಯ ದೇಗುಲದಲ್ಲಿರುವ ಹಿಮದ ಶಿವಲಿಂಗ ದರ್ಶನದ 56 ದಿನಗಳ ಯಾತ್ರೆಯು ಜೂನ್ 28ರಂದು ಪ್ರಾರಂಭವಾಗಿ ಆಗಸ್ಟ್ 22ರಂದು ಮುಕ್ತಾಯಗೊಳ್ಳಲಿದೆ ಎಂದು ತಿಳಿಸಲಾಗಿತ್ತು.

ಕೋವಿಡ್: 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡುವ ಕಾರ್ಯಕ್ರಮ

ಲಸಿಕೆ ಪಡೆಯಲು ನೋಂದಣಿ ಹೇಗೆ?

ದೇಶದಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಕೋವಿಡ್ ಲಸಿಕೆ ನೀಡುವ ಲಸಿಕೆ ಕಾರ್ಯಕ್ರಮವು ಮೇ 1ರಿಂದ ಆರಂಭವಾಗಲಿದೆ. ಲಸಿಕೆ ಪಡೆಯಲು ಏಪ್ರಿಲ್ 28ರಿಂದಲೇ ನೋಂದಣಿ ಮಾಡಿಕೊಳ್ಳಬಹುದು. ಸರ್ಕಾರಿ ಆಸ್ಪತ್ರೆಯಾದರೂ, ಖಾಸಗಿ ಆಸ್ಪತ್ರೆಯಾದರೂ ಕೋವಿನ್ ಜಾಲತಾಣದಲ್ಲಿ, ನೋಂದಣಿ ಮಾಡಿಕೊಳ್ಳುವುದು ಕಡ್ಡಾಯ

ಲಸಿಕೆ ಪಡೆಯಲು ನೋಂದಣಿ ಮಾಡಿಕೊಳ್ಳುವ ಪ್ರಕ್ರಿಯೆ

1: ಕೋವಿನ್ ಜಾಲತಾಣದಲ್ಲಿ ಮೊಬೈಲ್ ಸಂಖ್ಯೆ ಮತ್ತು ಆಧಾರ್ ಸಂಖ್ಯೆ ನಮೂದಿಸಬೇಕು. ಒಂದು ಬಾರಿಯ ಪಾಸ್‌ವಾರ್ಡ್ (ಒಟಿಪಿ) ಬರುವವರೆಗೆ ಕಾಯಬೇಕು

2: ಒಟಿಪಿ ಬಂದ ನಂತರ ಅದನ್ನು ನಮೂದಿಸಬೇಕು. ನಂತರ ವೈಯಕ್ತಿಕ ವಿವರಗಳನ್ನು ದಾಖಲಿಸಬೇಕು

3: ಕೋವಿನ್ ಪೋರ್ಟಲ್‌ನಲ್ಲಿ ಚಿತ್ರವಿರುವ ಗುರುತಿನ ಚೀಟಿಯನ್ನು ಅಪ್‌ಲೋಡ್ ಮಾಡಬೇಕು. ಆಧಾರ್ ಚೀಟಿ, ಮತದಾರರ ಗುರುತಿನ ಚೀಟಿ, ಪಾಸ್‌ಪೋರ್ಟ್, ಚಾಲನಾ ಪರವಾನಗಿ, ಪ್ಯಾನ್ ಕಾರ್ಡ್ ಅನ್ನು ಇದಕ್ಕೆ ಬಳಸಬಹುದು

4: ನಂತರ ಲಸಿಕೆ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬೇಕು. ಅದು ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆ ಯಾವುದಾದರೂ ಆಗಿರಬಹುದು

5: ಲಸಿಕೆ ಪಡೆಯಬೇಕಿರುವ ದಿನಾಂಕ ಮತ್ತು ಸಮಯವನ್ನು ಆಯ್ಕೆ ಮಾಡಿಕೊಳ್ಳಬೇಕು. ಆಯ್ಕೆ ಮಾಡಿಕೊಂಡ ದಿನಾಂಕ ಮತ್ತು ಸಮಯದಂದು ಲಸಿಕೆ ಹಾಕಿಸಿಕೊಳ್ಳಲು ಅಲ್ಲಿ ಅವಕಾಶ ಇಲ್ಲದೇ ಇದ್ದರೆ ಬೇರೆ ಲಸಿಕಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡು ಪರಿಶೀಲಿಸಬೇಕು

6: ಲಸಿಕೆ ಪಡೆಯುವ ದಿನಾಂಕ ಮತ್ತು ಸಮಯ ನಿಗದಿಯಾದ ಪತ್ರವು ಜನರೇಟ್ ಆಗುತ್ತದೆ. ಅದರಲ್ಲಿ ನಮೂದಾಗಿರುವ ದಿನಾಂಕ ಮತ್ತು ಸಮಯದದಂದು ಲಸಿಕಾ ಕೇಂದ್ರಕ್ಕೆ ಹೋಗಿ, ಲಸಿಕೆ ಹಾಕಿಸಿಕೊಳ್ಳಬೇಕು. ಜತೆಗೆ ಗುರುತಿನ ಚೀಟಿ ತೆಗೆದುಕೊಂಡು ಹೋಗಬೇಕು

ಗಮನದಲ್ಲಿ ಇರಬೇಕಾದ ಅಂಶಗಳು

- ಲಸಿಕೆ ಹಾಕಿಸಿಕೊಳ್ಳಲು ನಿಗದಿಯಾದ ದಿನದಂದು ನಿಗದಿತ ಅವಧಿಯಲ್ಲಿ ಲಸಿಕೆ ಪಡೆಯಲು ಸಾಧ್ಯವಾಗದೇ ಇದ್ದರೆ, ಬೇರೆ ಸಮಯವನ್ನು ಆಯ್ಕೆ ಮಾಡಿಕೊಳ್ಳಬಹುದು. ಆದರೆ ನಿಗದಿತ ದಿನಕ್ಕಿಂತ ಒಂದು ದಿನ ಮೊದಲು ಇದನ್ನು ಬದಲಿಸಬೇಕು. ನಿಗದಿತ ಅವಧಿಯಲ್ಲಿ ಲಸಿಕೆ ಪಡೆಯಲು ಸಾಧ್ಯವಾಗದೇ ಇದ್ದರೆ, ನಂತರದ ದಿನಗಳಲ್ಲಿ ಲಭ್ಯವಿರುವ ಸಮಯವನ್ನು ಆಯ್ಕೆ ಮಾಡಿಕೊಳ್ಳಬೇಕು
- ಎರಡನೇ ಡೋಸ್ ಪಡೆಯಲು ಮತ್ತೆ ನೋಂದಣಿ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಮೊದಲ ಡೋಸ್ ಪಡೆದ ದಿನ ಮತ್ತು ಸಮಯಕ್ಕೆ ಅನುಗುಣವಾಗಿ, ಎರಡನೇ ಡೋಸ್ ಪಡೆಯುವ ದಿನ ಮತ್ತು ಸಮಯ ಸ್ವಯಂಚಾಲಿತವಾಗಿ ನಿಗದಿ ಆಗುತ್ತದೆ. ಈ ಬಗ್ಗೆ ಸಂದೇಶ ಬರುತ್ತದೆ
- ಒಂದು ಲಾಗಿನ್ ಐಡಿಯಲ್ಲಿ ಗರಿಷ್ಠ ನಾಲ್ಕು ಜನರು ಲಸಿಕೆ ಪಡೆಯಲು ನೋಂದಣಿ ಮಾಡಿಕೊಳ್ಳಬಹುದು. ಆದರೆ, ನೋಂದಣಿ ಮಾಡಿಕೊಳ್ಳುವವರ ಗುರುತಿನ ಚೀಟಿಯನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲೇಬೇಕು
- ಕೋವಿನ್ ಪೋರ್ಟಲ್ ಅಲ್ಲದೆ, ಲಸಿಕಾ ಕೇಂದ್ರದಲ್ಲೇ ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ
- ಲಸಿಕೆ ಪಡೆದ ಒಂದು ತಿಂಗಳವರೆಗೂ ರಕ್ತದಾನ ಮಾಡುವ ಹಾಗಿಲ್ಲ

1,700 ಡೋಸ್ ಕೋವಿಡ್ ಲಸಿಕೆ ಕಳವು

ಚಂಡಿಗಡ (ಪಿಟಿಐ): ಹರಿಯಾಣದ ಜಿಂದ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಯಿಂದ 1,700 ಡೋಸ್ ಕೋವಿಡ್ ಲಸಿಕೆಗಳನ್ನು ಕಳವು ಮಾಡಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬುಧವಾರ ರಾತ್ರಿ ಈ ಘಟನೆ ನಡೆದಿದೆ. ಕಳವು ಮಾಡಿರುವವರು ಆಸ್ಪತ್ರೆಯ ಸ್ಟೋರ್ ರೂಮ್‌ನಲ್ಲಿದ್ದ ಇತರ ಲಸಿಕೆ, ಔಷಧ, ಹಣವನ್ನು ಮುಟ್ಟಿಲ್ಲ ಎಂದು ಅವರು ತಿಳಿಸಿದ್ದಾರೆ. ಗುರುವಾರ ಬೆಳಿಗ್ಗೆ ಸ್ವಚ್ಛತಾ ಕಾರ್ಮಿಕರೊಬ್ಬರು ಸ್ಟೋರ್ ರೂಮ್ ಮತ್ತು ರೆಫ್ರಿಜರೇಟರ್ ಬೀಗ ತೆಗೆದಾಗ ಈ ವಿಷಯ ಗೊತ್ತಾಯಿತು. ಆಸ್ಪತ್ರೆಯಿಂದ 1270 ಡೋಸ್‌ಗಳಷ್ಟು ಕೋವಿಶೀಲ್ಡ್ ಮತ್ತು 440 ಡೋಸ್‌ಗಳಷ್ಟು ಕೋವಾಕ್ಸಿನ್ ಲಸಿಕೆಗಳನ್ನು ಕಳವು ಮಾಡಲಾಗಿದೆ ಎಂದು ಸಿವಿಲ್ ಲೇನ್ ಪೊಲೀಸ್ ಠಾಣೆಯ ಎಸ್‌ಎಚ್‌ಒ ರಾಜೇಂದ್ರ ಸಿಂಗ್ ಮಾಹಿತಿ ನೀಡಿದರು.

ಲಸಿಕೆ ಕೊಂಡೊಯ್ಯಲು ಡ್ರೋನ್ ಬಳಕೆ!

ನವದೆಹಲಿ: ದುರ್ಗಮ ಸ್ಥಳಗಳಿಗೆ ಕೋವಿಡ್–19 ಲಸಿಕೆಗಳನ್ನು ಕೊಂಡೊಯ್ಯಲು ಡ್ರೋನ್‌ಗಳನ್ನು ಬಳಸಲು ಕೇಂದ್ರ ಸರ್ಕಾರ ಉದ್ದೇಶಿಸಿದೆ.

ಡ್ರೋನ್‌ಗಳನ್ನು ಬಳಸಿ ಕೋವಿಡ್–19 ಲಸಿಕೆ ಕೊಂಡೊಯ್ಯುವ ಕಾರ್ಯಕ್ಕೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಗೆ (ಐಸಿಎಂಆರ್) ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ಗುರುವಾರ ಷರತ್ತಿನ ವಿನಾಯಿತಿ ನೀಡಿದೆ.

ಕಾನ್ಪುರದ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಜತೆಯಲ್ಲಿ ಐಸಿಎಂಆರ್ ಲಸಿಕೆ ಕೊಂಡೊಯ್ಯುವ ಕಾರ್ಯಸಾಧ್ಯತೆಯ ಬಗ್ಗೆ ಅಧ್ಯಯನ ನಡೆಸಲಿದೆ. ಲಸಿಕೆ ವಿತರಿಸುವ ಡ್ರೋನ್‌ಗಳನ್ನು ಬೆಂಗಳೂರಿನ ನವೋದ್ಯಮ ಸಿಡಿಸ್ಪೇಸ್ ರೊಬಾಟಿಕ್ಸ್ ಪ್ರೈವೇಟ್ ಲಿಮಿಟೆಡ್ ಅಭಿವೃದ್ಧಿಪಡಿಸಲಿದೆ.

ನಾಲ್ಕು ಕಿಲೋ ಗ್ರಾಂ ತೂಕವನ್ನು ಕೊಂಡೊಯ್ಯೊವ ಡ್ರೋನ್‌ಗಳನ್ನು ಸಿಡಿಸ್ಪೇಸ್ ರೊಬೊಟಿಕ್ಸ್ ಪ್ರದರ್ಶಿಸಿದೆ ಎಂದು ಐಐಟಿ ಕಾನ್ಪುರ್ ತಿಳಿಸಿದೆ.

ಈಗ ನೀಡಿರುವ ಅನುಮತಿಯು ಒಂದು ವರ್ಷ ಅಥವಾ ಮುಂದಿನ ಆದೇಶದವರೆಗೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ.

ಈ ಹಿಂದೆಯೂ ಉತ್ತರಾಖಂಡದಲ್ಲಿ ಡ್ರೋನ್‌ಗಳನ್ನು ಬಳಸಿ ರಕ್ತದ ಮಾದರಿಗಳನ್ನು ಸುಮಾರು 36 ಕಿಲೋ ಮೀಟರ್‌ವರೆಗೆ ಕೊಂಡೊಯ್ಯುವ ಸಾಮರ್ಥ್ಯವನ್ನು ಸಿಡಿಸ್ಪೇಸ್ ರೊಬೊಟಿಕ್ಸ್ ಪ್ರದರ್ಶಿಸಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದಿಂದ ಶೋಧನಾ ಹಡಗು ರವಾನೆ

ನವದೆಹಲಿ (ಪಿಟಿಐ): ಇಂಡೊನೇಷ್ಯಾದಲ್ಲಿ ಕಣ್ಮರೆಯಾಗಿರುವ 53 ನಾವಿಕರಿದ್ದ ಜಲಾಂತರ್ಗಾಮಿಯನ್ನು ಪತ್ತೆ ಹಚ್ಚುವ ಕಾರ್ಯಾಚರಣೆಯಲ್ಲಿ ನೆರವಾಗಲು ಭಾರತವು ಆಳ ಸಮುದ್ರ ಸಂರಕ್ಷಣಾ ಹಡಗೊಂದನ್ನು ಕಳುಹಿಸಿಕೊಟ್ಟಿದೆ.

'ನೀರಿನೊಳಗೆ ಮುಳುಗಿರುವವರನ್ನು ರಕ್ಷಿಸುವ ಹಡಗು (ಡಿಎಸ್‌ಆರ್‌ವಿ) ವಿಶಾಖಪಟ್ಟಣದಿಂದ ತೆರಳಿದೆ' ಎಂದು ಭಾರತೀಯ ನೌಕಾಪಡೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಡೀಸೆಲ್ ವಿದ್ಯುತ್ ಚಾಲಿತ ಜರ್ಮನಿಯಿಂದ ತಯಾರಾದ ಕೆಆರ್‌ಐ ನಂಗಲಾ–402 ಜಲಾಂತರ್ಗಾಮಿ ಬಾಲಿ ಜಲಸಂಧಿಯಲ್ಲಿ ಸೇನಾ ಸಮರಾಭ್ಯಾಸದ ವೇಳೆ ನಾಪತ್ತೆಯಾಗಿದೆ. ಸಿಂಗಪುರ, ಮಲೇಷ್ಯಾಗಳೂ ಸಹ ಪರಿಹಾರ ನೌಕೆಗಳನ್ನು ಕಳುಹಿಸಿಕೊಟ್ಟಿವೆ.

700 ಮೀಟರ್ ಆಳದಲ್ಲಿ ಜಲಾಂತರ್ಗಾಮಿ? (ಜಕಾರ್ತ ವರದಿ): ಜಲಾಂತರ್ಗಾಮಿ 600ರಿಂದ 700 ಮೀಟರ್ ಆಳದಲ್ಲಿ ಮುಳುಗಿರುವ ಸಾಧ್ಯತೆ ಇದೆ ಎಂದು ಇಂಡೋನೇಷ್ಯಾ ನೌಕಾಪಡೆ ಹೇಳಿದೆ.

ಸಾಮಾನ್ಯವಾಗಿ ಜಲಾಂತರ್ಗಾಮಿಗಳು ಗರಿಷ್ಠ 200 ಮೀಟರ್ ಆಳದ ಸಮುದ್ರದಲ್ಲಿ ಸಂಚರಿಸಲು ಅವಕಾಶ ಇದೆ. ಅದಕ್ಕಿಂತ ತಳಭಾಗಕ್ಕೆ ಹೋದರೆ ಅದರ ಕವಚದ ಮೇಲೆ ಒತ್ತಡ ಬೀಳುತ್ತದೆ. ಈ ನತದೃಷ್ಟ ಜಲಾಂತರ್ಗಾಮಿ ನಿಗದಿತ ಆಳಕ್ಕಿಂತ ಕೆಳಗೆ ಇಳಿದಿದುದರಿಂದ ಅದು ಮುಳುಗಿರಬೇಕು ಎಂಬ ಶಂಕೆ ವ್ಯಕ್ತವಾಗಿದೆ.

ಭಾವ ಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ರತ್ನಜಯರಾಂ
ದಿ:20-04-2021
ದುಃಖ ತಪ್ತರು:
ಸಿ.ಜಯರಾಂ (ನಿವೃತ್ತ ಚೀಫ್ ಇಂಜಿನಿಯರ್)
ಶ್ರೀಮತಿ ಪವಿತ್ರ, ಡಾ|| ಜೆ.ರವಿಶಂಕರ್ (ಐ.ಎ.ಎಸ್)
ಶ್ರೀಮತಿ ಚೈತ್ರಾ, ಸುಬ್ಬಾರೆಡ್ಡಿ ಹಾಗು ಕುಟುಂಬ ವರ್ಗ

ಯೆಚೂರಿ ಹಿರಿಯ ಪುತ್ರ ಕೋವಿಡ್‌ನಿಂದ ನಿಧನ

ನವದೆಹಲಿ: ತಮ್ಮ ಹಿರಿಯ ಮಗ ಆಶಿಶ್ ಕೋವಿಡ್‌ನಿಂದ ಬುಧವಾರ ಬೆಳಿಗ್ಗೆ ನಿಧನರಾಗಿದ್ದಾರೆ ಎಂದು ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಅವರು ತಿಳಿಸಿದ್ದಾರೆ.

ಜೂನ್ 9 ರಂದು 35 ನೇ ವರ್ಷಕ್ಕೆ ಕಾಲಿಡುತ್ತಿದ್ದ ಆಶಿಶ್, ಗುರುಗ್ರಾಮದ ಮೆಡಂತಾ ಆಸ್ಪತ್ರೆಯಲ್ಲಿ ಕೋವಿಡ್ ಸೋಂಕಿಗೆ ಚಿಕಿತ್ಸೆ ಪಡೆಯುತ್ತಿದ್ದರು. ಕೊರೊನಾ ವಿರುದ್ಧದ ಎರಡು ವಾರಗಳ ಹೋರಾಟದ ಬಳಿಕ ಬೆಳಿಗ್ಗೆ 5.30 ಕ್ಕೆ ಅವರು ಹಠಾತ್ ನಿಧನರಾಗಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಅಂತಿಮ ವರ್ಷದ ಪರೀಕ್ಷೆ ಮುಂದೂಡುವಂತೆ ಸೂಚನೆ: ಡಾ.ಸುಧಾಕರ್

ಕೋವಿಡ್: ವೈದ್ಯಕೀಯ ವಿದ್ಯಾರ್ಥಿಗಳ ಬಳಕೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ರಾಜ್ಯದಲ್ಲಿ ಆರೋಗ್ಯ ಸೇವೆ ಒದಗಿಸಲು ವೈದ್ಯಕೀಯ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾಗುವುದು' ಎಂದು ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಗುರುವಾರ ಇಲ್ಲಿ ಹೇಳಿದರು.

ಡಾ.ಕೆ.ಸುಧಾಕರ್

'ಅಂತಿಮ ವರ್ಷದ ವೈದ್ಯಕೀಯ ಪದವಿ ಮತ್ತು ಸ್ನಾತಕೋತ್ತರ ಪದವಿಯ ಪರೀಕ್ಷೆಗಳನ್ನು ಎರಡು ತಿಂಗಳು ಮುಂದೂಡಲು ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಹೇಳಿದ್ದೇನೆ. ಹೌಸ್ ಸರ್ಜನ್‌ಗಳು, ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳನ್ನು ಆಯಾ ಊರು ಮತ್ತು ಜಿಲ್ಲೆಗಳಲ್ಲಿ ಕೋವಿಡ್ ನಿರ್ವಹಣೆಯ ಕರ್ತವ್ಯಕ್ಕೆ ನಿಯೋಜಿಸಲಾಗುವುದು. ಮುಖ್ಯಮಂತ್ರಿ ಸಲಹೆಯಂತೆ ಈ ನಿರ್ಧಾರ ತೆಗೆದುಕೊಂಡಿದ್ದೇನೆ' ಎಂದರು.

ಜೀವ ಉಳಿಸುವ ಔಷಧಿ ಅಲ್ಲ: 'ವೈಜ್ಞಾನಿಕವಾಗಿ ಹೇಳುವುದಾದರೆ ರೆಮ್‌ಡೆಸಿವಿರ್ ಜೀವ ಉಳಿಸಬಲ್ಲ (ಲೈಫ್ ಸೇವಿಂಗ್) ಔಷಧಿ ಅಲ್ಲ. ವಿಶ್ವ ಆರೋಗ್ಯ ಸಂಸ್ಥೆಯ ಔಷಧಿಗಳ ಪಟ್ಟಿಯಲ್ಲೂ ಅದರ ಹೆಸರು ಇಲ್ಲ. ರೆಮ್‌ಡೆಸಿವಿರ್ ಇದ್ದರೆ ಪ್ರಾಣ ಉಳಿಯುತ್ತದೆ ಎಂಬ ಭಾವನೆ ಜನಸಾಮಾನ್ಯರಲ್ಲಿ ಬಂದುಬಿಟ್ಟಿದೆ. ಆದ್ದರಿಂದ ಬೇಡಿಕೆ ಹೆಚ್ಚಿದ್ದು, ಅದನ್ನು ಪೂರೈಸಬೇಕಿದೆ' ಎಂದು ತಿಳಿಸಿದರು.

'ವೈದ್ಯಕೀಯ ಹಿನ್ನೆಲೆಯಿಂದ ಹೇಳುವುದಾದರೆ ರೆಮ್‌ಡೆಸಿವಿರ್‌ಗಿಂತ ಸ್ಟಿರಾಯ್ಡ್‌ಗಳು ಹೆಚ್ಚು ಪರಿಣಾಮಕಾರಿ. ಡೆಕ್ಸಾಮೆಥಜೋನ್ ಎಂಬ ಔಷಧಿಗೆ ಇರುವುದು ಕೇವಲ 50 ಪೈಸೆ. ಆದರೆ, ರೆಮ್‌ಡೆಸಿವಿರ್ ಮಾತ್ರ ಹೆಚ್ಚು ಪ್ರಚಾರಕ್ಕೆ ಬಂದಿದೆ' ಎಂದರು.

ದೇಶದಲ್ಲಿ 8–9 ಕಂಪನಿಗಳು ಮಾತ್ರ ರೆಮ್‌ಡೆಸಿವಿರ್ ಉತ್ಪಾದನೆ ಮಾಡುತ್ತವೆ. ಕೋವಿಡ್ ಪ್ರಕರಣಗಳು ಕಡಿಮೆಯಾದ ಕಾರಣ ನವೆಂಬರ್‌ನಿಂದ ಮಾರ್ಚ್‌ವರೆಗೆ ಎಲ್ಲ ಕಂಪನಿಗಳು ಉತ್ಪಾದನೆ ನಿಲ್ಲಿಸಿದ್ದವು. ಈಗ ಸೋಂಕಿತರ ಸಂಖ್ಯೆ ಏಕಾಏಕಿ ಹೆಚ್ಚಿ ಸಮಸ್ಯೆ ಸೃಷ್ಟಿಯಾಗಿದೆ. ಎಲ್ಲ ರಾಜ್ಯಗಳಲ್ಲೂ ಔಷಧಿಯ ಕೊರತೆಯಿದೆ ಎಂದು ನುಡಿದರು.

'ಆಮ್ಲಜನಕದ ಕೊರತೆ ಇಲ್ಲ'

ರಾಜ್ಯದಲ್ಲಿ ಸದ್ಯಕ್ಕೆ ಆಮ್ಲಜನಕದ ಕೊರತೆ ಎದುರಾಗಿಲ್ಲ. 30 ಸಾವಿರ ಆಕ್ಸಿಜನ್ ಬೆಡ್‌ಗಳು ಇವೆ. ಆದರೆ, ಪ್ರಕರಣಗಳು ಇದೇ ರೀತಿ ಹೆಚ್ಚುತ್ತಿದ್ದರೆ ಬೆಡ್‌ಗಳು ಸಾಕಾಗುವುದೇ ಎಂಬ ಆತಂಕ ಸೃಷ್ಟಿಯಾಗಿದೆ ಎಂದು ಸುಧಾಕರ್ ತಿಳಿಸಿದರು.

ಬೆಂಗಳೂರಿಗೆ ಹೆಚ್ಚುವರಿಯಾಗಿ ಬೇಕಾಗಿದ್ದ 40 ಮೆಟ್ರಿಕ್ ಟನ್ ಆಮ್ಲಜನಕ ಪೂರೈಕೆ ಆಗಿದೆ. 5,500 ಜಂಬೋ ಸಿಲಿಂಡರ್‌ಗಳನ್ನು ಸರಬರಾಜು ಮಾಡಲಾಗಿದೆ. ಬೆಂಗಳೂರಿನಲ್ಲಿ ಎದುರಾಗಿದ್ದ ಆಕ್ಸಿಜನ್ ಕೊರತೆಯ ಸಮಸ್ಯೆ ನೀಗಿದೆ ಎಂದು ಸ್ಪಷ್ಟಪಡಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್..
ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ, ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ:9880916988

ಉದ್ಯೋಗಾವಕಾಶ

General

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ ಗಳಿಸಿ 15,000-25,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

ವ್ಯಾಪಾರ

Business to Business

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5 ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು /ಎನ್.ಪಿ.ಎ/ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 9625768775.

Hotel & Restaurant

BUSINESS PARTNER Required, 4 Lakhs Investment, Daily Attractive Income (Nonveg Hotel). Contact: 8892501007/9606701007

Business Offers

Finance

★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ: 09499457849/ 09953286082.ಏಜೆಂಟರು ಸಂಪರ್ಕಿಸಬಹುದು.

ಭವಿಷ್ಯ

Astrology

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★||ಶ್ರೀಆಂಜನೇಯಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137

★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ವಶೀಕರಣ ಸ್ಪೆಷಲಿಸ್ಟ್★ ಜನವಶೀಕರಣ, ಧನವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣ, ಇನ್ಯಾವುದೇ ಕಠಿಣ ಸಮಸ್ಯೆಗಳಿಗೆ ಫೋನಿನಲ್ಲೇ ಪರಿಹಾರ. ಮಂಜುನಾಥ ಗುರೂಜಿ 9886999747

★ಶ್ರೀಕ್ಷೇತ್ರ ಶೃಂಗೇರಿ★ ಶಾರದಾಂಬೆ ಜ್ಯೋತಿಷ್ಯರು ||ವೇದಬ್ರಾಹ್ಮಣ ಸಚ್ಚಿದಾನಂದ|| ನಿಮ್ಮ ಸಮಸ್ಯೆ ಏನೇಯಿರಲಿ, ಎಷ್ಟೇ ಕಠಿಣವಾಗಿರಲಿ ತಕ್ಷಣ ಪರಿಹಾರವಾಗದಿದ್ದರೆ ಹಣವಾಪಸ್ 9916778542

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, 200ವರ್ಷಗಳ ಇತಿಹಾಸ, 25ಸಾವಿರ ಜನರಿಗೆ ಸಮಾಧಾನ,ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ.7829724990

ಸಮಾಜಸೇವೆ

Others

ಶ್ರೀ ಶಕ್ತಿ ಹೆಲ್ತ್ ಕೇರ್ ಇವರ ವತಿಯಿಂದ ಕೊರನ ಸಂಕಷ್ಟದ ಕುಟುಂಬದವರಿಗೆ ನನ್ನ ಕೈಲಾದ ಹಣ ಸಹಾಯ ಮಾಡುತ್ತೇನೆ.ಬೆಂಗಳೂರು ಸಂಪರ್ಕಿಸಿ: 9019626612

ವಾಹನ

Four Wheelers Selling

Others

ನೂತನ ವರ್ಷಕ್ಕೆ ವಿನೂತನ ಕೊಡುಗೆಗಳು
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

33 kW ಇಂಜಿನ್
4.99%* ಬಡ್ಡಿದರ/ 47 ತಿಂಗಳು
₹30,000/-* ದವರೆಗೆ ಗ್ರಾಹಕರ ಕೊಡುಗೆಗಳು
ಎಕ್ಸ್‌ಚೇಂಜ್ ₹20,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Bidar 80952 02223
Belgaum - 91088 64572
* ಷರತ್ತುಗಳು ಅನ್ವಯಿಸುತ್ತದೆ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

'ಸುಳ್ಳು ಸಂದೇಶಗಳ ಬಗ್ಗೆ ಎಚ್ಚರ ಇರಲಿ'

ನವದೆಹಲಿ: ಆನ್‌ಲೈನ್ ಶಿಕ್ಷಣ ಪಡೆಯಲು 10 ಕೋಟಿ ಮಂದಿಗೆ ಉಚಿತವಾಗಿ ರಿಚಾರ್ಜ್ ಪಡೆಯುವ ಸೌಲಭ್ಯ ಕಲ್ಪಿಸುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿದೆ ಎನ್ನುವ ಸುದ್ದಿಯನ್ನು ಸಾರ್ವಜನಿಕರು ನಂಬಬಾರದು ಎಂದು ದೂರಸಂಪರ್ಕ ಉದ್ಯಮ ತಿಳಿಸಿದೆ.

'ಇದೊಂದು ಸುಳ್ಳು ಸುದ್ದಿ. ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸಂದೇಶಗಳನ್ನು ಬಿತ್ತರಿಸಲಾಗುತ್ತಿದೆ. ದುರುದ್ದೇಶದಿಂದ ಕೆಲವರು ಇಂತಹ ಕೃತ್ಯವೆಸಗುತ್ತಿದ್ದಾರೆ. ಉಚಿತ ರಿಚಾರ್ಜ್ ಪಡೆಯುವ ಸುಳ್ಳು ಸಂದೇಶದ ಜತೆ ಲಿಂಕ್ ಅನ್ನು ಕಳುಹಿಸಲಾಗುತ್ತಿದೆ. ಉಚಿತ ಸೌಲಭ್ಯಕ್ಕಾಗಿ ಈ ಲಿಂಕ್ ಮೇಲೆ ಕ್ಲಿಕ್ ಮಾಡುವಂತೆ ಉತ್ತೇಜಿಸಲಾಗುತ್ತದೆ. ಈ ಬಗ್ಗೆ ಸಾರ್ವಜನಿಕರು ಎಚ್ಚರವಹಿಸಬೇಕು' ಎಂದು ಸೆಲ್ಯೂಲರ್ ಆಪರೇಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಸಿಒಎಐ) ಬುಧವಾರ ತಿಳಿಸಿದೆ.

'ಈ ಹಗರಣದ ಬಗ್ಗೆ ಸಾರ್ವಜನಿಕರಿಗೆ ಎಚ್ಚರಿಕೆ ನೀಡಲು ಬಯಸುತ್ತೇವೆ. ಇಂತಹ ಸಂದೇಶಗಳ ಬಂದರೆ ಲಿಂಕ್ ಮೇಲೆ ಕ್ಲಿಕ್ ಮಾಡಬೇಡಿ. ಒಂದು ವೇಳೆ ಲಿಂಕ್ ಅನ್ನು ಒತ್ತಿದರೆ ಮೊಬೈಲ್‌ನಲ್ಲಿನ ಮಾಹಿತಿಯನ್ನು ಕಳ್ಳತನ ಮಾಡುವ ಸಾಧ್ಯತೆ ಇದೆ. ಜತೆಗೆ, ಇತರ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗಬಹುದು' ಎಂದು ಸಿಒಎಐ ತಿಳಿಸಿದೆ.

'ಈ ರೀತಿಯ ಸಂದೇಶಗಳು ಬಂದರೆ ಅಳಸಿ ಹಾಕಬೇಕು ಮತ್ತು ಇತರರಿಗೆ ಕಳುಹಿಸಬಾರದು. ಸರಳವಾಗಿ ಇಂತಹ ಸಂದೇಶಗಳನ್ನು ತೆಗೆದುಹಾಕುವುದರಿಂದ ಮತ್ತು ಇತರರಿಗೆ ಕಳುಹಿಸದೆಯೇ ದುಷ್ಕೃತ್ಯಗಳನ್ನು ತಡೆಯಲು ಸಾಧ್ಯ. ಇತರರು ಸಹ ವಂಚನೆಗೆ ಒಳಗಾಗದಂತೆ ತಡೆಯಬೇಕು' ಎಂದು ಅದು ಕೋರಿದೆ.

ಸೌರಫಲಕ ಹಗರಣ: ಪ್ರಮುಖ ಆರೋಪಿ ಸರಿತಾ ನಾಯರ್ ಬಂಧನ

ತಿರುವನಂತಪುರ (ಪಿಟಿಐ): ಕೇರಳ ರಾಜಕಾರಣದಲ್ಲಿ ಭಾರಿ ಕೋಲಾಹಲಕ್ಕೆ ಕಾರಣವಾಗಿದ್ದ ಸೌರಫಲಕ ಹಗರಣದ ಪ್ರಮುಖ ಆರೋಪಿ ಸರಿತಾ ನಾಯರ್ ಅವರನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಹಗರಣಕ್ಕೆ ಸಂಬಂಧಿಸಿದ ವಿಚಾರಣೆಗೆ ಸರಿತಾ ನಾಯರ್ ಗೈರಾಗಿದ್ದರು. ಈ ಹಿನ್ನೆಲೆಯಲ್ಲಿ ಕೋಯಿಕ್ಕೋಡ್‌ನ ಕೋರ್ಟ್ ಬಂಧನ ವಾರಂಟ್ ಹೊರಡಿಸಿತ್ತು. ಇದರ ಬೆನ್ನಲ್ಲೇ, ಇಲ್ಲಿರುವ ಅವರ ನಿವಾಸದಲ್ಲಿ ಸರಿತಾ ಅವರನ್ನು ಬಂಧಿಸಿದ ಪೊಲೀಸರು ನಂತರ, ಕೋಯಿಕ್ಕೋಡ್‌ನಲ್ಲಿರುವ ಕೋರ್ಟ್‌ಗೆ ಹಾಜರುಪಡಿಸಿ, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಸರಿತಾ ನಾಯರ್ ಹಾಗೂ ಬಿಜು ರಾಧಾಕೃಷ್ಣನ್ ಈ ಪ್ರಕರಣದ ಪ್ರಮುಖ ಆರೋಪಿಗಳು. ಅವರು 'ಟೀಮ್ ಸೋಲಾರ್ ರಿನ್ಯೂಯೇಬಲ್ ಎನರ್ಜಿ ಸೊಲೂಷನ್ಸ್' ಕಂಪನಿ ಸ್ಥಾಪಿಸಿದ್ದರು. ಈ ಕಂಪನಿಯಲ್ಲಿ ಉದ್ಯೋಗ ಕೊಡಿಸುವುದಾಗಿ ಹಲವಾರು ಜನರಿಗೆ ಹಣ ಪಡೆದು ವಂಚಿಸಿದ ಆರೋಪ, ಕೆಲವರಿಗೆ ಏಜೆನ್ಸಿ ಕೊಡುವುದಾಗಿ ಹೇಳಿ ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪ ಎದುರಿಸುತ್ತಿದ್ದಾರೆ.

2012ರಲ್ಲಿ ಕೋಯಿಕ್ಕೋಡ್‌ನ ಅಬ್ದುಲ್ ಮಜೀದ್ ಎಂಬುವವರು, 'ಸೌರಫಲಕ ಮಾರಾಟದ ಏಜೆನ್ಸಿ ಕೊಡುವುದಾಗಿ ಹೇಳಿ ತನ್ನಿಂದ ₹ 42.70 ಲಕ್ಷ ಪಡೆದು ಸರಿತಾ ಹಾಗೂ ಬಿಜು ವಂಚಿಸಿದ್ದಾರೆ' ಎಂದು ದೂರು ನೀಡಿದ್ದರು. ನಂತರ 2018ರ ಜನವರಿ 25ಕ್ಕೆ ವಿಚಾರಣೆ ಆರಂಭವಾಗಿತ್ತು.

ಪಾಕ್: ಬಾಂಬ್ ಸ್ಫೋಟ, 5 ಸಾವು

ಕರಾಚಿ: ಪಾಕಿಸ್ತಾನದ ಕ್ವೆಟ್ಟಾದಲ್ಲಿನ ವಿಲಾಸಿ ಹೋಟೆಲ್‌ನ ವಾಹನ ನಿಲುಗಡೆ ತಾಣದಲ್ಲಿ ಶಕ್ತಿಯುತ ಬಾಂಬ್ ಸ್ಫೋಟಗೊಂಡಿದ್ದು, ಐವರು ಮೃತಪಟ್ಟಿದ್ದಾರೆ. ಇತರೆ 12 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಫೋಟ ಸಂಭವಿಸಿದಾಗ ಚೀನಾ ರಾಯಭಾರಿ ಹೋಟೆಲ್‌ನಲ್ಲೇ ಇದ್ದರು ಎಂಬ ವರದಿಗಳನ್ನು ತಳ್ಳಿಹಾಕಿದ್ದಾರೆ.

ಕ್ವೆಟ್ಟಾದ ಸೆರೆನಾ ಹೋಟೆಲ್‌ನಲ್ಲಿ ಬುಧವಾರ ರಾತ್ರಿ ಅವಘಡ ಸಂಭವಿಸಿದೆ. ನಿಲುಗಡೆ ಮಾಡಲಾಗಿದ್ದ ಹಲವು ವಾಹನಗಳಿಗೆ ಬೆಂಕಿ ಹೊತ್ತಿಕೊಂಡಿತ್ತು. ಪ್ರಾಥಮಿಕ ವರದಿಗಳ ಪ್ರಕಾರ, ಚೀನಾದ ರಾಯಭಾರಿಯು ಇದೇ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು.

ನಿಷೇಧಿತ ತೆಹ್ರೀಕ್ ಎ ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಈ ಸ್ಫೋಟದ ಹೊಣೆಯನ್ನು ಹೊತ್ತುಕೊಂಡಿದೆ.

ಕೊರೊನಾ ಸಾಂತ್ವನ

ಆಪತ್ತು ತರುವ ಕೊರೊನಾ ನ್ಯುಮೋನಿಯಾ: ಎಚ್ಚರ

ಫಾರೂಕ್ ಖಾನ್

ಬೆಂಗಳೂರು: ಕೊರೊನಾ ಎರಡನೇ ಅಲೆ ತೀವ್ರ ಸ್ವರೂಪ ಪಡೆದುಕೊಂಡಿದೆ. ಉಸಿರಾಟದ ಸಮಸ್ಯೆಯಿಂದ ರೋಗಿಗಳು ಪ್ರತಿನಿತ್ಯ ಪ್ರಾಣ ಬಿಡುತ್ತಿದ್ದಾರೆ. ಹಿಂದಿಗಿಂತಲೂ ಈಗ ಜನರಲ್ಲಿ ಭೀತಿ ಹೆಚ್ಚಿದೆ. ಇದಕ್ಕೆ ಕಾರಣ ಕೊರೊನಾ ನ್ಯುಮೋನಿಯಾ!

'ರೂಪಾಂತರಿ ಕೊರೊನಾ ವೈರಾಣು ಹಳೆಯದಕ್ಕಿಂತಲೂ ಹೆಚ್ಚು ಮಾರಣಾಂತಿಕ. ಹೋದ ವರ್ಷ ಕೋವಿಡ್ ಪೀಡಿತರಲ್ಲಿ 'ವೀನಸ್ ಟ್ರಾಂಬೊಮ್‌ಬಾಲಿಸಂ' ಸಮಸ್ಯೆ ಕಂಡುಬರುತ್ತಿತ್ತು. ಶ್ವಾಸಕೋಶ, ಕಾಲು, ತೊಡೆಸಂಧು ಹಾಗೂ ತೋಳಿನ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟುವುದು ಸಾಮಾನ್ಯವಾಗಿತ್ತು. ಹೋದ ವರ್ಷ ಹಿರಿಯ ನಾಗರಿಕರು, ಮಧುಮೇಹ ಮತ್ತು ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವವರು ಹೆಚ್ಚು ತೊಂದರೆ ಅನುಭವಿಸುತ್ತಿದ್ದರು. ಆದರೆ, ಈಗ ಕೊರೊನಾ ನ್ಯುಮೋನಿಯಾ ಕಾಣಿಸಿಕೊಂಡಿದೆ. ಇದರಿಂದಾಗಿ ಯುವಕರು ಹೆಚ್ಚು ಅಪಾಯಕ್ಕೆ ಸಿಲುಕುತ್ತಿದ್ದಾರೆ. ಇದು ಆತಂಕಕಾರಿ' ಎಂದು ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯ ವೈದ್ಯ ಡಾ.ಫಾರೂಕ್ ಖಾನ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೊರೊನಾ ನ್ಯುಮೋನಿಯಾದಿಂದ ಉಭಯ ಶ್ವಾಸಕೋಶಗಳಿಗೂ ಹಾನಿಯುಂಟಾಗುತ್ತದೆ. ಈ ಕಾರಣದಿಂದಾಗಿಯೇ ರೋಗಿಗಳು ತೀವ್ರತರನಾದ ಉಸಿರಾಟದ ಸಮಸ್ಯೆ ಎದುರಿಸುತ್ತಿದ್ದಾರೆ. ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುವವರ ಸಂಖ್ಯೆ ಏರಿದೆ. ಹೀಗಾಗಿ ವೈದ್ಯಕೀಯ ಆಮ್ಲಜನಕದ ಅಭಾವ ಸೃಷ್ಟಿಯಾಗಿದೆ. ಪ್ರತಿನಿತ್ಯ 10 ಸಾವಿರಕ್ಕೂ ಹೆಚ್ಚು ಮಂದಿ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಇದರಿಂದ ಹಾಸಿಗೆ ಸಮಸ್ಯೆಯೂ ತಲೆದೋರಿದೆ' ಎಂದರು.

'ರೆಮ್‌ಡಿಸಿವಿರ್ ಚುಚ್ಚುಮದ್ದು ಕೋವಿಡ್‌ಗೆ ರಾಮಬಾಣವಲ್ಲ. ಇದು 'ಮ್ಯಾಜಿಕ್ ಬುಲೆಟ್' ಕೂಡ ಅಲ್ಲ. ಇದನ್ನು ಎಲ್ಲರೂ ಅರಿತುಕೊಳ್ಳಬೇಕು. ರೋಗದ ತೀವ್ರತೆಗೆ ಕಡಿವಾಣ ಹಾಕಲು ಹಾಗೂ ರೋಗಿಗಳಿಗೆ ಆಮ್ಲಜನಕದ ಅಗತ್ಯ ಕಡಿಮೆ ಮಾಡಲು ಇದು ಸಹಕಾರಿಯಷ್ಟೇ. ಇದನ್ನು ಗಂಭೀರ ಸಮಸ್ಯೆ ಎದುರಿಸುತ್ತಿರುವವರಿಗಷ್ಟೇ ಕೊಡಬೇಕು' ಎಂದು ತಿಳಿಸಿದರು.

'ಲಸಿಕೆ ಹಾಕಿಸಿಕೊಂಡರೆ ಅಡ್ಡಪರಿಣಾಮಗಳಾಗುತ್ತದೆ ಎಂದು ಅನೇಕರು ಗಾಳಿಸುದ್ದಿ ಹರಡುತ್ತಿದ್ದಾರೆ. ಇದಕ್ಕೆಲ್ಲಾ ಜನ ಕಿವಿಗೊಡಬಾರದು. ಲಸಿಕೆ ಪಡೆದರೆ ದೇಹದೊಳಗೆ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ಮರಣ ಪ್ರಮಾಣವನ್ನು ಕಡಿಮೆ ಮಾಡಬಹುದು. ಗಂಭೀರ ಸಮಸ್ಯೆಯಿಂದಲೂ ಪಾರಾಗಬಹುದು. ಇದನ್ನು ಎಲ್ಲರೂ ಗಮನದಲ್ಲಿಟ್ಟುಕೊಂಡು ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಬೇಕು' ಎಂದು ಹೇಳಿದರು.

ವಿಶ್ವಯುದ್ಧದಲ್ಲಿ ಹುತಾತ್ಮರಾದ ಯೋಧರ ಜತೆ ವರ್ಣಭೇದ ನೀತಿ: ಕ್ಷಮೆಯಾಚನೆ

ಲಂಡನ್: ಮೊದಲನೇ ವಿಶ್ವ ಯುದ್ಧ ಸಂದರ್ಭದಲ್ಲಿ ಬ್ರಿಟಿಷರ ಪರ ಹೋರಾಟ ನಡೆಸಿದ ಭಾರತೀಯ ಯೋಧರ ಜತೆ ವರ್ಣಭೇದ ನೀತಿ ಅನುಸರಿಸಲಾಗಿದೆ ಎನ್ನುವುದನ್ನು ಕಾಮನ್‌ವೆಲ್ತ್ ವರದಿ ಬಹಿರಂಗಪಡಿಸಿದೆ. ಈ ತಪ್ಪಿಗಾಗಿ ಬ್ರಿಟನ್ ಕ್ಷಮೆ ಕೋರಿದೆ.

ಸುಮಾರು 50 ಸಾವಿರ ಭಾರತೀಯ ಯೋಧರು ಬ್ರಿಟಿಷರ ಪರ ಯುದ್ಧದಲ್ಲಿ ಪಾಲ್ಗೊಂಡಿದ್ದರು. ಆದರೆ, ಇತರ ಹುತಾತ್ಮರಿಗೆ ದೊರೆತ ಗೌರವ ಭಾರತೀಯರಿಗೆ ದೊರೆಯಲಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮೊದ ಮತ್ತು ಎರಡನೇ ವಿಶ್ವ ಯುದ್ಧಕ್ಕೆ ಸಂಬಂಧಿಸಿದಂತೆ 'ಕಾಮನ್‌ವೆಲ್ತ್ ಯುದ್ಧ ಸಮಾಧಿಗಳ ಆಯೋಗ' (ಸಿಡಬ್ಲ್ಯುಜಿಸಿ) ವರದಿ ಸಿದ್ಧಪಡಿಸಿದೆ. ಮೊದಲನೇ ವಿಶ್ವ ಯುದ್ಧದಲ್ಲಿ ಹುತಾತ್ಮರಾದವರನ್ನು ಯಾವ ರೀತಿ ಸ್ಮರಿಸಲಾಗಿದೆ ಎನ್ನುವ ಕುರಿತು ತಿಳಿದುಕೊಳ್ಳಲು 2019ರಲ್ಲಿ ವಿಶೇಷ ಸಮಿತಿಯನ್ನು ರಚಿಸಲಾಗಿತ್ತು.

ಈ ಯುದ್ಧದಲ್ಲಿ ಭಾರತೀಯರು, ಪೂರ್ವ ಆಫ್ರಿಕನ್ನರು, ಪಶ್ಚಿಮ ಆಫ್ರಿಕನ್ನರು, ಸಾವಿಗೀಡಾಗಿದ್ದರು. ಸುಮಾರು 3.50 ಲಕ್ಷ ಯೋಧರನ್ನು ಹೆಸರಿನ ಮೂಲಕವಾಗಲಿ ಅಥವಾ ಯಾವುದೇ ರೀತಿಯ ಗೌರವ ನೀಡುವ ರೀತಿಯಲ್ಲಿ ಸ್ಮರಣೆಯನ್ನು ಮಾಡಲಿಲ್ಲ ಎಂದು ಸಮಿತಿಯು ತಿಳಿಸಿದೆ.

ಕೋವಿಡ್ ಅಂಕಿ-ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಡಬ್ಲ್ಯುಐಎನ್

	ವಿಶ್ವ	ಭಾರತ
ಒಟ್ಟು ಪ್ರಕರಣ	14.49 ಕೋಟಿ	1.42 ಕೋಟಿ
ಸಕ್ರಿಯ ಪ್ರಕರಣ	1.84 ಕೋಟಿ	24.10 ಲಕ್ಷ
ಗುಣಮುಖ	12.30 ಕೋಟಿ	1.35 ಕೋಟಿ
ಸಾವು	30.77 ಲಕ್ಷ	1.86 ಲಕ್ಷ

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	8.32 ಲಕ್ಷ	3,15,735
ಗುಣಮುಖ	7.39 ಲಕ್ಷ	1,76,427
ಸಾವು	13,885	2,101

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

71,910 ಬ್ರೆಜಿಲ್ | 65,057 ಅಮೆರಿಕ | 61,967 ಟರ್ಕಿ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

68.41 ಅಮೆರಿಕ | 11.08 ಬ್ರೆಜಿಲ್ | 10.53 ಫ್ರಾನ್ಸ್

(*ರಾತ್ರಿ 10 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

62,479 ಮಹಾರಾಷ್ಟ್ರ | 13,258 ತಮಿಳುನಾಡು | 12,766 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

40.94 ಮಹಾರಾಷ್ಟ್ರ | 13.22 ಕೇರಳ | 10.37 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ನಾಸಿಕ್‌ನ ಡಾ. ಝಾಕೀರ್ ಹುಸೇನ್ ಆಸ್ಪತ್ರೆಯಲ್ಲಿ 24 ಕೊರೊನಾ ರೋಗಿಗಳು ಸಾವನ್ನಪ್ಪಿದ ಪ್ರಕರಣ

ಆಮ್ಲಜನಕ ಪೂರೈಕೆ ವ್ಯತ್ಯಯ: ಎಫ್‌ಐಆರ್

ಮುಂಬೈ (ಪಿಟಿಐ): ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯವಾಗಿ 24 ರೋಗಿಗಳು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಗುರುವಾರ ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ನಾಸಿಕ್ ನಗರದ ಭದ್ರಕಾಳಿ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 304-ಎ ಅಡಿಯಲ್ಲಿ (ನಿರ್ಲಕ್ಷ್ಯದಿಂದ ಸಾವು ಸಂಭವಿಸಿರುವುದು) ಎಫ್‌ಐಆರ್ ದಾಖಲಿಸಲಾಗಿದೆ.

ಬುಧವಾರ ಮಧ್ಯಾಹ್ನ ಆಮ್ಲಜನಕ ಪೂರೈಕೆಯಲ್ಲಿ ದಿಢೀರನೆ ಉಂಟಾದ ವ್ಯತ್ಯಯದಿಂದ ಇಲ್ಲಿನ ಡಾ. ಝಾಕೀರ್ ಹುಸೇನ್ ಆಸ್ಪತ್ರೆಯಲ್ಲಿ 22 ಕೊರೊನಾ ರೋಗಿಗಳು ಸಾವನ್ನಪ್ಪಿದ್ದರು.

ವೈದ್ಯಕೀಯ ಆಮ್ಲಜನಕ ಸಂಗ್ರಹಿಸುವ ಘಟಕದಲ್ಲಿ ಸೋರಿಕೆಯಾದ ಕಾರಣ ರೋಗಿಗಳಿಗೆ ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಾಸ ಉಂಟಾಗಿ ಈ ಸಾವುಗಳು ಸಂಭವಿಸಿದ್ದವು ಎಂದು ಅಧಿಕಾರಿಗಳು ತಿಳಿಸಿದ್ದರು.

ಘಟನೆ ನಡೆದಾಗ 150 ಹಾಸಿಗೆಗಳ ಸಾಮರ್ಥ್ಯವಿರುವ ಈ ಆಸ್ಪತ್ರೆಯಲ್ಲಿ 157 ರೋಗಿಗಳು ದಾಖಲಾಗಿದ್ದರು.

3 ವಾರ ಹಿಂದೆಯಷ್ಟೇ ಕಾರ್ಯಾರಂಭ: ಆಸ್ಪತ್ರೆಯಲ್ಲಿದ್ದ 13000 ಲೀಟರ್ ಸಂಗ್ರಹ ಸಾಮರ್ಥ್ಯದ ಆಮ್ಲಜನಕದ ಘಟಕ 21 ದಿನಗಳ ಹಿಂದೆಯಷ್ಟೇ ಕಾರ್ಯಾರಂಭ ಮಾಡಿತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಆಮ್ಲಜನಕದ ಟ್ಯಾಂಕ್ ವಡೋದರ ಮೂಲದ ಇನಾಕ್ಸ್‌ಸಿವಿಎ ಕಂಪನಿಗೆ ಸೇರಿದ್ದು ಎಂಬ ಮಾಹಿತಿ ಪೊಲೀಸರಿಗೆ ಲಭ್ಯವಾಗಿದೆ ಎಂದು ಪ್ರತ್ಯಕ್ಷದರ್ಶಿ ತಿಳಿಸಿದ್ದಾರೆ.

ವಿಮಾನ ಸಂಚಾರ ನಿರ್ಬಂಧ: ಅಂತರರಾಷ್ಟ್ರೀಯ ಪ್ರಯಾಣಕ್ಕೆ ಸಂಬಂಧಿಸಿ ಭಾರತವನ್ನು 'ಕೆಂಪುಪಟ್ಟಿಗೆ' ಸೇರಿಸಿದ ಹಿಂದೆಯೇ, ಲಂಡನ್‌ನ ಅತಿದೊಡ್ಡ ವಿಮಾನನಿಲ್ದಾಣ 'ಹೀಥ್ರೂ' ಆಡಳಿತ ವರ್ಗವು, ಭಾರತದಿಂದ ಹೆಚ್ಚುವರಿ ವಿಮಾನಗಳ ಆಗಮನಕ್ಕೆ ಅವಕಾಶವನ್ನು ನಿರಾಕರಿಸಿದೆ. ಕೆಂಪುಪಟ್ಟಿಗೆ ಸೇರಿಸಿದ ಆದೇಶ ಶುಕ್ರವಾರದಿಂದ ಜಾರಿಗೆ ಬರಲಿದೆ.

ನಿಲ್ದಾಣದ ಪಾಸ್‌ಪೋರ್ಟ್ ಕಂಟ್ರೋಲ್ ವಿಭಾಗದಲ್ಲಿ ಈಗಾಗಲೇ ದೊಡ್ಡ ಸಾಲು ಮತ್ತು ಒತ್ತಡ ಇದೆ ಎಂದೂ ಆಡಳಿತವು ಅವಕಾಶ ನಿರಾಕರಣೆಗೆ ಕಾರಣ ನೀಡಿದೆ. ಭಾರತದಲ್ಲಿ ಕಾಣಿಸಿರುವ ಕೊರೊನಾ ಸೋಂಕು ಮಾದರಿಯ 103 ಪ್ರಕರಣ ಪತ್ತೆಯಾದ ನಂತರ ಈ ವಾರದ ಆರಂಭದಲ್ಲಿ ಭಾರತವನ್ನು ಕೆಂಪುಪಟ್ಟಿಗೆ ಸೇರಿಸಲು ಬ್ರಿಟನ್ ತೀರ್ಮಾನಿಸಿತ್ತು.

ಪರಿಸ್ಥಿತಿಯನ್ನು ಅವಲೋಕಿಸಿದ ನಂತರ ಮುಂಜಾಗ್ರತೆ ಕ್ರಮವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಜನಪ್ರತಿನಿಧಿಗಳ ಸಭೆಗೆ ಗೃಹ ಕಾರ್ಯದರ್ಶಿ ಮ್ಯಾಟ್ ಹಾಂಕೊಕ್ ತಿಳಿಸಿದ್ದರು. ಕೆಂಪುಪಟ್ಟಿಗೆ ಸೇರ್ಪಡೆ ಎಂದರೆ ಕಳೆದ 10 ದಿನ ಭಾರತದಲ್ಲಿರುವ ಯು.ಕೆ, ಐರಿಷ್ ನಿವಾಸಿಗಳು ಅಥವಾ ಬ್ರಿಟಿಷ್ ಪ್ರಜೆ ದೇಶಕ್ಕೆ ಮರಳಲು ಅವಕಾಶವಿಲ್ಲ.

ಕೋವಿಡ್ ಪ್ರಕರಣ ಹಿನ್ನೆಲೆಯಲ್ಲಿ ಭಾರತದಿಂದ ದೇಶಕ್ಕೆ ಸಂಪರ್ಕ ಕಲ್ಪಿಸುವ ವಿಮಾನಗಳ ಸಂಖ್ಯೆಯನ್ನು ಕಡಿತಗೊಳಿಸಲು ಆಸ್ಟ್ರೇಲಿಯಾ ಸರ್ಕಾರ ನಿರ್ಧರಿಸಿದೆ. ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಈ ತೀರ್ಮಾನ ಪ್ರಕಟಿಸಿದ್ದು, ಕೋವಿಡ್ ಪ್ರಕರಣ ಹೆಚ್ಚಿದ್ದು, ಭಾರತದಲ್ಲಿ ಹೆಚ್ಚು ಅಪಾಯದ ಸ್ಥಿತಿ ಇದೆ ಎಂದಿದ್ದಾರೆ.

ಸಚಿವ ಸಂಪುಟ ಸಭೆಯ ನಂತರ ಮಾತನಾಡಿದ ಪ್ರಧಾನಿ, ಭಾರತದಿಂದ ಬರುವ ವಿಮಾನಗಳ ಸಂಖ್ಯೆಯನ್ನು ಶೇ 30ರಷ್ಟು ಕಡಿತಗೊಳಿಸಲಾಗುವುದು. ಅಲ್ಲದೆ, ಆಸ್ಟ್ರೇಲಿಯನ್ನರು ಅಧಿಕ ಅಪಾಯವಿರುವ ಭಾರತದಂತಹ ದೇಶಕ್ಕೆ ತೆರಳುವುದರ ಮೇಲೂ ಮಿತಿ ಹೇರಲಿದ್ದೇವೆ ಎಂದರು.

ಕಾನ್ಪುರದ ಭೈರವ್ ಘಾಟ್‌ನಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆ ನಡೆಸಲಾಯಿತು —ಪಿಟಿಐ ಚಿತ್ರ

ನ್ಯಾಯಾಂಗ ತನಿಖೆಗೆ ಕೋರಿ 'ಸುಪ್ರೀಂ'ಗೆ ಪಿಐಎಲ್

ನವದೆಹಲಿ: 24 ರೋಗಿಗಳ ಸಾವಿಗೆ ಕಾರಣವಾದ ನಾಸಿಕ್ ಆಸ್ಪತ್ರೆಯಲ್ಲಿನ ಆಮ್ಲಜನಕ ಸೋರಿಕೆ ಪ್ರಕರಣದ ತನಿಖೆಗೆ ನ್ಯಾಯಾಂಗ ತನಿಖಾ ಆಯೋಗವನ್ನು ರಚಿಸಲು ನಿರ್ದೇಶಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಗುರುವಾರ ಸಲ್ಲಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಹಾಗೂ ನ್ಯಾಯಾಂಗ ತನಿಖೆಗೆ ನಿರ್ದೇಶಿಸಬೇಕು ಎಂದು 'ಸೇವ್ ದೆಮ್ ಇಂಡಿಯಾ ಫೌಂಡೇಶನ್' ಎಂಬ ಎನ್‌ಜಿಒ ಪಿಐಎಲ್ ಸಲ್ಲಿಸಿದೆ.

ವಿದೇಶದಿಂದ ಲಸಿಕೆ ಖರೀದಿಗೆ ಮಹಾರಾಷ್ಟ್ರ ಚಿಂತನೆ

ಮುಂಬೈ: ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದು ಒಂದೆಡೆಯಾದರೆ, ಲಸಿಕೆ ಪೂರೈಕೆಯಲ್ಲಿಯೂ ಸಮಸ್ಯೆ ಕಂಡುಬಂದಿದೆ. ಹೀಗಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೋವಿಡ್–19 ಲಸಿಕೆ ಖರೀದಿಗಾಗಿ ಸಮಿತಿಯೊಂದನ್ನು ರಚಿಸಲು ಮಹಾರಾಷ್ಟ್ರ ಸರ್ಕಾರ ಚಿಂತನೆ ನಡೆಸಿದೆ.

18 ವರ್ಷ ಮೇಲ್ಪಟ್ಟವರಿಗೆ ಮೇ 1ರಿಂದ ಲಸಿಕೆ ನೀಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಆಗ, ಸಾಕಷ್ಟು ಪ್ರಮಾಣದಲ್ಲಿ ಲಸಿಕೆ ಬೇಕಾಗುತ್ತದೆ. ಇದು ಕೂಡ ವಿದೇಶದಲ್ಲಿ ಲಸಿಕೆ ಖರೀದಿಸಲು ಮಹಾರಾಷ್ಟ್ರ ಚಿಂತನೆ ನಡೆಸುವುದಕ್ಕೆ ಕಾರಣ ಎನ್ನಲಾಗುತ್ತಿದೆ.

'ದೇಶದ ಕಂಪನಿಗಳಲ್ಲಿ ಅಥವಾ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಾಗಲಿ ಲಭ್ಯವಿರುವ ಕಡೆಯಿಂದ ಲಸಿಕೆ ಖರೀದಿಸುವ ಸಲುವಾಗಿ ಸಮಿತಿ ರಚಿಸಲು ಸಚಿವ ಸಂಪುಟದಲ್ಲಿ ಚರ್ಚಿಸಲಿದ್ದೇವೆ. ಈ ಬಗ್ಗೆ ಇನ್ನೂ ಅಂತಿಮ ನಿರ್ಧಾರ ಕೈಗೊಂಡಿಲ್ಲ' ಎಂದು ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ನವಾಬ್ ಮಲಿಕ್ ಹೇಳಿದರು.

'ಮೇ 24ರ ವರೆಗೆ ನೇರವಾಗಿ ರಾಜ್ಯಕ್ಕೆ ಲಸಿಕೆ ಪೂರೈಕೆ ಸಾಧ್ಯವಿಲ್ಲ ಎಂಬುದಾಗಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ತಿಳಿಸಿದೆ' ಎಂದು ಆರೋಗ್ಯ ಸಚಿವ ರಾಜೇಶ್ ಟೋಪೆ ಹೇಳಿದ್ದಾರೆ.

ಕೇರಳ ಸಿಎಂ ನಿಧಿಗೆ ₹ 22 ಲಕ್ಷ ಸಂದಾಯ

ತಿರುವನಂತಪುರ: ರಾಜ್ಯ ಸರ್ಕಾರ ನೀಡುವ ಉಚಿತ ಲಸಿಕೆಯನ್ನು ತೆಗೆದುಕೊಳ್ಳುವವರು ಲಸಿಕೆಯ ದರದ ಮೊತ್ತವನ್ನು ಕೇರಳ ಮುಖ್ಯಮಂತ್ರಿಗಳ ವಿಪತ್ತು ಪರಿಹಾರ ನಿಧಿಗೆ ನೀಡುವಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಆರಂಭವಾಗಿರುವ ಅಭಿಯಾನಕ್ಕೆ ಭಾರಿ ಸ್ಪಂದನೆ ವ್ಯಕ್ತವಾಗಿದೆ.

'#VaccineChallenge' ಎಂಬ ಹ್ಯಾಷ್‌ಟ್ಯಾಗ್‌ಗೆ ಜನರಿಂದ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಅಭಿಯಾನ ಆರಂಭಗೊಂಡ 24 ಗಂಟೆಗಳಲ್ಲಿ ಮುಖ್ಯಮಂತ್ರಿಗಳ ನಿಧಿಗೆ ₹ 22 ಲಕ್ಷ ದೇಣಿಗೆ ಪಾವತಿಯಾಗಿದೆ.

ಕೇಂದ್ರ ಘೋಷಿಸಿರುವ ಹೊಸ ಲಸಿಕೆ ನೀತಿಯನ್ನು ಪ್ರತಿಭಟಿಸಿ ಹಾಗೂ ರಾಜ್ಯದ ಜನರಿಗೆ ಉಚಿತವಾಗಿ ಲಸಿಕೆ ನೀಡುವುದಾಗಿ ಹೇಳಿರುವ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಬೆಂಬಲ ಸೂಚಿಸಿ ಬುಧವಾರ ಈ ಅಭಿಯಾನವನ್ನು ಆರಂಭಿಸಲಾಗಿದೆ.

ಸಿಸಿಐ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ ದೆಹಲಿ ಹೈಕೋರ್ಟ್

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್‌ನ ಖಾಸಗಿತನದ ಹೊಸ ನೀತಿ ಕುರಿತು ತನಿಖೆ ನಡೆಸುವಂತೆ ಭಾರತದ ಸ್ಪರ್ಧಾ ನಿಯಂತ್ರಕ ಸಂಸ್ಥೆ ಕಾಂಪಿಟೇಷನ್ ಕಮಿಷನ್ ಆಫ್ ಇಂಡಿಯಾ (ಸಿಸಿಐ) ನೀಡಿದ್ದ ಆದೇಶವನ್ನು ಪ್ರಶ್ನಿಸಿ ಫೇಸ್‌ಬುಕ್ ಮತ್ತು ವಾಟ್ಸ್‌ಆ್ಯಪ್ ಸಲ್ಲಿಸಿದ್ದ ಮನವಿಯನ್ನು ದೆಹಲಿ ಹೈಕೋರ್ಟ್ ಗುರುವಾರ ವಜಾಗೊಳಿಸಿದೆ.

'ವಾಟ್ಸ್‌ಆ್ಯಪ್‌ನ ಹೊಸ ಖಾಸಗಿತನದ ನೀತಿಯ ವಿರುದ್ಧ ಸುಪ್ರೀಂ ಕೋರ್ಟ್ ಮತ್ತು ದೆಹಲಿ ಹೈಕೋರ್ಟ್‌ನಲ್ಲಿ ಸಲ್ಲಿಸಲಾದ ಅರ್ಜಿಗಳ ಫಲಿತಾಂಶಕ್ಕಾಗಿ ಕಾಯುವುದು ಸಿಸಿಐಗೆ ಒಳ್ಳೆಯದು' ಎಂದು ನ್ಯಾಯಮೂರ್ತಿ ನವೀನ್ ಚಾವ್ಲಾ ಹೇಳಿದ್ದಾರೆ. ವಾಟ್ಸ್‌ಆ್ಯಪ್‌ನಿಂದ ಜನರ ಖಾಸಗಿತನದ ಉಲ್ಲಂಘನೆ ವಿಚಾರವನ್ನು ಸುಪ್ರೀಂ ಕೋರ್ಟ್ ವಿಚಾರಿಸಲಿದೆ. ಆದರೆ ವಾಟ್ಸ್‌ಆ್ಯಪ್‌ನ ಖಾಸಗಿತನ ನೀತಿಯಿಂದ ಅತಿಯಾದ ಪ್ರಮಾಣದಲ್ಲಿ ದತ್ತಾಂಶ ಸಂಗ್ರಹ ನಡೆದು ಜಾಹೀರಾತುದಾರರು ನಿರ್ದಿಷ್ಟ ಗ್ರಾಹಕರನ್ನು ಗುರಿಯಾಗಿಸುವ ಸಾಧ್ಯತೆ ಇದೆ. ಬಾಹುಳ್ಯ ಸ್ಥಾಪನೆ ಮಾಡುವ ಈ ವಿಚಾರ ತನ್ನ ವ್ಯಾಪ್ತಿಗೆ ಬರುತ್ತದೆ ಎಂದು ಸಿಸಿಐ ಹೇಳಿತ್ತು.

ಮಗುವಿನ ಶಿಕ್ಷಣಕ್ಕೂ ಮಯೂರ್ ನೆರವು

ಮುಂಬೈ: ತನ್ನ ಜೀವವನ್ನು ಪಣಕ್ಕಿಟ್ಟು ಮಗುವನ್ನು ರಕ್ಷಿಸಿ ಶೌರ್ಯ ತೋರಿದ ರೈಲ್ವೆ ಸಿಬ್ಬಂದಿ ಮಯೂರ್ ಶೆಲ್ಕೆ ಅವರು ಈಗ ಅದೇ ಮಗುವಿನ ಶಿಕ್ಷಣಕ್ಕೂ ನೆರವಾಗಲು ಮುಂದಾಗಿದ್ದಾರೆ.

ಏಪ್ರಿಲ್ 17ರಂದು ವಾಂಗಾಣಿ ನಿಲ್ದಾಣದಲ್ಲಿ ರೈಲು ಹಳಿಗಳ ಮೇಲೆ ಬಿದ್ದಿದ್ದ ಮಗುವನ್ನು ಮಯೂರ್ ರಕ್ಷಿಸಿದ್ದರು. ದೃಷ್ಟಿದೋಷ ಇರುವ ತನ್ನ ತಾಯಿ ಜತೆ ತೆರಳುತ್ತಿದ್ದ ಸಂದರ್ಭದಲ್ಲಿ ಮಗು ಹಳಿಗಳ ಮೇಲೆ ಬಿದ್ದಿತ್ತು. ಇದೇ ಸಂದರ್ಭದಲ್ಲಿ ಅತಿ ವೇಗದಲ್ಲಿ ಉದ್ಯಾನ ಎಕ್ಸ್‌ಪ್ರೆಸ್ ಬರುತ್ತಿತ್ತು. ವೇಗದಲ್ಲಿ ಧಾವಿಸಿದ್ದ ಮಯೂರ್, ಮಗುವನ್ನು ರಕ್ಷಿಸಿ ತಾವು ಪಾರಾಗಿದ್ದರು. 7ರಿಂದ 8 ಸೆಕೆಂಡ್‌ಗಳ ಅವಧಿಯಲ್ಲಿ ನಡೆದ ಈ ಸಾಹಸ ಕಾರ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿ, ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ತಮ್ಮ ಸಾಹಸ ಕಾರ್ಯಕ್ಕಾಗಿ ರೈಲ್ವೆ ಇಲಾಖೆ ಸೇರಿದಂತೆ ಹಲವು ಸಂಘ, ಸಂಸ್ಥೆಗಳು ನೀಡಿರುವ ಬಹುಮಾನದಲ್ಲಿನ ಅರ್ಧ ಮೊತ್ತವನ್ನು ಮಗುವಿನ ಶಿಕ್ಷಣಕ್ಕೆ ನೀಡುವುದಾಗಿ ಮಯೂರ್ ತಿಳಿಸಿದ್ದಾರೆ.

ರೈಲ್ವೆ ಸಚಿವಾಲಯ ಮಯೂರ್ ಅವರಿಗೆ ₹50 ಸಾವಿರ ಬಹುಮಾನ ನೀಡುವುದಾಗಿ ಘೋಷಿಸಿದೆ. ಇದರಲ್ಲಿನ ₹25 ಸಾವಿರಗಳನ್ನು ತಾನು ರಕ್ಷಿಸಿದ ಮಗು ಸಾಹಿಲ್ ಶಿರಾಸತ್‌ಗೆ ನೀಡುವುದಾಗಿ ಮಯೂರ್ ಈಗಾಗಲೇ ತಿಳಿಸಿದ್ದಾರೆ.

'ಮಗುವಿನ ಕುಟುಂಬದವರು ಬಡವರು ಎನ್ನುವುದು ತಿಳಿದು ಬಂದಿದೆ. ಮಗುವಿಗೆ ಶಿಕ್ಷಣ ನೀಡಲು ಕುಟುಂಬಕ್ಕೆ ಸಾಧ್ಯವಾಗುವುದಿಲ್ಲ. ನಾನು ಆ ಮಗುವನ್ನು ರಕ್ಷಿಸಿದ್ದೇನೆ. ಹೀಗಾಗಿ, ಬಹುಮಾನದ ಅರ್ಧ ಮೊತ್ತವನ್ನು ಮಗುವಿನ ಭವಿಷ್ಯಕ್ಕಾಗಿ ನೀಡುತ್ತಿದ್ದೇನೆ' ಎಂದು ಮಯೂರ್ ತಿಳಿಸಿದ್ದಾರೆ.

ಕಾರ್ಪೊರೇಟ್ ಕಂಪನಿಯೊಂದು ಮಯೂರ್ ಅವರಿಗೆ ಮೋಟಾರ್ ಸೈಕಲ್ ಅನ್ನು ಬಹುಮಾನವಾಗಿ ನೀಡಿದೆ.

ಮಯೂರ್ ಶೆಲ್ಕೆ

ವನಿತಾ ಗುಪ್ತ ಅಮೆರಿಕದ ಸಹ ಅಟಾರ್ನಿ ಜನರಲ್

ವಾಷಿಂಗ್ಟನ್ (ಪಿಟಿಐ): ಭಾರತೀಯ ಮೂಲದ ಅಮೆರಿಕದ ಖ್ಯಾತ ನಾಗರಿಕ ಹಕ್ಕುಗಳ ವಕೀಲರಾದ ವನಿತಾ ಗುಪ್ತ ಅವರು ದೇಶದ ಮೂರನೇ ಅತಿ ದೊಡ್ಡ ನ್ಯಾಯಾಂಗ ಹುದ್ದೆಯಾಗಿರುವ ಸಹ ಅಟಾರ್ನಿ ಜನರಲ್ ಆಗಿ ನೇಮಕಗೊಂಡಿದ್ದಾರೆ. ಈ ಮೂಲಕ ಇತಿಹಾಸ ನಿರ್ಮಿಸಿದ್ದಾರೆ.

ಸೆನೆಟ್‌ನಲ್ಲಿ ಬುಧವಾರ ನಡೆದ ಮತದಾನದಲ್ಲಿ ರಿಪಬ್ಲಿಕನ್ ಸೆನೆಟ್ ಸದಸ್ಯೆ ಲಿಸಾ ಮಾರ್ಕೋವ್‌ಸ್ಕಿ ಅವರು ತಮ್ಮ ಪಕ್ಷದ ನಿಲುವಿನಿಂದ ಹೊರಬಂದು ವನಿತಾ ಗುಪ್ತ (46) ಅವರಿಗೆ ಮತ ಚಲಾಯಿಸಿದರು. ಹೀಗಾಗಿ 51–49 ಮತಗಳ ಅಂತರದಿಂದ ಅವರು ಈ ಪ್ರತಿಷ್ಠಿತ ಹುದ್ದೆಗೆ ಆಯ್ಕೆಯಾದರು. ಸೆನೆಟ್‌ನಲ್ಲಿ ಉಭಯ ಪಕ್ಷಗಳೂ ತಲಾ 50 ಸ್ಥಾನಗಳನ್ನು ಹೊಂದಿವೆ. ಮತದಾನ ವೇಳೆ ಟೈ ಆದರೆ ಮತ ಚಲಾಯಿಸುವ ಸಲುವಾಗಿ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಸಹ ಸೆನೆಟ್‌ನಲ್ಲಿ ಹಾಜರಿದ್ದರು.

ವನಿತಾ ಗುಪ್ತ

ವನಿತಾ ಗುಪ್ತ ಅವರನ್ನು ಅಭಿನಂದಿಸಿರುವ ಅಧ್ಯಕ್ಷ ಜೋ ಬೈಡನ್, 'ಜನಾಂಗೀಯ ಸಮಾನತೆ ಮತ್ತು ನ್ಯಾಯ ಕ್ಷೇತ್ರದಲ್ಲಿ ಅರ್ಪಣೆಯಿಂದ ಕೆಲಸ ಮಾಡುವ ಹೊಣೆಗಾರಿಕೆ ವನಿತಾ ಗುಪ್ತ ಮತ್ತು ಕ್ರಿಸ್ಟಿನ್ ಕ್ಲರ್ಕ್ ಅವರಿಗೆ ದೊರೆತಿದೆ. ಸೆನೆಟ್ ಇವರಿಗೆ ಸಹಕಾರ ನೀಡಬೇಕು' ಎಂದು ಕೇಳಿಕೊಂಡಿದ್ದಾರೆ.

ಅಮೆರಿಕದ ನ್ಯಾಯಾಂಗ ವ್ಯವಸ್ಥೆಯಲ್ಲಿ ಅಟಾರ್ನಿ ಜನರಲ್ ಹುದ್ದೆ ಬಹಳ ಪ್ರತಿಷ್ಠಿತವಾಗಿದ್ದು, ಸಹ ಅಟಾರ್ನಿ ಜನರಲ್ ಹುದ್ದೆ ದೇಶದ ನ್ಯಾಯಾಂಗ ವ್ಯವಸ್ಥೆಯ ಮೂರನೇ ಅತಿ ಪ್ರಮುಖ ಹುದ್ದೆಯಾಗಿದೆ. 2014–17ರಲ್ಲಿ ಅವರು ಬರಾಕ್ ಒಬಾಮಾ ಅವಧಿಯಲ್ಲಿ ನಾಗರಿಕ ಹಕ್ಕುಗಳ ಸಹಾಯಕ ಅಟಾರ್ನಿ ಜನರಲ್ ಆಗಿದ್ದರು.

'ಹವಾಮಾನ ಬದಲಾವಣೆ ತಡೆಗೆ ನಿರ್ದಿಷ್ಟ ಕಾರ್ಯಸೂಚಿ ಅಗತ್ಯ'

ನವದೆಹಲಿ (ಪಿಟಿಐ): ಹವಾಮಾನ ಬದಲಾವಣೆ ತಡೆಗೆ ಜಾಗತಿಕ ಮಟ್ಟದಲ್ಲಿ ನಿರ್ದಿಷ್ಟವಾದ ಕಾರ್ಯಸೂಚಿ ಅಗತ್ಯ. ಈ ಕಾರ್ಯಸೂಚಿಯನ್ನು ತ್ವರಿತವಾಗಿ ಹಾಗೂ ದೊಡ್ಡಪ್ರಮಾಣದಲ್ಲಿ ಅನುಷ್ಠಾನಗೊಳಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದರು.

ಅಮೆರಿಕ ಆಯೋಜಿಸಿದ್ದ ವರ್ಚುವಲ್ ಶೃಂಗಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ವಿಶ್ವದ 40 ನಾಯಕರು ಈ ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದರು.

'ಹವಾಮಾನ ಬದಲಾವಣೆವೊಡ್ಡಿರುವ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಭಾರತ ಕಾರ್ಯಪ್ರವೃತ್ತವಾಗಿದೆ' ಎಂದು ಹೇಳಿದರು.

'ಈ ವಿಷಯವಾಗಿ ಅಮೆರಿಕ ಹಾಗೂ ಭಾರತ ಒಟ್ಟಾಗಿ ಕೆಲಸ ಮಾಡುತ್ತಿವೆ. 'ಇಂಡಿಯಾ–ಯುಎಸ್ ಕ್ಲೈಮೇಟ್ ಆ್ಯಂಡ್ ಕ್ಲೀನ್ ಎನರ್ಜಿ ಅಜೆಂಡಾ 2030 ಪಾರ್ಟನರ್‌ಶಿಪ್' ಎಂಬ ಕಾರ್ಯಕ್ರಮವನ್ನು ನಾನು ಮತ್ತು ಅಧ್ಯಕ್ಷ ಜೋ ಬೈಡನ್ ಆರಂಭಿಸಲಿದ್ದೇವೆ' ಎಂದರು.

'ಹವಾಮಾನ ಬದಲಾವಣೆ ತಡೆಗೆ ಪೂರಕವಾದಂತಹ ಹೂಡಿಕೆಗೆ ಭಾರತ–ಅಮೆರಿಕ ಪ್ರೋತ್ಸಾಹ, ಶುದ್ಧ ತಂತ್ರಜ್ಞಾನದ ಬಳಕೆಗೆ ಒತ್ತು ನೀಡಲು ಉಭಯ ದೇಶಗಳು ನಿರ್ಧರಿಸಿವೆ' ಎಂದೂ ಹೇಳಿದರು.

'ಇಡೀ ವಿಶ್ವವೇ ಈಗ ಕೋವಿಡ್ ಪಿಡುಗಿನ ವಿರುದ್ಧ ಹೋರಾಡುತ್ತಿದೆ. ಇಂಥ ಸಂದರ್ಭದಲ್ಲಿಯೇ ಶೃಂಗಸಭೆಯನ್ನು ಆಯೋಜಿಸಿರುವುದು ಸಕಾಲಿಕವಾಗಿದೆ. ಜಗತ್ತಿಗೆ ಹವಾಮಾನ ಬದಲಾವಣೆ ಒಡ್ಡಿರುವ ಅಪಾಯ ಇನ್ನೂ ಕೊನೆಗೊಂಡಿಲ್ಲ ಎಂಬುದನ್ನು ಈ ಶೃಂಗಸಭೆ ನೆನಪಿಸಿಕೊಟ್ಟಿದೆ' ಎಂದರು.

'ಕೋವಿಡ್–19 ಪಿಡುಗು ಕೊನೆಗೊಂಡ ನಂತರ ನಮ್ಮ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು ಎಂಬುದೂ ಮುಖ್ಯ. ಸುಸ್ಥಿರ ಜೀವನಶೈಲಿ ಹಾಗೂ ಹಳೆಯ ಪದ್ಧತಿಗಳ ಅಳವಡಿಕೆ ಕೋವಿಡ್ ನಂತರದ ಆರ್ಥಿಕತೆಯ ತಳಹದಿಯಾಗಿರಬೇಕು' ಎಂದು ಮೋದಿ ಪ್ರತಿಪಾದಿಸಿದರು.



ಮೋದಿ

ಮುಖ್ಯಾಂಶಗಳು

- ವಿಶ್ವದ 40 ನಾಯಕರು ವರ್ಚುವಲ್ ಶೃಂಗಸಭೆಯಲ್ಲಿ ಭಾಗಿ
- ಹವಾಮಾನ ಬದಲಾವಣೆಗೆ ಪೂರಕ ಹೂಡಿಕೆಗೆ ಅಮೆರಿಕ–ಭಾರತ ನಿರ್ಧಾರ

ಷೇರುಪೇಟೆ ವಹಿವಾಟು ▲375



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,296
ಇಂದಿನ ಅಂತ್ಯ	14,406
▲	110
ದಿನದ ಗರಿಷ್ಠ	14,425

ವಿನಿಮಯ ದರ

$ ಡಾಲರ್	74.94
£ ಪೌಂಡ್	104.19
€ ಯುರೊ	90.23
¥ ಯೆನ್ (100ಕ್ಕೆ)	70

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1640 (1640)
ಸೋಯಾ (ರಿಫೈಂಡ್)	₹1425 (1410)
ಸೂರ್ಯಕಾಂತಿ (ರಿಫೈಂಡ್)	₹1730 (1730)
ಪಾಮೋಲಿನ್	₹1330 (1330)

2020–21ನೇ ಹಣಕಾಸು ವರ್ಷ: ಎಸ್‌ಎಂಇವಿ ಮಾಹಿತಿ

ವಿದ್ಯುತ್ ವಾಹನ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ಭಾರತದಲ್ಲಿ ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ಮಾರಾಟವು 2019–20ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ 2020–21ನೇ ಹಣಕಾಸು ವರ್ಷದಲ್ಲಿ ಶೇಕಡ 20ರಷ್ಟು ಇಳಿಕೆ ಆಗಿದೆ ಎಂದು ವಿದ್ಯುತ್ ಚಾಲಿತ ವಾಹನಗಳ ತಯಾರಕರ ಸಂಘ (ಎಸ್‌ಎಂಇವಿ) ಗುರುವಾರ ತಿಳಿಸಿದೆ.

2019–20ರಲ್ಲಿ 2.95 ಲಕ್ಷ ಇ.ವಿ.ಗಳು ಮಾರಾಟ ಆಗಿದ್ದವು. 2020–21ರಲ್ಲಿ 2.36 ಲಕ್ಷ ವಿದ್ಯುತ್ ಚಾಲಿತ ವಾಹನಗಳು ಮಾರಾಟ ಆಗಿವೆ ಎಂದು ಸಂಘ ಮಾಹಿತಿ ನೀಡಿದೆ.

'2021ನೇ ಹಣಕಾಸು ವರ್ಷ ಆರಂಭವಾಗುವ ಮುನ್ನ ಉತ್ತಮ ಬೆಳವಣಿಗೆ ನಿರೀಕ್ಷಿಸಿದ್ದೆವು. ಆದರೆ ವಿವಿಧ ಕಾರಣಗಳಿಂದಾಗಿ ಮಾರಾಟದಲ್ಲಿ ಬೆಳವಣಿಗೆ ಕಂಡುಬಂದಿಲ್ಲ. ವಿದ್ಯುತ್ ಚಾಲಿತ ತ್ರಿಚಕ್ರ ಮತ್ತು ದ್ವಿಚಕ್ರ ವಾಹನಗಳ ಮಾರಾಟವು ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆ ಇದೆ' ಎಂದು ಸಂಘದ ಪ್ರಧಾನ ನಿರ್ದೇಶಕ ಸೋಹಿಂದರ್ ಗಿಲ್ ಅವರು ತಿಳಿಸಿದ್ದಾರೆ.

ಜನರು ಸುಧಾರಿತ ಲಿಥಿಯಂ ಅಯಾನ್ ಬ್ಯಾಟರಿಯ ವಾಹನಗಳನ್ನು ಖರೀದಿ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆ. ನಗರದಲ್ಲಿ ಬಳಸುವ (ಸಿಟಿ–ಸ್ಪೀಡ್) ಮತ್ತು ಅತಿ ವೇಗದ (ಹೈ–ಸ್ಪೀಡ್) ದ್ವಿಚಕ್ರ ವಾಹನಗಳ ಮಾರಾಟ ಪ್ರಗತಿ ಕಾಣುತ್ತಿದೆ ಎಂದು ಅವರು ಹೇಳಿದ್ದಾರೆ.

ಫೇಮ್–2 ಯೋಜನೆಯಡಿ ಗುರಿ ಸಾಧಿಸಲು ಇನ್ನೂ ಹೆಚ್ಚಿನದನ್ನು ಮಾಡಬೇಕಾಗಿದೆ. 2022ರ ಹಣಕಾಸು ವರ್ಷದ ಅಂತ್ಯದ ವೇಳೆಗೆ ಬೆಳವಣಿಗೆಯನ್ನು ಉತ್ತೇಜಿಸಲು ಮತ್ತು ಗುರಿಯನ್ನು ಸಾಧಿಸಲು ಸರ್ಕಾರವು ತನ್ನ ನೀತಿಯಲ್ಲಿ ಬದಲಾವಣೆ ಮಾಡುವ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಇ.ವಿ.ಗಳಿಗೆ ಬ್ಯಾಂಕ್‌ಗಳಿಂದ ಹಣಕಾಸಿನ ನೆರವಿನ ಕೊರತೆಯು ಇನ್ನೂ ಇದೆ. ಎಸ್‌ಬಿಐ ಮತ್ತು ಎಕ್ಸಿಸ್‌ನಂತಹ ಕೆಲವೇ ಬ್ಯಾಂಕ್‌ಗಳು ಆಯ್ದ ಮಾದರಿ ವಾಹನಗಳಿಗೆ ಸಾಲ ನೀಡುತ್ತಿವೆ. ಮಾರಾಟ ಹೆಚ್ಚಿಸಲು ಅನುಕೂಲ ಆಗುವಂತೆ ಸಾಲ ನೀಡಲು ಬ್ಯಾಂಕುಗಳಿಗೆ ಸರ್ಕಾರವು ಸೂಚನೆ ನೀಡಬೇಕು ಎಂದೂ ಅವರು ಹೇಳಿದ್ದಾರೆ.



ಕೋವಿಡ್‌ಗೆ ಆಸ್ಪತ್ರೆ: ಸಿಎಸ್‌ಆರ್ ಅಡಿ ಪರಿಗಣನೆ

ನವದೆಹಲಿ (ಪಿಟಿಐ): ತಾತ್ಕಾಲಿಕ ಆಸ್ಪತ್ರೆ ಮತ್ತು ಕೋವಿಡ್–19 ಆರೈಕೆ ಕೇಂದ್ರ ನಿರ್ಮಾಣಕ್ಕೆ ಕಾರ್ಪೊರೇಟ್ ಸಂಸ್ಥೆಗಳು ಮಾಡುವ ವೆಚ್ಚಗಳನ್ನು ಸಿಎಸ್‌ಆರ್ (ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ) ಚಟುವಟಿಕೆ ಎಂದು ಪರಿಗಣಿಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.

ಈ ವಿಚಾರವಾಗಿ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಗುರುವಾರ ಸುತ್ತೋಲೆ ಹೊರಡಿಸಿದೆ. ದೇಶದಲ್ಲಿ ಹೊಸದಾಗಿ ಭಾರಿ ಸಂಖ್ಯೆಯಲ್ಲಿ ಕೋವಿಡ್–19 ಪ್ರಕರಣಗಳು ವರದಿಯಾಗುತ್ತಿರುವ ಸಂದರ್ಭದಲ್ಲಿ ಈ ತೀರ್ಮಾನ ಹೊರಬಿದ್ದಿದೆ.

ಸಾರಿಗೆ ನೌಕರರ ಅಹವಾಲು ಇದೇ 26ಕ್ಕೆ ವಿಶೇಷ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಸಂಸ್ಥೆಗಳ ನೌಕರರ ಅಹವಾಲುಗಳ ಕುರಿತು ಏ.26ರಂದು ವಿಶೇಷ ವಿಚಾರಣೆ ನಡೆಸಲು ಹೈಕೋರ್ಟ್ ನಿರ್ಧರಿಸಿದೆ.

ಅಲ್ಲದೇ, ನಿವೃತ್ತ ನ್ಯಾಯಾಧೀಶರ ಮಧ್ಯಸ್ಥಿಕೆಯ ಸಲಹೆಗೆ ಸ್ಪಂದಿಸುವಂತೆ ರಾಜ್ಯ ಸರ್ಕಾರಕ್ಕೆ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ ತಿಳಿಸಿದೆ. 'ನ್ಯಾಯಾಲಯದ ಸೂಚನೆಯಂತೆ ಮುಷ್ಕರ ಹಿಂಪಡೆಯಲಾಗಿದೆ. ನೌಕರರ ಬೇಡಿಕೆಗಳನ್ನು ಪರಿಗಣಿಸಬೇಕು. ಒಂದು ಸಾವಿರಕ್ಕೂ ಹೆಚ್ಚು ನೌಕರರನ್ನು ವಜಾಗೊಳಿಸಲಾಗಿದೆ ಮತ್ತು 10 ಸಾವಿರಕ್ಕೂ ಹೆಚ್ಚು ಜನರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ' ಎಂದು ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ಪರ ವಕೀಲರು ತಿಳಿಸಿದರು.

'ಮುಷ್ಕರ ಪರಿಸ್ಥಿತಿ ಮರುಕಳಿಸದಂತೆ ನೋಡಿಕೊಳ್ಳಲು ಸಾರಿಗೆ ನೌಕರರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ. ನೌಕರರ ವಿರುದ್ಧ ದಾಖಲಾಗಿರುವ ಪ್ರಕರಣಗಳ ತನಿಖೆ ಮುಂದುವರಿಸಬಹುದು. ಆದರೆ, ನೌಕರರ ಅಮಾನತು ಆದೇಶ ಮರುಪರಿಶೀಲಿಸಲು ಒಪ್ಪಬಹುದೇ' ಎಂದು ಸರ್ಕಾರವನ್ನು ಪೀಠ ಪ್ರಶ್ನಿಸಿತು.

'ಅಮಾನತು ಆದೇಶಗಳನ್ನು ಸಂಬಂಧಿಸಿದ ಪ್ರಾಧಿಕಾರಿಗಳ ಮುಂದೆ ಪ್ರಶ್ನಿಸಲು ಅವಕಾಶ ಇದೆ. 900 ನೌಕರರ ವಿರುದ್ಧ ಮಾತ್ರ ಕ್ರಮಕೈಗೊಳ್ಳಲಾಗಿದೆ. ನೋಂದಾಯಿತ ನಾಲ್ಕು ನೌಕರರ ಸಂಘಗಳು ಮುಷ್ಕರದಿಂದ ದೂರ ಇದ್ದರೆ, ನೋಂದಾಯಿತ ನೌಕರರ ಕೂಟ ಮುಷ್ಕರಕ್ಕೆ ಕರೆ ನೀಡಿತ್ತು' ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವಡಗಿ ಅವರು ತಿಳಿಸಿದರು.

ಭಾರತಕ್ಕೆ ಬಂದ 5ನೇ ಬ್ಯಾಚ್‌ನ ರಫೇಲ್ ಯುದ್ಧ ವಿಮಾನಗಳು

ನವದೆಹಲಿ: ಫ್ರಾನ್ಸ್ ಜೊತೆ ಭಾರತ ಮಾಡಿಕೊಂಡಿರುವ ಯುದ್ಧ ವಿಮಾನಗಳ ಖರೀದಿ ಒಪ್ಪಂದದ ಅನ್ವಯ ಐದನೇ ಬ್ಯಾಚ್‌ನ ರಫೇಲ್ ಯುದ್ಧ ವಿಮಾನಗಳು ಫ್ರಾನ್ಸ್‌ನಿಂದ 8,000 ಕಿ.ಮೀ ಸಂಚರಿಸಿ ಭಾರತಕ್ಕೆ ಬಂದಿಳಿದಿವೆ ಎಂದು ಭಾರತೀಯ ವಾಯುಪಡೆ (ಐಎಎಫ್) ತಿಳಿಸಿದೆ.

ಭಾರತಕ್ಕೆ ಬಂದಿಳಿದ ರಫೇಲ್ ಯುದ್ಧ ವಿಮಾನಗಳ ಸಂಖ್ಯೆಯನ್ನು ಐಎಎಫ್ ಬಹಿರಂಗಪಡಿಸಿಲ್ಲ. ಆದರೆ, ಈ ಬೆಳವಣಿಗೆಗಳ ಬಗ್ಗೆ ಅರಿವಿರುವ ಮೂಲಗಳು ನಾಲ್ಕು ರಫೇಲ್ ವಿಮಾನಗಳು ಹೊಸ ಬ್ಯಾಚ್‌ನ ಭಾಗವಾಗಿವೆ ಎಂದು ತಿಳಿಸಿವೆ.

ಫ್ರಾನ್ಸ್‌ನಿಂದ ಹೊರಟ ಯುದ್ಧ ವಿಮಾನಗಳಿಗೆ ವಾಯುಮಾರ್ಗದಲ್ಲಿ ಇಂಧನ ತುಂಬುವಿಕೆ ನೆರವನ್ನು ಫ್ರಾನ್ಸ್‌ನ ವಾಯುಪಡೆ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ನೀಡಿವೆ ಎಂದು ಐಎಎಫ್ ಹೇಳಿದೆ.

ಫ್ರಾನ್ಸ್ ಪ್ರವಾಸದಲ್ಲಿರುವ ಏರ್ ಚೀಫ್ ಮಾರ್ಷಲ್ ಆರ್‌ಕೆಎಸ್ ಭದೌರಿಯಾ ಅವರು ಫ್ರಾನ್ಸ್‌ನ ಮೆರಿಗ್ನಾಕ್ ವಾಯುನೆಲೆಯಲ್ಲಿ ವಿಮಾನಗಳಿಗೆ ಫ್ಲ್ಯಾಗ್ ಆಫ್ ಮಾಡಿದ್ದರು.

ಜುಲೈಗೆ ಓಲಾ ಇ–ಸ್ಕೂಟರ್

ನವದೆಹಲಿ (ಪಿಟಿಐ): ಭಾರತದ ಮಾರುಕಟ್ಟೆಗೆ ಜುಲೈನಲ್ಲಿ ವಿದ್ಯುತ್ ಚಾಲಿತ ಸ್ಕೂಟರ್ ಬಿಡುಗಡೆ ಮಾಡುವುದಾಗಿ ಓಲಾ ಎಲೆಕ್ಟ್ರಿಕ್ ಕಂಪನಿ ಗುರುವಾರ ತಿಳಿಸಿದೆ. 400 ನಗರಗಳಲ್ಲಿ 1 ಲಕ್ಷ ಹೈಪರ್‌ಚಾರ್ಜರ್ ನೆಟ್‌ವರ್ಕ್ ಸ್ಥಾಪಿಸುವುದಾಗಿಯೂ ಅದು ಹೇಳಿದೆ.

ತನ್ನ ಮೊದಲ ತಯಾರಿಕಾ ಘಟಕ ಸ್ಥಾಪಿಸಲು ತಮಿಳುನಾಡಿನಲ್ಲಿ ₹ 2,400 ಕೋಟಿ ಹೂಡಿಕೆ ಮಾಡುವುದಾಗಿ ಕಂಪನಿಯು ಕಳೆದ ವರ್ಷ ಘೋಷಿಸಿತ್ತು. ಈ ಹೂಡಿಕೆಯಿಂದ 10 ಸಾವಿರ ಉದ್ಯೋಗ ಸೃಷ್ಟಿಯಾಗಲಿದೆ ಎಂದು ಹೇಳಿದೆ.

'ನಾವು ಜೂನ್ ವೇಳೆಗೆ ತಯಾರಿಕಾ ಘಟಕ ಸ್ಥಾಪಿಸುತ್ತೇವೆ. ಅದು ಆರಂಭದಲ್ಲಿ 20 ಲಕ್ಷ ತಯಾರಿಕಾ ಸಾಮರ್ಥ್ಯ ಹೊಂದಲಿದ್ದು, ಬಳಿಕ ಅದರ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು. ಜುಲೈನಲ್ಲಿ ಇ–ಸ್ಕೂಟರ್ ಮಾರಾಟ ಆರಂಭವಾಗಲಿದೆ' ಎಂದು ಓಲಾ ಅಧ್ಯಕ್ಷ ಭವಿಷ್ ಅಗರ್ವಾಲ್ ಹೇಳಿದ್ದಾರೆ.

ಕಂಪನಿಯು ಇ–ಸ್ಕೂಟರ್‌ನ ಬೆಲೆಯನ್ನು ಇನ್ನಷ್ಟೇ ತಿಳಿಸಬೇಕಿದೆ. ಮೊದಲ ವರ್ಷದಲ್ಲಿ ದೇಶದ 100 ನಗರಗಳಲ್ಲಿ 5 ಸಾವಿರ ಚಾರ್ಜಿಂಗ್ ಕೇಂದ್ರಗಳು ನಿರ್ಮಾಣ ಆಗಲಿವೆ ಎಂದು ತಿಳಿಸಿದ್ದಾರೆ.

ಈ ಹೈಪರ್‌ಚಾರ್ಜರ್ ನೆಟ್‌ವರ್ಕ್‌ಗಳು 18 ನಿಮಿಷಗಳಲ್ಲಿ ಶೇ 50ರಷ್ಟು ಚಾರ್ಜ್ ಮಾಡುವ ಸಾಮರ್ಥ್ಯ ಹೊಂದಿವೆ. ಮಾಲ್‌ಗಳು, ಐ.ಟಿ. ಪಾರ್ಕ್‌ಗಳು, ಕಚೇರಿ ಆವರಣಗಳು ಮತ್ತು ಕೆಫೆಗಳಲ್ಲಿ ಚಾರ್ಜಿಂಗ್ ಕೇಂದ್ರಗಳು ಇರಲಿವೆ. ಓಲಾ ಎಲೆಕ್ಟ್ರಿಕ್ ಆ್ಯಪ್ ಮೂಲಕ ಚಾರ್ಜಿಂಗ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಆಗಿಂದಾಗ್ಗೆ ಪಡೆಯಬಹುದು.

ಪಾಕ್ ನುಸುಳುಕೋರರ ಯತ್ನ ವಿಫಲ

ಚಂಡೀಗಡ (ಪಿಟಿಐ): ಪಂಜಾಬ್‌ನ ಪಠಾಣ್‌ಕೋಟ್ ಜಿಲ್ಲೆಯಲ್ಲಿರುವ ಅಂತರರಾಷ್ಟ್ರೀಯ ಗಡಿ ಮೂಲಕ ದೇಶದೊಳಗೆ ಪ್ರವೇಶಿಸುವ ಪಾಕಿಸ್ತಾನದ ಮೂವರು ನುಸುಳುಕೋರರ ಯತ್ನವನ್ನು ಬಿಎಸ್‌ಎಫ್ ವಿಫಲಗೊಳಿಸಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದರು.

ಪಾಕಿಸ್ತಾನದ ಮೂವರು ಬುಧವಾರ ರಾತ್ರಿ 10.15ರ ವೇಳೆಗೆ ಗಡಿಯಲ್ಲಿ ಸಂಶಯಾಸ್ಪದ ರೀತಿಯಲ್ಲಿ ಓಡಾಡುತ್ತಿದ್ದುದನ್ನು ಪಹರಿಪುರ ಗಡಿ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಯೋಧರು, ಗಮನಿಸಿದರು. ನಂತರ ಗುಂಡು ಹಾರಿಸಿ, ಒಳನುಸುಳುವ ಅವರ ಯತ್ನವನ್ನು ವಿಫಲಗೊಳಿಸಿದರು ಎಂದು ಅಧಿಕಾರಿಗಳು ಹೇಳಿದರು.

ಬಿಎಸ್‌ಎಫ್ ಯೋಧರು ಹಾಗೂ ಪಂಜಾಬ್ ಪೊಲೀಸರು ಆ ಪ್ರದೇಶದಲ್ಲಿ ಜಂಟಿ ಶೋಧ ಕಾರ್ಯ ಕೈಗೊಂಡಿದ್ದಾರೆ ಎಂದೂ ಅಧಿಕಾರಿಗಳು ಹೇಳಿದರು.

ಸೆನ್ಸೆಕ್ಸ್ 375 ಅಂಶ ಏರಿಕೆ

ಮುಂಬೈ (ಪಿಟಿಐ): ಎರಡು ದಿನಗಳಿಂದ ಇಳಿಮುಖವಾಗಿದ್ದ ಷೇರುಪೇಟೆಗಳಲ್ಲಿನ ವಹಿವಾಟು ಗುರುವಾರ ಚೇತರಿಕೆಯ ಹಾದಿಗೆ ಮರಳಿತು. ಬ್ಯಾಂಕ್, ಹಣಕಾಸು ವಲಯದ ಷೇರುಗಳ ಬೆಲೆ ಏರಿಕೆಯು ಸಕಾರಾತ್ಮಕ ವಹಿವಾಟಿಗೆ ಕಾರಣವಾಯಿತು.

ವಹಿವಾಟಿನ ಆರಂಭದಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 501 ಅಂಶ ಇಳಿಕೆ ಕಂಡಿತ್ತು. ವಹಿವಾಟಿನ ಅಂತ್ಯದ ವೇಳೆಗೆ 375 ಅಂಶಗಳ ಏರಿಕೆಯೊಂದಿಗೆ 48,081 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 110 ಅಂಶ ಏರಿಕೆಯಾಗಿ 14,406 ಅಂಶಗಳಿಗೆ ತಲುಪಿತು.

ದಿನದ ವಹಿವಾಟಿನಲ್ಲಿ ಐಸಿಐಸಿಐ ಬ್ಯಾಂಕ್ ಷೇರು ಶೇಕಡ 3.60ರಷ್ಟು ಏರಿಕೆ ಕಂಡಿತು. ಎಚ್‌ಡಿಎಫ್‌ಸಿ, ಬಜಾಜ್ ಆಟೊ, ಎಚ್‌ಡಿಎಫ್‌ಸಿ ಬ್ಯಾಂಕ್, ಎಸ್‌ಬಿಐ, ಕೋಟಕ್ ಬ್ಯಾಂಕ್, ಬಜಾಜ್ ಫೈನಾನ್ಸ್ ಮತ್ತು ಎಕ್ಸಿಸ್ ಬ್ಯಾಂಕ್ ಷೇರುಗಳ ಬೆಲೆಯಲ್ಲಿಯೂ ಏರಿಕೆ ಆಗಿದೆ.

ಕೋವಿಡ್–19 ಪ್ರಕರಣಗಳ ಸಂಖ್ಯೆ ಇಳಿಮುಖ ಆಗುವವರೆಗೂ ಷೇರುಪೇಟೆಯಲ್ಲಿ ಚಂಚಲತೆ ಮುಂದುವರಿಯುವ ನಿರೀಕ್ಷೆ ಇದೆ ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಯೋಜನಾ ಮುಖ್ಯಸ್ಥ ವಿನೋದ್ ಮೋದಿ ಹೇಳಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 6 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹ 74.94ರಂತೆ ವಿನಿಮಯಗೊಂಡಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	340
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-50500
ಚಿತ್ರದುರ್ಗ	
ಆಪಿ	40800-41200
ಬೆಟ್ಟೆ	33139-33569
ಕೆಂಪುಗೋಟು	28729-29179
ರಾಶಿ	40300-40700
ಕುಮಟ	
ಚಿಪ್ಪು	25600-31690
ಕೋಕ	17205-27160
ಹಳೆಚಾಲಿ	45000-49000
ಹೊಸಚಾಲಿ	35000-40000
ಪುತ್ತೂರು	
ಕೋಕ	9500-24000
ಹೊಸತು	28500-41000
ಸಿದ್ದಾಪುರ	
ಬಿಳಿಗೋಟು	26109-30899
ಚಾಲಿ	33869-35509
ಕೋಕ	18899-28799
ಕೆಂಪುಗೋಟು	25999-28689
ರಾಶಿ	38769-41199
ತಟ್ಟಿಬೆಟ್ಟೆ	38609-34909
ಯಲ್ಲಾಪುರ	
ಬಿಳಿಗೋಟು	25601-31299
ಚಾಲಿ	31790-36440
ಕೋಕ	18899-29122
ಕೆಂಪುಗೋಟು	26899-32499
ರಾಶಿ	39990-45629
ತಟ್ಟಿಬೆಟ್ಟೆ	33699-39340
ಶಿವಮೊಗ್ಗ	
ಬೆಟ್ಟೆ	40099-43368
ಗೊರಬಲು	24000-31099
ರಾಶಿ	36009-40819
ಸರಕು	49000-76196
ಸಾಗರ	
ಬಿಳಿಗೋಟು	20190-29699
ಚಾಲಿ	26009-34511
ಕೋಕ	13899-29899
ಕೆಂಪುಗೋಟು	32929-31699
ರಾಶಿ	32699-42710
ಸಿಪ್ಪೆಗೋಟು	7869-17800

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	---	9975	--- ಸೆಂಟ್ಸ್
ಎಸಿ	---	---	3900	
ಆರ್‌ಪಿ	---	---	5125	
ಆರ್‌ಸಿ	---	---	2900	--- ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

22-4-2021

ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9500-9600
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9100-9200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1422 (1405)
ಪಾಮ್ ವಾರದ ಡೆಲಿವರಿ	1328 (1328)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1670)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,550 (47,700)

ಬೆಳ್ಳಿ ಕೆ.ಜಿ 69,750 (69,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪೌಷ್ಟಿಕ ಆಹಾರ ಸೇವಿಸಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ ಮಿಂಚಿದ ವಿರಾಟ್ ಕೊಹ್ಲಿ; ಬೆಂಗಳೂರಿಗೆ ಸತತ ನಾಲ್ಕನೇ ಜಯ

ದೇವದತ್ತ ಶತಕ; ಆರ್‌ಸಿಬಿ ಅಜೇಯ

ಶತಕ ಸಿಡಿಸಿದ ದೇವದತ್ತ ಪಡಿಕ್ಕಲ್ (ಬಲ) ನಾಯಕ ವಿರಾಟ್ ಕೊಹ್ಲಿ ಜೊತೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಮುಂಬೈ: ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಆರಂಭವಾಗುವ ಮುನ್ನ ಕೊರೊನಾ ಸೋಂಕಿನಿಂದ ಚೇತರಿಸಿಕೊಂಡು ಬಂದಿದ್ದ ದೇವದತ್ತ ಪಡಿಕ್ಕಲ್ ಗುರುವಾರ ರಾತ್ರಿ ಅಬ್ಬರದ ಶತಕ ದಾಖಲಿಸಿದರು.

ಕನ್ನಡಿಗ ದೇವದತ್ತ (ಅಜೇಯ 101) ನಾಯಕ ವಿರಾಟ್ ಕೊಹ್ಲಿ (ಅಜೇಯ 72) ಜೊತೆಗೆ ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 10 ವಿಕೆಟ್‌ಗಳ ಜಯದ ಕಾಣಿಕೆ ನೀಡಿದರು. ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ್ ರಾಯಲ್ಸ್ ತಂಡ ಮತ್ತೊಂದು ಸೋಲಿನ ಕಹಿ ಅನುಭವಿಸಿತು.

ಗೆಲುವಿಗಾಗಿ 178 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಆರ್‌ಸಿಬಿಯು 16.3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 181 ರನ್ ಗಳಿಸಿತು. ಇದರೊಂದಿಗೆ ಟೂರ್ನಿಯಲ್ಲಿ ಸತತ ನಾಲ್ಕನೇ ಜಯ ದಾಖಲಿಸಿ, ಅಜೇಯ ಓಟ ಮುಂದುವರಿಸಿತು.

ಮಾರ್ಚ್ ತಿಂಗಳ ಕೊನೆಯ ವಾರದಲ್ಲಿ ಕೊರೊನಾ ಸೋಂಕಿಗೊಳಗಾಗಿದ್ದ ದೇವದತ್ತ ಬೆಂಗಳೂರಿನ ತಮ್ಮ ಮನೆಯಲ್ಲಿ ಕ್ವಾರಂಟೈನ್‌ನಲ್ಲಿದ್ದರು. ನಂತರ ಚೆನ್ನೈಗೆ ಐಪಿಎಲ್‌ನಲ್ಲಿ ಆಡಲು ತೆರಳಿದ್ದರು. ಆದರೆ, ಮೊದಲ ಪಂದ್ಯದಲ್ಲಿ ಆಡಿರಲಿಲ್ಲ. ಕಳೆದೆರಡು ಪಂದ್ಯಗಳಲ್ಲಿ ಲಯ ಕಂಡುಕೊಳ್ಳಲು ಬಹಳಷ್ಟು ಪ್ರಯತ್ನ ಪಟ್ಟಿದ್ದರು. ಆದರೆ ಕಡೆಗೂ ತಮ್ಮ ನೈಜ ಆಟಕ್ಕೆ ಮರಳಿದ್ದಲ್ಲದೇ, ಐಪಿಎಲ್‌ನಲ್ಲಿ ತಮ್ಮ ಚೊಚ್ಚಲ ಶತಕ ದಾಖಲಿಸಿದರು.

ಕೇವಲ 51 ಎಸೆತಗಳಲ್ಲಿ ಅವರು ನೂರರ ಗಡಿ ದಾಟಿದರು. ಅದರಲ್ಲಿ ಆರು ಭರ್ಜರಿ ಸಿಕ್ಸರ್‌ಗಳಿದ್ದವು. 11 ಬೌಂಡರಿಗಳೂ ಸೇರಿದ್ದವು. ಇನಿಂಗ್ಸ್ ಆರಂಭದಿಂದಲೇ ವಿರಾಟ್ ಕೊಹ್ಲಿಗಿಂತಲೂ ಹೆಚ್ಚು ಆಕ್ರಮಣಕಾರಿ ಶೈಲಿಯಲ್ಲಿ ದೇವದತ್ತ ಬ್ಯಾಟಿಂಗ್ ಮಾಡಿದರು.

20 ವರ್ಷದ ಎಡಗೈ ಬ್ಯಾಟ್ಸ್‌ಮನ್ ದೇವದತ್ತಗೆ ಹೆಚ್ಚು ಸ್ಟ್ರೈಕ್ ಬಿಟ್ಟು ಕೊಟ್ಟ ಕೊಹ್ಲಿ ನಿಧಾನವಾಗಿ ತಮ್ಮ ಲಯ ಕಂಡುಕೊಂಡರು. ಇಬ್ಬರೂ ಸೇರಿ ರಾಜಸ್ಥಾನ್ ತಂಡದ ಬೌಲರ್‌ಗಳ ಬೆವರಿಳಿಸಿದರು. ಈಚೆಗೆ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿಯೂ ದೇವದತ್ತ ರನ್‌ಗಳ ಹೊಳೆ ಹರಿಸಿದ್ದರು. ಹೋದ ವರ್ಷ ಯುಎಇಯಲ್ಲಿ ನಡೆದಿದ್ದ ಐಪಿಎಲ್‌ನಲ್ಲಿಯೂ ಮಿಂಚಿದ್ದರು.

ಸಿರಾಜ್ ಮಿಂಚು: ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಆರ್‌ಸಿಬಿ ತಂಡಕ್ಕೆ ಮಧ್ಯಮವೇಗಿ ಮೊಹಮ್ಮದ್ ಸಿರಾಜ್ ಉತ್ತಮ ಆರಂಭ ಒದಗಿಸಿದರು. ಸಿರಾಜ್ ಮತ್ತು ಕೈಲ್ ಜೆಮಿಸನ್ ಅವರ ಶಿಸ್ತಿನ ದಾಳಿಗೆ ರಾಜಸ್ಥಾನ ತಂಡವು ಕೇವಲ 18 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಪರದಾಡಿತು.

ಈ ಸಂದರ್ಭದಲ್ಲಿ ರಾಯಲ್ಸ್ ತಂಡದ ಶಿವಂ ದುಬೆ ಮತ್ತು ರಿಯಾನ್ ಪರಾಗ್ ಚೇತರಿಕೆ ನೀಡಿದರು. ಐದನೇ ವಿಕೆಟ್ ಜೊತೆಯಾಟದಲ್ಲಿ 66 ರನ್ ಸೇರಿಸಿದರು. ಈ ಜೊತೆಯಾಟವನ್ನು ಮಧ್ಯಮವೇಗಿ ಹರ್ಷಲ್ ಪಟೇಲ್ ಮುರಿದರು.

ಆದರೆ, ಆಗ ಕ್ರೀಸ್‌ಗೆ ಬಂದ ರಾಹುಲ್ ತೆವಾಟಿಯಾ ಆರ್‌ಸಿಬಿ ತಂಡಕ್ಕೆ ತಿರುಗೇಟು ಕೊಟ್ಟರು. ಸಿಕ್ಸರ್ ಹೊಡೆಯುವ ಮೂಲಕ ಖಾತೆ ತೆರೆದರು. ಶಿವಂ ಜೊತೆಗೆ ಆರನೇ ವಿಕೆಟ್ ಜೊತೆಯಾಟದಲ್ಲಿ 24 ರನ್ ಕಲೆಹಾಕಿದರು. ದುಬೆ ವಿಕೆಟ್ ಗಳಿಸಿದ ಕೇನ್ ರಿಚರ್ಡ್ಸನ್ ಜೊತೆಯಾಟವನ್ನು ಮುರಿದರು. ಆದರೆ, ರಾಹುಲ್ ಅಬ್ಬರ ತಗ್ಗಲಿಲ್ಲ. ಕೇವಲ 23 ಎಸೆತಗಳಲ್ಲಿ 40 ರನ್ ಗಳಿಸಿದರು. ಅವರಿಗೂ ಮೊಹಮ್ಮದ್ ಸಿರಾಜ್ ತಮ್ಮ ಎರಡನೇ ಸ್ಪೆಲ್‌ನಲ್ಲಿ ಪೆವಿಲಿಯನ್ ದಾರಿ ತೋರಿಸಿದರು. ಕೊನೆಯ ಓವರ್‌ನಲ್ಲಿ ಕ್ರಿಸ್ ಮೊರಿಸ್ ಮತ್ತು ಚೇತನ್ ಸಕಾರಿಯಾ ವಿಕೆಟ್ ಗಳಿಸಿದ ಹರ್ಷಲ್ ಪಟೇಲ್ ಪರ್ಪಲ್ ಕ್ಯಾಪ್ ಉಳಿಸಿಕೊಂಡರು.

ಸಿರಾಜ್ ಮತ್ತು ಹರ್ಷಲ್ ಅವರ ಶ್ರಮ ವ್ಯರ್ಥವಾಗದಂತೆ ದೇವದತ್ತ ಮತ್ತು ವಿರಾಟ್ ನೋಡಿಕೊಂಡರು.

ಸ್ಕೋರ್ ಕಾರ್ಡ್

ರಾಜಸ್ಥಾನ್ ರಾಯಲ್ಸ್ 9ಕ್ಕೆ 177 (20 ಓವರ್)

ಬಟ್ಲರ್ ಬಿ ಸಿರಾಜ್ 8 (8 ಎ, 4x2)
ಮನನ್ ವೊಹ್ರಾ ಸಿ ರಿಚರ್ಡ್ಸನ್ ಬಿ ಜೆಮೀಸನ್ 7 (9 ಎ, 4x1)
ಸ್ಯಾಮ್ಸನ್ ಸಿ ಮ್ಯಾಕ್ಸ್‌ವೆಲ್ ಬಿ ಸುಂದರ್ 21 (18 ಎ, 4x2, 6x1)
ಮಿಲ್ಲರ್ ಎಲ್‌ಬಿಡಬ್ಲ್ಯು ಸಿರಾಜ್ 0 (2 ಎ)
ಶಿವಂ ದುಬೆ ಸಿ ಮ್ಯಾಕ್ಸ್‌ವೆಲ್ ಬಿ ರಿಚರ್ಡ್ಸನ್ 46 (32 ಎ, 4x5, 6x2)
ಪರಾಗ್ ಸಿ ಚಾಹಲ್ ಬಿ ಪಟೇಲ್ 25 (16 ಎ, 4x4)
ತೆವಾಥಿಯಾ ಸಿ ಶಹಬಾಜ್ ಬಿ ಸಿರಾಜ್ 40 (23 ಎ, 4x4, 6x2)
ಮೊರಿಸ್ ಸಿ ಚಾಹಲ್ ಬಿ ಪಟೇಲ್ 10 (7 ಎ, 6x1)
ಶ್ರೇಯಸ್ ಔಟಾಗದೆ 7 (4 ಎ, 6x1)
ಸಕಾರಿಯ ಸಿ ಡಿವಿಲಿಯರ್ಸ್ ಬಿ ಪಟೇಲ್ 0 (1 ಎ)
ಮುಸ್ತಫಿಜುರ್ ಔಟಾಗದೆ 0 (0 ಎ)-
ಇತರೆ (ಬೈ 5, ವೈಡ್ 8) 13
ವಿಕೆಟ್ ಪತನ: 1-14 (ಜೋಸ್ ಬಟ್ಲರ್, 2.3), 2-16 (ಮನನ್ ವೊಹ್ರಾ, 3.5), 3-18 (ಡೇವಿಡ್ ಮಿಲ್ಲರ್, 4.3), 4-43 (ಸಂಜು ಸ್ಯಾಮ್ಸನ್, 7.2), 5-109 (ರಿಯಾನ್ ಪರಾಗ್, 13.3), 6-133 (ಶಿವಂ ದುಬೆ, 15.3), 7-170 (ರಾಹುಲ್ ತೆವಾಥಿಯಾ, 18.6), 8-170 (ಕ್ರಿಸ್ ಮೊರಿಸ್, 19.1), 9-170 (ಚೇತನ್ ಸಕಾರಿಯ, 19.2)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–27–3, ಕೈಲ್ ಜೆಮೀಸನ್ 4–0–28–1, ಕೇನ್ ರಿಚರ್ಡ್ಸನ್ 3–0–29–1, ಯಜುವೇಂದ್ರ ಚಾಹಲ್ 2–0–18–0, ವಾಷಿಂಗ್ಟನ್ ಸುಂದರ್ 3–0–23–1, ಹರ್ಷಲ್ ಪಟೇಲ್ 4–0–47–3

ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿಕೆಟ್ ನಷ್ಟವಿಲ್ಲದೆ 181 (16.3 ಓವರ್)

ವಿರಾಟ್ ಕೊಹ್ಲಿ ಔಟಾಗದೆ 72 (47ಎ, 4X6, 6X3)
ದೇವದತ್ತ ಪಡಿಕ್ಕಲ್ ಔಟಾಗದೆ 101 (52 ಎ, 4X11, 6X6)
ಇತರೆ (ಬೈ 1, ಲೆಗ್ ಬೈ 1, ವೈಡ್ 6) 8
ಬೌಲಿಂಗ್: ಶ್ರೇಯಸ್ ಗೋಪಾಲ್ 3–0–35–0, ಚೇತನ್ ಸಕಾರಿಯ 4–0–35–0, ಕ್ರಿಸ್ ಮೊರಿಸ್ 3–0–38–0, ಮುಸ್ತಫಿಜುರ್ ರಹಿಮಾನ್ 3.3–0–34–0, ರಾಹುಲ್ ತೆವಾಥಿಯಾ 2–0–23–0, ರಿಯಾನ್ ಪರಾಗ್ 1–0–14–0

ಫಲಿತಾಂಶ: ರಾಯಲ್ ಚಾಲೆಂಜರ್ಸ್‌ಗೆ 10 ವಿಕೆಟ್ ಜಯ

ವಿರಾಟ್ ಕೊಹ್ಲಿ 6 ಸಾವಿರ ರನ್ ಸರದಾರ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ವಿರಾಟ್ ಕೊಹ್ಲಿ ಅವರು ಐಪಿಎಲ್ ಟೂರ್ನಿಯಲ್ಲಿ ಆರು ಸಾವಿರಕ್ಕೂ ಹೆಚ್ಚು ರನ್ ಗಳಿಸಿದ ದಾಖಲೆ ಮಾಡಿದರು. ಈ ಸಾಧನೆ ಮಾಡಿದ ಮೊದಲಿಗರೆಂಬ ಹೆಗ್ಗಳಿಕೆಯೂ ಅವರದ್ದಾಗಿದೆ. ಗುರುವಾರದ ಪಂದ್ಯದಲ್ಲಿ ಅಜೇಯ 72 ರನ್ ಗಳಿಸಿದರು. ಇದರೊಂದಿಗೆ ಅವರ ಖಾತೆಯಲ್ಲಿ ಈಗ 6021 ರನ್‌ಗಳು ದಾಖಲಾಗಿವೆ. ಒಟ್ಟು 196 ಪಂದ್ಯಗಳಲ್ಲಿ ಅವರು ಈ ಸಾಧನೆ ಮಾಡಿದ್ದಾರೆ. ಇದರಲ್ಲಿ ಐದು ಶತಕ ಮತ್ತು 40 ಅರ್ಧಶತಕಗಳು ಸೇರಿವೆ.

200ನೇ ಪಂದ್ಯ: ಆರ್‌ಸಿಬಿ ತಂಡವು ಐಪಿಎಲ್‌ನಲ್ಲಿ ಒಟ್ಟು 200 ಪಂದ್ಯಗಳನ್ನು ಆಡಿದ ದಾಖಲೆಯನ್ನೂ ಈ ಸಂದರ್ಭದಲ್ಲಿ ಮಾಡಿತು.

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ರಾಯಲ್ ಚಾಲೆಂಜರ್ಸ್	4	4	-	-	-	8
ಚೆನ್ನೈ ಸೂಪರ್ ಕಿಂಗ್ಸ್	4	3	1	-	-	6
ಡೆಲ್ಲಿ ಕ್ಯಾಪಿಟಲ್ಸ್	4	3	1	-	-	6
ಮುಂಬೈ ಇಂಡಿಯನ್ಸ್	4	2	2	-	-	4
ಸನ್‌ರೈಸರ್ಸ್	4	1	3	-	-	2
ನೈಟ್ ರೈಡರ್ಸ್	4	1	3	-	-	2
ಪಂಜಾಬ್ ಕಿಂಗ್ಸ್	4	1	3	-	-	2
ರಾಜಸ್ಥಾನ್ ರಾಯಲ್ಸ್	4	1	3	-	-	2

* ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತ್ರೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	231
ಮ್ಯಾಕ್ಸ್‌ವೆಲ್	ಬೆಂಗಳೂರು	176
ಜಾನಿ ಬೆಸ್ಟೊ	ಹೈದರಾಬಾದ್	173

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಬೆಂಗಳೂರು	12
ದೀಪಕ್ ಚಾಹರ್	ಚೆನ್ನೈ	8
ಆವೇಶ್ ಖಾನ್	ಡೆಲ್ಲಿ	8

ಮಹಿಳಾ ಬಾಕ್ಸರ್‌ಗಳ ದಾಖಲೆ

ನವದೆಹಲಿ (ಪಿಟಿಐ): ಭಾರತದ ಮಹಿಳಾ ಬಾಕ್ಸರ್‌ಗಳು ಪೋಲೆಂಡ್‌ನ ಕೀಲ್ಸೆಯಲ್ಲಿ ನಡೆಯುತ್ತಿರುವ ಯೂತ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಏಳು ಚಿನ್ನದ ಪದಕ ಗೆದ್ದು ದಾಖಲೆ ಮಾಡಿದ್ದಾರೆ. ಫೈನಲ್ ಪ್ರವೇಶಿಸಿದ ಎಲ್ಲ ಏಳು ಮಂದಿಯೂ ಎದುರಾಳಿಯನ್ನು ಮಣಿಸಿದರು. ಈ ಮೂಲಕ ಚಾಂಪಿಯನ್‌ಷಿಪ್‌ನಲ್ಲಿ ಈ ವರೆಗಿನ ಶ್ರೇಷ್ಠ ಸಾಧನೆ ಮಾಡಿದರು.

48 ಕೆಜಿಯಲ್ಲಿ ಗೀತಿಕಾ, 51 ಕೆಜಿಯಲ್ಲಿ ಬೇಬಿರೋಜಿಸಾನ ಚಾನು, 57 ಕೆಜಿಯಲ್ಲಿ ಪೂನಂ, 60 ಕೆಜಿಯಲ್ಲಿ ವಿಂಕಾ, 69 ಕೆಜಿಯಲ್ಲಿ ಅರುಂಧತಿ ಚೌಧರಿ, 75 ಕೆಜಿಯಲ್ಲಿ ತೊಕ್ಚೊಂ ಸನಾಮಚು ಚಾನು ಮತ್ತು 81+ ವಿಭಾಗದಲ್ಲಿ ಅಲ್ಫಿಯಾ ಪಠಾಣ್ ಚಾಂಪಿಯನ್ ಪಟ್ಟಕ್ಕೇರಿದರು.

ಪೋಲೆಂಡ್‌ನ ನತಾಲಿಯಾ ಕುಜೆವ್‌ಸ್ಕ ಎದುರು 5–0ಯಿಂದ ಗೀತಿಕಾ ಗೆಲುವು ಸಾಧಿಸಿದರೆ ರಷ್ಯಾದ ವಲೇರಿಯಾ ಲಿಂಕೋವಾ ವಿರುದ್ಧ ಬೇಬಿರೋಜಿಸಾನ ಇದೇ ಅಂತರದಲ್ಲಿ ಜಯ ಗೆದ್ದರು. ಫ್ರಾನ್ಸ್‌ನ ಸ್ಥೆಯಿಲಿನ್ ಗ್ರೋಸಿ ವಿರುದ್ಧ ಪೂನಂ 5–0ಯಿಂದ ಜಯ ಗಳಿಸಿದರೆ, ವಿಂಕಾ ಕಜಕಸ್ತಾನದ ಜುಲ್ದಿಜ್ ವಿರುದ್ಧ ಮೇಲುಗೈ ಸಾಧಿಸಿದರು. ಅರುಂಧತಿ ಪೋಲೆಂಡ್‌ನ ಬರ್ಬಾರ ಅವರನ್ನು 5–0ಯಿಂದ ಮಣಿಸಿದರು. ಚಾನು ಅವರಿಗೆ ಕಜಕಸ್ತಾನದ ಡಾನಾ ಡಿಡೆ ಭಾರಿ ಪೈಪೋಟಿ ನೀಡಿದರು. ಕೊನೆಯಲ್ಲಿ ಭಾರತದ ಬಾಕ್ಸರ್ 3–2ರಲ್ಲಿ ಗೆಲುವು ತಮ್ಮದಾಗಿಸಿಕೊಂಡರು. ದಿನದ ಕೊನೆಯ ಬೌಟ್‌ನಲ್ಲಿ ಅಲ್ಫಿಯಾ, ಮಾಲ್ಡೋವದ ದರಿಯಾ ಕೊಜೊರೊವ್ ವಿರುದ್ಧ 5–0ಯಿಂದ ಗೆದ್ದರು.

2017ರಲ್ಲಿ ಗುವಾಹಟಿಯಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಐದು ಚಿನ್ನ ಗಳಿಸಿದ್ದು ಭಾರತದ ಈ ವರೆಗಿನ ಉತ್ತಮ ಸಾಧನೆಯಾಗಿತ್ತು.

ಪುರುಷರ ವಿಭಾಗದಲ್ಲಿ ಸಚಿನ್ (56 ಕೆಜಿ) ಭಾರತದ ಪರ ಫೈನಲ್ ಪ್ರವೇಶಿರುವ ಏಕೈಕ ಬಾಕ್ಸರ್ ಆಗಿದ್ದು ಶುಕ್ರವಾರ ಪ್ರಶಸ್ತಿ ಸುತ್ತಿನ ಹಣಾಹಣಿ ನಡೆಯಲಿದೆ.

ಮುಂಬೈ–ಪಂಜಾಬ್‌ಗೆ ಜಯದ ತವಕ

ರೋಹಿತ್ ಶರ್ಮಾ

ಪಂದ್ಯಗಳು 26

ಮುಂಬೈ ಗೆಲುವು	14
ಪಂಜಾಬ್ ಜಯ	12

ಮುಖಾಮುಖಿಯಲ್ಲಿ ಗರಿಷ್ಠ ಮೊತ್ತ

ಪಂಜಾಬ್	230
ಮುಂಬೈ	223

ಕನಿಷ್ಠ ಮೊತ್ತ

ಪಂಜಾಬ್	119
ಮುಂಬೈ	87

ಆರಂಭ: ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಚೆನ್ನೈ (ಪಿಟಿಐ): ಸತತ ಮೂರು ಸೋಲುಗಳಿಂದ ಕಂಗೆಟ್ಟಿರುವ ಪಂಜಾಬ್ ಕಿಂಗ್ಸ್ ತಂಡದ ಮುಂದೆ ಈಗ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡದ ಸವಾಲು ಎದುರಿಸಲಿದೆ.

ಚೆಪಾಕ್‌ನಲ್ಲಿ ಶುಕ್ರವಾರ ಐಪಿಎಲ್ ಟೂರ್ನಿಯಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿವೆ. ಆಡಿರುವ ನಾಲ್ಕು ಪಂದ್ಯಗಳಲ್ಲಿ ಒಂದರಲ್ಲಿ ಗೆದ್ದಿರುವ ಕೆ.ಎಲ್. ರಾಹುಲ್ ಬಳಗವು ಸತತ ಸೋಲುಗಳ ಕಹಿ ಉಂಡಿದೆ. ಬುಧವಾರ ನಡೆದಿದ್ದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಎದುರು ಪಂಜಾಬ್ ತಂಡವು 120 ರನ್‌ಗಳ ಸಾಧಾರಣ ಮೊತ್ತಕ್ಕೆ ಕುಸಿದಿತ್ತು.

ತಂಡದ ಆರಂಭಿಕ ಜೋಡಿ ರಾಹುಲ್ ಮತ್ತು ಮಯಂಕ್ ಅಗರವಾಲ್ ಉತ್ತಮ ಆರಂಭ ನೀಡದಿದ್ದರೆ ಕ್ರಿಸ್ ಗೇಲ್ ಮತ್ತು ನಿಕೋಲಸ್ ಪೂರನ್ ತಂಡಕ್ಕೆ ಬಲ ತುಂಬಬೇಕು.

ಆದರೆ, ಕಳೆದ ಪಂದ್ಯದಲ್ಲಿ ಈ ರೀತಿಯಾಗಿರಲಿಲ್ಲ. ರಾಹುಲ್ ವೈಫಲ್ಯ ಅನುಭವಿಸಿದ್ದರು. ಅವರ ಹಿಂದೆಯೇ ಗೇಲ್, ಪೂರನ್ ಕೂಡ ಅಗ್ಗದ ಮೊತ್ತಕ್ಕೆ ಕೈಚೆಲ್ಲಿದ್ದರು. ಆದರೆ ದೀಪಕ್ ಹೂಡಾ ಭರವಸೆಯ ಆಟಗಾರನಾಗಿದ್ದಾರೆ. ಅವರು ತಮ್ಮ ಆಟದಲ್ಲಿ ಸ್ಥಿರತೆ ಕಾಪಾಡಿಕೊಂಡರೆ ತಂಡದ ಮಧ್ಯಮಕ್ರಮಾಂಕಕ್ಕೆ ಬಲ ಬರಲಿದೆ. ಬೌಲಿಂಗ್‌ನಲ್ಲಿ ಜೇ ರಿಚರ್ಡ್ಸನ್ ಮತ್ತು ರಿಲಿ ಮೆರಿಡಿತ್ ನಿರೀಕ್ಷೆಗೆ ತಕ್ಕಂತೆ ಆಟವಾಡುತ್ತಿಲ್ಲ. ಹೆಚ್ಚು ದುಬಾರಿಯಾಗುತ್ತಿದ್ದಾರೆ. ಅದ್ದರಿಂದ ಎರಡೂ ವಿಭಾ ಗಗಳಲ್ಲಿ ತಂಡವು ಕೆಲವು ಬದಲಾವಣೆಗಳೊಂದಿಗೆ ಕಣಕ್ಕಿಳಿಯಬಹುದು.

ಮುಂಬೈ ತಂಡವು ಎಲ್ಲ ರೀತಿಯಿಂದಲೂ ಬಲಿಷ್ಠವಾಗಿದೆ. ಆದರೆ ಸ್ಥಿರತೆ ಕಾಪಾಡಿಕೊಳ್ಳುವಲ್ಲಿ ಸಫಲವಾಗುತ್ತಿಲ್ಲ. ರೋಹಿತ್ ಶರ್ಮಾ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡಿದ್ದರು. ಆದರೆ ಉಳಿದ ಪಂದ್ಯಗಳಲ್ಲಿ ಆ ರೀತಿಯ ಬ್ಯಾಟಿಂಗ್ ಮಾಡುವಲ್ಲಿ ವಿಫಲರಾದರು. ಸೂರ್ಯಕುಮಾರ್ ಯಾದವ್ ಮತ್ತು ಇಶಾನ್ ಕಿಶನ್ ಅವರೂ ತಮ್ಮ ನೈಜ ಲಯದಲ್ಲಿ ಇಲ್ಲ. ಕೀರನ್ ಪೊಲಾರ್ಡ್, ಹಾರ್ದಿಕ್ ಮತ್ತು ಕೃಣಾಲ್ ಪಾಂಡ್ಯ ಅವರ ಆಟದ ಮೇಲೆಯೇ ಹೆಚ್ಚು ಅವಲಂಬಿತವಾಗಿದೆ.

ಟಿ20 ವಿಶ್ವಕಪ್‌ಗೆ ಐಪಿಎಲ್ ‘ಕ್ಲಸ್ಟರ್ ಕಾರ್‌ವಾನ್’?

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯಗಳ ಆಯೋಜನೆಗೆ ಅನುಸರಿಸಲಾಗುತ್ತಿರುವ ಅವಳಿನಗರ ‘ಕ್ಲಸ್ಟರ್ ಕಾರ್‌ವಾನ್‘ ಮಾದರಿಯು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ (ಐಸಿಸಿ) ಗಮನ ಸೆಳೆದಿದೆ.

ಇದೆ ವರ್ಷದ ಅಕ್ಟೋಬರ್‌ನಲ್ಲಿ ಭಾರತದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಇದೇ ಪದ್ಧತಿಯನ್ನು ಜಾರಿಗೊಳಿಸುವತ್ತ ಒಲವು ತೋರಿಸಿದೆ.

ಐಸಿಸಿಯ ಬಯೋ ಸುರಕ್ಷತಾ ವಿಭಾಗದ ಮುಖ್ಯಸ್ಥ ಡೇವ್ ಮಸ್ಕರ್ ನೇತೃತ್ವದ ನಿಯೋಗವು ಇದೇ 26ರಂದು ಭಾರತಕ್ಕೆ ಭೇಟಿ ನೀಡಲಿದೆ. ಈ ಸಂದರ್ಭದಲ್ಲಿ ಇಲ್ಲಿ ಅಧ್ಯಯನ ನಡೆಸಲಿದೆ.

ಕೋವಿಡ್ ಸೃಷ್ಟಿಸಿರುವ ಬಿಕ್ಕಟ್ಟಿನ ನಡುವೆಯೇ ನಡೆಯುತ್ತಿರುವ ಐಪಿಎಲ್‌ನ ವೇಳಾಪಟ್ಟಿಯನ್ನು ವಿಭಿನ್ನವಾಗಿ ರಚಿಸಲಾಗಿದೆ. ಮುಂಬೈ, ಚೆನ್ನೈ, ಬೆಂಗಳೂರು, ದೆಹಲಿ, ಅಹಮದಾಬಾದ್ ಮತ್ತು ಕೋಲ್ಕತ್ತ ನಗರಗಳಲ್ಲಿ ಪಂದ್ಯಗಳ ಆಯೋಜನೆಗೆ ಸಿದ್ಧತೆ ಮಾಡಲಾಗಿದೆ. ಮೊದಲ ಹಂತದಲ್ಲಿ ಚೆನ್ನೈ ಮತ್ತು ಮುಂಬೈನಲ್ಲಿ ಪಂದ್ಯಗಳು ನಡೆಯುತ್ತಿವೆ. ಈ ರೀತಿ ಎರಡು ನಗರಗಳಲ್ಲಿ ಪಂದ್ಯಗಳ ಆಯೋಜನೆ ಮಾಡುತ್ತಿರುವುದನ್ನು ಕ್ಲಸ್ಟರ್ ಕಾರ್‌ವಾನ್ ಎಂದು ಕರೆಯಲಾಗಿದ್ದು ಇದನ್ನು ಅನುಕರಿಸಲು ಐಸಿಸಿ ಮುಂದಾಗಿದೆ.

ಒಲಿಂಪಿಕ್ ಜ್ಯೋತಿಯಾತ್ರೆ: ಸಿಬ್ಬಂದಿಗೆ ಕೋವಿಡ್

ಟೋಕಿಯೊ (ಎಪಿ): ಒಲಿಂಪಿಕ್ಸ್ ಜ್ಯೋತಿಯಾತ್ರೆಯಲ್ಲಿ ಪಾಲ್ಗೊಂಡಿದ್ದ ಪೊಲೀಸ್ ಸಿಬ್ಬಂದಿಯೊಬ್ಬರಲ್ಲಿ ಕೋವಿಡ್ ಸೋಂಕು ಪತ್ತೆಯಾಗಿದೆ ಎಂದು ಟೋಕಿಯೊ ಒಲಿಂಪಿಕ್ಸ್ ಆಯೋಜಕರು ಗುರುವಾರ ತಿಳಿಸಿದ್ದಾರೆ. ಒಲಿಂಪಿಕ್ಸ್‌ಗೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಪತ್ತೆಯಾದ ಮೊದಲ ಸೋಂಕಿನ ಪ್ರಕರಣ ಇದಾಗಿದೆ.

ಇದೇ 17ರಂದು ನಡೆದ ಜ್ಯೋತಿಯಾತ್ರೆಯಲ್ಲಿ ಪಾಲ್ಗೊಂಡಿದ್ದ ಸಿಬ್ಬಂದಿಯಲ್ಲಿ ಕರ್ತವ್ಯ ಮುಗಿದ ಮರುದಿನ ಸೋಂಕು ಕಾಣಿಸಿಕೊಂಡಿದೆ. 30 ವರ್ಷದ ಪೊಲೀಸ್ ಜ್ಯೋತಿಯಾತ್ರೆಯ ನೈರುತ್ಯ ಕಗಾವ ಪ್ರಾಂತ್ಯದ ಲೆಗ್‌ನಲ್ಲಿ ವಾಹನ ಸಂಚಾರ ನಿಯಂತ್ರಣಕ್ಕೆ ನಿಯೋಜನೆಗೊಂಡಿದ್ದರು. ಕರ್ತವ್ಯ ಮುಗಿಸಿದ ನಂತರ ಅವರಲ್ಲಿ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡಿದ್ದವು. ಪರೀಕ್ಷಿಸಿದಾಗ ಸೋಂಕು ಪತ್ತೆಯಾಗಿತ್ತು.

ಲೈಂಗಿಕ ಕಿರುಕುಳ ಆರೋಪ: ಸಾಯ್ ಕೋಚ್ ಅಮಾನತು

ನವದೆಹಲಿ (ಪಿಟಿಐ): ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಬಂಧಿತ ಕೋಚ್ ಒಬ್ಬರನ್ನು ಭಾರತ ಕ್ರೀಡಾ ಪ್ರಾಧಿಕಾರ ಗುರುವಾರ ಅಮಾನತು ಮಾಡಿದೆ. ಅಮಾನತು ತಕ್ಷಣ ಜಾರಿಗೆ ಬಂದಿದ್ದು ತನಖೆಗೂ ಆದೇಶ ನೀಡಲಾಗಿದೆ.

ಯೋಜನಾ ಅಧಿಕಾರಿಯಾಗಿದ್ದು ನಂತರ ಅಥ್ಲೆಟಿಕ್ ಕೋಚ್ ಆದ ಈ ವ್ಯಕ್ತಿಗೆ 50 ವರ್ಷವಾಗಿದ್ದು ಸಿರಿಫೋರ್ಟ್ ಕ್ರೀಡಾ ಸಂಕೀರ್ಣದಲ್ಲಿ ಖಾಸಗಿಯಾಗಿ ತರಬೇತಿ ಪಡೆಯುತ್ತಿದ್ದ 13 ವರ್ಷದ ಬಾಲಕಿ ಮೇಲೆ ದೌರ್ಜನ್ಯ ಎಸಗಿದ ಆರೋಪದ ಮೇಲೆ ಪೋಕ್ಸೊ ಕಾಯ್ದೆಯಡಿ ಬಂಧಿಸಿ ತಿಹಾರ್ ಜೈಲಿಗೆ ಹಾಕಲಾಗಿದೆ.

ಕುಸ್ತಿ: ಅಮಿತ್‌ಗೆ ಒಲಿದ ಅದೃಷ್ಟ

ನವದೆಹಲಿ (ಪಿಟಿಐ): ಒಲಿಂಪಿಕ್ ಪದಕ ವಿಜೇತ ಸುಶೀಲ್ ಕುಮಾರ್ ಅವರ ಟೋಕಿಯೊ ಒಲಿಂಪಿಕ್ ಕನಸು ಭಗ್ನಗೊಂಡಿದೆ. ಒಲಿಂಪಿಕ್ಸ್ ವಿಶ್ವ ಅರ್ಹತಾ ಟೂರ್ನಿಗಾಗಿ ಗುರುವಾರ ಪ್ರಕಟಿಸಿರುವ ರಾಷ್ಟ್ರೀಯ ತಂಡದಿಂದ ಅವರನ್ನು ಕೈಬಿಡಲಾಗಿದೆ.

74 ಕೆಜಿ ವಿಭಾಗದಲ್ಲಿ ಏಷ್ಯನ್ ಚಾಂಪಿಯನ್ ಅಮಿತ್ ಧನಕಾರ್ ಪಾಲ್ಗೊಳ್ಳಲಿದ್ದಾರೆ.

ರಾಷ್ಟ್ರೀಯ ಚಾಂಪಿಯನ್ ಸಂದೀಪ್ ಮನ್ ಬದಲಿಗೆ ಅಮಿತ್ ಹೆಸರು ಸೇರಿಸಲಾಗಿದೆ. ಬಲ್ಗೇರಿ ಯಾದ ಸೋಫಿಯಾದಲ್ಲಿ ಮೇ ಆರರಿಂದ ಒಂಬತ್ತರ ವರೆಗೆ ನಡೆಯಲಿರುವ ಟೂರ್ನಿ ಒಲಿಂಪಿಕ್ಸ್ ಅರ್ಹತೆಗೆ ಕೊನೆಯ ಅವಕಾಶವಾಗಿದೆ.

ಫ್ರೀಸ್ಟೈಲ್ ವಿಭಾಗದಲ್ಲಿ ಧನಕಾರ್ ಜೊತೆ ಸತ್ಯಾವರ್ತ್ ಕಡಿಯಾನ್ (97 ಕೆಜಿ) ಮತ್ತು ಸುಮಿತ್ (125) ಪಾಲ್ಗೊಳ್ಳಲಿದ್ದಾರೆ. ಗ್ರೀಕೊ ರೋಮನ್ ಶೈಲಿಯ ತಂಡಕ್ಕೆ ಸಚಿನ್ ರಾಣಾ (60 ಕೆಜಿ), ಆಶು (67 ಕೆಜಿ), ಗುರುಪ್ರೀತ್ ಸಿಂಗ್ (77 ಕೆಜಿ), ಸುನಿಲ್ (87 ಕೆಜಿ), ದೀಪಾಂಶು (97 ಕೆಜಿ) ಮತ್ತು ನವೀನ್ ಕುಮಾರ್ (130 ಕೆಜಿ) ಆಯ್ಕೆಯಾಗಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಸೀಮಾ (50 ಕೆಜಿ) ನಿಶಾ (68 ಕೆಜಿ) ಮತ್ತು ಪೂಜಾ (76 ಕೆಜಿ) ಇದ್ದಾರೆ. ಆಯ್ಕೆ ಸಮಿತಿ ಸಭೆಯ ನಂತರ ಕುಸ್ತಿ ಫೆಡರೇಷನ್‌ನ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಪ್ರಕಟಣೆಯಲ್ಲಿ ತಂಡಗಳ ಮಾಹಿತಿ ನೀಡಿದ್ದಾರೆ.

WAN IFRA ICQC 2020-2022